UNIVERSAL LIBRARY
OU_200251
UNIVERSAL LIBRARY

**OSMANIA UNIVERSITY LIBRARY**

Call No. [illegible] Accession No. [illegible]

Author [illegible]

Title [illegible]

This book should be returned on or before the date last marked below.

# ತೆಲಿಮಾಕಸ್ಸನ ಸಾಹಸ ಚರಿತ್ರೆ.

ಎರಡನೇ ಭಾಗ.

ಬೂಕರ್ ಟಿ. ವಾಷಿಂಗ ಟನ್ನರವರ ಚರಿತ್ರೆ, ವಿದ್ಯಾರ್ಥಿಕರಭೂಷಣ, ಪರಂತಪವಿಜಯ, ಅರ್ಥಸಾಧನ,

ಹರಿಶ್ಚಂದ್ರಚರಿತ್ರೆ, ಚೋರಗ್ರಹಣತಂತ್ರ ಮೊದಲಾದ.

ಗ್ರಂಥಕರ್ತರಾದ,

ಎಂ. ವೆಂಕಟಕೃಷ್ಣಯ್ಯನವರಿಂದ

ರಚಿಸಲ್ಪಟ್ಟಿದ್ದು.

*Copy Right Registered.*

# ಟೆಲಿಮಾಕಸ್ಸನ ಚರಿತೆ

## ಪ್ರಸ್ತಾವನೆ.

ಈ ಚರಿತ್ರೆಯ ಮೊದಲನೆಯ ಭಾಗವು ಕಳೆದ ವರ್ಷ ಮುದ್ರಿಸಲ್ಪಟ್ಟಿತು. ಟೆಲಿಮಾಕಸ್ಸನು ಲೋಕಪ್ರಸಿದ್ಧನಾದ ಯೂಲಿಸಿಸ್ಸನ ಮಗನು. ಇವನ ಚರಿತ್ರೆಯಲ್ಲಿ ಸರ್ವಸಮ್ಮತವಾದ ರಾಜನೀತಿಗಳು ಹೇಳಲ್ಪಟ್ಟಿರುವುವು. ಸದರಿ ನೀತಿಗಳು ಈ ಕಾಲದೇಶವರ್ತಮಾನಗಳಿಗನುಸಾರವಾಗಿ ತಿದ್ದಿಪಾಟು ಮಾಡಲ್ಪಟ್ಟು ಈ ಗ್ರಂಥದಲ್ಲಿ ಗರ್ಭೀಕರಿಸಲ್ಪಟ್ಟಿರುವುವು. ಮೈಸೂರು ವಿಶ್ವವಿದ್ಯಾನಿಲಯದವರು ಈ ಗ್ರಂಥವನ್ನು ಕಾಲೇಜಿಯೆಟ್ ಎಂಟ್ರೆನ್ಸ್ ತರಗತಿಯ ಪಾಠಕ ಪುಸ್ತಕವಾಗಿ ಸೂಚಿಸಿ, ಪ್ರೋತ್ಸಾಹ ಮಾಡಿರುವರು. ಅನೇಕಜನ ವಾಚಕರು ಇದೇರೀತಿಯಲ್ಲಿ ಪ್ರೋತ್ಸಾಹ ಮಾಡಿರುವುದಲ್ಲದೆ ಮುಂದಿನ ಭಾಗಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವನ್ನು ತೋರಿಸುತ್ತಲಿರುವರು. ಈಗ ಎರಡನೆಯ ಭಾಗವು ಮುದ್ರಿಸಲ್ಪಟ್ಟಿರುವುದು. ಇದನ್ನು ನಮ್ಮ ವಾಚಕರ ಸಹಾಯಕರಿಗೋಸ್ಕರ ಅರ್ಪಿಸಿರುತ್ತೇನೆ. ಅವರು ಈ ಗ್ರಂಥವನ್ನು ಓದಿ ಮೆಚ್ಚಿದರೆ ಇದಕ್ಕಾಗಿ ನಾನು ಮಾಡಿದ ಪ್ರಯತ್ನ ಸಫಲವಾಯಿತೆಂದು ಭಾವಿಸುತ್ತೇನೆ. ವಾಚಕರ ಪ್ರೋತ್ಸಾಹದಿಂದ ಮೂರನೆಯ ಭಾಗವೂ ಶೀಘ್ರದಲ್ಲಿಯೇ ಮುದ್ರಿಸಲ್ಪಡುವುದು.

ಮೈಸೂರು )
10-7-1920 )

ಸಜ್ಜನ ವಿಧೇಯ.

ಎಂ. ವೆಂಕಟಕೃಷ್ಣಯ್ಯ.

# ಟೆಲಿಮಾಕಸ್ಸನ ಚರಿತ್ರೆ.

## ಆರನೆಯ ಅಧ್ಯಾಯ.

### ಎರಡನೆಯ ಭಾಗ.

ಈ ಪರೀಕ್ಷೆಯು ಪೂರೈಸಿದ ಕೂಡಲೆ, ಯೋಗಿಗಳಾದ ಪರೀಕ್ಷಕರಲ್ಲಿ ಒಬ್ಬ ಮುಖಂಡನಾದ ಒಬ್ಬ ಮಹರ್ಷಿಯು ಪರೀಕ್ಷೆಯ ಫಲಿತಾಂಶವನ್ನು ಹೇಳುವುದಕ್ಕೆ ಬಂದನು. ಮಹಾಜನಗಳು ಇವನ ಮಾತುಗಳನ್ನು ಕೇಳುವುದಕ್ಕೆ ಆತುರವುಳ್ಳವರಾಗಿದ್ದರು. "ಈತನು ನನ್ನ ಕೈಯ್ಯನ್ನು ಹಿಡಿದುಕೊಂಡು, ಮಹಾಜನಗಳಿಗೆ ನನ್ನನ್ನು ತೋರಿಸಿ, ಎಲ್ಲಾ ಪರೀಕ್ಷೆಗಳಲ್ಲಿಯೂ ಹೇಗೋ ಹಾಗೆ ಮೈನಾಸನ ಧರ್ಮಗಳನ್ನು ನಿರೂಪಿಸುವುದರಲ್ಲಿಯೂ ಕೂಡ ಇವನು ಅಗ್ರಗಣ್ಯನಾಗಿರುವನು. ನಮ್ಮ ಪ್ರಶ್ನೆಗಳಿಗೆ ಇವನು ಕೊಟ್ಟಿರುವ ಉತ್ತರಗಳನ್ನು ನೋಡಿದರೆ ಮೈನಾಸನೇ ಇವನಾಗಿ ಅವತರಿಸಿರಬಹುದೆಂದು ನನಗೆ ತೋರುತ್ತದೆ" ಎಂದು ಹೇಳಿದನು. ಈ ರೀತಿಯಲ್ಲಿ ಈ ಮಹರ್ಷಿಯು ಹೇಳಿದ್ದನ್ನು ಕೇಳಿ, "ಸರ್ವರೂ ಆನಂದಪರವಶರಾಗಿ, ಏಕವಾಕ್ಯತೆಯಿಂದ ಮಹಾತ್ಮನಾದ ಯೂಲಿಸಸ್ಸನ ಮಗನಾಗಿಯೂ, ಮೈನಾಸನ ಅವತಾರವಾಗಿಯೂ, ಈ ದ್ವೀಪ ನಿವಾಸಿಗಳ ಭಾಗ್ಯದೇವತೆಯಾಗಿಯೂ, ನಮ್ಮನ್ನು ರಕ್ಷಿಸುವುದಕ್ಕೋಸ್ಕರ ದೈವಪ್ರೇರಣೆಯಿಂದ ಬಂದಿರತಕ್ಕ ಈ ಟೆಲಿಮಾಕಸ್ಸನೇ ನಮ್ಮ ಪ್ರಭುವಾಗಬೇಕು" ಎಂದು ಸರ್ವರೂ ಏಕಕಂಠದಿಂದ ಉದ್ಘೋಷ ಮಾಡಿ, ಪ್ರಭುತ್ವವನ್ನು ಸ್ವೀಕರಿಸಬೇಕೆಂದು ನನ್ನನ್ನು ಪ್ರಾರ್ಥಿಸಿದರು. ಆ ಪಟ್ಟಣದ ಸುತ್ತಮುತ್ತಲೂ ಇದ್ದ ಪರ್ವತಗಳಿಂದ ಇವರ ಪ್ರಾರ್ಥನೆಯ ಪ್ರತಿಧ್ವನಿಯು ಬಂದದ್ದನ್ನು ಕೇಳಿ, ಪುನಃ ಪುನಃ ಇವರು ಪ್ರಾರ್ಥಿಸುವಂತೆ ನನಗೆ ತೋರಿತು. ಸ್ವಲ್ಪ ಹೊತ್ತು ಮೌನವಾಗಿದ್ದು, ನಾನು ಮೆಂಟರನ ಮುಖವನ್ನು ನೋಡಿದೆನು. ಅವನ ಮನೋಗತವು ನನ್ನ ಮನೋಗತದಂತೆಯೇ ಇರುವುದೆಂದು ನನಗೆ ತೋರಿತು. ಆದಾಗ್ಯೂ ದುರಾಸೆಯಿಂದ ನನ್ನ ಕರ್ತವ್ಯವನ್ನು ನಾನು ಎಲ್ಲಿ ಮರೆತೇನೋ ಎಂಬ ಭೀತಿಯು ಮೆಂಟರಗೆ ಉಂಟಾಯಿತು. ಆತನು ಪಿಸುಮಾತಿನಲ್ಲಿ ನನ್ನನ್ನು ಕುರಿತು ಹೇಳಿದ್ದೇನಂದರೆ.—

"ನಿನ್ನ ಮುಖಭಾವದಿಂದ ನಿನ್ನ ಮನೋಭಾವನನ್ನು ತಿಳಿದುಕೊಳ್ಳುವುದು ಸಾಧ್ಯ. ಆದಾಗ್ಯೂ ಹಾಗೆ ಮಾಡುವುದಕ್ಕೂ ಅವಕಾಶವಿಲ್ಲ. ಈ ಮಹಾ ಜನಗಳ ಪ್ರಾರ್ಥನೆಗೆ ನೀನು ಉತ್ತರವನ್ನು ಕೊಡುವುದಕ್ಕೆ ಮುಂಚೆಯೇ ನಿನಗೆ ಓಕೋಪದೇಶ ಮಾಡುವುದು ಅತ್ಯಾವಶ್ಯಕ. ದುಡಿಕಿ ಜವಾಬನ್ನು ಕೊಡಬಾರದು. ಪರಿಣಾಮ ಫಲಗಳನ್ನು ಪರ್ಯಾಲೋಚಿಸಿ, ಉತ್ತರವನ್ನು ಕೊಡು. ನಿನ್ನ ದೇಶದ ಸ್ಥಿತಿಯನ್ನು ಪರ್ಯಾಲೋಚಿಸು. ನಿನ್ನ ಪ್ರಥಮ ಕರ್ತವ್ಯವು ನಿನ್ನ ದೇಹರಕ್ಷಣೆಯಾಗಿರುವುದು. ಪ್ರಾಣಕ್ಕಿಂತಲೂ ಯಶಸ್ಸು ದೊಡ್ಡದು. ಅಪಕೀರ್ತಿ ಬರದಂತೆ ನಿನ್ನ ಮನೋವಾಕ್ಕರ್ಮಗಳು ಇರಬೇಕು. ಅವಕ್ಕೆ ಗಮನವನ್ನು ಕೊಡತಕ್ಕದ್ದೂ ಕೂಡ ನಿನ್ನ ಪ್ರಥಮ ಕರ್ತವ್ಯಕ್ಕೆ ಸೇರಿದ್ದು. ಈ ಕರ್ತವ್ಯವು ಪರಿಪೂರ್ಣವಾಗಿ ನೆರವೇರಿಸಬೇಕಾದರೆ, ನೀನು ಹೇಗೆ ನಡೆದುಕೊಳ್ಳಬೇಕೋ ಅದನ್ನು ಪರ್ಯಾಲೋಚಿಸು. ನಿನ್ನ ಆತ್ಮರಕ್ಷಣೆಯ ತರುವಾಯ, ನಿನ್ನ ಉತ್ಪತ್ತಿಗೆ ಕಾರಣಭೂತರಾದ ತಾಯಿತಂದೆಗಳ ಯೋಗಕ್ಷೇಮ ಚಿಂತೆಯು ನಿನಗೆ ಸೇರಿದ್ದು. ಅನಂತರ ನಿನ್ನ ಬಂಧುಮಿತ್ರರ ಯೋಗಕ್ಷೇಮ ಚಿಂತೆಯು ನಿನಗೆ ಸೇರಿದ್ದು. ಆ ಮೇಲೆ ನಿನ್ನ ದೇಶೀಯರ ಯೋಗಕ್ಷೇಮಚಿಂತೆಯು ನಿನಗೆ ಸೇರಿದ್ದು. ತರುವಾಯ ಲೋಕಹಿತವು ನಿನಗೆ ಸೇರಿದ್ದು; ಪ್ರತಿಯೊಬ್ಬರೂ ಈ ಕರ್ತವ್ಯಗಳನ್ನು ಒಂದು ಆದ ಮೇಲೆ ಮತ್ತೊಂದನ್ನು ಮಾಡಬೇಕು. ಈ ಧರ್ಮಸೂಕ್ಷ್ಮಗಳನ್ನು ಪರ್ಯಾಲೋಚಿಸಿ, ಅದಕ್ಕೆ ಅವಿರೋಧವಾಗಿ ಇವರ ಪ್ರಾರ್ಥನೆಗೆ ಉತ್ತರವನ್ನು ಕೊಡು" ಎಂದು ಮೊಂಟರನು ಹೇಳಿದನು.

ಇದೇ ಅಭಿಪ್ರಾಯವು ನನ್ನ ಮನಸ್ಸಿನಲ್ಲಿ ಸ್ಫುರಿಸಿತ್ತು. ಈತನೂ ಅದನ್ನೇ ಹೇಳಿದ್ದರಿಂದ ಅದು ದೃಢವಾಯಿತು. ನನ್ನ ಕರ್ತವ್ಯತಾಜ್ಞಾನವು ನನಗೆ ಚೆನ್ನಾಗಿ ಬಂದಿತು. ಮಾತಾಪಿತೃಗಳ ವಿಷಯದಲ್ಲಿಯೂ, ನನ್ನ ಪ್ರಜೆಗಳ ವಿಷಯದಲ್ಲಿಯೂ ನಾನು ಹೇಗೆ ನಡೆದುಕೊಳ್ಳಬೇಕೋ ಅದು ಗೊತ್ತಾಯಿತು. ನಾನು ಮಾತನಾಡುವುದಕ್ಕೆ ಸಿದ್ಧನಾದೆನು. ಮಹಾಜನಗಳು ನಾನು ಹೇಳುವುದನ್ನು ಕೇಳುವುದಕ್ಕೂ ಸಿದ್ಧರಾದರು. ನಾನು ಅವರನ್ನು ಕುರಿತು ಹೇಳಿದ್ದೇನೆಂದರೆ :—

"ಎಲೈ ಮಹಾಶಯರೇ,—ನೀವು ಅನುಗ್ರಹಪೂರ್ವಕವಾಗಿ ನಿಮ್ಮ ದೇಶದ ಪ್ರಭುತ್ವವನ್ನು ನನಗೆ ಕೊಡುವುದಾಗಿ ಹೇಳುತ್ತೀರಿ. ಇದಕ್ಕೆ ನಾನು ಪಾತ್ರನಲ್ಲ. ನೀವು ಹೇಳಿದ ಆಶೀರ್ವಾದಕ್ಕಿನಲ್ಲಿ ಈ ದ್ವೀಪದ ಪ್ರಭುತ್ವವು ವೈಸೋಸನ ಸಂತ

ತಿಯುವರಿಂದ ಪರದೇಶಿಯುಂಗೆ ಹೋಗಬೇಕೆಂಬ ಅರ್ಥವಲ್ಲ. ಪರದೇಶಿಯುನೊಬ್ಬನು ಈ ಧರ್ಮಗಳ ತಾತ್ಪರ್ಯವನ್ನು ಪ್ರಕಾಶಪಡಿಸುವನೆಂದು ಅರ್ಥವಾಗುತ್ತದೆ. ಈ ವ್ಯಾಖ್ಯಾತನೇ ಧೊರೆಯಾಗಬೇಕೆಂದು ಅರ್ಥವಲ್ಲ. ಈ ಅಶರೀರವಾಕ್ಕಿಗೆ ಸಂಬಂಧಪಟ್ಟ ವ್ಯಾಖ್ಯಾತನು ನಾನೇ ಹೌದು. ದೈವಯೋಗದಿಂದ ನಾನು ಈ ದ್ವೀಪಕ್ಕೆ ಬಂದೆನು. ವ್ಯಾಸನ ಧರ್ಮಗಳ ತತ್ವವನ್ನು ನಾನು ಪ್ರಕಾಶ ಮಾಡಿದೆನು. ನಿಮ್ಮ ಪ್ರಶ್ನೆಗಳಿಗೆ ಅನ್ವಯವಾದವನು ನಿಮಗೆ ದೊರೆಯುವಂತೆ ಮಾಡುವುದು ನನ್ನ ಕರ್ತವ್ಯ. ಈ ವಿಷಯವನ್ನು ನೀವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಾನು ಇಥಾಕಾ ದ್ವೀಪದ ಯುವರಾಜನು. ನನ್ನ ದ್ವೀಪವು ಈ ದ್ವೀಪದೊಡನೆ ಹೋಲಿಸಿದರೆ ಬಹಳ ಚಿಕ್ಕದು. ಈ ದೇಶದ ಸಂಪತ್ತು ಮತ್ತು ವೈಭವದೊಡನೆ ಹೋಲಿಸಿದರೆ, ನನ್ನ ದೇಶದ ಸಂಪತ್ತು ಮತ್ತು ವೈಭವವೂ ಬಹಳ ಅಲ್ಪವಾದದ್ದು. ಆದಾಗ್ಯೂ ನನ್ನ ಪ್ರಜೆಗಳ ಯೋಗಕ್ಷೇಮಚಿಂತೆಯನ್ನು ಮಾಡುವುದು ನನಗೆ ಪ್ರಥಮ ಕರ್ತವ್ಯ. ನಿಮ್ಮ ವ್ಯಾಯಾಮಗಳಲ್ಲಿ ಸೇರುವುದು, ಈ ದ್ವೀಪದ ಪ್ರಭುತ್ವದ ಮೇಲಿನ ಆಸೆಯಿಂದಲ್ಲ. ನಿಮ್ಮ ಪ್ರೀತಿಗೂ, ಅನುಗ್ರಹಕ್ಕೂ ಪಾತ್ರನಾಗಬೇಕೆಂಬ ಆಸೆಯಿಂದ ನಾನು ಈ ವ್ಯಾಯಾಮಗಳ ಪೋಟಾಪೋಟಿಗೆ ಸೇರಿದೆನು. ಈ ದ್ವೀಪಕ್ಕೆ ಹೋಗುವುದಕ್ಕೆ ಬೇಕಾದ ಸಹಾಯವನ್ನು ನಿಮ್ಮಿಂದ ಹೊಂದಬೇಕೆಂದು ನಾನು ಈ ಪೋಟಾಪೋಟಿಯಲ್ಲಿ ಸೇರಿದೆನೇ ಹೊರತು, ಇಲ್ಲಿಗೆ ಪ್ರಭುವಾಗಬೇಕೆಂಬ ಅಪೇಕ್ಷೆಯಿಂದ ಸೇರಲಿಲ್ಲ. ನನ್ನ ತಾಯಿತಂದೆಗಳ ಸೇವೆಯನ್ನು ಮಾಡುವುದು ನನಗೆ ಮೊದಲಿನ ಕೆಲಸವಾಗಿರುವುದು. ನನ್ನ ಗೃಹಕೃತ್ಯಗಳಲ್ಲಿ ಅನಿರ್ವಾಚನೀಯವಾದ ಕಷ್ಟಗಳು ಬಂದಿರುವುವು. ನನ್ನ ತಂದೆಯು ದೇಶಾಟನಕ್ಕೆ ಹೋಗಿರುವನು. ಅವನ ಗತಿ ಏನಾಗಿರುವುದೋ ಅದು ನನಗೆ ತಿಳಿಯದು. ನನ್ನ ತಾಯಿಯ ಮಾನಕ್ಕೂ, ಪ್ರಾಣಕ್ಕೂ ವಿಪತ್ತು ಸನ್ನಿಹಿತವಾಗಿರುವುದು. ಮಾನವು ಹೋಗುವ ಸಂಭವವು ಬಂದರೆ, ಮೊದಲು ಅವಳ ಪ್ರಾಣವು ಹೋಗುವುದು. ನಾನು ಈ ಜನ್ಮದಲ್ಲಿ ಇಂಥಾ ಕಷ್ಟಗಳಿಗೆ ಗುರಿಯಾಗುವುದಕ್ಕೆ ಕಾರಣವಾಗಿ ಪರಿಣಮಿಸುವ ಯಾವ ಪಾಪಗಳನ್ನು ಮಾಡಿದೆನೋ ನನಗೆ ತೋರುವುದಿಲ್ಲ. ಆದಾಗ್ಯೂ ಇಂಥಾ ಕಷ್ಟಗಳು ನನಗೆ ಬಂದಿರುವುವು. ಇಂಥಾ ವಿಪತ್ತುಗಳು ಇಲ್ಲದೆ ಇದ್ದಿದ್ದರೆ, ನಿಮ್ಮ ಪ್ರಾರ್ಥನೆಯನ್ನು ನೆರವೇರಿಸಿ, ನಿಮಗೆ ಸಂತೋಷವನ್ನು ಉಂಟುಮಾಡಬಹುದಾಗಿತ್ತು.

‘ ನಮಾತುಃಪರದೇವತಾ ’ ಎಂಬದಾಗಿ ಮಹಸೀಯರು ಹೇಳಿರುವುದನ್ನು ನೀವು ಕೇಳಿರುವಿರಿ. ನಮ್ಮ ತಾಯಿಯ ಮಾನರಕ್ಷಣೆಗಳನ್ನು ಮಾಡುವುದು ಸಾಧ್ಯವಾದರೆ ಮಾಡಬೇಕು. ಅಸಾಧ್ಯವಾದರೆ, ಹಾಗೆ ಮಾನರಕ್ಷಣೆಯನ್ನು ಮಾಡುವುದರಲ್ಲಿ ಈ ದೇಹವನ್ನಾದರೂ ಬಿಡಬೇಕು. ನನ್ನ ಸ್ಥಿತಿಯು ಹೀಗಿರುವುದು. ನನ್ನಲ್ಲಿ ಕರುಣೆಯನ್ನಿಟ್ಟು, ನೀವೆಲ್ಲರೂ ಈ ದ್ವೀಪದ ಪ್ರಭುತ್ವವನ್ನು ಕೊಡುತ್ತೇನೆಂದು ಹೇಳುತ್ತೀರಿ. ಅದನ್ನು ಪರಿಗ್ರಹಿಸುವ ಅದೃಷ್ಟವು ನನಗೆ ಇರುವುದಿಲ್ಲ. ಆದರೆ, ನೀವು ನನ್ನಲ್ಲಿ ಇಟ್ಟಿರುವ ಪ್ರೀತಿಗೆ ನಾನು ಬಹಳ ಕೃತಜ್ಞನಾಗಿರುತ್ತೇನೆ. ಇದನ್ನ ನಾನು ಎಂದಿಗೂ ಮರೆಯುವುದಿಲ್ಲ. ನನ್ನ ಪ್ರಾಣಕ್ಕಿಂತಲೂ ನನ್ನ ಮಾನವು ದೊಡ್ಡದಾದದ್ದರಿಂದ ಮಾನರಕ್ಷಣೆಯ ಪ್ರಯತ್ನದಲ್ಲಿ ನಾನು ಉದ್ಯುಕ್ತನಾದರೆ, ಅದು ನಿಮಗೆ ಅಸಮಾಧಾನವನ್ನುಂಟುಮಾಡಲಾರದೆಂದು ನಾನು ನಂಬಿ ಇದೇನೆ. ಈ ದೇಹದಲ್ಲಿ ಪ್ರಾಣ ವಿರುವವರೆಗೂ ನನ್ನ ವಿಷಯದಲ್ಲಿ ನೀವು ಇಟ್ಟಿರತಕ್ಕ ಅಭಿಮಾನವನ್ನು ನಾನು ಮರೆಯುವುದಿಲ್ಲ. ’’

ಹೀಗೆ ಹೇಳುತ್ತಿರುವಾಗಲೇ ಅಲ್ಲಿ ನೆರೆದಿದ್ದ ಮಹಾ ಜನಗಳೆಲ್ಲರೂ ತಮ್ಮ ಅಸಮಾಧಾನವನ್ನ ಸೂಚಿಸುವುದಕ್ಕೆ ಉಪಕ್ರಮ ಮಾಡಿದರು. ಇದು ಪ್ರಥಮತಃ ಪಿಸುಮಾತಿನಂತೆ ಉಪಕ್ರಮವಾಯಿತು. ಕ್ರಮಕ್ರಮವಾಗಿ ಪ್ರಳಯಕಾಲದ ಅಲೆಗಳ ಧ್ವನಿಯ ಅವಸ್ಥೆಯನ್ನು ಹೊಂದಿತು. ಮಹಾ ಜನಗಳು ತಮ್ಮಲ್ಲಿ ತಾವೇ ಮಾತನಾಡಿಕೊಳ್ಳುವುದಕ್ಕೆ ಉಪಕ್ರಮಿಸಿದರು. ಇವನು ಮನುಷ್ಯನೇ ಅಥವಾ ದೇವರೇ ಎಂದು ಕೆಲವರು ಕೇಳಿದರು. ಇವನನ್ನು ನಾವು ನೋಡಿ ಇದೇವೆ. ಇವನೇ ಟೆಲಿಮಾಕಸ್ಸನು. ಇವನೇ ಯೂಲಿಕಸ್ಸನ ಮಗನು ಎಂದು ಮತ್ತೆ ಕೆಲವರು ಹೇಳಿದರು. ಇವನನ್ನು ಬಲಾತ್ಕಾರದಿಂದ ಈ ಪ್ರಭುತ್ವಕ್ಕೆ ಒಪ್ಪಿಸಬೇಕೆಂದು ಮತ್ತೆ ಕೆಲವರು ಹೇಳಿದರು. ಹೀಗೆ ಗಲಾಟೆಗೆ ಉಪಕ್ರಮವಾಗಲು, ನಾನು ಹೇಳುವುದನ್ನು ಕೊನೆಗೂ ಕೇಳಬೇಕು ಎಂದು ನಾನು ಪ್ರಾರ್ಥಿಸಿದೆನು. ಕೂಡಲೇ ಗಲಾಟೆಯು ನಿಂತಿತು. ಆ ಮಹಾ ಸಭೆಯಲ್ಲಿ ಲೇಶವೂ ಶಬ್ದವಿಲ್ಲದಂತಾಯಿತು. ಎಲೈ ಮಹಾಶಯರೇ—ನನ್ನ ಮನೋಗತವನ್ನು ನಾನು ಹೇಳಿ ಪೂರೈಸುವವರೆಗೂ ಸಾವಧಾನವಾಗಿ ಕೇಳಿ. ಪ್ರಪಂಚದ ಮಹಾ ಜನಗಳಲ್ಲೆಲ್ಲಾ ನೀವು ಕೇವಲ ವಿವೇಕಶಾಲಿಗಳು ನಿಮಗೆ ಪ್ರಭುವಾಗತಕ್ಕವನು ನಿಮ್ಮ ದೇಶೀಯನಾಗಿರಬೇಕು. ನಿಮ್ಮ ಭಾಷಾ

ಜ್ಞಾನವುಳ್ಳವನಾಗಿರಬೇಕು. ನಿಮ್ಮ ಶಿಲ್ಪಶಾಸ್ತ್ರಗಳನ್ನು ಅರಿತವನಾಗಿರಬೇಕು. ಮೈನಾಸನ ಧರ್ಮಸೂಕ್ಷ್ಮಗಳನ್ನು ಬಲ್ಲವನಾಗಿರಬೇಕು. ಧರ್ಮಸೂಕ್ಷ್ಮಗಳು ತಿಳಿದ ಮಾತ್ರದಿಂದಲೇ, ಅವನು ಪ್ರಭುತ್ವ ಮಾಡುವುದಕ್ಕೆ ಅರ್ಹನಾಗುವುದಿಲ್ಲ. ಜ್ಞಾನವು ಮೋಕ್ಷದಾಯಕವೆಂದು ಅನೇಕರು ತಿಳಿದುಕೊಂಡಿರುವರು. ಕೇವಲ ಜ್ಞಾನಿಗಳಾಗಿದ್ದಾಗ್ಯೂ, ಬರಿ ಜ್ಞಾನದಿಂದ ಮಾತ್ರವೇ ಮೋಕ್ಷವಾಗುವುದಿಲ್ಲ. ಜ್ಞಾನದ ಜೊತೆಗೆ ಅನುಷ್ಠಾನವೂ ಬೇಕು. ರಾವಣಾದಿಗಳಂತೆ ಜ್ಞಾನಶಾಲಿಗಳಾದ ಬ್ರಹ್ಮರಾಕ್ಷಸರು ಎಷ್ಟೋ ಜನಗಳಿರುವರು. ಅನುಷ್ಠಾನ ಬಲವಿಲ್ಲದೆ, ಈ ರಾಕ್ಷಸರನೇಕರು ಭಯಂಕರವಾದ ಪತನಕ್ಕೆ ಗುರಿಯಾಗಿರುವುದಿಲ್ಲವೇ? ಈಗಲೂ ಅನೇಕರು ಗುರಿಯಾಗುತ್ತಲಿಲ್ಲವೇ? ಉತ್ತರೋತ್ತರ ಗುರಿಯಾಗತಕ್ಕವರೂ ಬರುವುದಿಲ್ಲವೇ? ಈ ವಿಷಯವನ್ನು ನೀವು ಚೆನ್ನಾಗಿ ಪರ್ಯಾಲೋಚಿಸಬೇಕು. ನಿಮ್ಮ ಧರ್ಮಶಾಸ್ತ್ರಗಳ ತತ್ವವನ್ನು ಸ್ವಲ್ಪಮಟ್ಟಿಗೆ ನಾನು ತಿಳಿದುಕೊಂಡಿದ್ದಾಗ್ಯೂ, ನಾನು ಇನ್ನೂ ಹುಡುಗ. ಧರ್ಮವಿಧಿಗಳು ಯಾರ ಅನುಷ್ಠಾನಕ್ಕೆ ಬಂದಿರುವುದೋ ಅವರು ಆಚಾರ್ಯರೆನ್ನಿಸಿಕೊಳ್ಳುವರು. ಅಂಥಾ ಪದವಿಯು ನನಗೆ ಇನ್ನೂ ಬಂದಿಲ್ಲ. ಅನುಭವದಿಂದ ಬರತಕ್ಕ ಅನೇಕ ವಿಷಯಗಳು ನನಗೆ ಇನ್ನೂ ತಿಳಿದಿರುವುದಿಲ್ಲ. ಅಜಿತೇಂದ್ರಿಯನಾಗಿಯೂ, ಅರಿಷಡ್ವರ್ಗಗಳಿಗೆ ಅಧೀನನಾಗಿಯೂ ನಾನು ಇರುತ್ತೇನೆ. ನನ್ನ ಕೋಪತಾಪಗಳು ಇನ್ನೂ ಶಾಂತಿಯನ್ನು ಹೊಂದಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಭೂಗರ್ಭದಿಂದ ಜ್ವಾಲೆಯೂ, ಪ್ರಸರಣವಾದ ಅಗ್ನಿಯೂ ಹೊರಡುವಂತೆ ನನ್ನಿಂದ ಕೋಪತಾಪಗಳಿಂದ ಪ್ರತಿನಿವಿಷ್ಟವಾದ ಯೋಚನೆಗಳೂ, ಮಾತುಗಳೂ, ಕರ್ಮಗಳೂ ಹೊರಡುವುವು. ಪ್ರಭುತ್ವ ಮಾಡತಕ್ಕದ್ದು ಬಹಳ ಕಷ್ಟ. ಪರಮಯೋಗಿಗಳಾಗಿಯೂ, ಮೂರ್ತಿಮತ್ತಾದ ಶಾಂತಿಯಾಗಿಯೂ, ಯಾರು ಇರುವರೋ ಅಂಥಾವರು ಮಾತ್ರ ಪ್ರಭುಪದವಿಗೆ ಅರ್ಹರು. ದೇಹಶಕ್ತಿಯನ್ನೂ, ಬುದ್ಧಿಶಕ್ತಿಯನ್ನೂ ಹೊಂದಿದ ಮಾತ್ರದಿಂದಲೇ ಮನುಷ್ಯನು ಪ್ರಭುತ್ವ ಮಾಡುವುದಕ್ಕೆ ಅರ್ಹನಾಗುವನೇ? ದುರ್ವಿಷಯಗಳಲ್ಲಿ ಇಂದ್ರಿಯಗಳು ಪ್ರವರ್ತಿಸದಂತೆ ಮಾಡಿಕೊಂಡು, ಅರಿಷಡ್ವರ್ಗಗಳಿಗೆ ಬಲವಾದ ಲಗಾಮನ್ನು ಹಾಕಿ, ಸ್ವಾಧೀನದಲ್ಲಿ ಇಟ್ಟುಕೊಳ್ಳತಕ್ಕ ಶಕ್ತಿಯು ಯಾರಿಗಿರುವುದೋ ಅವರು ಮಾತ್ರ ಪ್ರಭುತ್ವ ಮಾಡತಕ್ಕದ್ದಕ್ಕೆ ಅರ್ಹರು. ಮೈನಾಸನ ಧರ್ಮಗಳು ಯಾರ ಅನುಷ್ಠಾ

ನದಲ್ಲಿರುವುದೋ ಅವರು ಸರ್ವತ್ರ ಸಮಾನ್ಯರಾದ ಪ್ರಭುಗಳಾಗುವರು. ನಾನು ವಯೋಧರ್ಮದಿಂದಲೂ, ಇಂದ್ರಿಯ ಗ್ರಾಮಗಳಿಗೆ ಅಧೀನನಾಗದೆ ಇರುವ ಶಕ್ತಿಯಿಲ್ಲದ್ದರಿಂದಲು ಪ್ರಭುಪದವಿಗೆ ಅನರ್ಹನಾಗಿರುವೆನು. ಆದುದರಿಂದ ಸಕಲ ವಿಷಯಗಳಲ್ಲಿಯೂ ಪ್ರಭುವಾಗಿರುವುದಕ್ಕೆ ಅರ್ಹರಾದವರು ಸಿಕ್ಕುವಾಗ್ಯೆ, ಅನರ್ಹನಾದ ನನ್ನನ್ನೇ ಪ್ರಭುತ್ವಕ್ಕೆ ಅಪೇಕ್ಷಿಸುವುದು ನಿಮಗೆ ಯುಕ್ತವಲ್ಲ. ಸ್ಮೈನಾಸನ ಧರ್ಮಶಾಸ್ತ್ರಗಳು, ಯಾರಿಗೆ ಕರತಲಾಮಲಕವಾಗಿರುವುವೋ, ಈ ಧರ್ಮಗಳಿಗೆ ಯಾರ ಬುದ್ಧಿಯು ವ್ಯಾಖ್ಯಾನರೂಪವಾಗಿರುವುದೋ, ಯಾರ ಅನುಷ್ಠಾನದಲ್ಲಿ ಈ ಧರ್ಮಗಳು ಪ್ರಕಾಶಿಸುತ್ತಿರುವುವೋ, ಈ ಧರ್ಮಗಳನ್ನು ತೋರಿಸುವುದಕ್ಕೆ ಯಾರ ಚರಿತ್ರೆಯು ಉದಾಹರಣೆಯಾಗಿರುವುದೋ, ಯಾರ ಮನೋವಾಕ್ಕರ್ಮಗಳಲ್ಲಿ ಈ ಧರ್ಮಗಳು ಪ್ರತಿಫಲಿಸಿರುವುವೋ, ಸಕಲ ರಾಜಧರ್ಮಗಳಿಗೂ ಯಾರು ರತ್ನಾಕರದಂತೆ ಇರುವರೋ, ನಾನು ತಿಳಿದುಕೊಂಡಿರತಕ್ಕ ಅಲ್ಪಸ್ವಲ್ಪ ವಿಷಯಗಳು ಯಾರ ಉಚ್ಛಿಷ್ಟವಾಗಿ ಪರಿಣಮಿಸಿರುವುವೋ ಅಂಥಾ ಮಹಾತ್ಮನು ತಮ್ಮಗಳ ಸನ್ನಿಧಿಯಲ್ಲಿರುವಾಗ, ಗುರುವನ್ನು ಬಿಟ್ಟು, ಶಿಷ್ಯನನ್ನು ಇಂಥಾ ಮಹಾ ಪದವಿಗೆ ಅಪೇಕ್ಷಿಸುವುದು ಸರಿಯೇ ?'' ಎಂದು ನಾನು ಹೇಳಿದೆನು.

ಈ ಮಾತನ್ನು ಕೇಳಿದ ಕೂಡಲೆ, ಪರೀಕ್ಷಕರಾದ ಆ ಮಹರ್ಷಿಗಳೆಲ್ಲರೂ '' ನೀನು ಹೇಳಿದ್ದು ಅತ್ಯಂತ ಸಾಧುವಾದದ್ದು. ನಿನಗೆ ಗುರುವಾಗಿಯೂ, ಮೂರ್ತೀಭವಿಸಿದ ಧರ್ಮವಾಗಿಯೂ ಇರತಕ್ಕ ಮಹಾತ್ಮನು ನಮಗೆ ಲಭ್ಯವಾಗುವ ಪಕ್ಷದಲ್ಲಿ, ನಮ್ಮ ಪುಣ್ಯಕ್ಕೆ ಎಣೆಯಿಲ್ಲ. ಅವನನ್ನೇ ನಮಗೆ ತೋರಿಸು '' ಎಂದು ಈ ಮಹರ್ಷಿಗಳು ಹೇಳಿದರು. 'ಅಂಥಾ ಮಹಾನುಭಾವನನ್ನು ತೋರಿಸು, ನಾವು ಅವನನ್ನು ಪ್ರಾರ್ಥಿಸುತ್ತೇವೆ,' ಎಂದು ಮಹಾ ಜನಗಳು ಹೇಳಿದರು. ಅದಕ್ಕೆ ನಾನು ಹೇಳಿದ್ದೇನಂದರೆ :—

ನಮ್ಮ ಗುರುಗಳು ಇಲ್ಲಿ ಇರುತ್ತಾರೆ. ಅವರಲ್ಲಿ ನಾನು ಕಲಿತ ವಿದ್ಯೆಗಳು ತಮಗೆ ಪ್ರದರ್ಶನ ಮಾಡಲ್ಪಟ್ಟವು. ನಾನು ತಮ್ಮಲ್ಲಿ ವಿಜ್ಞಾಪಿಸಲ್ಪಟ್ಟ ವಿಷಯಗಳೆಲ್ಲವೂ ಅವರ ಉಚ್ಛಿಷ್ಟವಾಗಿರುವುವು ಎಂದು ನಾನು ಹೇಳುತ್ತಿರುವಾಗಲೆ, ಅಲ್ಲಿ ನೆರೆದಿದ್ದ ಮಹಾಜನಗಳೆಲ್ಲರ ದೃಷ್ಟಿಯೂ ಈ ಮೆಂಟರನ ಕಡೆಗೆ ತಿರುಗಿತು. ಕೂಡಲೆ ಇವರೇ ನನ್ನ ಗುರುಗಳೆಂದು ಆ ಮಹಾ ಸಭೆ ಎದುರಿಗೆ ಮೆಂಟರನನ್ನು ನಾನು ತೋರಿಸಿದೆನು. ಬಾಲ್ಯದಿಂದಲೂ ನನಗೆ ಗುರುವಾಗಿಯೂ, ತಂದೆಗೆ ಪ್ರತಿನಿಧಿಯೂ

ಗಿಯೂ, ಧರ್ಮದರ್ಶಿಯಾಗಿಯೂ, ಮಾರ್ಗದರ್ಶಿಯಾಗಿಯೂ, ಶಿಕ್ಷಕನಾಗಿಯೂ, ಆಪ್ತ ಸ್ನೇಹಿತನಾಗಿಯೂ ಇದ್ದುಕೊಂಡು, ಮೆಂಟರನು ನನ್ನನ್ನು ಹೇಗೆ ರಕ್ಷಿಸಿದನೋ ಸಕಲ ಧರ್ಮಗಳಿಗೂ ಹೇಗೆ ಅವನು ನಿಧಿಯಾಗಿರುವನೋ ಸಕಲ ಶಾಸ್ತ್ರಗಳೂ ಆತನಿಗೆ ಹೇಗೆ ವಾಚೋವಿಧೇಯವಾಗಿರುವುವೋ ಅದನ್ನೆಲ್ಲಾ ನಾನು ಸೂಕ್ಷ್ಮವಾಗಿ ಆ ಮಹರ್ಷಿಗಳಿಗೂ, ಮಹಾ ಜನಗಳಿಗೂ ವಿಜ್ಞಾಪಿಸಿದೆನು. ಅದುವರೆಗೂ ಆ ಮಹಾಜನಗಳ ಮಧ್ಯದಲ್ಲಿ ಮೆಂಟರನು ಅಜ್ಞಾತನಾಗಿ ನಿಂತಿದ್ದನು. ನಾನು ಹೀಗೆ ಹೇಳಿದ ಕೂಡಲೆ, ಸರ್ವರ ದೃಷ್ಟಿಗೂ, ಭಕ್ತಿಗೂ, ಆಶ್ಚರ್ಯಕ್ಕೂ ಆತನು ವಿಷಯನಾದನು. ಅವನ ಉಡಿಗೆ ತೊಡಿಗೆಗಳು ಸಾಮಾನ್ಯವಾಗಿ ಇದ್ದುವು. ಆದರೆ ಅವನ ಆಕೃತಿಯಲ್ಲಿಯೂ, ಮುಖದಲ್ಲಿಯೂ ಅನಿರ್ವಚನೀಯವಾದ ತೇಜಸ್ಸು ತಾಂಡವವಾಡುತ್ತಿತ್ತು. ಎಲ್ಲರೂ ದೃಷ್ಟಿಸಿ ನೋಡುವದಕ್ಕೆ ಉಪಕ್ರಮ ಮಾಡಲು, ಅವರಿಗೆ ಆಶ್ಚರ್ಯವಾಯಿತು. ಅವನ ಆಕಾರವು ಅದ್ಭುತವಾಗಿತ್ತು. ಆಕಾರಕ್ಕೆ ಅನುರೂಪವಾದ ಪ್ರಜ್ಞೆಯೂ ಮುಖದಲ್ಲಿ ತಾಂಡವವಾಡುತ್ತಿತ್ತು. ಪ್ರಜ್ಞೆಗೆ ಅನುರೂಪವಾದ ಸ್ಥೈರ್ಯವು ಕಣ್ಣುಗಳಲ್ಲಿ ಪ್ರಜ್ವಲಿಸುತ್ತಿತ್ತು. ಅವನ ಸಕಲ ಅವಯವಗಳೂ ಕೂಡ ಧೈರ್ಯಸ್ಥೈರ್ಯಗಳನ್ನು ಮಾತ್ರವೇ ಅಲ್ಲದೆ, ಅಸಾಧಾರಣವಾದ ಶಾಂತಿಯನ್ನು ಕೂಡ ತೋರಿಸುತ್ತಿದ್ದುವು. ಈ ಮಹರ್ಷಿಗಳು ಆತನನ್ನು ಕಂಡು ಕೆಲವು ಪ್ರಶ್ನೆಗಳನ್ನು ಹಾಕಿದರು. ಅದಕ್ಕೆ ಅವನು ಕೊಟ್ಟ ಉತ್ತರಗಳು ಸರ್ವರಿಗೂ ಪರಮಾಶ್ಚರ್ಯವನ್ನುಂಟುಮಾಡಿತು. ಜಗದೀಶ್ವರನು ಮೆಂಟರನ ಅವತಾರದಿಂದ ಈ ದ್ವೀಪವನ್ನು ರಕ್ಷಿಸುವುದಕ್ಕೋಸ್ಕರ ಬಂದಿರಬೇಕೆಂದು ಅನೇಕರು ಭಾವಿಸಿದರು. ಈ ಮಹರ್ಷಿಗಳೂ, ಅಲ್ಲಿ ಸೇರಿದ ಮಹಾ ಜನಗಳೂ ಸರ್ವರೂ ಸದರಿ ದ್ವೀಪದ ಪ್ರಭುತ್ವವನ್ನು ಪರಿಗ್ರಹಿಸಿ, ತಮ್ಮನ್ನು ಉದ್ಧರಿಸಬೇಕೆಂದು ಮೆಂಟರನನ್ನು ಪ್ರಾರ್ಥಿಸಿದರು. ಆದಕ್ಕೆ ಮೆಂಟರನು ಹೇಳಿದ್ದೇನಂದರೆ :—

"ಪ್ರಜೆಗಳನ್ನು ಪುತ್ರನಿರ್ವಿಶೇಷವಾಗಿ ಪರಿಪಾಲಿಸುವುದು ಪ್ರಭುಗಳಿಗೆ ಕರ್ತವ್ಯ. ಪ್ರಜೆಗಳು ಎಷ್ಟು ಹೆಚ್ಚಾಗಿದ್ದರೆ, ಆ ಕರ್ತವ್ಯವು ಅಷ್ಟು ಹೆಚ್ಚಾಗುವುದು. ಧರ್ಮಿಷ್ಠರಾದ ಪ್ರಭುಗಳು ಔರಸ ಪುತ್ರರಲ್ಲಿ ಎಷ್ಟು ಪ್ರೀತಿಯನ್ನು ಇಡುವರೋ ಪ್ರಜೆಗಳಲ್ಲಿ ಅದಕ್ಕಿಂತಲೂ ಹೆಚ್ಚಾದ ಪ್ರೀತಿಯನ್ನು ಇಡಬೇಕು. ಔರಸರಿಗೆ ಎಷ್ಟು ಉಪಕಾರಮಾಡಿದಾಗ್ಯೂ, ಅದಕ್ಕೆ ಅನುರೂಪವಾದ ಕೃತಜ್ಞತೆಯೂ ಇರುವುದಿಲ್ಲ.

ತವಾಗಿ ತೋರಿಸಲ್ಪಟ್ಟ ಪ್ರೀತಿಗೂ, ಮಾಡಲ್ಪಟ್ಟ ಪ್ರಯೋಜನಗಳಿಗೂ ತಾವು ಹಕ್ಕುದಾರರೆಂದು ತಿಳಿದುಕೊಳ್ಳುತ್ತಾರೆ. ಪ್ರಜೆಗಳಿಗೆ ಇಂಥಾ ದುರಹಂಕಾರವು ಇರುವುದಿಲ್ಲ. ನಾವು ಎಷ್ಟು ಉಪಕಾರವನ್ನು ಮಾಡಿದೆವೋ ಅದರ ಹತ್ತರಷ್ಟು ಉಪಕಾರವಾಯಿತೆಂದು ತಿಳಿದುಕೊಳ್ಳುವರು. ಅವರಿಗೆ ಪರರು ನಾವು ಮಾಡಿದ ಉಪಕಾರಕ್ಕೆ ಎಷ್ಟು ಕೃತಜ್ಞರಾಗಿರುವರೋ ನಮ್ಮಿಂದ ಉಪಕಾರವನ್ನು ಹೊಂದಿದ ಪ್ರಜೆಗಳು ಅದರ ಹತ್ತರಷ್ಟು ಕೃತಜ್ಞರಾಗಿರುವರು. ಅವರನ್ನು ಪುತ್ರನಿರ್ವಿಶೇಷವಾಗಿ ಕಂಡರೆ, ಪುತ್ರರಿಂದ ಆಗತಕ್ಕ ಪ್ರತಿಫಲಕ್ಕಿಂತಲೂ ಹೆಚ್ಚಾದ ಪ್ರತಿಫಲವು ಲಭ್ಯವಾಗುವುದು. ಪ್ರತಿಫಲದ ದೃಷ್ಟಿಯಿಂದ ಸತ್ಪುರುಷರಾದವರು ಪ್ರಜಾರಂಜನೆಯನ್ನು ಮಾಡುವುದಿಲ್ಲ. ತಮ್ಮ ಮನಸ್ಸಾಕ್ಷಿಗೂ, ದೇವರಿಗೂ ತೃಪ್ತಿಯಾಗಲೆಂದು ಮಾಡುವರು. ಈ ತೃಪ್ತಿಯಿಂದ ಅಪ್ರಾರ್ಥಿತವಾಗಿ ಅಂಥಾ ಪ್ರಭುಗಳಿಗೆ ಪ್ರತಿಫಲಗಳು ಉಂಟಾಗುವುವು. ಅವುಗಳು ಉಂಟಾದರೂ, ಉಂಟಾಗದೆ ಹೋದರೂ ನೈತಿಕವಾದ ಪ್ರತಿಫಲವು ಅವರಿಗೆ ಇದ್ದೇ ಇರುವುದು. ನನ್ನ ಕರ್ತವ್ಯವನ್ನು ನಾನು ಮಾಡಿರುವೆನೆಂಬ ಜ್ಞಾನದಿಂದ ಯಾವ ಸುಖವು ಹುಟ್ಟುವುದೋ ಅದಕ್ಕೆ ಬೆಲೆಯಿಲ್ಲ. ಇಂಥಾ ಸುಖದ ಮೇಲೆ ಅಪೇಕ್ಷೆಯನ್ನಿಟ್ಟು, ಪ್ರಭುತ್ವ ಮಾಡತಕ್ಕವರು ಧನ್ಯರು ಅವರೇ ಸುಖಿಗಳು. ಇಂಥಾ ಸೌಖ್ಯವನ್ನು ಯಾರು ಗುರಿಯಾಗಿಟ್ಟುಕೊಳ್ಳುವರೋ ಅವರನ್ನು ನೋಡಿ, ಅವರಿಗೆ ಪ್ರಭುತ್ವವನ್ನು ವಹಿಸಬೇಕು. ಬೇರೆ ಗುರಿಯನ್ನು ಇಟ್ಟುಕೊಂಡವರು ಪ್ರಭುತ್ವಕ್ಕೆ ಅರ್ಹರಲ್ಲ. ಅಂಥಾವರ ಪ್ರಭುತ್ವದಿಂದ ಪ್ರಜೆಗಳಿಗೆ ಸುಖವಾಗುವುದಿಲ್ಲ. ಪ್ರಜೆಗಳ ಉದ್ದೇಶವು ನೆರವೇರಬೇಕಾದರೆ, ಅವರಂತೆಯೇ ಭೃತ್ಯರೂ ಕೂಡ ಲೋಕಹಿತೈಷಿಗಳಾಗಿಯೂ, ಧರ್ಮಮಾರ್ಗೈಕಪರಾಯಣರಾಗಿಯೂ ಇರಬೇಕು. ಮಂತ್ರಿಗಳು ಮೊದಲ್ಗೊಂಡು ಕುಳುವಾಡಿಗಳ ವರೆಗೂ ಸಕಲ ನೌಕರರೂ ಕೂಡ ಧರ್ಮದಿಂದಲೂ, ಭಕ್ತಿಯಿಂದಲೂ, ಪ್ರಾಮಾಣಿಕತೆಯಿಂದಲೂ ಅವರವರ ಕೆಲಸಗಳನ್ನು ಮಾಡುವಂತೆ ಯಾರು ಮಾಡಬಲ್ಲರೋ ಅವರು ಪ್ರಭುಗಳಾದರೆ, ತಾವೂ ಧನ್ಯರಾಗುವರಲ್ಲದೆ, ಪ್ರಜೆಗಳೂ ಸುಖಿಗಳಾಗುವರು. ಹಾಗೆ ಆಗಬೇಕಾದರೆ, ಸಕಲ ನೌಕರರ ಬುದ್ಧಿಯೂ, ಶಕ್ತಿಯೂ, ಭಕ್ತಿಯೂ, ಪ್ರಾಮಾಣಿಕತೆಯೂ ಹೇಗಿರುವುದೋ ಅದು ಪ್ರಭುವಿಗೆ ತಿಳಿದಿರಬೇಕು. ಹಾಗೆ ತಿಳಿಯದವರು ಪ್ರಭುತ್ವಕ್ಕೆ ಅರ್ಹರಾಗಿರುವುದಿಲ್ಲ. ಯಾವ ಕೆಲಸದಲ್ಲಿ ಯಾರು ದಕ್ಷರೋ ಅದನ್ನು

ಪರೀಕ್ಷಿಸಿ, ಅವರನ್ನು ಆ ಕೆಲಸಗಳಿಗೆ ನಿಯಮಿಸಿ, ಅವರಿಂದ ಸದರಿ ಕೆಲಸಗಳನ್ನು ಪರಿಪೂರ್ಣವಾಗಿ ಮಾಡಿಸಬೇಕಾಗುತ್ತದೆ ಜನಗಳ ಯೋಗ್ಯತೆಯನ್ನು ತಿಳಿಯದೆ, ಇತರರ ಮಾತುಗಳನ್ನು ಕೇಳಿ, ಯಾವ ಕೆಲಸಗಳಿಗೆ ಯಾರು ಅನರ್ಹರೋ ಅವರನ್ನು ನಿಯಮಿಸಿಕೊಂಡರೆ, ಕೆಲಸಗಳು ಕೆಡುವುವು. ಪ್ರಜಾರಂಜನೆಯು ಸಮರ್ಪಕವಾಗಿ ಆಗುವುದಿಲ್ಲ. ನ್ಯೂನಾತಿರಿಕ್ತಗಳು ಉಂಟಾಗುವುವು. ದುಷ್ಟರು ಪ್ರಬಲರಾಗು ವರು. ಶಿಷ್ಟರು ಹೀನಸ್ಥಿತಿಗೆ ಬರುವರು. ಪ್ರಭುವು ಎಷ್ಟು ಸತ್ಯವಂತನಾಗಿದ್ದಾಗ್ಯೂ, ಎಷ್ಟು ಧರ್ಮಿಷ್ಟನಾಗಿದ್ದಾಗ್ಯೂ ಅವನ ಇಷ್ಟಾರ್ಥಸಿದ್ಧಿಯು ಆಗುವುದಿಲ್ಲ. ಸ್ವಾರ್ಥ ಪರತೆಯು ಸನ್ಯಾಸಿಗಳನ್ನೂ ಕೂಡ ಬಿಟ್ಟಿರುವುದಿಲ್ಲ. ಹೀಗಿರಲಾಗಿ, ಸಂಸಾರಿಗಳ ಪಾಡೇನು ? ಇಷ್ಟಾರ್ಥ ಪ್ರಾಪ್ತಿಗೋಸ್ಕರ ಪ್ರಭುಗಳನ್ನು ಸೇವಿಸತಕ್ಕವರಲ್ಲಿ ಅನೇಕರು ಅವನ ಮುಖೋಲ್ಲಾಸವಾಗುವಂತೆ ಮಾತನಾಡುವರು. ಅನೇಕ ಸಂದರ್ಭಗಳಲ್ಲಿ ವಾಸ್ತವಾಂಶವು ಅವನಿಗೆ ಗೊತ್ತಾಗದಂತೆ ಮಾಡುವರು. ಹಾಗೆ ಮಾಡುವುದರಲ್ಲಿ ಅಸಾಧಾರಣವಾದ ನೈಪುಣ್ಯವನ್ನು ತೋರಿಸುವರು. ಅಧರ್ಮವು ಧರ್ಮವೆಂದು ನಿರೂಪಿಸುವರು. ಧರ್ಮವು ಅಧರ್ಮವಾಗುವಂತೆ ಮಾಡುವರು. ಸತ್ಯವು ಅಸತ್ಯ ವಾಗಿರುವಂತೆಯೂ, ಅಸತ್ಯವು ಸತ್ಯವಾಗಿರುವಂತೆಯೂ ರೆಕಾರ್ಡುಗಳೂ ಕೂಡ ಕಲ್ಪಿಸಲ್ಪಡುವುವು. ಇಂಥಾ ಸಂದರ್ಭಗಳಲ್ಲಿ ವಾಸ್ತವಾಂಶವನ್ನು ಗೊತ್ತುಮಾಡಿ ಕೊಳ್ಳುವುದು ಬಹಳ ಕಷ್ಟವಾಗುವುದು. ಪರಿವಾರ ದೇವತೆಗಳಲ್ಲಿ ನಂಬಿಕೆಯನ್ನು ಇಡಬೇಕು. ಹಾಗೆ ಇಡದಿದ್ದರೆ, ಜೀವನವೂ ಕೂಡ ಕಷ್ಟವಾಗುತ್ತದೆ. ಅವ ರನ್ನು ಒಪ್ಪಿಸಿ, ಧರ್ಮವನ್ನು ಉದ್ಧರಿಸಬೇಕು. ಅವರು ಪ್ರತಿಭಟಿಸಿದರೆ, ಸೀಜರ್‌ನ ಗತಿಯು ಬರುವುದು. ಇದನ್ನೆಲ್ಲಾ ಪರಿಶೀಲಿಸಿ ನೋಡಿದರೆ, ಧರ್ಮಮಾರ್ಗೈಕ ಪರಾಯಣರಾದ ಪ್ರಭುಗಳ ಜೀವನಕ್ಕಿಂತಲೂ ಝಾಡಮಾಲಿಗಳ ಜೀವನವೂ ಕೂಡ ಉತ್ತಮ. ಝಾಡಮಾಲಿಯು ತನ್ನ ಕೆಲಸವನ್ನು ಪೂರೈಸಿದ ಮೇಲೆ ನಿಶ್ಚಿಂತೆ ಯಿಂದ ಇರುವನು. ಅವನಿಗೆ ತಿಂದದ್ದು ಜೀರ್ಣಕ್ಕೆ ಬರುವುದು. ಅವನಿಗೆ ಚನ್ನಾಗಿ ನಿದ್ರೆಯು ಬರುವುದು. ಅವನಿಗೆ ಯಾವ ಕ್ಲೇಶವೂ ಇರುವುದಿಲ್ಲ. ಹೆಂಡತಿ, ಮಕ್ಕಳು, ಸ್ನೇಹಿತರು ಮೊದಲಾದವರೊಡನೆ ಅವನು ವಿನೋದವಾಗಿ ಕಾಲ ಕ್ಷೇಪ ಮಾಡುವನು. ಅವನಿಗೆ ಇರುವ ಶಾಂತಿಯು ದುಷ್ಟನಿಗ್ರಹ, ಶಿಷ್ಟಪರಿಪಾ

ಲನೆಯಲ್ಲಿ ಆಸಕ್ತನಾದ ಪ್ರಭುವಿಗೆ ಎಂದಿಗೂ ಇರುವುದಿಲ್ಲ. 'ಕೊಟ್ಟರೆ, ಹೊಗಳುವುದು, ಕೊಡದಿದ್ದರೆ ಬೊಗಳುವುದು' ಸಾಮಾನ್ಯ ಜನಗಳ ಸ್ವಭಾವ. ಭೃತ್ಯರಾಗಿರುವುದಕ್ಕೆ ರುಜುಮಾರ್ಗಾವಲಂಬಿಗಳಾದ ಹರಿಶ್ಚಂದ್ರಾದಿಗಳು ಸಿಕ್ಕುವುದಿಲ್ಲ. ಸಿಕ್ಕತಕ್ಕ ಭೃತ್ಯರನ್ನು ಚತುರೋಪಾಯಗಳಿಂದಲೂ ಹರಿಶ್ಚಂದ್ರಾದಿಗಳಾಗುವಂತೆ ಮಾಡಿಕೊಳ್ಳಬೇಕು. ಅತಿಶಯೋಕ್ತಿಗಳಿಂದ ಯಾರಾದರೂ ಸ್ತುತಿಸಿದರೆ, ಈ ಸ್ತೋತ್ರಕ್ಕೆ ಕಾರಣವೇನಿರಬಹುದೆಂದು ಪರ್ಯಾಲೋಚಿಸಿ, ದಾಕ್ಷಿಣ್ಯಪರವಶರಾಗದೆ, ಧರ್ಮಕ್ಕೆ ಹಾನಿ ಬರದಂತೆ ಮಾಡಿಕೊಳ್ಳಬೇಕು. ಯಾರಾದರೂ ನಮ್ಮನ್ನು ನಿರ್ಭಯವಾಗಿ ನಿಂದಿಸಿದರೆ, ಯಾವ ಅನ್ಯಾಯವು ನಮ್ಮಿಂದ ಮಾಡಲ್ಪಟ್ಟಿರುವುದೆಂದು ಪರಿಶೀಲಿಸಲ್ಪಡಬೇಕು. ಪ್ರಮಾದದಿಂದ ನಾವೇನಾದರೂ ತಪ್ಪು ಮಾಡಿದ್ದರೆ, ಅದನ್ನು ತಕ್ಷಣದಲ್ಲಿಯೇ ತಿದ್ದಿಕೊಳ್ಳಬೇಕು. ಎಂಟು-ಹತ್ತು ಜನಗಳುಳ್ಳ ಸಂಸಾರಗಳಲ್ಲಿ ನಿರಾಕ್ಷಿಣ್ಯವಾಗಿ ನಡೆಯುವುದು ಮನೆಯ ಯಜಮಾನನಿಗೆ ಎಷ್ಟೋ ಕಷ್ಟವಾಗುವುದು. ಪ್ರಭುಗಳ ಸಂಸಾರವು ಬಹಳ ದೊಡ್ಡದು. ಕೋಟ್ಯಂತರ ಪ್ರಜೆಗಳು ಇವರಿಗೆ ಬಂಧುಮಿತ್ರಸ್ಥಾನದಲ್ಲಿರುವರು. ಅವರಲ್ಲಿ ಪರಸ್ಪರ ಪ್ರೀತಿಯನ್ನೂ, ಸೌಹಾರ್ದವನ್ನೂ ಹುಟ್ಟಿಸಿ, ಎಲ್ಲರೂ ಎಲ್ಲರ ಕ್ಷೇಮಕ್ಕೋಸ್ಕರವೂ ಮೆಹನತ್ತು ಮಾಡುವಂತೆ ಮಾಡಬೇಕು. ಬೃಹಸ್ಪತಿಗೂ ಕೂಡ ಇದು ಬಹಳ ಕ್ಲೇಶವನ್ನುಂಟುಮಾಡುವುದು. ಮನೋವಾಕ್ಕರ್ಮಗಳ ಪರಿಣಾಮ ಫಲವನ್ನು ಪರ್ಯಾಲೋಚಿಸದೆ, ಕೆಲಸ ಮಾಡತಕ್ಕವರ ಪಾಡೇನು?" ಮಹರ್ಷಿಗಳ ಕಡೆಗೆ ತಿರುಗಿ, ಮೆಂಟರನು ಹೇಳಿದ್ದೇನಂದರೆ:—

"ಮೈನಾಸನ ಧರ್ಮಶಾಸ್ತ್ರಗಳನ್ನು ಪರಿಶೀಲಿಸಿರುವ ನಿಮಗೆ ವಿಶೇಷವಾಗಿ ಹೇಳುವುದೇನೂ ಇರುವುದಿಲ್ಲ. ನಾನು ಪರದೇಶಿ. ನಿಮ್ಮ ದೇಶದ ಪೂರ್ವಾಪರಗಳ್ಯಾವುವೂ ನನಗೆ ತಿಳಿಯದು. ನಿಮ್ಮ ಜನಗಳ ಸ್ವಭಾವವೂ ನನಗೆ ತಿಳಿಯದು. ನಿಮ್ಮ ಜನಗಳ ಚರಿತ್ರೆಯೂ ನನಗೆ ತಿಳಿಯದು. ನಿಮ್ಮ ನೌಕರರ ಚರಿತ್ರೆಯೂ ನನಗೆ ತಿಳಿಯದು. ಬರಿ ಲೋಕವ್ಯವಹಾರಜ್ಞಾನವನ್ನೂ, ಸಾರಾಸಾರ ವಿಚಾರಗಳನ್ನೂ ತಿಳಿದುಕೊಂಡ ಮಾತ್ರದಿಂದಲೇ ಈ ದ್ವೀಪನಿವಾಸಿಗಳ ಸದಿಷ್ಟಾರ್ಥಸಿದ್ಧಿಯಾಗುವಂತೆ ದುಷ್ಟನಿಗ್ರಹ, ಶಿಷ್ಟಪರಿಪಾಲನೆಯನ್ನು ಮಾಡುವುದು ನನಗೆ ಅಸಾಧ್ಯ. ಟೆಲಿಮಾಕಸ್ಸನು ತಾನು ಹುಡುಗನೆಂಬದಾಗಿಯೂ, ನಾನು ತನ್ನ ಗುರುವೆಂಬದಾಗಿಯೂ,

ತನಗಿಂತಲೂ ಈ ಪ್ರಭುತ್ವವನ್ನು ವಹಿಸುವುದಕ್ಕೆ ನಾನು ಲಾಯಖಾದವನೆಂಬದಾಗಿಯೂ ನಿಮಗೆ ಕೃತಪಡಿಸಿರುವನು. ಅವನಿಗಿಂತಲೂ ಹೆಚ್ಚು ಜ್ಞಾನವು ನನಗೆ ಇರಬಹುದು. ಆದರೆ, ಈ ದ್ವೀಪನಿವಾಸಿಗಳ ಇಷ್ಟಾರ್ಥಸಿದ್ಧಿಯಾಗುವಂತೆ ಪ್ರಭುತ್ವ ಮಾಡುವುದಕ್ಕೆ ಅವನು ಎಷ್ಟು ಅಸಮರ್ಥನೋ ನಾನೂ ಅಷ್ಟು ಅಸಮರ್ಥನೆಂದು ನನಗೆ ತೋರುತ್ತದೆ. ನಿಮಗೆ ಪ್ರಭುವಾಗತಕ್ಕವನು ನಿಮ್ಮ ದೇಶದಲ್ಲಿ ಹುಟ್ಟಿ, ನಿಮ್ಮ ದೇಶದ ಆಡಳಿಗಳನ್ನು ತಿಳಿದುಕೊಂಡು, ನಿಮ್ಮ ಜನಗಳ ಶೀಲಸ್ವಭಾವಗಳನ್ನು ಬಲ್ಲವನಾಗಿ ಇರಬೇಕು. ಮೇಧಾವಿಯಾಗಿಯೂ, ಪ್ರಾಮಾಣಿಕನಾಗಿಯೂ, ರಾಜತಂತ್ರವಿಶಾರದನಾಗಿಯೂ, ಪಾಪಭೀತನಾಗಿಯೂ, ಮನೋವಾಕ್ಕರ್ಮಗಳಲ್ಲಿ ಪರಿಶುದ್ಧನಾಗಿಯೂ, ವೈರಾಗ್ಯ ಚಕ್ರವರ್ತಿಯಾಗಿಯೂ ಇರಬೇಕು. ಪ್ರಜೆಗಳ ವಿಷಯವು ಅವನಿಗೆ ಚನ್ನಾಗಿ ತಿಳಿದಿರಬೇಕು. ಅವನ ವಿಷಯವು ಪ್ರಜೆಗಳಿಗೂ ಚನ್ನಾಗಿ ತಿಳಿದಿರಬೇಕು. ಕರ್ತವ್ಯತಾಜ್ಞಾನವೂ, ಹಕ್ಕುಬಾಧ್ಯತೆಗಳ ಸ್ವರೂಪವೂ ಇವು ಎರಡೂ ಅವನಿಗೆ ಸ್ಪಷ್ಟವಾಗಿ ತಿಳಿದಿರಬೇಕು. ತನ್ನ ಕರ್ತವ್ಯವನ್ನು ಮಾಡುವುದರಲ್ಲಿ, ಅವನು ಬಹಳ ನಿಪುಣನಾಗಿರಬೇಕು. ತನ್ನ ಹಕ್ಕುಬಾಧ್ಯತೆಗಳಿಗೆ ವಿರೋಧವಾಗಿ ಯಾರೂ ನಡೆಯದಂತೆ ನೋಡಿಕೊಳ್ಳುವುದರಲ್ಲಿ ಅವನು ಸಹಸ್ರಾಕ್ಷನಂತೆ ಇರಬೇಕು. ಹೊನ್ನು, ಹೆಣ್ಣು, ಮಣ್ಣುಗಳ ಮೇಲಿನ ಆಶೆಯು ಅವನಿಗೆ ಸುತರಾಂ ಇರಕೂಡದು. ಅಂಥಾ ಮನುಷ್ಯನನ್ನು ನೋಡಿ, ಅವನಿಗೆ ಈ ದ್ವೀಪದ ಪ್ರಭುತ್ವವನ್ನು ವಹಿಸುವುದಕ್ಕೆ ಬದಲಾಗಿ, ಪರದೇಶೀಯರಾಗಿಯೂ, ಜನ್ಮತಃ ಬರತಕ್ಕ ದೇಶಾಭಿಮಾನರಹಿತರಾಗಿಯೂ ಇರುವ ನಮಗೆ ಪ್ರಭುತ್ವದ ಜವಾಬ್ದಾರಿಯನ್ನು ವಹಿಸಬೇಕೆಂದು ನೀವು ಸಲಹೆಯನ್ನು ಕೊಡುವುದನ್ನು ನೋಡಿದರೂ, ನಿಮ್ಮ ಸಲಹೆಗನುಸಾರವಾಗಿ ಈ ಮಹಾಜನಗಳೆಲ್ಲರೂ ನಡೆಯುವುದನ್ನು ನೋಡಿದರೂ ನನಗೆ ಆಶ್ಚರ್ಯವಾಗುತ್ತದೆ. ಇಂಥಾ ತಪ್ಪನ್ನು ಮಾಡಬೇಡಿ. ನಿಮ್ಮ ದ್ವೀಪನಿವಾಸಿಗಳಲ್ಲಿ ದಕ್ಷನಾಗಿರುವನನ್ನು ಚುನಾಯಿಸಿಕೊಳ್ಳಿ. ಪ್ರಭುತ್ವವನ್ನು ಅಪೇಕ್ಷಿಸತಕ್ಕವರು ಅನೇಕರಿರುವರು. ಪ್ರಭುತ್ವದ ಜವಾಬ್ದಾರಿಯನ್ನು ತಿಳಿದುಕೊಂಡು, ಅದರಲ್ಲಿ ಉದಾಶೀನರಾಗಿರತಕ್ಕವರು ಬಹಳ ವಿರಳರಾಗಿರುವರು. ಸಂಪತ್ತಿನ ಮೇಲೂ, ಅಧಿಕಾರದ ಮೇಲೂ, ಗೌರವದ ಮೇಲೂ ದೃಷ್ಟಿಯುಳ್ಳವರು ಪ್ರಭುತ್ವವನ್ನು ಅಪೇಕ್ಷಿಸುವುದು ಸಹಜ. ಪ್ರಜೆಗಳನ್ನೆಲ್ಲಾ ಧರ್ಮದಿಂದ ರಕ್ಷಿಸುವುದು ಬಹಳ ಕಷ್ಟ. ಈ ಕಷ್ಟವನ್ನು ತಿಳಿದವರು

ಪ್ರಭುತ್ವವನ್ನು ವಹಿಸುವುದಕ್ಕೆ ಒಪ್ಪುವುದಿಲ್ಲ. ಟೆಲಿಮಾಕಸ್ಸನೂ, ನಾನೂ ಇಬ್ಬರೂ ಈ ಪದವಿಗೆ ಅರ್ಹರಲ್ಲ. ನಮ್ಮ ವಿಷಯದಲ್ಲಿ ಆಶೆಯನ್ನು ಬಿಡಿ. ನಿಮ್ಮ ದ್ವೀಪ ನಿವಾಸಿಗಳಲ್ಲಿ ಪ್ರಭುಪದವಿಗೆ ಬೇಕಾದ ಗುಣಾತಿಶಯಗಳುಳ್ಳವರನ್ನು ಚುನಾಯಿಸಿ ಕೊಳ್ಳಿ. ''

ಈ ರೀತಿಯಲ್ಲಿ ಮೆಂಟರನು ಹೇಳಿದ್ದನ್ನು ಕೇಳಿ, ಈ ಮಹರ್ಷಿಗಳು ಭ್ರಾಂತರಾದರು. ಮಹಾಜನಗಳು ಆಶ್ಚರ್ಯ ಪಟ್ಟರು. ' ಲೋಕವೆಲ್ಲಾ ಪ್ರಭುಗಳಾಗಬೇಕೆಂದು ಅಪೇಕ್ಷಿಸುವರು. ಪ್ರಭುಪದವಿಯು ತಮಗೆ ಆವಶ್ಯಕವಿಲ್ಲವೆಂದು ಇವರು ಹೇಳುವರು. ಇವರು ಯಾರು ? ಇವರು ಯಾರ ಜೊತೆಯಲ್ಲಿ ಬಂದವರು ? ' ಎಂದು ಕೆಲವರು ವಿಚಾರಣೆಯನ್ನು ಮಾಡಿದರು. ನಾಸಿಕ್ರಿಟೀಸ್ ಎಂಬಾತನು ಹೇಜಲ್ ನನ್ನು ತೋರಿಸಿ, ಇವರಿಬ್ಬರೂ ಈತನ ಜೊತೆಯಲ್ಲಿ ಬಂದವರೆಂದು ಹೇಳಿದನು. ಅದರ ಮೇಲೆ ಹೇಜಲ್‌ಗೂ, ಮೆಂಟರನು ಮತ್ತು ಟೆಲಿಮಾಕಸ್ಸಿಗೂ ಏನು ಸಂಬಂಧವೆಂದು ಕೇಳಿದರು ? ' ಅವರಿಗೆ ಯಾವ ಸಂಬಂಧವೂ ಇರುವುದಿಲ್ಲ. ಮೆಂಟರನು ಹೇಜಲ್‌ನ ಭೃತ್ಯನು. ಇವನನ್ನು ಹರಾಜಿನಲ್ಲಿ ಆತನು ಕೊಂಡುಕೊಂಡನು. ಮೆಂಟರನ ಅದ್ಭುತವಾದ ವಿದ್ವತ್ತನ್ನೂ, ಜ್ಞಾನವನ್ನೂ ನೋಡಿ, ಹೇಜಲ್‌ನು ಅವನಿಗೆ ದಾಸತ್ವವನ್ನು ತಪ್ಪಿಸಿ, ತನಗೆ ಗುರುವನ್ನಾಗಿಯೂ, ಮಿತ್ರನನ್ನಾಗಿಯೂ ಮಾಡಿಕೊಂಡಿರುವನು. ಮೈನಾಸನ ಧರ್ಮಶಾಸ್ತ್ರಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಆತನು ಈ ಇಬ್ಬರನ್ನೂ ಕರೆದುಕೊಂಡು, ಈ ದ್ವೀಪಕ್ಕೆ ಬಂದಿರುವನು ' ಎಂದು ನಾಸಿಕ್ರಿಟೀಸನು ಹೇಳಿದನು. ಇದನ್ನು ಕೇಳಿ, ಆ ಮಹರ್ಷಿಗಳೂ ಮತ್ತು ಆ ಮಹಾಜನಗಳೂ ತುಂಬಾ ವಿಸ್ಮಿತರಾದರು. ಹೇಜಲ್‌ನನ್ನು ಕುರಿತು, ಆ ಮಹರ್ಷಿಗಳು ಹೇಳಿದ್ದೇನಂದರೆ:—

" ಎಲೈ ಹೇಜಲ್‌ನೇ,—ಈ ದ್ವೀಪದ ಪ್ರಭುತ್ವವನ್ನು ಟೆಲಿಮಾಕಸ್ಸನು ಹೇಗೋ ಹಾಗೆ ಮೆಂಟರನೂ ತಿರಸ್ಕಾರ ಮಾಡಿದನು. ಈ ಪ್ರಭುತ್ವವನ್ನು ವಹಿಸಬೇಕೆಂದು ನಿನ್ನನ್ನು ಕೇಳುವುದಕ್ಕೆ ನಮಗೆ ಭಯವಾಗುತ್ತದೆ. ಪ್ರಭುತ್ವವನ್ನು ತಿರಸ್ಕರಿಸುವುದಕ್ಕೆ ಅವರು ಉದಹರಿಸಿದ ಕಾರಣಗಳನ್ನೇ ನೀನೂ ಉದಹರಿಸಬಹುದು. ಇವರಿಬ್ಬರಿಗೂ ಪ್ರಭುತ್ವದ ಕಷ್ಟವು ಭಯವನ್ನು ಉಂಟುಮಾಡಿರುವುದು. ಇವರಿಗೆ ಸಂಪತ್ತಿನಲ್ಲಿಯೂ, ಅಧಿಕಾರದಲ್ಲಿಯೂ ಲೇಶವೂ ಆಶೆ ಇರುವುದಿಲ್ಲ. ಧರ್ಮದಿಂದ

ರಾಜ್ಯಭಾರ ಮಾಡಿ, ಅದರಿಂದ ಪ್ರಜೆಗಳು ಸಂತೋಷ ಪಟ್ಟರೆ, ಅವರ ಕಷ್ಟಕ್ಕೆ ಅದು ಪ್ರತಿಫಲವಲ್ಲವೇ ? ಈ ಪ್ರತಿಫಲವನ್ನೂ ಕೂಡ ಇವರು ತಿರಸ್ಕರಿಸಿದರು. ಈ ದ್ವೀಪನಿವಾಸಿಗಳ ಮೇಲೆ ಕೃಪೆಯನ್ನು ಇಟ್ಟು, ನೀನು ಏತಕ್ಕೆ ಈ ಪ್ರಭುತ್ವವನ್ನು ಪರಿಗ್ರಹಿಸಕೂಡದು ? ಟೆಲಿಮಾಕಸ್ ಮತ್ತು ಮೆಂಟರನಂತೆ ನೀನೂ ನಮ್ಮ ಪ್ರಾರ್ಥನೆಗಳನ್ನು ತಿರಸ್ಕರಿಸಬೇಡ. ನಿನ್ನ ಪುಣ್ಯವಿಶೇಷದಿಂದ ಮೆಂಟರನು ನಿನಗೆ ಮೊದಲು ಭೃತ್ಯನಾಗಿಯೂ, ಅನಂತರ ಮಿತ್ರನಾಗಿಯೂ, ಗುರುವಾಗಿಯೂ ಪರಿಣಮಿಸಿದನು. ಇವರಲ್ಲಿ ನೀನು ಇಟ್ಟಿರತಕ್ಕ ಪ್ರೀತಿಯಿಂದಲೇ ನೀನು ಮಹಾನುಭಾವನಾಗಿರಬೇಕೆಂದು ತೋರುತ್ತದೆ. ನಾವು ಪ್ರಾರ್ಥಿಸತಕ್ಕ ಪದವಿಗೆ ನಿನಗಿಂತಲೂ ಅರ್ಹರು ನಮಗೆ ದೊರೆಯುವುದಿಲ್ಲ. ನಮ್ಮ ಪ್ರಾರ್ಥನೆಗಳನ್ನು ಲಾಲಿಸು. ಈ ದೇಶದ ಪ್ರಭುತ್ವವನ್ನು ಪರಿಗ್ರಹಿಸು. ''

ಈ ರೀತಿಯಲ್ಲಿ ಮಹರ್ಷಿಗಳು ಹೇಳಲು, ಮಹಾಜನಗಳೆಲ್ಲರೂ ಎಲೈ ಹೇಜಲ್‌ನೇ, '' ನಮ್ಮ ಮಹರ್ಷಿಗಳು ಮಾಡಿದ ಪ್ರಾರ್ಥನೆಗಳಿಂದು ತಿಳಿದುಕೊ. ಈ ಪ್ರಾರ್ಥನೆಗಳನ್ನು ನಿರಾಕರಿಸಬೇಡ. ನಮ್ಮಲ್ಲಿ ಕೃಪೆಯನ್ನು ಇಟ್ಟು, ಪ್ರಭುತ್ವವನ್ನು ಅಂಗೀಕರಿಸು '' ಎಂದು ಹೇಳಿದರು. ಅದಕ್ಕೆ ಹೇಜಲ್‌ನು ಹೇಳಿದ್ದೇನಂದರೆ:—

'' ಎಲೈ ಮಹರ್ಷಿಗಳೇ, ಎಲೈ ಕ್ರೀಟ್ ದ್ವೀಪದ ನಿವಾಸಿಗಳೇ,—ನಮ್ಮ ವಿಷಯದಲ್ಲಿ ಇಂಥಾ ತಪ್ಪು ಅಭಿಪ್ರಾಯಗಳನ್ನು ಇಟ್ಟುಕೊಳ್ಳಬೇಡಿ. ಟೆಲಿಮಾಕಸ್ಸನು ನಿಮ್ಮ ದ್ವೀಪದ ಪ್ರಭುತ್ವವನ್ನು ವಹಿಸುವುದಕ್ಕೆ ಇರತಕ್ಕ ಪ್ರತಿಬಂಧಕಗಳನ್ನೆಲ್ಲಾ ತಿಳಿಸಿರುವನು. ಅವನು ನಿಮಗೆ ವಿಜ್ಞಾಪಿಸಿದ ಕಷ್ಟಗಳು ಸನ್ನಿಹಿತವಾಗದೆ ಇದ್ದಿದ್ದರೆ, ನಿಮ್ಮ ಪ್ರಾರ್ಥನೆಗಳನ್ನು ಅವನು ನಿರಾಕರಿಸುತ್ತಿರಲಿಲ್ಲ. ಮೆಂಟರನು ನಿಮ್ಮ ಕ್ಷೇಮಾರ್ಥವಾಗಿ ಮಾಡಿರುವ ಹಿತೋಪದೇಶದ ಅರ್ಥವನ್ನು ನೀವು ಸರಿಯಾಗಿ ತಿಳಿದುಕೊಳ್ಳಲಿಲ್ಲ. ಈ ದ್ವೀಪದ ಪ್ರಭುತ್ವವು ಬಹಳ ಜವಾಬ್ದಾರಿಯುಳ್ಳದ್ದು. ಆ ಜವಾಬ್ದಾರಿಗೆ ತಕ್ಕಂತೆ ಕಷ್ಟವೂ ಇರುವುದು. ವಿಚಾರವಿಹೀನರಿಗೆ ಪ್ರಭುತ್ವದ ಗಿಲೀಟು ವಿಸ್ಮಯವನ್ನುಂಟುಮಾಡುವುದು. ವಿಚಾರಪರರಾದವರಿಗೆ ಪ್ರಭುತ್ವದ ಜವಾಬ್ದಾರಿಯು ಭಯವನ್ನುಂಟುಮಾಡುವುದು. ಪ್ರಭುತ್ವವನ್ನು ವಹಿಸುವುದು ಕಷ್ಟವಲ್ಲ. ವಹಿಸಿದ ಮೇಲೆ, ಅದರ ಜವಾಬ್ದಾರಿಗೆ ನ್ಯೂನತೆಯುಂಟಾಗದಂತೆ ಮಾಡುವುದು ಬಹಳ ಶ್ರಮಸಾಧ್ಯವಾದದ್ದು. ಈ ಪದವಿಯು ನಮಗೆ ಬೇಡ

ನೆಂದು ಹೇಳಿದ್ದಕ್ಕೆ, ನಿಮ್ಮಲ್ಲಿ ತಿರಸ್ಕಾರವು ಕಾರಣವಲ್ಲ. ನಿಮ್ಮ ಕ್ಷೇಮದಲ್ಲಿ ಆಸಕ್ತಿಯೇ ಮುಖ್ಯ ಕಾರಣ. ನಿಮ್ಮ ಪೂರ್ವಾಪರಗಳನ್ನು ತಿಳಿದುಕೊಂಡವನಾಗಿಯೂ, ದಕ್ಷನಾಗಿಯೂ, ಪಾಪಭೀತನಾಗಿಯೂ, ಧರ್ಮಿಷ್ಠನಾಗಿಯೂ ಇರತಕ್ಕ ಪ್ರಭುವು ನಿಮಗೆ ದೊರೆಯಲೆಂದು ಮೆಂಟರನು ಪ್ರಭುತ್ವವನ್ನು ಪರಿಗ್ರಹಿಸಲಿಲ್ಲವೇ ಹೊರತು, ಬೇರೆ ಯಾವ ಕಾರಣಗಳಿಂದಲೂ ಆತನು ಪ್ರಭುತ್ವವನ್ನು ತಿರಸ್ಕರಿಸಲಿಲ್ಲ. ನಿಮಗೆ ಮಂಗಳವಾಗಲಿ. ನನಗೆ ಪೂರ್ವ ವಯಸ್ಸು ಕಳೆದಿರುವುದು. ವಾನಪ್ರಸ್ಥಾಶ್ರಮದಲ್ಲಿ ಇರುವೆನು. ಸನ್ಯಾಸವನ್ನು ಪರಿಗ್ರಹಿಸುವುದರಲ್ಲಿ ಇರುವೆನು. ದೈವಯೋಗದಿಂದ ಮೆಂಟರನ ಸಹವಾಸವೂ, ಸಾನ್ನಿಧ್ಯವೂ ನನಗೆ ದೊರೆಯಿತು. ಈ ಪ್ರಪಂಚದ ಸೃಷ್ಟಿಸ್ಥಿತಿಪ್ರಳಯಗಳ ವಿಚಾರವನ್ನೂ, ಇವುಗಳಿಗೆಲ್ಲಾ ಕಾರಣಭೂತನಾದ ಜಗದೀಶ್ವರನ ಮಹಿಮೆಯನ್ನೂ ಈತನಿಂದ ತಿಳಿದುಕೊಳ್ಳುವುದು ಒಂದು ವಿನಾ ನನಗೆ ಇನ್ನ್ಯಾವುದರಲ್ಲಿಯೂ ಆಶೆ ಇರುವುದಿಲ್ಲ. ಪ್ರಭುತ್ವದಲ್ಲಿ ನನಗೆ ಆಶೆಯು ಇಲ್ಲ. ಪ್ರಭುತ್ವದ ಭಾರವನ್ನು ವಹಿಸಲು ನನಗೆ ಶಕ್ತಿಯೂ ಇಲ್ಲ. ನಮ್ಮಲ್ಲಿ ಕೃಪೆಯನ್ನು ಇಟ್ಟು ಮನ್ನಿಸಬೇಕು.''

ಈ ರೀತಿಯಲ್ಲಿ ಹೇಜಲ್‌ನು ಹೇಳಿದ್ದನ್ನು ಕೇಳಿ, ಎಲ್ಲರೂ ಆಶ್ಚರ್ಯದಿಂದಲೂ, ವಿಷಾದದಿಂದಲೂ ಪರವಶರಾಗಿ, ದಿಕ್ಕುತೋರದೆ ಇದ್ದರು. ಆಗ ಸದರಿ ಮಹರ್ಷಿಗಳು ಮೆಂಟರನನ್ನು ನೋಡಿ, ಹೇಳಿದ್ದೇನಂದರೆ: —

'' ಎಲೈ ಮೆಂಟರನೇ,—ಟಲಿಮಾಕಸ್ಸನೂ, ಹೇಜಲ್‌ನೂ ಹೇಳಿದ ಮಾತುಗಳನ್ನೂ ಕೇಳಿದೆವು ನಿನ್ನ ಹಿತೋಪದೇಶವನ್ನೂ ಕೇಳಿದೆವು. ಮನುಷ್ಯ ಜನ್ಮವನ್ನು ಎತ್ತಿದವರಲ್ಲಿ ನಿನಗಿಂತಲೂ ವಿವೇಕಶಾಲಿಗಳೂ, ಮಹಾತ್ಮರೂ ಇರುವಂತೆ ತೋರುವುದಿಲ್ಲ. ನೀನು ಅವತಾರ ಪುರುಷನೆಂದು ತೋರುತ್ತದೆ. ಭೂತಭವಿಷ್ಯದ್ವರ್ತಮಾನಗಳೆಲ್ಲಾ ನಿನಗೆ ಕರತಲಾಮಲಕವಾಗಿರುವುವು. ನಮ್ಮ ದೇಶವು ಅನಾಯಕವಾಗಿರುವುದು. ನಮಗೆ ಯೋಗ್ಯನಾದ ಪ್ರಭುವು ಬೇಕು. ನೀವು ಮೂರು ಜನಗಳೂ ಈ ಪ್ರಭುತ್ವವನ್ನು ತಿರಸ್ಕರಿಸಿದಿರಿ. ಯೋಗ್ಯನಾದ ಪ್ರಭುವನ್ನು ಚುನಾಯಿಸಿಕೊಳ್ಳುವುದಕ್ಕೆ ನಾವು ಏನು ಮಾಡಬೇಕು ? ಈ ವಿಷಯದಲ್ಲಾದರೂ ನಮಗೆ ಹಿತೋಪದೇಶವನ್ನು ಮಾಡು. ಸರಿಯಾದ ಪ್ರಭುವನ್ನು ಚುನಾಯಿಸುವುದಕ್ಕೆ ನಮಗೆ ಮಾರ್ಗದರ್ಶನವನ್ನಾದರೂ ಮಾಡು. ಹಾಗೆ ಮಾಡಿದ ಹೊರತು, ನಾವು ನಿಮ್ಮನ್ನು ಬಿಡತಕ್ಕವರಲ್ಲ.''

ಈ ರೀತಿಯಲ್ಲಿ ಮಹರ್ಷಿಗಳೇ ಮೊದಲಾದ ಮಹಾಜನಗಳೆಲ್ಲರೂ ಹೇಳಲು, ಮೆಂಟರನು ಇವರಿಗೆ ಉತ್ತರವನ್ನು ಕೊಟ್ಟನು. ಅವನು ಹೇಳಿದ್ದೇನಂದರೆ: —

" ಅಂಗಸಾಧನೆಯ ಪೋಟಾಪೋಟಿಯಾಗುತ್ತಿರುವಾಗ, ನಾನು ಪ್ರೇಕ್ಷಕರ ಮಧ್ಯದಲ್ಲಿ ಇದ್ದೆನು. ಎಲ್ಲೆಲ್ಲಿಯೂ ಬಹಳ ಗಲಾಟೆಯಾಗುತ್ತಿತ್ತು. ಪ್ರೇಕ್ಷಕರೆಲ್ಲರೂ ಉತ್ಸಾಹಪರವಶರಾಗಿದ್ದರು. ಅವರಲ್ಲಿ ಶಾಂತಚಿತ್ತನಾದ ಒಬ್ಬ ಮನುಷ್ಯನು ಇದ್ದನು. ಅವನು ಆರೋಗದೃಢಕಾಯನಾಗಿದ್ದನು. ಆದಾಗ್ಯೂ ವೃದ್ಧನಾಗಿರುವಂತೆ ಕಾಣಬಂತು. ' ಇವನು ಯಾರು ? ಇವನ ಹೆಸರೇನು ? ' ಎಂದು ವಿಚಾರಿಸಿದೆನು. ' ಇವನ ಹೆಸರು ಅರಿಸ್ಟೋಡಿಮಸ್ ' ಎಂಬದಾಗಿ ಹೇಳಿದರು. ಈ ಅಂಗಸಾಧನೆಯ ಪೋಟಾಪೋಟಿಗೆ ನಿನ್ನ ಇಬ್ಬರು ಮಕ್ಕಳೂ ಉಮೇದುವಾರರಾಗಿರುವರೆಂದು ಈತನಿಗೆ ಒಬ್ಬ ಮನುಷ್ಯನು ಹೇಳಿದನು. ಅದನ್ನು ಕೇಳಿ, ಈತನು ತುಂಬಾ ಅಸಮಾಧಾನ ಪಟ್ಟನು. ' ಏತಕ್ಕೆ ಅಸಮಾಧಾನ ಪಡುತ್ತೀಯೆ ? ಈ ಪೋಟಾಪೋಟಿಯಲ್ಲಿ ನಿನ್ನ ಮಕ್ಕಳಲ್ಲಿ ಯಾರಾದರೂ ಒಬ್ಬರು ಉತ್ತೀರ್ಣರಾಗಬಹುದು. ಇವರಲ್ಲಿ ಯಾರಿಗಾದರೂ ಒಬ್ಬರಿಗೆ ಪ್ರಭುತ್ವವಾಗಬಹುದು. ಇದು ನಿನಗೆ ಸಂತೋಷಜನಕವಾದದ್ದಲ್ಲವೇ ? ' ಎಂದು ಆತನು ಕೇಳಿದನು. ' ಇವರಲ್ಲಿ ಉತ್ತೀರ್ಣರಾದರೆ ಏನು ಗತಿ ಎಂಬ ಭಯವು ನನಗೆ ಉಂಟಾಗಿರುವುದು. ಇವರಲ್ಲಿ ಒಬ್ಬನು ಬಹಳ ಗುಣಾಢ್ಯನು. ಇವನು ಉತ್ತೀರ್ಣನಾದರೆ, ಪ್ರಭುತ್ವದ ಭಾರವು ಇವನಿಗೆ ಬಹಳ ಕ್ಲೇಶವನ್ನುಂಟುಮಾಡುವುದು. ಇಂಥಾ ಕ್ಲೇಶವು ಬಂದಾಗ್ಯೂ ಚಿಂತೆಯಿಲ್ಲ. ಸಹಸ್ರಾಕ್ಷನಿಗೂ ಕೂಡ ಧರ್ಮದಿಂದ ರಾಜ್ಯಭಾರ ಮಾಡುವುದು ಕಷ್ಟವಾಗುತ್ತದೆ. ಇವನು ಇನ್ನೂ ಚಿಕ್ಕವನು. ಇವನಿಗೆ ಇಂಥಾ ಭಾರವು ಸಂಭವಿಸಿದರೆ ಏನು ಗತಿಯೆಂದು ವ್ಯಸನವಾಗುತ್ತದೆ ಎರಡನೇ ಹುಡುಗನು ದುರ್ಮಾರ್ಗಪ್ರವರ್ತಕನು ಇವನು ಈ ಪೋಟಾಪೋಟಿಯಲ್ಲಿ ಬಿದ್ದು, ಪ್ರಭುವಾದರೆ ಈ ದ್ವೀಪವನ್ನೇ ನಾಶಮಾಡಿ, ಹುಚ್ಚರ ಆಸ್ಪತ್ರೆಯಲ್ಲಿ ಸಾಯುವ ಗತಿಯು ಇವನಿಗೆ ಬರುವುದು. ಇದೂ ನನಗೆ ವ್ಯಸನವನ್ನುಂಟುಮಾಡಿರುವುದು ' ಎಂದು ಅರಿಸ್ಟೋಡಿಮಸ್‌ನು ಹೇಳಿದನು. ಈ ಮಾತು ನನ್ನ ಕಿವಿಗೆ ಬಿದ್ದಿತು. ಇವನ ವೃತ್ತಾಂತವನ್ನು ತಿಳಿದುಕೊಳ್ಳಬೇಕೆಂದು ನನಗೆ ಆಶೆಯು ಹುಟ್ಟಿತು. ಇವನ ಪೂರ್ವೋತ್ತರಗಳನ್ನು ವಿಚಾರಿಸಿದೆನು. ಇವನು ಈ ದೇಶದ ಮಿಲಿಟರಿ ಸರ್ವಿಸ್ಸಿನಲ್ಲಿ ಬಹಳ ಜವಾ

ಬ್ದಾರಿ ಕೆಲಸವನ್ನು ವಹಿಸಿದ್ದನೆಂದು ಗೊತ್ತಾಯಿತು. ಅನೇಕ ಯುದ್ಧಗಳಲ್ಲಿ ಈತನು ಈ ದ್ವೀಪರಕ್ಷಣೆಗೋಸ್ಕರ ಯುದ್ಧಮಾಡಿರುವನೆಂದು ತಿಳಿಯಬಂದಿತು. ಕತ್ತಿಯ ಘಾಯಗಳಿಂದ ಆಗಿರತಕ್ಕ ಗುರ್ತು ಈತನ ದೇಹದ ಎಲ್ಲಾ ಭಾಗಗಳಲ್ಲಿಯೂ ಕಾಣಬಂದಿತು. ಇವನು ಕೇವಲ ಪ್ರಾಮಾಣಿಕನಾದುದರಿಂದಲೂ, ನೀನೇ ಇಂದ್ರ, ಚಂದ್ರ, ಮಹೇಂದ್ರರೆಂದು ಸ್ತುತಿಸುವುದು ಇವನಿಗೆ ಅನಿಷ್ಟವಾಗಿದ್ದದ್ದರಿಂದಲೂ, ಇಡುಮಿನಿಯಸ್ಸನ ನ್ಯೂನಾತಿರಿಕ್ತಗಳನ್ನು ಅವನಿಗೆ ನಿರ್ಭಯವಾಗಿ ನಿರ್ದಾಕ್ಷಿಣ್ಯದಿಂದ ಇವನು ಹೇಳುತ್ತಿದ್ದದ್ದರಿಂದಲೂ ಇವನಲ್ಲಿ ಆ ಪ್ರಭುವಿಗೆ ಅಸಮಾಧಾನವು ಉಂಟಾಯಿತು. ಟ್ರಾಯ್‌ದೇಶದ ಯುದ್ಧವು ಸನ್ನಿಹಿತವಾದದ್ದರಿಂದ, ಇವನನ್ನು ಕರೆದುಕೊಂಡು ಹೋದರೆ, ಅವನಿಗೆ ಕೀರ್ತಿಯು ಬರುವುದೆಂಬ ಹೊಟ್ಟೆಕಿಚ್ಚಿನಿಂದ ಇಡುಮಿನಿಯಸ್ಸನು ಅವನನ್ನು ಕ್ರೀಟ್ ದ್ವೀಪದಲ್ಲಿಯೇ ಬಿಟ್ಟು, ತಾನು ಟ್ರಾಯ್ ದೇಶಕ್ಕೆ ಪ್ರಯಾಣ ಮಾಡಿದನೆಂದು ಗೊತ್ತಾಯಿತು. ಈ ಅರಿಸ್ಟೋಡಿಮಸ್ಸನು ಮನೋವಾಕ್ಕರ್ಮಗಳಲ್ಲಿಯೂ ಋಜುಮಾರ್ಗವನ್ನು ಅವಲಂಬಿಸಿ, ಪ್ರಭುವೂ, ಅವನ ಪರಿವಾರದೇವತೆಗಳೂ ಮಾರ್ಗತಪ್ಪಿ ನಡೆದರೆ, ಅವರನ್ನು ನಿರ್ದಾಕ್ಷಿಣ್ಯವಾಗಿ ತಿದ್ದುತ್ತಾ ಇದ್ದನೆಂಬದಾಗಿ ತಿಳಿಯಬಂತು. ಅದಕ್ಕಾಗಿ ಇಡುಮಿನಿಯಸ್ಸನೂ, ಅವನ ಪರಿವಾರದೇವತೆಗಳೂ ಅವನ ಮೇಲೆ ದುರಾಗ್ರಹವನ್ನು ಮಾಡಿ, ಅಧಿಕಾರದಿಂದ ತೆಗೆದುಹಾಕಿ, ಪೆನ್ಷನ್ ವಗೈರೆಗಳನ್ನೂ ಕೂಡ ಕೊಡದೆ, ಅತ್ಯಂತ ದರಿದ್ರಾವಸ್ಥೆಗೆ ತಂದರೆಂದು ಗೊತ್ತಾಯಿತು. ಅದರಿಂದಲೂ ತಗ್ಗದೆ, ಅರಿಸ್ಟೋಡಿಮಸ್ಸನು ಈ ದ್ವೀಪಕ್ಕೆ ಸೇರಿದ ಒಂದು ಗ್ರಾಮದಲ್ಲಿ ಕೃಷಿಯನ್ನೂ, ಕೂಲಿಯನ್ನೂ ಮಾಡಿಕೊಂಡು ಜೀವನಮಾಡುತ್ತಲಿದಾನೆಂಬದಾಗಿಯೂ, ಇವನ ಮಕ್ಕಳಲ್ಲಿ ಗುಣಜ್ಞನಾದ ಮಗನು ಇವನ ಜೊತೆಯಲ್ಲಿ ಕೂಲಿಯನ್ನು ಮಾಡುತ್ತಲಿರುವನೆಂಬದಾಗಿಯೂ, ಹಗಲೂ ರಾತ್ರಿ ಕೆಲಸಮಾಡಿ, ಇವರಿಬ್ಬರೂ ಕುಟುಂಬ ರಕ್ಷಣೆಯನ್ನು ಮಾಡಿಕೊಂಡು, ಆ ಗ್ರಾಮನಿವಾಸಿಗಳ ಪ್ರೀತಿಗೆ ಪಾತ್ರರಾಗಿ ಇರುವರೆಂಬದಾಗಿಯೂ, ಈ ಕೂಲಿಯಿಂದ ಸಂಪಾದಿಸಿದ ದ್ರವ್ಯದಲ್ಲಿಯೂ ಕೂಡ ಈ ತಂದೆ—ಮಕ್ಕಳು ಅನ್ನವಸ್ತ್ರಗಳಿಗೆ ಮಾರ್ಗವನ್ನು ಮಾಡಿಕೊಂಡು, ಗ್ರಾಮನಿವಾಸಿಗಳಲ್ಲಿ ಕೇವಲ ಬಡವರಾದವರಿಗೆ ಸಹಾಯ ಮಾಡುತ್ತಲಿರುವರೆಂಬದಾಗಿಯೂ, ಗ್ರಾಮಸ್ಥರಲ್ಲಿ ಪರಸ್ಪರ ದ್ವೇಷ ಉಂಟಾಗುವ ಸಂಭವವು ಬಂದ ಕೂಡಲೆ, ಈತನು ಪಂಚಾಯಿತನಾಗಿ, ವ್ಯಾಜವನ್ನು ತೀರಿಸುತ್ತಾ, ಸ್ನೇಹ

ವನ್ನು ಮಾಡಿಸುತ್ತಾ, ಆ ಗ್ರಾಮದ ಪ್ರತಿ ಒಂದು ಕುಟುಂಬಕ್ಕೂ ತಂದೆಯಂತೆಯೂ, ಗುರುವಿನಂತೆಯೂ ಇರುವನೆಂಬದಾಗಿಯೂ, ಇವನ ಎರಡನೇ ಮಗನು ಅಶಿಕ್ಷಿತನಾಗಿ ಇದ್ದದ್ದರಿಂದ, ಇವನು ಬಹಳ ವ್ಯಸನಪಡುತ್ತಿರುವನೆಂಬದಾಗಿಯೂ, ಸದರಿ ಮಗನನ್ನು ಹತೋಟಿಗೆ ತರುವುದು ಕಷ್ಟವಾದದ್ದರಿಂದ, ಅವನನ್ನು ಮನೆ ಬಿಟ್ಟು ಓಡಿಸಿರುವನೆಂಬದಾಗಿಯೂ, ಈ ತುಂಟ ಹುಡುಗನು ತುಂಟರಲ್ಲಿ ಅಗ್ರಗಣ್ಯನಾಗಿ, ಪ್ರಭುತ್ವಕ್ಕೆ ಉಮೇದುವಾರನಾಗಿ, ಪೋಟಾಪೋಟಿಗೆ ಬಂದಿರುವುದರಿಂದ, ಇವನು ಪ್ರಭುವಾದರೆ, ಈ ದ್ವೀಪಕ್ಕೆ ಗತಿಯೇನು ಎಂದು ಚಿಂತಾಕ್ರಾಂತನಾಗಿರುವನು ಎಂಬದಾಗಿಯೂ ತಿಳಿಯಬಂದಿತು. ಎಲೈ ಮಹನೀಯರೇ,—ಇವನ ಪೂರ್ವೋತ್ತರಗಳು ನನಗೆ ಸಾಕ್ಷಾತ್ತಾಗಿ ತಿಳಿಯದು. ಪ್ರೇಕ್ಷಕರಲ್ಲಿ ಕೆಲವರನ್ನು ಕೇಳಿ, ಇಷ್ಟು ವಿಷಯಗಳನ್ನು ತಿಳಿದುಕೊಂಡೆನು. ಇದೆಲ್ಲಾ ನಿಜವಾದ ಪಕ್ಷದಲ್ಲಿ, ಈ ಪೋಟಾಪೋಟಿಯ ಪರೀಕ್ಷೆಗಳನ್ನು ನೀವು ಏತಕ್ಕೆ ಮಾಡಬೇಕಾಗಿತ್ತು ? ಈ ಪರೀಕ್ಷೆಗಳಿಗೆ ಪರದೇಶೀಯರನ್ನೂ ಕೂಡ ಏತಕ್ಕೆ ಸೇರಿಸಬೇಕಾಗಿತ್ತು ? ನಿಮ್ಮಲ್ಲಿಯೇ ನಿಮ್ಮ ಪೂರ್ವಾಪರಗಳನ್ನು ತಿಳಿದ ಮನುಷ್ಯನಿರುವುದಿಲ್ಲವೇ ? ಅವನ ಪೂರ್ವಾಪರಗಳು ನಿಮಗೆ ತಿಳಿಯದೇ ? ಈತನು ಮಿಲಿಟರಿ ಶಾಸ್ತ್ರವಿಶಾರದನಲ್ಲವೇ ? ಇವನ ಧೈರ್ಯಸ್ಥೈರ್ಯಗಳನ್ನು ಇವನ ದೇಹದ ಮೇಲಿರತಕ್ಕ ಕತ್ತಿ ಏಟಿನ ಗುರ್ತುಗಳು ತೋರಿಸುತ್ತಲಿಲ್ಲವೇ ? ದಾರಿದ್ರ್ಯದ ಮಹಿಮೆಯಿಂದ ಇವನು ತಗ್ಗಿರುವನೇ ? ಸಂಪತ್ತಿನಿಂದ ಇವನು ಹಿಗ್ಗುವನೇ ? ಹೊನ್ನು, ಹೆಣ್ಣು, ಮಣ್ಣುಗಳ ಮೇಲಿನ ಆಶೆಯು ಇವನಿಗೆ ಇರುವುದೇ ? ವ್ಯಾಸಾಸ್ತುತಿಗಳಿಗೆ ಇವನು ಅಧೀನನಾಗುವನೇ ? ಅಧಿಕಾರದಿಂದ ತೆಗೆಯಲ್ಪಟ್ಟಾಗ್ಯೂ, ಕೂಲಿ ಮಾಡಿಕೊಂಡು ಇವನು ಜೀವಿಸುತ್ತಲಿರುವುದಿಲ್ಲವೇ ? ಕರ್ಷಕರಲ್ಲಿ ಅಗ್ರಗಣ್ಯನಾಗಿರುವುದಿಲ್ಲವೇ ? ಇವನು ನಿಗರ್ವಶಿರೋಮಣಿಯಾಗಿರುವುದಿಲ್ಲವೇ ? ಇಂದ್ರಿಯಗ್ರಾಮಗಳಿಗೆ ಇವನು ಅಧೀನನಾಗಿರುವನೇ ? ದುರ್ಮಾರ್ಗಪ್ರವರ್ತಕನಾದ ಮಗನನ್ನೂ ಕೂಡ ಇವನು ನಿರ್ದಾಕ್ಷಿಣ್ಯದಿಂದ ದಂಡಿಸಿರುವುದಿಲ್ಲವೇ ? ಗ್ರಾಮಸ್ಥರೆಲ್ಲರೂ ಇವನಲ್ಲಿ ಪಿತೃನಿರ್ವಿಶೇಷವಾದ ಭಕ್ತಿಯನ್ನು ಇಟ್ಟಿರುವುದಿಲ್ಲವೇ ? ಇವನು ಗ್ರಾಮದವರನ್ನೆಲ್ಲಾ ಪುತ್ರನಿರ್ವಿಶೇಷವಾಗಿ ಕಾಣುತ್ತಿರುವುದಿಲ್ಲವೇ ? ಗೃಹವು ಚಿಕ್ಕ ರಾಜ್ಯವಲ್ಲವೇ ? ಗ್ರಾಮವು ಅದಕ್ಕಿಂತ ದೊಡ್ಡ

ರಾಜ್ಯವಲ್ಲವೇ ? ಇವನು ಕುಟುಂಬವನ್ನು ಸರಿಯಾಗಿ ಇಟ್ಟುಕೊಂಡಿರುವುದಿಲ್ಲವೇ ? ಅಧಿಕಾರವಿಲ್ಲದೆ ಇದ್ದಾಗ್ಯೂ, ಗ್ರಾಮಸ್ತರೆಲ್ಲಾ ಇವನೇ ಆ ಗ್ರಾಮಕ್ಕೆ ಪ್ರಭುವಾಗಿದ್ದರೆ ಹೇಗೋ ಹಾಗೆ ಇವನನ್ನು ಪೂಜಿಸುವುದಿಲ್ಲವೇ ? ಈ ದ್ವೀಪಕ್ಕೆ ಪ್ರಭುವಾಗುವುದಕ್ಕೆ ಇವನಿಗೆ ಅರ್ಹತೆಯು ಇರುವುದೋ ಇಲ್ಲವೋ ಎಂಬುವುದನ್ನು ಗೊತ್ತು ಮಾಡುವುದಕ್ಕೆ ನೀವು ಅರ್ಹರಾಗಿರುವುದಿಲ್ಲವೇ ? ಇಂಥಾ ಮನುಷ್ಯನು ಇರವಾಗ್ಯೆ, ಅವನನ್ನು ಮರೆತು, ನೀವು ಪ್ರಭುಪದವಿಗೆ ಪರದೇಶೀಯರಲ್ಲಿ ಯಾರು ಇರುವರೆಂದು ಹುಡುಕುತ್ತಿರುವುದನ್ನು ನೋಡಿದರೆ ನನಗೆ ವಿಸ್ಮಯವಾಗುತ್ತದೆ. ''

ಈ ರೀತಿಯಲ್ಲಿ ಮೆಂಟರನು ಹೇಳಿದ ಕೂಡಲೆ, ಅರಿಸ್ಟೋಡಿಮಸ್ಸನ ಚರಿತ್ರೆಯು ಸರ್ವರ ಸ್ಮೃತಿಪಥಕ್ಕೂ ಬಂದಿತು ' ಮೆಂಟರನು ನಿರೂಪಿಸಿದ ಗುಣಾತಿಶಯಗಳೆಲ್ಲಾ ಅರಿಸ್ಟೋಡಿಮಸ್ಸನಲ್ಲಿ ಮೂರ್ತೀಭವಿಸಿರುವುದು. ಈತನಿಗಿಂತಲೂ ನಮಗೆ ಪ್ರಭುವಾಗುವುದಕ್ಕೆ ಹೆಚ್ಚು ಅರ್ಹತೆಯುಳ್ಳವರು ಯಾರೂ ಇರುವುದಿಲ್ಲ ' ಎಂಬದಾಗಿ ಅಲ್ಲಿ ಸೇರಿದ ಮುಖಂಡರಾದ ಮಹಾಜನಗಳೆಲ್ಲರೂ ವಿಜ್ಞಾಪಿಸಿದರು. ಅರಿಸ್ಟೋಡಿಮಸ್ಸನನ್ನು ಕರೆದುಕೊಂಡು ಬರಬೇಕೆಂದು ಸಭೆಯು ಮೆಂಬರುಗಳಾದ ಮಹರ್ಷಿಗಳು ಆಜ್ಞಾಪಿಸಿದರು. ಅಲ್ಲಿ ನೆರೆದಿದ್ದ ಮಹಾಜನಗಳಲ್ಲಿ ಆತನು ಎಲ್ಲಿಯೋ ಒಂದು ಕಡೆ ಇದ್ದನು. ಮಹರ್ಷಿಗಳ ಅಪೇಕ್ಷೆಯು ಆತನಿಗೆ ತಿಳಿಸಲ್ಪಟ್ಟಿತು. ಅವರ ಆಜ್ಞೆಯನ್ನು ಶಿರಸಾ ವಹಿಸಿ, ಆತನು ಸಭಾಮಧ್ಯಕ್ಕೆ ಬಂದನು. ಶಾಂತಿಯು ಅವನ ಮುಖದಲ್ಲಿ ತಾಂಡವವಾಡುತ್ತಿತ್ತು. ಇವನ ಮುಖವನ್ನು ನೋಡಿದ ಕೂಡಲೆ, ಮಹರ್ಷಿಗಳಿಗೂ, ಅಲ್ಲಿ ಸೇರಿದ್ದ ಮಹಾಜನಗಳಿಗೂ ಅನಿರ್ವಚನೀಯವಾದ ಭಕ್ತಿಯು ಉಂಟಾಯಿತು. '' ಈ ಮಹರ್ಷಿಗಳು ಅವನಿಗೆ ಸತ್ಕಾರವನ್ನು ಮಾಡಿ, ಉಚಿತವಾದ ಆಸನವನ್ನು ಕೊಟ್ಟು, ಅವನು ಪೀಠವನ್ನು ಅಲಂಕರಿಸಿದ ಕೂಡಲೆ, ' ನಿನ್ನ ಚರಿತ್ರೆಯನ್ನು ಕೇಳಿ, ಅತ್ಯಂತ ಸಂತುಷ್ಟನಾಗಿ, ಮೆಂಟರನು ಈ ದ್ವೀಪದ ಪ್ರಭುತ್ವಕ್ಕೆ ನಿನಗಿಂತಲೂ ಹೆಚ್ಚು ಅರ್ಹತೆಯುಳ್ಳವರು ಸಿಕ್ಕುವುದಿಲ್ಲ ' ಎಂದು ಅಪ್ಪಣೆ ಕೊಡಿಸಿರುವನು. ಮಹಾಜನಗಳ ಅಭಿಪ್ರಾಯವೂ ಹಾಗೆಯೇ ಇರುವುದು. ಈ ದ್ವೀಪದ ಪ್ರಭುತ್ವವನ್ನು ನಿನಗೆ ವಹಿಸಬೇಕೆಂದು ನಾವೆಲ್ಲರೂ ನಿಷ್ಕರ್ಷೆ ಮಾಡಿ ಇದೇವೆ. ಈ ದ್ವೀಪನಿವಾಸಿಗಳಲ್ಲಿ ಕೃಪೆಯನ್ನು ಇಟ್ಟು, ಈ ದ್ವೀಪದ ಪ್ರಭುತ್ವವನ್ನು ವಹಿಸಿ, ಎಲ್ಲರನ್ನೂ ಪರಿಪಾಲಿಸುವುದರ ಮೂಲಕ ನೀನೂ ಧನ್ಯತೆಯನ್ನು ಪಡೆ

ಯುಬೇಕು " ಎಂದು ನಾವು ಪ್ರಾರ್ಥಿಸುತ್ತೇವೆ ಎಂಬದಾಗಿ ಹೇಳಿದರು. ಆದಕ್ಕೆ ಅರಿಸ್ಟೋಡಿಮುಸ್ಸನು ಹೇಳಿದ್ದೇನಂದರೆ:—

"ಟೆಲಿಮಾಕಸ್ಸನು, ಮೆಂಟರು, ಹೇಜಲ್‌ನು ಈ ಮೂರು ಜನಗಳೂ ಈ ದ್ವೀಪದ ಪ್ರಭುತ್ವದ ಭಾರವನ್ನು ವಹಿಸುವುದಕ್ಕೆ ಹಿಂತೆಗೆದಿರುವರು. ಹಾಗೆ ಹಿಂತೆಗೆಯುವುದಕ್ಕೆ ಇವರು ಕೊಟ್ಟಿರತಕ್ಕ ಕಾರಣಗಳನ್ನು ನೀವು ಕೇಳಿ ಇರುವಿರಿ ಟೆಲಿಮಾಕಸ್ಸನು ಹೇಳಿರುವ ಕಾರಣಗಳು ಸಾಧುವಾಗಿ ಇವೆ. ಈತನ ದೇಶಕ್ಕೂ, ಈತನ ಪಿತೃಶ್ರೀಯವರಿಗೂ ಉಂಟಾಗಿರತಕ್ಕ ಕಷ್ಟವನ್ನು ತಪ್ಪಿಸುವುದು ಇವನಿಗೆ ಪ್ರಥಮ ಕರ್ತವ್ಯ. ಆ ಕರ್ತವ್ಯವನ್ನು ಮಾಡುವುದಕ್ಕೆ ಅವನು ಹೋಗಬಹುದು. ಮೆಂಟರನ ಸಹಾಯವಿಲ್ಲದೆ, ಟೆಲಿಮಾಕಸ್ಸನು ಅವನ ಕೆಲಸಗಳನ್ನು ನಿರ್ವಹಿಸುವುದು ಅಸಾಧ್ಯವಾದರೆ, ಮೆಂಟರನೂ ಅವನ ಸಹಾಯಕ್ಕೆ ಹೋಗಬಹುದು. ಹೇಜಲ್‌ನು ಪ್ರಭುತ್ವವನ್ನು ತಿರಸ್ಕರಿಸಿದ್ದು ಯುಕ್ತವಾಗಿ ತೋರುವುದಿಲ್ಲ. ವಯಸ್ಸಾದಾಗ್ಯೂ, ವಾನಪ್ರಸ್ಥದೆಸೆಯಲ್ಲಿದ್ದಾಗ್ಯೂ, ಸನ್ಯಾಸಿಯಾದಾಗ್ಯೂ, ಲೋಕದ ಕ್ಷೇಮಾರ್ಥವಾಗಿ ಮಾಡತಕ್ಕ ಕೆಲಸಗಳನ್ನು ಮಾಡಿಯೇ ಮಾಡಬೇಕು. ಸನ್ಯಾಸವೆಂದರೆ, ಆತ್ಮಾರ್ಥವಾದ ಕರ್ಮಗಳನ್ನು ಪರಿತ್ಯಾಗ ಮಾಡುವುದೆಂದು ಅರ್ಥವೇ ಹೊರತು, ಲೋಕಹಿತಾರ್ಥವಾದ ಕರ್ಮಗಳನ್ನು ಬಿಡುವುದೆಂದು ಅರ್ಥವಲ್ಲ. ದೇಶದ ಚರಿತ್ರೆಯನ್ನೂ, ಮಹಾಜನಗಳ ಶೀಲಸ್ವಭಾವಗಳನ್ನೂ ತಿಳಿದಿರತಕ್ಕವರೇ ಪ್ರಭುತ್ವವನ್ನು ವಹಿಸಬೇಕೆಂದು ಇವರೆಲ್ಲರೂ ಹೇಳಿರುವರು. ಜಿತೇಂದ್ರಿಯರಾಗಿಯೂ, ಅರಿಷಡ್ವರ್ಗಗಳಿಗೆ ಅಧೀನರಾಗದೆಯೂ, ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾಗಿಯೂ ಇರತಕ್ಕವರಿಗೆ ಈ ಯೋಗ್ಯತೆಯು ಇಲ್ಲದೆ ಹೋಗುವುದರಿಂದ, ಯಾವ ಬಾಧಕವೂ ಇರುವುದಿಲ್ಲ. ಹೇಜಲ್‌ನು ಈ ವಿಷಯವನ್ನು ಪುನಃ ಪರ್ಯಾಲೋಚಿಸಿ, ಪ್ರಭುತ್ವವನ್ನು ವಹಿಸುವುದು ಉತ್ತಮ. ಈತನಿಗೆ ಈ ದ್ವೀಪ ನಿವಾಸಿಗಳಲ್ಲಿ ಬಂಧುಗಳೂ, ಮಿತ್ರರೂ, ದಾಕ್ಷಿಣ್ಯಕ್ಕೆ ವಿಷಯರಾದವರೂ ಯಾರೂ ಇರುವುದಿಲ್ಲ. ನಿಸ್ಪೃಹತೆಯಿಂದ ಪ್ರಭುತ್ವ ಮಾಡುವುದಕ್ಕೆ ಇವನಿಗೆ ಹೆಚ್ಚು ಸೌಲಭ್ಯಗಳುಂಟು. ನಾನು ಈ ದ್ವೀಪನಿವಾಸಿಯು. ನನಗೆ ಇಲ್ಲಿ ಬಂಧು, ಪುತ್ರ, ಮಿತ್ರ, ಕಳತ್ರಾದಿಗಳು ಇರುತ್ತಾರೆ. ದಾಕ್ಷಿಣ್ಯದಿಂದ ಧರ್ಮಕ್ಕೆ ಏನು ಲೋಪ ಬರುವುದೋ ಎಂಬ ಭಯವು ನನಗೆ ಇರುತ್ತದೆ. ಈ ದ್ವೀಪಕ್ಕೆ ಪ್ರಭುವಾಗುವು

ದಕ್ಕೆ ನನಗಿಂತಲೂ ಹೇಜಲ್‌ಗೆ ಹೆಚ್ಚು ಯೋಗ್ಯತೆಯು ಇರುವುದು. ಈ ವಿಷಯವನ್ನು ನೀವು ಪರ್ಯಾಲೋಚಿಸಬೇಕು. ಇವನಿಗೆ ಪ್ರಭುತ್ವವನ್ನು ವಹಿಸುವುದು ಉತ್ತಮ. ಇಂಥಾ ದೊಡ್ಡ ವಿಷಯಗಳಲ್ಲಿ ದುಡುಕಿ ಕೆಲಸ ಮಾಡುವುದು ಯೋಗ್ಯವಲ್ಲ.''

ಈ ರೀತಿಯಲ್ಲಿ ಅರಿಸ್ಟೋಡಿಮಸ್ಸನು ಹೇಳಲು, ಸಭೆಯಲ್ಲಿ ಗೊಣಗುಟ್ಟುವಿಕೆಯು ಬಹಳವಾಯಿತು. ಹೇಜಲ್, ಮೆಂಟರೂ, ಟೆಲಿಮಾಕಸ್ಸನೂ, ಮಹರ್ಷಿಗಳೂ, ಮಹಾಜನಗಳೂ ಎಲ್ಲರೂ ಏಕವಾಕ್ಯತೆಯಿಂದ ಈ ದ್ವೀಪದ ಪ್ರಭುತ್ವವನ್ನು ವಹಿಸಬೇಕೆಂದು ಅರಿಸ್ಟೋಡಿಮಸ್ಸನನ್ನು ಪುನಃ ಪ್ರಾರ್ಥಿಸಿದರು. ಆಗ ಅರಿಸ್ಟೋಡಿಮಸ್ಸನು ಹೇಳಿದ್ದೇನಂದರೆ:—

''ಪ್ರಭುತ್ವದ ಕಷ್ಟವನ್ನು ಹೇಜಲ್‌ನೂ, ಮೆಂಟರನೂ, ಟೆಲಿಮಾಕಸ್ಸನೂ ಮೂರು ಜನಗಳೂ ಸಮಗ್ರವಾಗಿ ತಿಳಿದುಕೊಂಡಿದ್ದಾರೆ. ಈ ಭಾರವನ್ನು ತಪ್ಪಿಸಿಕೊಳ್ಳುವುದಕ್ಕೆ ಅವರಿಗೆ ನೀವು ಅವಕಾಶ ಕೊಟ್ಟಿರಿ. ಎಲ್ಲರೂ ಒಗ್ಗಟ್ಟಾಗಿ ಈ ಭಾರವನ್ನು ವಹಿಸಬೇಕೆಂದು ನನಗೆ ನಿರ್ಬಂಧವನ್ನು ಮಾಡುತ್ತೀರಿ. ಏಕವಾಕ್ಯತೆಯಿಂದ ಈ ದ್ವೀಪನಿವಾಸಿಗಳೆಲ್ಲರೂ ಒಪ್ಪುವ ಪಕ್ಷದಲ್ಲಿ, ನಾನು ಈ ಪ್ರಭುತ್ವವನ್ನು ಪರಿಗ್ರಹಿಸುತ್ತೇನೆ. ಆದರೆ, ಮೂರು ಷರತ್ತುಗಳಿಗೆ ನೀವು ಎಲ್ಲರೂ ಒಪ್ಪುವುದಾದರೆ, ನಾನು ಈ ಜವಾಬ್ದಾರಿಯನ್ನು ವಹಿಸುವೆನು. ಹಾಗೆ ನೀವು ಒಪ್ಪದಿದ್ದರೆ, ನನಗೆ ಈ ಜವಾಬ್ದಾರಿಯು ಅವಶ್ಯಕವಿಲ್ಲ. ಎರಡು ವರ್ಷಗಳ ವರೆಗೂ ನಾನು ಪ್ರಭುವಾಗಿರುವಂತೆ ಏರ್ಪಾಡು ಮಾಡಬಹುದು. ಅಷ್ಟರೊಳಗೆ ಈ ದ್ವೀಪನಿವಾಸಿಗಳಲ್ಲಿ ಎಲ್ಲರ ಯೋಗಕ್ಷೇಮವೂ ಈಗ ಇರುವುದಕ್ಕಿಂತಲೂ ಉತ್ತಮವಾಗಿರುವಂತೆಯೂ, ಮೈನಾಸನ ಧರ್ಮಶಾಸ್ತ್ರಗಳಿಗೆ ವಿರೋಧವಾಗಿ ಲೇಶವೂ ನಡೆಯದಂತೆಯೂ ನಾನು ಮಾಡದಿದ್ದರೆ, ನನ್ನನ್ನು ಪ್ರಭುತ್ವದಿಂದ ತೆಗೆದು ಹಾಕಿ, ನನಗಿಂತಲೂ ಉತ್ತಮನಾದ ಪ್ರಭುವನ್ನು ನಿಯಮಿಸಬೇಕು. ನಾನು ಪ್ರಭುಪದವಿಯನ್ನು ವಹಿಸಿದಾಗ್ಯೂ, ನಾನು ಈಗ ಹೇಗಿರುತ್ತೇನೋ ಅದೇ ರೀತಿಯಲ್ಲಿ ನನ್ನ ಜೀವನಕ್ಕೆ ಬೇಕಾದದ್ದನ್ನು ನನ್ನ ಭುಜಬಲದಿಂದಲೂ, ಬುದ್ಧಿಬಲದಿಂದಲೂ ಸಂಪಾದಿಸಿಕೊಳ್ಳುವುದಕ್ಕೆ ನನಗೆ ಯಾವ ನಿರ್ಬಂಧವನ್ನೂ ಮಾಡಕೂಡದು. ಪ್ರಭುತ್ವದ ಜವಾಬ್ದಾರಿಯನ್ನು ವಹಿಸುವುದಕ್ಕೆ ನನಗೆ ಸಂಬಳವನ್ನೂ, ಆಲೋಯರ್ಸನ್ನೂ ಕೊಡಕೂಡದು. ಇದ

ಕ್ಕಾಗಿ ಯಾವ ರಿಯಾಯತಿಯನ್ನೂ ನನಗೆ ತೋರಿಸಕೂಡದು. ಮಹಾಜನಗಳ ಸೇವಕನಂತೆ ನನ್ನನ್ನು ಪರಿಗಣಿಸಬೇಕೇ ಹೊರತು, ಪ್ರಭುವೆಂದು ಪರಿಗಣಿಸಕೂಡದು. ನನ್ನಿಂದ ಆಗಲಿ, ಸರ್ಕಾರದ ಅಧಿಕಾರಿಗಳಿಂದ ಆಗಲಿ, ನನ್ನ ಪುತ್ರ, ಮಿತ್ರ, ಕಳತ್ರಾದಿಗಳಿಂದ ಆಗಲಿ ಮೈನಾಸನ ಧರ್ಮಗಳಿಗೆ ವಿರೋಧವಾಗಿ ನ್ಯೂನಾತಿರಿಕ್ತಗಳೇನಾದರೂ ಆದರೆ, ಒಂದು ನಿಮಿಷವೂ ಆಲಸ್ಯಮಾಡದೆ, ಸದರಿ ನ್ಯೂನಾತಿರಿಕ್ತಗಳ ವಿಚಾರಣೆಯು ಮಾಡಲ್ಪಡಬೇಕು. ಅಪರಾಧಿಗಳೆಂದು ಗೊತ್ತಾದ ಕೂಡಲೆ ಅವರಿಗೆ ಶಿಕ್ಷೆಯು ಮಾಡಲ್ಪಡಬೇಕು. ಸಾಮಾನ್ಯ ಜನಗಳು ತಪ್ಪು ಮಾಡಿದರೆ, ಸಾಮಾನ್ಯ ಶಿಕ್ಷೆಯಾಗಬೇಕು. ಅಧಿಕಾರವನ್ನು ಮಾಡತಕ್ಕವರು ಅಪರಾಧವನ್ನು ಮಾಡಿದರೆ, ಅವರಿಗೆ ಬಲವಾದ ಶಿಕ್ಷೆಯು ಆಗಬೇಕು. ನನ್ನ ಪುತ್ರಮಿತ್ರರಿಗೆ ಸರ್ಕಾರದ ಅಧಿಕಾರಗಳ್ಯಾವುವೂ ಕೊಡಲ್ಪಡಕೂಡದು. ಈ ದ್ವೀಪನಿವಾಸಿಗಳಲ್ಲಿ ಈಗ ಅವರು ಯಾವ ಅಂತಸ್ತಿನಲ್ಲಿರುವರೋ ಅದಕ್ಕಿಂತ ಹೆಚ್ಚಾದ ಅಂತಸ್ತು ನಾನು ಈ ಪದವಿಯಲ್ಲಿ ಇರುವವರೆಗೂ ಅವರಿಗೆ ಲಭ್ಯವಾಗುವಂತೆ ಮಾಡಲ್ಪಡಕೂಡದು. ಸತ್ಯದಿಂದಲೂ, ಧರ್ಮದಿಂದಲೂ ಅವರು ನಡೆದುಕೊಂಡರೆ, ಈ ದ್ವೀಪನಿವಾಸಿಗಳೆಲ್ಲರೂ ಏಕವಾಕ್ಯತೆಯಿಂದ ಅವರು ಪೂಜ್ಯರೆಂದು ಭಾವಿಸಿದರೆ, ನಾನು ಅಧಿಕಾರದಿಂದ ನಿವೃತ್ತನಾದ ಮೇಲೆ, ಅಥವಾ ದೇಶವನ್ನು ಬಿಟ್ಟ ಮೇಲೆ, ಅವರ ಯೋಗ್ಯತೆಗೆ ತಕ್ಕಂತೆ ಅವರಿಗೆ ಬಹುಮಾನಗಳನ್ನು ಮಾಡಬಹುದು. ಈ ಒಡಂಬಡಿಕೆಗಳಿಗೆ ನೀವು ಒಪ್ಪುವುದಾದರೆ, ಈ ಪ್ರಭುತ್ವದ ಜವಾಬ್ದಾರಿಯನ್ನು ನಾನು ವಹಿಸುತ್ತೇನೆ. ಹಾಗೆ ಇಲ್ಲದಿದ್ದರೆ, ನನಗೆ ಆವಶ್ಯಕವಿಲ್ಲ. ''

ಈ ರೀತಿಯಲ್ಲಿ ಅರಿಸ್ಟೋಡಿಮಸ್ಸನು ಹೇಳಿದ ಕೂಡಲೆ, ಇವನ ಗುಣಾನುಭಾವತೆಯನ್ನೂ, ನಿಸ್ಪೃಹತೆಯನ್ನೂ, ಲೋಕಬಾಂಧವತೆಯನ್ನೂ ನೋಡಿ, ಸರ್ವರೂ ಆಶ್ಚರ್ಯ ಪಟ್ಟರು. 'ನೀನು ಹೇಳುವ ಷರತ್ತುಗಳಿಗೆ ನಾವು ಒಪ್ಪಿರುತ್ತೇವೆ' ಎಂಬದಾಗಿ ಮಹರ್ಷಿಗಳು ಹೇಳಿದರು. ಅದನ್ನು ಮಹಾಜನಗಳೆಲ್ಲರೂ ಅನುಮೋದಿಸಿದರು. ಈ ಷರತ್ತುಗಳನ್ನು ನೋಡಿದರೆ, ಇವನೇ ಮೈನಾಸನ ಅವತಾರವಾಗಿರಬೇಕೆಂದು ತೋರುತ್ತದೆಂದು ಹೇಜಲ್', ಮೆಂಟರನೂ ಮತ್ತು ಟೆಲಿಮಾಕಸ್ಸನೂ ಹೇಳಿದರು. 'ಇಂಥಾ ಮಹಾನುಭಾವನ ನಮ್ಮ ದ್ವೀಪದಲ್ಲೇ ಇರುವುದು ನಮಗೆ ತಿಳಿಯದೇ ಹೋಯಿತಲ್ಲಾ' ಎಂದು ಮಹಾಜನಗಳೆಲ್ಲರೂ

ವ್ಯಸನ ಪಟ್ಟರು. ಅರಿಸ್ಟೋಡಿಮುಸ್ಸನು ಈ ದ್ವೀಪಕ್ಕೆ ಪ್ರಭುವಾಗಲೆಂದು ಸರ್ವರೂ ಏಕವಾಕ್ಯತೆಯಿಂದ ಘಟ್ಟಿಯಾಗಿ ಹೇಳಿದರು. ಈ ಕೋಲಾಹಲ ಧ್ವನಿಯು ಕ್ರಮ ಕ್ರಮವಾಗಿ ಸದರಿ ದ್ವೀಪದ ತೀರ ದೇಶಗಳವರೆಗೂ ವ್ಯಾಪಿಸಿತು. ಆಬಾಲವೃದ್ಧರ ಗುಣಕಥನಕ್ಕೂ ಅರಿಸ್ಟೋಡಿಮುಸ್ಸನು ವಿಷಯನಾದನು. ಕಿರೀಟವು ತರಲ್ಪಟ್ಟಿತು. ಪಟ್ಟಾಭಿಷೇಕ ಮಹೋತ್ಸವವು ಬೆಳೆಯಿತು. ದೇವತಾಪ್ರಾರ್ಥನೆಗಳು ಮಾಡಲ್ಪ ಟ್ಟವು. ಮಹರ್ಷಿಗಳು ಆಶೀರ್ವಾದ ಪೂರ್ವಕವಾಗಿ ಸದರಿ ಕಿರೀಟವನ್ನು ಈತನ ತಲೆಯ ಮೇಲೆ ಇಟ್ಟರು. ಅರಿಸ್ಟೋಡಿಮುಸ್ಸನು ಮಹರ್ಷಿಗಳೇ ಮೊದಲಾದ ಸಮ ಸ್ತರಿಗೂ ಪ್ರಣಾಮವನ್ನು ಮಾಡಿ, ವಿಜ್ಞಾಪಿಸಿದ್ದೇನಂದರೆ:—

“ ಈಗ ನೀವು ನನಗೆ ಮಾಡಿರುವ ಸತ್ಕಾರಕ್ಕೆ ಬೆಲೆಯಿಲ್ಲ. ಇದಕ್ಕೆ ಧನ ಕನಕಾದಿಗಳ ಬಿಲ್ಲತ್ತುಗಳ ಮೂಲಕವಾಗಿ ಬಹುಮಾನವನ್ನು ಮಾಡುವುದಕ್ಕೆ ನನಗೆ ಯೋಗ್ಯತೆಯೂ ಇಲ್ಲ. ಉಪಪತ್ತಿಯೂ ಇಲ್ಲ. ಈ ದ್ವೀಪದ ಸಂಪತ್ತೆಲ್ಲಾ ಪ್ರಭುವಿಗೆ ಸೇರಿದ್ದೆಂಬುದಾಗಿಯೂ, ನಾನು ಪ್ರಭುವೆಂಬದಾಗಿಯೂ, ಬೇಕಾದ ಬಿಲ್ಲ ತ್ತುಗಳನ್ನು ನಾನು ಕೊಡಬಹುದೆಂಬದಾಗಿಯೂ ಯಾರಾದರೂ ಭಾವಿಸಿದ್ದರೆ, ಅವ ರಿಗೆ ನನ್ನ ವಿಜ್ಞಾಪನೆಯೊಂದಿರುವುದು. ಪ್ರಭುವಿಗೆ ಸಂಬಂಧಪಟ್ಟ ಕೋಶಗಳಲ್ಲಿರ ತಕ್ಕ ಸಕಲ ದ್ರವ್ಯವೂ ಪ್ರಜೆಗಳಿಂದ ಬಂದದ್ದು. ಅವರ ಪ್ರಾಣರಕ್ಷಣೆಗೂ, ಮಾನ ರಕ್ಷಣೆಗೂ ಬೇಕಾದ ಏರ್ಪಾಡುಗಳಿಗೆ ಅವುಗಳು ವಿತರಣೆಯಿಂದ ಉಪಯೋಗಿಸಲ್ಪಡ ಬೇಕು. ಪ್ರಭುತ್ವವು ದೇವತಾರಾಧನೆಗೆ ಸಮಾನವಾದದ್ದು. ಪ್ರಜೆಗಳ ಸೇವೆ ಯನ್ನು ಶಾಂತಿಯಿಂದಲೂ, ಪ್ರತಿಫಲದಲ್ಲಿ ಆಶೆ ಇಲ್ಲದೆಯೂ, ಅದಕ್ಕೆ ಕೈಯೊಡ್ಡ ದೆಯೂ ಮಾಡತಕ್ಕ ಪೂಜೆಯೇ ನಿಜವಾದ ಪೂಜೆ. ಸತ್ಪುರುಷರೆಲ್ಲರೂ ದೇವತೆ ಗಳು. ರಾಜರ್ಷಿಗಳಾದ ಪ್ರಭುಗಳು ನಿಜವಾದ ಸನ್ಯಾಸಿಗಳಂತೆ ಯಾವ ಫಲಾಪೇ ಕ್ಷೆಯೂ ಇಲ್ಲದೆ, ಅವರ ಸೇವೆಯನ್ನು ಮಾಡಬೇಕು. ದುಷ್ಟರನ್ನೂ ಕೂಡ ಶಿಷ್ಟ ರನ್ನಾಗಿ ಮಾಡಬೇಕು. ಈ ಸೇವೆಯನ್ನು ಸಮರ್ಪಕವಾಗಿ ಮಾಡಿ, ನೀವು ಎಲ್ಲರೂ ನನ್ನ ಪ್ರಭುತ್ವವನ್ನು ಮೆಚ್ಚಿದರೆ, ಆಗ ನಾನು ಧನ್ಯನಾಗುತ್ತೇನೆ. ಇಂಥಾ ಧನ್ಯತೆ ಯನ್ನು ಸಂಪಾದಿಸುವುದಕ್ಕೋಸ್ಕರ ನಾನು ಮಾಡುವ ಮೆಹನತ್ತನ್ನು ನೀವು ಬಿಲ್ಲ ತ್ತುಗಳೆಂದು ಭಾವಿಸಬೇಕು ಪರದ್ರವ್ಯವನ್ನು ಮಣ್ಣಿನ ಹೆಂಟೆಯಂತೆ ಕಾಣಬೇ ಕೆಂಬದಾಗಿ ಧರ್ಮಿಷ್ಟರು ಹೇಳಿರುತ್ತಾರೆ. ಆದುದರಿಂದ ನೀವು ನನಗೆ ವಹಿಸಿರುವ

ಪದವಿಗೆ ಪ್ರತಿಫಲವಾಗಿ ನಾನು ಮುಂದೆ ಮಾಡುವ ಸೇವೆಯನ್ನು ಪರಿಗ್ರಹಿಸುವಿರಿ'' ಎಂದು ನಾನು ನಂಬಿ ಇದೇನೆ. ಈ ರೀತಿಯಲ್ಲಿ ಹೇಳಿ, ಅರಿಸ್ಟೋಡಿಮಸ್ಸನು ಹೇಜಲ್, ಮೆಂಟರು ಮತ್ತು ಟೆಲಿಮಾಕಸ್ಸರ ಕಡೆ ತಿರುಗಿ, ಅವರಿಗೆ ಹೇಳಿದ್ದೇನಂದರೆ:—

"ಎಲೈ ಹೇಜಲ್‌ನೇ,—ನೀನು ಯಶೋವಂತನು. ಯಶಸ್ಸು ಬರುವುದಕ್ಕೆ ಪುಣ್ಯವೇ ಮುಖ್ಯಕಾರಣ. ನಿನಗೆ ಸಂಚಿತವಾದ ಪುಣ್ಯರಾಶಿಯು ವಿಶೇಷವಾಗಿ ಇಲ್ಲದಿದ್ದರೆ, ದೇವತಾಂಶಸಂಭೂತನಾದ ಈ ಮೆಂಟರನನ್ನು ಖರೀದಿಗೆ ಕೊಂಡು ಕೊಂಡು, ಅವನನ್ನು ಗುರುವಿನಂತೆ ಆದರಿಸುವ ಸಂಪತ್ತು ನಿನಗೆ ಎಲ್ಲಿ ಒದಗುತ್ತಿತ್ತು ? ಲೋಕೈಕವೀರನಾದ ಯೂಲಿಸಸ್ಸನ ಪುಣ್ಯಪರಿಪಾಕದಿಂದ ಅವತರಿಸಿರುವ ಈ ಮಹಾನುಭಾವನಾದ ಟೆಲಿಮಾಕಸ್ಸನ ಸೇವೆಯು ನಿನಗೆ ಎಲ್ಲಿ ದೊರೆಯುತ್ತಿತ್ತು ? ನಿಸ್ಪೃಹರಾದವರಿಗೆ ಜಗತ್ತೇ ತೃಣವೆಂದು ಮಹರ್ಷಿಗಳು ಹೇಳುತ್ತಾರೆ. ಇದು ನಿಜವಾದದ್ದೋ ಎಂಬ ಸಂದೇಹವು ಅನೇಕರಿಗೆ ಇತ್ತು. ಈ ಸಂದೇಹ ನಿವೃತ್ತಿಯನ್ನು ನೀವು ಮೂರು ಜನವೂ ಮಾಡಿರುತ್ತೀರಿ. ಪ್ರಭುತ್ವ ಮಾಡಬೇಕೆಂಬ ಆಶೆಯು ಸಾಮಾನ್ಯ ಜನಗಳಿಗೆ ಪರಿಪೂರ್ಣವಾಗಿರುವುದು. ಅಧಿಕಾರದ ಮೇಲೂ, ಹೊನ್ನು, ಹೆಣ್ಣು, ಮಣ್ಣುಗಳ ಮೇಲೂ ಯಾರಿಗೆ ಆಶೆ ಇರುವುದೋ ಅವರಿಗೆ ಪ್ರಭುತ್ವದಲ್ಲಿ ಇಂಥಾ ದುರಾಶೆಯು ವಿಶೇಷವಾಗಿರುವುದು. ನಿನಗೂ, ಮೇಂಟರನಿಗೂ ಪೂರ್ವವಯಸ್ಸು ಕಳೆದಿರುವುದು. ಇಂಥಾ ವೈರಾಗ್ಯವೂ, ನಿಸ್ಪೃಹತೆಯೂ ನಿಮಗೆ ಬಂದಿರುವುದು ವಿಶೇಷ ಆಶ್ಚರ್ಯವಲ್ಲ. ಪ್ರಾಯಸ್ಥನಾಗಿದ್ದಾಗ್ಯೂ, ಟೆಲಿಮಾಕಸ್ಸನು ವೈರಾಗ್ಯ ಚಕ್ರವರ್ತಿಯಾಗಿರುವುದನ್ನು ನೋಡಿದರೆ, ನನಗೆ ತುಂಬಾ ಸಂತೋಷವಾಗುತ್ತದೆ. ಇವರ ಮಾತಾಪಿತೃಗಳ ಪುಣ್ಯವೂ, ಇಥಾಕಾ ದ್ವೀಪದ ಪುಣ್ಯವೂ ಇದಕ್ಕೆ ಕಾರಣವೆಂಬದಾಗಿ ನನಗೆ ತೋರುತ್ತದೆ. ಅದು ಹೇಗಾದರೂ ಇರಲಿ. ಈ ಪ್ರಪಂಚವೇ ಪಾಪದ ಯಮಾಗಾರವೆಂದೂ ನಿಸ್ಪೃಹತೆ ಅಪೂರ್ವವೆಂದೂ ನಾನು ತಿಳಿದುಕೊಂಡಿದ್ದೆನು. ನಿಮ್ಮನ್ನು ನೋಡಿದ ಮೇಲೆ, ಧರ್ಮಿಷ್ಠರಾದವರು ಎಷ್ಟು ಅಪೂರ್ವವೆಂದು ನಾನು ತಿಳಿದುಕೊಂಡಿದ್ದೆನೋ ಅಷ್ಟು ಅಪೂರ್ವವಲ್ಲವೆಂದು ನನಗೆ ಈಗ ಗೊತ್ತಾಯಿತು. ಮೈನಾಸನ ಧರ್ಮಶಾಸ್ತ್ರಗಳಲ್ಲಿ ನೀನು ತುಂಬಾ ಆಸಕ್ತನಾಗಿರುತ್ತಿ. ಈ ಧರ್ಮಶಾಸ್ತ್ರವು ಲೋಕೋತ್ತರವಾದದ್ದು. "ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ" ಎಂಬದಾಗಿ ಲೋಕೋ

ಕ್ತಿಯು ಇರುವುದು. ಇದು ನಿಜವಾದ ಮಾತು. ನೀವು ಧರ್ಮಿಷ್ಟರು. ಆದುದರಿಂದಲೇ ಮ್ಯೆನಾಸನ ಧರ್ಮಶಾಸ್ತ್ರಗಳನ್ನು ಪರಿಶೀಲಿಸುವುದಕ್ಕೋಸ್ಕರ ಇಲ್ಲಿಗೆ ಬಂದಿರುವಿರಿ. ಈ ಧರ್ಮವು ನಿಮ್ಮನ್ನು ರಕ್ಷಿಸಲಿ. ಧರ್ಮದ ಸ್ವರೂಪವನ್ನು ಪ್ರಪಂಚಕ್ಕೆ ತಿಳಿಸುವುದಕ್ಕೆ ಜಗದೀಶ್ವರನು ನಿಮ್ಮನ್ನು ಮೇಲ್ಪಂಕ್ತಿಯಾಗಿ ನಿರ್ಮಿಸಿರುವನು. ಲೋಕದಲ್ಲಿ ಧರ್ಮಸಂಸ್ಥಾಪನೆಗೆ ಕಾರಣಭೂತರಾಗಿ.''

ಈ ರೀತಿಯಲ್ಲಿ ಅರಿಸ್ಟೋಡಿಮಸ್ಸನು ನಮಗೆ ಹೇಳಿ, ನಮಗೆ ಮ್ಯೆನಾಸನ ಧರ್ಮಶಾಸ್ತ್ರಗಳ ಮೂರು ಪುಸ್ತಕಗಳನ್ನು ಇನಾಮಾಗಿ ಕೊಟ್ಟನು. ಒಂದು ಉತ್ಕೃಷ್ಟವಾದ ಹಡಗನ್ನೂ, ನಾವಿಕರನ್ನೂ ನಮ್ಮ ಪ್ರಯಾಣಕ್ಕೋಸ್ಕರ ಒದಗಿಸಿ, ಹಣ್ಣು, ಹಂಪಲು, ಭೋಜನದ ಸಾಮಾನುಗಳು ಮೊದಲಾದವುಗಳನ್ನು ನಮಗೂ, ನನ್ನ ಜೊತೆಯಲ್ಲಿ ಪ್ರಯಾಣ ಮಾಡತಕ್ಕವರಿಗೂ ಸಾಕಾಗುವಷ್ಟು ಸರಬರಾಜು ಮಾಡಿಸಿದನು. ನಮ್ಮ ರಕ್ಷಣೆಗಾಗಿ ಈ ದ್ವೀಪದ ಸೈನ್ಯಗಳಲ್ಲಿ ಅತ್ಯಂತ ಸಮರ್ಥರಾದವರನ್ನು ಅಂಗರಕ್ಷಕರನ್ನಾಗಿ ಕಳುಹಿಸಿ ಕೊಟ್ಟನು. ಇಥಾಕಾ ಪಟ್ಟಣಕ್ಕೆ ಹೊರಡುವುದಕ್ಕೆ ನಾನು ಸಿದ್ಧನಾದೆನು. ಆಗ ಟೆಲಿಮಾಕಸ್ಸನು ಮೆಂಟರನನ್ನು ಕುರಿತು ಹೇಳಿದ್ದೇನಂದರೆ:—

"ಎಲೈ ಮೆಂಟರನೇ,—ಅರಿಸ್ಟೋಡಿಮಸ್ಸನು ಹೇಳಿದಂತೆ ನನ್ನ ಪುಣ್ಯಪರಿಪಾಕದಿಂದ ನೀನು ಪ್ರಥಮತಃ ನನ್ನ ಸೇವಕನಾದೆ. ಕ್ರಮೇಣ ನನ್ನ ಗುರುವಾದೆ. ಆಪ್ತರಿನಲ್ಲಿ ನನ್ನ ಭಾಗಕ್ಕೆ ದೇವರಾದೆ. ನಿನ್ನ ದೆಸೆಯಿಂದ ಟೆಲಿಮಾಕಸ್ಸನು ನನಗೆ ಪರಮ ಮಿತ್ರನಾದನು. ಯಾವಜ್ಜೀವವೂ ನಿಮ್ಮ ಜೊತೆಯಲ್ಲಿ ಇದ್ದು, ದೇಶವನ್ನು ಬಿಡಬೇಕೆಂಬ ಅಭಿಲಾಷೆಯು ನನಗೆ ವಿಶೇಷವಾಗಿರುವುದು. ಆದರೆ ಯತ್ನವಿಲ್ಲ. ಟೆಲಿಮಾಕಸ್ಸನಿಗೆ ಇಥಾಕಾ ದೇಶದ ಕ್ಷೇಮವೂ, ಮಾತಾಪಿತೃಗಳ ಸೇವೆಯೂ ಎಷ್ಟು ಮುಖ್ಯ ಕರ್ತವ್ಯವಾಗಿರುವುದೋ ಹಾಗೆಯೇ ಅರಿಸ್ಟೋಡಿಮಸ್ಸನ ಪ್ರಭುತ್ವವನ್ನು ಮ್ಯೆನಾಸನ ಧರ್ಮಶಾಸ್ತ್ರಗಳಿಗೆ ಅನುಸಾರವಾಗಿ ನಡೆಯುವಂತೆ ಮಾಡುವುದು ಅಷ್ಟು ನನಗೆ ಮುಖ್ಯ ಕರ್ತವ್ಯವಾಗಿರುವುದು. ನಿನ್ನ ಪ್ರಭಾವದಿಂದ ಮ್ಯೆನಾಸನ ಧರ್ಮಶಾಸ್ತ್ರಗಳ ರಹಸ್ಯವು ನನಗೆ ಗೊತ್ತಾಯಿತು. ಶಾಸ್ತ್ರಜ್ಞಾನವನ್ನು ಸಂಪಾದಿಸಿದ ಮಾತ್ರದಿಂದಲೇ, ನಾವು ಕೃತಕೃತ್ಯರಾಗುವುದಿಲ್ಲ. ಶಾಸ್ತ್ರವಿಧಿಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳಬೇಕು. ಅದಕ್ಕೆ ಸುಸಮಯವು ಈಗ ಉಂಟಾಗಿರುವುದು.

ಅರಿಸ್ಟೋಡಿಮಸ್ಸನು ಕೇವಲ ಧರ್ಮಿಷ್ಟನು. ಈ ದ್ವೀಪದ ಪ್ರಭುತ್ವವನ್ನು ಮಾಡುವ ವಿಷಯದಲ್ಲಿ ಈತನು ನನ್ನ ಸಹಾಯವನ್ನು ಅಪೇಕ್ಷಿಸುತ್ತಾನೆ. ಇವನ ಜೊತೆಯಲ್ಲಿ ನಾನು ಈ ದ್ವೀಪನಿವಾಸಿಗಳ ಸೇವೆಯನ್ನು ಮಾಡಬೇಕೆಂಬ ಆಶೆಯುಳ್ಳವನಾಗಿದೇನೆ. ನಿನ್ನನ್ನು ಇಲ್ಲೇ ಇಟ್ಟುಕೊಳ್ಳಬೇಕೆಂಬ ಕುತೂಹಲವು ನನಗೆ ಬಹಳವಾಗಿರುವುದು. ಆದರೆ, ಟೆಲಿಮಾಕಸ್ಸನು ಮಹಾಪ್ರಾಜ್ಞನಾದಾಗ್ಯೂ, ಬಹಳ ಕಷ್ಟದೆಸೆಯಲ್ಲಿ ಇರುತ್ತಾನೆ. ಅವನ ತಾಯಿಗೆ ಭಯಂಕರವಾದ ಕಷ್ಟವು ಸನ್ನಿಹಿತವಾಗಿರುವುದು. ಅದನ್ನು ತಪ್ಪಿಸುವುದಕ್ಕೆ ಟೆಲಿಮಾಕಸ್ಸನಿಗೆ ಎಷ್ಟು ಸಾಮರ್ಥ್ಯವಿದ್ದಾಗ್ಯೂ, ನಿನ್ನ ಸಹಾಯವು ಅತ್ಯಂತ ಆವಶ್ಯಕವಾಗಿರುವುದು. ಆದುದರಿಂದ ಇಥಾಕಾ ದ್ವೀಪಕ್ಕೆ ಉಂಟಾಗಿರತಕ್ಕ ಕಷ್ಟಗಳನ್ನು ತಪ್ಪಿಸುವುದಕ್ಕೆ ಟೆಲಿಮಾಕಸ್ಸನ ಜತೆಯಲ್ಲಿ ಪ್ರಯಾಣ ಮಾಡು. ನಿನಗೆ ಮಂಗಳವಾಗಲಿ. ಸತ್ಪುರುಷರಿಗೆ ದೈವಸಹಾಯವು ತಪ್ಪುವುದಿಲ್ಲ. ಸತ್ಯಕ್ಕೂ, ಧರ್ಮಕ್ಕೂ ಲೋಪ ಬರುವುದಿಲ್ಲ. ಯೂಲಿಸಸ್ಸನ ಲೋಕಯಾತ್ರೆಯನ್ನು ಪೂರೈಸಿಕೊಂಡು, ಇಥಾಕಾ ದ್ವೀಪಕ್ಕೆ ಬರುವಂತೆ ಜಗದೀಶ್ವರನು ಅನುಗ್ರಹಿಸಲಿ. ಪೆನಿಲೋಪಳಿಗೆ ಬಂದಿರತಕ್ಕ ವಿಪತ್ಪರಂಪರೆಗಳೆಲ್ಲಾ ಪ್ರಳಯ ಕಾಲದ ಸೂರ್ಯನ ಎದುರಿಗೆ ಮೇಘಗಳು ಕರಗಿಹೋಗುವಂತೆ ಕರಗಿಹೋಗಲಿ. ಪುನಃ ನಾವೆಲ್ಲರೂ ಒಟ್ಟಾಗಿ ಸೇರುವಂತೆ ಜಗದೀಶ್ವರನು ಅನುಗ್ರಹಿಸಲಿ. ನಮ್ಮ ಪ್ರೀತಿಯು ಹೇಗೆ ಐಕ್ಯವಾಗಿರುವುದೋ, ನಾವು ದೇಹವನ್ನು ಬಿಟ್ಟ ನಂತರ ದಹಿಸಲ್ಪಟ್ಟ ನಮ್ಮ ಶರೀರದ ಬೂದಿಯೂ ಕೂಡ ಒಟ್ಟಾಗಿ ಸೇರುವಂತೆ ದೇವರು ಅನುಗ್ರಹಿಸಲಿ. ನಿಮ್ಮಿಂದ ವಿಯೋಗವನ್ನು ಹೊಂದುವುದು ನಮಗೆ ಬಹಳ ಕಷ್ಟವಾಗಿದೆ. ಆದಾಗ್ಯೂ ಕಾರ್ಯಗೌರವದಿಂದ ನೀವು ಇಥಾಕಾ ದ್ವೀಪಕ್ಕೆ ಹೋಗಬೇಕಾಗಿರುವುದು. ನಾನು ಇಲ್ಲಿ ಇರಬೇಕಾಗಿರುವುದು. ಅರಿಸ್ಟೋಡಿಮಸ್ಸನ ಪ್ರೀತಿಯೂ, ಗುಣಾತಿಶಯಗಳೂ ನನ್ನನ್ನು ಇಲ್ಲಿಯೇ ಇರುವಂತೆ ಎಳೆಯುತ್ತವೆ. ನಿಮ್ಮ ಪ್ರೀತಿಯೂ, ಗುಣಾತಿಶಯಗಳೂ ಇಥಾಕಾ ದ್ವೀಪದ ಕಡೆಗೆ ನನ್ನನ್ನು ಎಳೆಯುತ್ತವೆ. ಟೆಲಿಮಾಕಸ್ಸನಿಗೆ ನೀನು ಸಹಾಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.''

ಈ ರೀತಿಯಲ್ಲಿ ಹೇಜಲ್ಲನು ಹೇಳುವಾಗ್ಗೆ, ಈ ನಾಲ್ಕು ಜನಗಳ ಕಣ್ಣಿನಿಂದಲೂ ವಿಯೋಗ ಶೋಕರಸವು ಧಾರಾಸಂಪಾತವಾಗಿ ಸುರಿಯುವುದಕ್ಕೆ ಉಪಕ್ರ

ಮವಾಯಿತು. ಟೆಲಿಮಾಕಸ್ಸನು ಬಿಕ್ಕಿ ಬಿಕ್ಕಿ ಅಳುವುದಕ್ಕೆ ಉಪಕ್ರಮಿಸಿದನು. ಮೆಂಟರನು ಅವನನ್ನು ಸಮಾಧಾನ ಪಡಿಸಿದನು. ಆರಿಸ್ಟೋಡಿಮಸ್ಸನು ಮೆಂಟರನನ್ನು ಕುರಿತು ಹೇಳಿದ್ದೇನಂದರೆ:—

“ಪ್ರಭುತ್ವದ ಭಾರವೂ, ಜವಾಬ್ದಾರಿಯೂ ನನಗೆ ಹೊರಿಸಲ್ಪಟ್ಟಿತು. ಇದಕ್ಕೆ ನೀನೇ ಕಾರಣ. ಬಹಳ ಭಯಂಕರವಾದ ಅಪಾಯಗಳಿಗೆ ನೀನು ನನ್ನನ್ನು ಗುರಿಮಾಡಿದೆ. ಈ ದ್ವೀಪನಿವಾಸಿಗಳ ಮೇಲೆ ಅಧಿಕಾರವನ್ನು ಚಲಾಯಿಸುವ ಪದವಿಯು ನನಗೆ ಬಂದಿತು. ಈ ಅಧಿಕಾರವನ್ನು ವಿವೇಕದಿಂದ ಚಲಾಯಿಸುವ ಶಕ್ತಿಯು ಲಭ್ಯವಾದ ಹೊರತು, ನನಗೆ ಧನ್ಯತೆಯು ಉಂಟಾಗುವುದಿಲ್ಲ. ಧರ್ಮದಿಂದ ರಾಜ್ಯಭಾರ ಮಾಡುವುದು ಸುಲಭವಲ್ಲ. ನಾನು ನೋಡುವುದಕ್ಕೆ ಪ್ರಭುವಾದಾಗ್ಯೂ, ಕಾರ್ಯತಃ ಸೇವಕನು. ನಮಗೆ ಪುತ್ರ, ಮಿತ್ರ ಕಳತ್ರಾದಿಗಳು ಇರುತ್ತಾರೆ. ನಾವು ಸ್ವತಂತ್ರರೆಂದು ತಿಳಿದುಕೊಂಡಿದ್ದಾಗ್ಯೂ, ಕಾರ್ಯತಃ ಪರತಂತ್ರರು. ನಮ್ಮ ಸೇವಕರ ಪ್ರಾರ್ಥನೆಯು ಅಧರ್ಮವಾಗಿದ್ದಾಗ್ಯೂ, ಅದನ್ನು ನಾವು ಮಾಡುವುದಿಲ್ಲ ಎಂದು ಹೇಳುವುದು ಅಸಾಧ್ಯವಾಗುತ್ತದೆ. ಹಾಗೆ ಹೇಳುವುದರಿಂದ, ಅನಿರ್ವಚನೀಯವಾದ ಅನರ್ಥಗಳು ಉಂಟಾಗುವುದುಂಟು. ಆ ಅನರ್ಥದ ಭಯದಿಂದಲಾದರೂ ಯಾವುದು ಅಧರ್ಮವೆಂದು ನಾವು ತಿಳಿದುಕೊಂಡಿರುತ್ತೇವೋ ಅದನ್ನು ನಾವು ಮಾಡಬೇಕಾಗುತ್ತದೆ. ಜಿತೇಂದ್ರಿಯರಾಗಿಯೂ, ಅರಿಷಡ್ವರ್ಗಗಳನ್ನು ಗೆದ್ದವರಾಗಿಯೂ, ಕರ್ಮಗಳಿಗೆ ಅನುರೂಪವಾದ ಫಲವಾಗುವುದೆಂಬ ಪ್ರತ್ಯಯವುಳ್ಳವರಾಗಿಯೂ ಇರತಕ್ಕವರೂ ಕೂಡ ತಮ್ಮ ಮನೋವೃತ್ತಿಗೆ ವಿರೋಧವಾಗಿ ಮಾಡಬಾರದ ಕೆಲಸಗಳನ್ನು ಮಾಡಬೇಕಾಗುತ್ತದೆ. ಪಂಡಿತೋತ್ತಮರಾದ ಸನ್ಯಾಸಿಗಳಿಗೂ ಕೂಡ ಈ ಅವಸ್ಥೆಯು ತಪ್ಪುವುದು ಅಪೂರ್ವ. ಹೀಗಿರಲಾಗಿ, ನನ್ನಂಥಾ ಪಾಮರರ ಪಾಡೇನು? ಇಂಥಾ ಭಾರವನ್ನು ನೀನು ನನಗೆ ವಹಿಸಿದೆ. ಈಗ ಹೊರಟು ಹೋಗುತ್ತೀಯೆ. ದೈವಯೋಗದಿಂದ ಹೇಜಲ್‌ನು ನನ್ನ ಪ್ರಾರ್ಥನೆ ಅನುಸಾರವಾಗಿ ನನಗೆ ಸಹಾಯ ಮಾಡುವುದಕ್ಕೋಸ್ಕರ ಇಲ್ಲಿ ಇರುವುದಾಗಿ ಒಪ್ಪಿರುತ್ತಾನೆ. ಇದು ನನ್ನ ಪುಣ್ಯಪರಿಪಾಕವೆಂದು ಭಾವಿಸುವೇನೆ. ಹೇಜಲ್‌ನ ಜೊತೆಯಲ್ಲಿ ನಿನ್ನನ್ನೂ, ಟೆಲಿಮಾಕಸ್ಸನನ್ನೂ ಇಲ್ಲಿ ಇಟ್ಟುಕೊಳ್ಳಬೇಕೆಂಬ ಆಶೆಯು ನನಗೆ ಬಹಳವಾಗಿರುವುದು. ಆದರೆ, ಪೆನಿಲೋಪಳಿಗೆ ಭಯಂಕರವಾದ ವಿಪತ್ತು ಬಂದಿರುವುದು. ಆಶ್ವಾಸನೆಗೋಸ್ಕರ

ಪೆಲಿಮಾಕಸ್ಸನು ಹೋಗಬೇಕು. ಅವನ ಸಹಾಯಕ್ಕೆ ನೀನು ಹೋಗಬೇಕು. ನಾವಿಬ್ಬರೂ ನಿಮ್ಮ ಸಹಾಯಾರ್ಥವಾಗಿ ಹೋಗುವುದು ಕರ್ತವ್ಯ. ಆದರೆ, ಬಹು ಕಾಲದಿಂದ ಈ ದ್ವೀಪವು ಅನಾಯಕವಾಗಿ ಇದೆ. ಇದನ್ನು ತಹಬಂದಿಗೆ ತರುವುದಕ್ಕೆ ಸ್ವಲ್ಪ ಕಾಲವು ಬೇಕು. ಈ ಕೆಲಸವನ್ನು ಮಾಡಿ, ನಿಮ್ಮ ಸಹಾಯಕ್ಕೆ ಬರುವುದಕ್ಕೆ ನಾವು ಸಿದ್ಧರಾಗಿದೇವೆ. ನಮ್ಮ ಸಹಾಯವಿಲ್ಲದೇಲೇ ನಿಮ್ಮ ಕಷ್ಟಗಳೆಲ್ಲಾ ಪರಿಹಾರವಾಗುವಂತೆ ದೇವರು ಅನುಗ್ರಹಿಸಲೆಂದು ನಾವು ಕೋರುತ್ತೇವೆ" ಎಂದು ಹೇಳಿ, ಎಲ್ಲರೂ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡು, ಒಬ್ಬರ ಅಪ್ಪಣೆಯನ್ನು ಒಬ್ಬರು ತೆಗೆದುಕೊಂಡರು.

ನಾವೆಲ್ಲರೂ ಹೊರಡುವುದಕ್ಕೆ ಸಿದ್ಧರಾದೆವು. ಅನುಕೂಲವಾದ ವಾಯುವು ಬೀಸುವುದಕ್ಕೆ ಉಪಕ್ರಮವಾಯಿತು. ನಾವು ಹೊರಟೆವು. ಆರಿಸ್ಟೋಡಿಮಸ್ಸನೂ, ಹೇಬಲ್‌ನೂ, ಆ ದ್ವೀಪನಿವಾಸಿಗಳೂ ಎಲ್ಲರೂ ನಮಗೆ ಸತ್ಕಾರಗಳನ್ನು ಮಾಡಿ, ಕಳುಹಿಸಿ ಕೊಟ್ಟರು. ರೇವು ಪಟ್ಟಣದಲ್ಲಿ ನಿಂತು, ನಮ್ಮ ಹಡಗು ದೃಷ್ಟಿಪಥಕ್ಕೆ ಬೀಳುತ್ತಲಿರುವವರೆಗೂ ನಮ್ಮನ್ನು ನೋಡುತ್ತಿದ್ದರು. ಐಡಾ ಪರ್ವತವು ಅದೃಶ್ಯವಾಗುವವರೆಗೂ ನಾವೂ ಈ ದ್ವೀಪವನ್ನು ನೋಡುತ್ತಿದ್ದೆವು. ಸ್ವಲ್ಪ ಹೊತ್ತಿನಲ್ಲಿ ಕ್ರೀಟ್ ದ್ವೀಪವು ಹ್ರಸ್ವವಾಗುವುದಕ್ಕೆ ಉಪಕ್ರಮವಾಯಿತು. ಕ್ರಮೇಣ ಅದೃಶ್ಯವಾಯಿತು. ಪೆಲೊಪಾನಿಸಸ್ ತೀರವು ನಮ್ಮನ್ನು ಎದುರುಗೊಳ್ಳುವಂತೆ ಕಾಣಬಂತು. ಅಷ್ಟರಲ್ಲಿಯೇ ಹಠಾತ್ತಾಗಿ ಆಕಾಶವು ಕಪ್ಪಾಯಿತು. ಮೇಘವು ಮುಚ್ಚಿಕೊಂಡಿತು. ಬಲವಾದ ಗಾಳಿಯು ಬೀಸುವುದಕ್ಕೆ ಉಪಕ್ರಮವಾಯಿತು. ಮಿಂಚು, ಸಿಡಿಲು, ಮಳೆ ಮೊದಲಾದವುಗಳ ರಭಸವು ಜೋರಾಯಿತು. ಅಲೆಗಳು ಪರ್ವತಾಕಾರವಾಗಿ ಏಳುವುದಕ್ಕೆ ಉಪಕ್ರಮವಾದವು. ಕತ್ತಲೆಯು ಕವಿದುಕೊಂಡಿತು. ಮೃತ್ಯುವು ಸನ್ನಿಹಿತವಾದಂತೆ ತೋರಿತು. ನಾವೆಲ್ಲರೂ ಭಯಭ್ರಾಂತರಾದೆವು. ಕಾಲವು ಬಹಳ ವಿಷಮವಾಯಿತು. ಮೆಂಟರು ಮಾತ್ರ ಶಾಂತಚಿತ್ತನಾಗಿದ್ದನು. ಮನೋವಾಕ್ಕರ್ಮಗಳಲ್ಲಿಯೂ ಪರಿಶುದ್ಧರಾದವರು ಆ ಹಡಗಿನಲ್ಲಿ ಒಬ್ಬರಿದ್ದಾಗ್ಯೂ, ಅವರನ್ನು ರಕ್ಷಿಸುವುದು ತನ್ನ ಮುಖ್ಯ ಕರ್ತವ್ಯವೆಂದು ಜಗದೀಶ್ವರನು ಭಾವಿಸುವನೆಂಬದಾಗಿಯೂ, ಪಾಪಿಷ್ಠರ ಪಾಪಗಳೂ ಕೂಡ ಸತ್ಪುರುಷ ರಕ್ಷಣೆಗೋಸ್ಕರ ಮನ್ನಿಸಲ್ಪಡುವವೆಂಬದಾಗಿಯೂ ಮೆಂಟರನಿಗೆ ನಂಬಿಕೆ ಇತ್ತು. ಈ ನಂಬಿಕೆಯನ್ನು

ನೋಡಿ, ನನಗೂ ಸ್ವಲ್ಪ ಧೈರ್ಯವಾಯಿತು. ಜಗದೀಶ್ವರನು ದುರ್ಮಾರ್ಗಪ್ರವರ್ತಕರನ್ನು ಶಿಕ್ಷಿಸುವುದಕ್ಕೋಸ್ಕರ ಭಯವನ್ನು ಉಂಟುಮಾಡುವನು. ಸದರಿ ಭಯವನ್ನು ಸತ್ಪುರುಷರನ್ನು ರಕ್ಷಿಸುವುದಕ್ಕೋಸ್ಕರ ಹೋಗಲಾಡಿಸುವನು ಆದುದರಿಂದಲೇ 'ಭಯಕೃತ್, ಭಯನಾಶನಃ' ಎಂಬದಾಗಿ ಅವನಿಗೆ ಬಿರುದು ಬಂದಿರುವುದು. ಈ ವಿಷಯಗಳನ್ನು ಕುರಿತು ಅನೇಕ ಸಂದರ್ಭಗಳಲ್ಲಿ ಮೆಂಟರನು ನನಗೆ ಮಾಡಿದ ಹಿತೋಪದೇಶಗಳೆಲ್ಲಾ ನನ್ನ ಮನಸ್ಸಿಗೆ ಬಂದವು. ಮೆಂಟರು ಧೈರ್ಯವಾಗಿಯೂ, ಶಾಂತಿಯುಳ್ಳವನಾಗಿಯೂ ಇದ್ದಾಗ್ಯೂ, ನನಗೆ ಸಂಪೂರ್ಣವಾದ ಧೈರ್ಯವು ಹುಟ್ಟಲಿಲ್ಲ. ಪರ್ವತಾಕಾರವಾಗಿ ಅಲೆಗಳು ಉರುಳುವುದಕ್ಕೆ ಉಪಕ್ರಮವಾದವು. ನೀರಿನಿಂದ ಮುಚ್ಚಲ್ಪಟ್ಟಿದ್ದ ಭಂಡೆಗಳು ಕಾಣುವುದಕ್ಕೆ ಉಪಕ್ರಮವಾದವು. ಸದರಿ ಭಂಡೆಗಳಿಗೆ ನಮ್ಮ ಹಡಗು ತಗುಲುವ ಸಂಭವವು ಬಂದಿತು. ನಮ್ಮ ಧ್ವಜಸ್ತಂಭವು ಮುರಿದುಹೋಯಿತು. ನಮ್ಮ ಹಡಗಿನ ಕೆಳಭಾಗಕ್ಕೆ ಒಂದು ಭಂಡೆಯು ತಗುಲಿತು. ಹಡಗಿಗೆ ನೀರು ನುಗ್ಗಿತು. ಹಡಗು ಮುಳುಗುವುದಕ್ಕೆ ಉಪಕ್ರಮವಾಯಿತು. ಹಡಗಿನಲ್ಲಿ ಇದ್ದವರು ಘಟ್ಟಿಯಾಗಿ ಕೂಗಿಕೊಂಡು ಅಳುವುದಕ್ಕೆ ಉಪಕ್ರಮ ಮಾಡಿದರು. ನನ್ನ ಧೈರ್ಯವು ಹೋಯಿತು. ನಿರಾಶೆಯು ಉಂಟಾಯಿತು. ಧೈರ್ಯದಿಂದ ದೇವರ ಸ್ಮರಣೆಯನ್ನು ಮಾಡುತ್ತಾ ದೇಹವನ್ನು ಬಿಡುವುದಕ್ಕೆ ನಾನು ಸಿದ್ಧನಾದೆನು. ಎಷ್ಟೋ ವಿಪತ್ತುಗಳನ್ನು ತಪ್ಪಿಸಿಕೊಂಡಿದ್ದೆವು. ಈಗ ಆಖೈರು ವಿಪತ್ತು ಬಂದಿತು. ಆಗ ಮೆಂಟರನನ್ನು ಕುರಿತು ನಾನು ಹೇಳಿದ್ದೇನಂದರೆ:—

"ಎಲೈ ಮೆಂಟರನೇ,—ನಮ್ಮ ಜೊತೆಯಲ್ಲಿ ಬಂದವರೆಲ್ಲರೂ ಸಾಯುತ್ತಲಿದ್ದಾರೆ. ನಮಗೂ ಸಾಯುವ ಅವಸ್ಥೆಯು ಬಂದಿರುವುದು. ಈಗಲೂ ನೀನು ಶಾಂತಚಿತ್ತನಾಗಿದ್ದೀಯೆ. ಇದು ನನಗೆ ತುಂಬಾ ಆಶ್ಚರ್ಯವನ್ನುಂಟುಮಾಡುತ್ತಲಿದೆ. ನಿನ್ನ ಸ್ಥೈರ್ಯವು ನನಗೆ ಇಲ್ಲ. ಆದರೆ, ನನಗೆ ಒಂದು ಸಂತೋಷ ಮಾತ್ರ ಇರುವುದು. ಸಾಯುವಾಗಲೂ ನಿನ್ನ ಜೊತೆಯಲ್ಲಿ ಸಾಯುತ್ತೇನಲ್ಲಾ ಎಂಬ ಸಂತೋಷವು ನನಗೆ ಪರಿಪೂರ್ಣವಾಗಿರುವುದು. ಸಾಯುವುದಕ್ಕೆ ನಾನು ಹೆದರುವುದಿಲ್ಲ. ಸಂತೋಷದಿಂದ ದೇಹವನ್ನು ಬಿಡುತ್ತೇನೆ. ಜನ್ಮವನ್ನು ಎತ್ತಿದವರಿಗೆ ಮರಣವು ಸಿದ್ಧವಾಗಿರುವುದು. ಹೀಗೆ ಸಾಯುವುದರಿಂದ ಇನ್ನೊಂದಾವರ್ತಿ ಸಾಯುವುದೇ ತಪ್ಪಿತು. ದೈವಾಜ್ಞೆಯನ್ನು ಮೀರುವುದಕ್ಕೆ ಯಾರಿಗೆ ತಾನೇ ಸಾಧ್ಯ ? ಜಗದೀಶ್ವರನ ಇಷ್ಟವಿ

ದ್ದಂತಾಗಲಿ" ಈ ರೀತಿಯಲ್ಲಿ ಹೇಳಿ, ಸಾಯುವುದಕ್ಕೆ ಸಿದ್ಧನಾದೆನು. ಆಗ ಮೆಂಟರನು ಹೇಳಿದ್ದೇನಂದರೆ: —

"ಸೃಷ್ಟಿಸ್ಥಿತಿಪ್ರಳಯಗಳಿಗೆ ದೇವರು ಕಾರಣಭೂತನು. ಸಾಯುವುದಕ್ಕೆ ಪ್ರತಿ ನಿಮಿಷವೂ ನಾವು ಸಿದ್ಧರಾಗಿರಬೇಕು. ಯಮನು ತನ್ನ ಪಾಶವನ್ನು ಬೀಸಿದಾಗ, ನಾವು ಹೇಗಿರಬೇಕೋ ಹಾಗೆ ಪ್ರತಿ ನಿಮಿಷದಲ್ಲಿಯೂ ಇರಬೇಕು. ಬದುಕಿರುವುದರಲ್ಲಿ ಹೆಚ್ಚೇನು? ಸತ್ತುದರಿಂದ ನಷ್ಟವೇನು? ಮರಣವು ಸಕಲ ಕಷ್ಟಗಳನ್ನೂ ಪರಿಹರಿಸತಕ್ಕದ್ದಲ್ಲವೇ? ಇದಕ್ಕೆ ಏತಕ್ಕೆ ಭಯಪಡಬೇಕು? ಕಷ್ಟ ಬಂದ ಕಾಲದಲ್ಲಿ ಅಜ್ಞಾನಿಗಳಾದವರು ಭಯಪಡುವರು. ಜ್ಞಾನಿಗಳಾದವರು ಧೈರ್ಯವನ್ನು ವಹಿಸುವರು. ನಿರಾಶೆಯು ಸನ್ನಿಹಿತವಾದಾಗ, ಅಧೈರ್ಯವನ್ನು ಪಡಬಾರದು. ಬಂದದ್ದೆಲ್ಲಾ ಬರಲಿ ಎಂದು ಕೈಕಟ್ಟಿಕೊಂಡು ಇರಬಾರದು. ಇಂಥಾ ಕಷ್ಟ ಕಾಲದಲ್ಲಿ ವೈರಾಗ್ಯವು ಇರಬೇಕು. ಅದರ ಜೊತೆಯಲ್ಲಿ ಪುರುಷಕಾರವೂ ಇರಬೇಕು. ಬಂದ ವಿಪತ್ತನ್ನು ತಪ್ಪಿಸಿಕೊಳ್ಳುವುದಕ್ಕೆ ಶಕ್ತಿಯನ್ನು ಮೀರಿ ಕೆಲಸವನ್ನು ಮಾಡಬೇಕು. ಭಯಪಡಬೇಡ. ಇಂಥಾ ಕಷ್ಟಗಳು ನಿನ್ನ ತಂದೆಗೂ, ನನಗೂ ಎಷ್ಟೋ ಬಂದವು. ಬಂದ ಕಷ್ಟಗಳಲ್ಲೆಲ್ಲಾ ನಾವು ಧೈರ್ಯವಾಗಿ ಆತ್ಮರಕ್ಷಣೋಪಾಯವನ್ನು ಮಾಡಿದೆವು. ದೇವರ ದಯೆಯಿಂದ ಧೈರ್ಯವು ನಮಗೆ ಸರ್ವತ್ರ ಸಾಧಕವಾಯಿತು. ಈಗಲೂ ಹಾಗೆ ಆಗುವುದೆಂಬ ನಂಬಿಕೆಯು ನನಗೆ ಇರುವುದು. ನೀನೂ ಈ ಧೈರ್ಯವನ್ನು ತಂದುಕೊ. ಹಡಗು ಛಿದ್ರವಾಗಿರುವುದು. ಅನೇಕ ಹಲಿಗೆಗಳು ತೇಲುತ್ತಲಿರುವುವು. ಅವುಗಳಲ್ಲಿ ಯಾವುದಾದರೂ ಒಂದನ್ನು ಆಶ್ರಯವನ್ನಾಗಿ ಮಾಡಿಕೊ" ಎಂದು ಹೇಳಿ, ಅಲ್ಲಿ ಇದ್ದ ಒಂದು ಕೊಡಲಿಯನ್ನು ತೆಗೆದುಕೊಂಡನು. ತನ್ನ ಶಕ್ತಿಯನ್ನೆಲ್ಲಾ ಬಿಟ್ಟು, ಆ ಹಡಗಿನಲ್ಲಿ ಒಂದು ಭಾಗವನ್ನು ಕತ್ತರಿಸಿದನು. ಅದರಲ್ಲಿ ಒಂದು ಹಲಗೆಯು ಪ್ರತ್ಯೇಕ ಮಾಡಲ್ಪಟ್ಟಿತು. ಮುಳುಗಿ ಹೋಗುತ್ತಿದ್ದ ಹಡಗಿನಿಂದ ಅದರ ಮೇಲೆ ಧುಮುಕಿ, ನನ್ನನ್ನೂ ಧುಮುಕೆಂದು ಹೇಳಿದನು. ನಾನು ಅವನ ಮೇಲ್ಪಂಕ್ತಿಯನ್ನು ಅನುಸರಿಸಿದೆನು. ಇಂಥಾ ವಿಪತ್ಕಾಲದಲ್ಲಿಯೂ ಮೆಂಟರನು ತೋರಿಸಿದ ಧೈರ್ಯವು ನನಗೂ ಧೈರ್ಯವನ್ನುಂಟು ಮಾಡಿತು. ಈಜು ಕಲಿತವರು ಸಮುದ್ರದಲ್ಲಿಯೂ ಕೂಡ ಹೇಗೆ ನಿರ್ಭಯವಾಗಿ, ವಿನೋದದಿಂದ ಈಜುವರೋ ಹಾಗೆ ಮೆಂಟರನು ಧೈರ್ಯದಿಂದಲೂ, ಶಾಂತಿ

ಯಿಂದಲೂ ನನ್ನ ಭಯವು ಸಂಪೂರ್ಣವಾಗಿ ಹೋಗ ಮಂತೆ ಮಾಡಿದನು. ಈ ಹಲಗೆಯ ಸಹಾಯದಿಂದ ನಾವು ಇಬ್ಬರೂ ಈಜುವದಕ್ಕೆ ಉಪಕ್ರಮಿಸಿದೆವು. ಇದರ ಸಹಾಯವಿಲ್ಲದಿದ್ದರೆ, ನಮ್ಮ ಶಕ್ತಿಯು ಕುಂದಿದಾಗ, ಅಪಾಯ ಬರುವ ಸಂಭವವು ಉಂಟಾಗಬಹುದಾಗಿತ್ತು. ಅಂಥಾ ಸಂಭವವು ಬರದೆ ಇರುವುದಕ್ಕೆ ಈ ಹಲಗೆಯು ತುಂಬಾ ಸಾಧಕವಾಯಿತು. ನಾವು ಧೈರ್ಯವನ್ನು ವಹಿಸಿದ್ದಾಗ್ಯೂ, ಮಳೆ, ಗಾಳಿ, ಮಿಂಚು, ಸಿಡಿಲು, ಕತ್ತಲೆ ಇವುಗಳಲ್ಲಿ ನಮಗೆ ದಿಕ್ಕು ತೋರಲಿಲ್ಲ. ನಮ್ಮ ಬಾಯಿಗೂ, ಕಿವಿಗಳಿಗೂ, ಮೂಗಿನ ಹೊಳ್ಳೆಗಳಿಗೂ ಅಲೆಗಳು ಹೊಡೆದು, ನೀರು ನುಗ್ಗುವುದಕ್ಕೆ ಉಪಕ್ರಮವಾಯಿತು. ಬಹಳ ಶ್ರಮಪಟ್ಟು, ಆ ಹಲಗೆಯನ್ನು ನಾವು ಹಿಡಿದುಕೊಂಡು, ದೇವರಲ್ಲಿ ನಂಬಿಕೆಯನ್ನು ಇಟ್ಟು, ಈಜುತ್ತಿದ್ದೆವು ದೇವರ ದಯೆಯಿಂದ ನಮಗೆ ಅದ್ಭುತವಾದ ಶಕ್ತಿಯು ಉಂಟಾಯಿತು. ಒಂದೊಂದಾವರ್ತಿ ಪರ್ವತಾಕಾರವಾದ ಅಲೆಗಳು ನಮ್ಮ ಮೇಲೆ ಉರುಳುತ್ತಿದ್ದವು. ಆಗ ನಮ್ಮ ಶಕ್ತಿಯನ್ನೆಲ್ಲಾ ಬಿಟ್ಟು, ಆ ಹಲಗೆಯನ್ನು ಬಲವಾಗಿ ಹಿಡಿದುಕೊಳ್ಳುತ್ತಿದ್ದೆವು. ಅಲೆಗಳು ಉರುಳಿ, ಹಲಗೆಯು ತೇಲುತ್ತಿರುವಾಗ, ವಿಶ್ರಮಿಸಿಕೊಳ್ಳುತ್ತಿದ್ದೆವು. ಸಂತೋಷದಲ್ಲಿ ಹಿಗ್ಗದೆ, ವಿಪತ್ತಿನಲ್ಲಿ ತಗ್ಗದೆ ಇರುವುದು ಮೆಂಟರನಿಗೆ ನಿಸರ್ಗವಾಗಿತ್ತು. ಅಲೆಯು ಉರುಳಿ, ನಾವು ವಿಶ್ರಾಂತಿಯನ್ನು ಹೊಂದುವ ಕಾಲವು ಬಂದಾಗ, ಮೆಂಟರನು ಹೇಳಿದ್ದೇನಂದರೆ:—

"ಎಲೈ ಟೆಲಿಮಾಕಸ್ಸನೇ,—ನಾವು ಬದುಕುವುದಕ್ಕೂ, ಸಾಯುವುದಕ್ಕೂ ಜಗದೀಶ್ವರನು ಕಾರಣವಲ್ಲದೆ, ಈ ಗಾಳಿಯೂ, ಈ ಅಲೆಗಳೂ, ಈ ಕತ್ತಲೆಯೂ, ಈ ಸಿಡಿಲೂ, ಮಿಂಚೂ ಇವುಗಳೆಲ್ಲಾ ದೇವರ ಪ್ರಸನ್ನತೆಗೆ ಪಾತ್ರರಾದವರಿಗೆ ಏನು ಮಾಡಬಲ್ಲವು? ನಮ್ಮನ್ನು ಕೊಲ್ಲುವುದಕ್ಕೆ ಇವುಗಳಿಗೆ ಶಕ್ತಿಯು ಇರುವುದೇ? ದೇವರ ಸಂಕಲ್ಪವು ಈ ವಿಪತ್ತುಗಳಲ್ಲಿ ನಾವು ಸಾಯಬೇಕೆಂದಿದ್ದರೆ, ನಾವು ಎಂದಿಗೂ ಬದುಕುವುದಿಲ್ಲ. ನಾವು ಬದುಕಬೇಕೆಂದು ದೇವರ ಸಂಕಲ್ಪವಾಗಿದ್ದರೆ, ಇವುಗಳು ಯಾವುವೂ ನಮಗೆ ಬಾಧಕವನ್ನುಂಟುಮಾಡಲಾರವು. ನಾವು ಪಾಪಿಗಳಲ್ಲ. ಕೂಡಿದ ಮಟ್ಟಿಗೂ ಪರಿಶುದ್ಧವಾದ ಮನೋವಾಕ್ಕರ್ಮಗಳಿಗೆ ಅನುಸಾರವಾಗಿ ನಡೆಯುತ್ತಲಿದೇವೆ. ಧರ್ಮಿಷ್ಟರಾದವರು ಇಂಥಾ ವಿಪತ್ತುಗಳಿಗೆ ಏತಕ್ಕೆ ಭಯಪಡಬೇಕು? ಇದು ಭಯಕ್ಕೆ ಸ್ಥಾನವಲ್ಲ. ಜಗದೀಶ್ವರನ ಮಹಿಮೆಯನ್ನು ತಿಳಿದುಕೊಳ್ಳುವು

ದಕ್ಕೆ ಇದು ಸಾಧಕವಾದ ಸನ್ನಿವೇಶ. ನೀನು ಮುಳುಗಿ ಪಾತಾಳಕ್ಕೆ ಹೋಗಿದ್ದಾಗ್ಯೂ, ಜಗದೀಶ್ವರನು ನಿನ್ನನ್ನು ಮೇಲಕ್ಕೆ ಎತ್ತುವನು. ನೀನು ಅಧರ್ಮಿಷ್ಠನಾಗಿದ್ದರೆ, ನೀನು ಒಲಿಂಪಸ್ ಪರ್ವತದ ಅಗ್ರಭಾಗದಲ್ಲಿದ್ದಾಗ್ಯೂ, ನಿನ್ನನ್ನು ನರಕಕ್ಕೆ ನೂಕುವನು. ಲೋಕವು ಭಗವಂತನಿಂದ ನಮ್ಮ ಮನೋವಾಕ್ಕಾಯಗಳ ಪಾರಿಶುದ್ಧ್ಯತೆಗೆ ಅನುಸಾರವಾದ ಗತಿಯು ನಮಗೆ ಬರುವದು. ದುಷ್ಕರ್ಮಕ್ಕೆ ದುಷ್ಟಫಲವಾಗುವುದು. ಸತ್ಕರ್ಮಕ್ಕೆ ಒಳ್ಳೆಯ ಫಲವಾಗುವದು. ಇದನ್ನು ವ್ಯತ್ಯಾಸ ಮಾಡುವುದಕ್ಕೆ ಬ್ರಹ್ಮಾದಿಗಳಿಂದಲೂ ಆಗುವುದಿಲ್ಲ.''

ಈ ರೀತಿಯಲ್ಲಿ ಮೆಂಟರನು ಹೇಳಿದನು. ಇದನ್ನು ಕೇಳಿದ ಕೂಡಲೆ, ಇವನ ಸಿದ್ಧಾಂತದಲ್ಲಿ ನನಗೆ ನಂಬಿಕೆಯು ಹುಟ್ಟಿತು. ಅಸಾಧಾರಣವಾದ ಧೈರ್ಯವೂ, ಶಕ್ತಿಯೂ ಬಂದಿತು. ರಾತ್ರಿಯೆಲ್ಲಾ ಭಯದಿಂದ ನಡುಗುತ್ತಾ, ಈ ರೀತಿಯಲ್ಲಿ ಈಜುತ್ತಾ ಕಾಲಹರಣವನ್ನು ಮಾಡಿದೆವು. ಮೆಂಟರನು ಧೈರ್ಯವಾಗಿದ್ದಾಗ್ಯೂ ಯಾವಾಗ ನಾವಿಬ್ಬರೂ ಸಾಯುವೆವೋ ಎಂದು ನಾನು ತಿಳಿದುಕೊಂಡಿದ್ದೆನು. ಕೊನೆಗೆ ಗಾಳಿಯು ಕಡಮೆಯಾಗುತ್ತಾ ಬಂದಿತು. ಅಲೆಗಳು ಶಾಂತವಾದವು. ಮೋಡಗಳು ಕರಗಿ ಹೋದವು. ಗುಡುಗು ಮತ್ತು ಸಿಡಲಿನ ಧ್ವನಿಯು ನಿಂತುಹೋಯಿತು. ಬೆಳಕು ಉಂಟಾಯಿತು. ಕ್ರಮಕ್ರಮವಾಗಿ ಅರುಣೋದಯವಾಯಿತು. ಅನಂತರ ಸೂರ್ಯೋದಯವಾಯಿತು. ನಕ್ಷತ್ರಗಳು ಮಾಯವಾದವು. ಸ್ವಲ್ಪ ದೂರದಲ್ಲಿ ಭೂಮಿಯು ದೃಷ್ಟಿಪಥಕ್ಕೆ ಬಿದ್ದಿತು. ಭೂಮಿಯ ಕಡೆಗೆ ಅಲೆಗಳು ನಮ್ಮನ್ನು ತಂದುಕೊಂಡು ಹೋಗುತ್ತಿದ್ದುವು. ಸಮೀಪದಲ್ಲಿ ಆಸೆಯು ಉಂಟಾಯಿತು. ಸುತ್ತುಮುತ್ತಲೂ ನೋಡಿದೆವು. ನಾವಿಬ್ಬರು ವಿನಾ ಇನ್ಯಾರೂ ಬದುಕಿರಲಿಲ್ಲ. ಎಲ್ಲರೂ ಮುಳುಗಿ ಸತ್ತುಹೋದರೆಂದು ಗೊತ್ತುಮಾಡಿಕೊಂಡೆವು. ತೀರದೇಶಕ್ಕೆ ಬಂದ ಕೂಡಲೆ, ನಮ್ಮ ಹಾದಿಯಲ್ಲಿ ಅನೇಕ ಬಂಡೆಗಳಿದ್ದುವು. ನಾವಿಬ್ಬರೂ ಬಹಳ ಶ್ರಮಪಟ್ಟು, ಈ ಬಂಡೆಗಳ ಸಂದಿಗಳಲ್ಲಿ ನುಸಿಕೊಂಡು, ತೀರದೇಶಕ್ಕೆ ಹೋದೆವು. ಅಲ್ಲಿ ಇಳಿದು, ನಮ್ಮನ್ನು ರಕ್ಷಿಸಿದ ಜಗದೀಶ್ವರನಿಗೆ ವಂದನೆಗಳನ್ನು ಮಾಡಿದೆವು. ಸತ್ಪುರುಷರಿಗೆ ಉಂಟಾಗತಕ್ಕ ಭಯವನ್ನು ದೇವರು ಖಂಡಿತವಾಗಿ ತಪ್ಪಿಸುತ್ತಾನೆಂಬ ನಂಬಿಕೆಯು ಆಗ ನನಗೆ ಉಂಟಾಯಿತು.

# ಏಳನೆಯ ಅಧ್ಯಾಯ.

ಈ ರೀತಿಯಲ್ಲಿ ಟೆಲಿಮಾಕಸ್ಸನು ಕೆಲಿಪ್ಸೋ ಎಂಬ ಕಿನ್ನರಿಗೆ ತನ್ನ ವೃತ್ತಾಂತವನ್ನು ಹೇಳುತ್ತಿರಲು, ಇಲ್ಲಿದ್ದ ದೇವತಾ ಸ್ತ್ರೀಯರೆಲ್ಲಾ ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ, ಆಶ್ಚರ್ಯದಿಂದಲೂ, ಸಂತೋಷದಿಂದಲೂ ಪರವಶರಾದರು. ಅವರ ಪೈಕಿ ಕೆಲವು ಜನ ಸ್ತ್ರೀಯರು ಹೇಳಿದ್ದೇನಂದರೆ:—

"ಇವರು ಎಂಥಾ ವಿಚಿತ್ರ ಪುರುಷರು. ಇವರು ಮನುಷ್ಯರಾಗಿದ್ದಾಗ್ಯೂ, ಇವರು ಅಮಾನುಷ ವಿಗ್ರಹರೆಂದು ಹೇಳಿದರೆ, ಅದು ಸುಳ್ಳಾಗವುದಿಲ್ಲ. ಇವರ ಸಾಹಸ ಕೃತ್ಯಗಳು ಅದ್ಭುತವಾಗಿರುವವು. ಯೂಲಿಸಸ್ಸನು ಮಾತನಾಡುವಾಗ, ಅಮೃತವು ಧಾರಾಸಂಪಾತವಾಗಿ ಸುರಿಯುವಂತೆ ತೋರುತ್ತಿತ್ತು. ಅವನ ಮಾತುಗಳನ್ನು ಕೇಳಿ, ನಾವು ಆನಂದಪರವಶರಾಗುತ್ತಿದ್ದೆವು. 'ಆತ್ಮಾವೈ ಪುತ್ರನಾಮಾಸಿ' ಎಂದು ಹೇಳುವುದನ್ನು ಕೇಳಿ ಇದ್ದೇವೆ. ಈ ಟೆಲಿಮಾಕಸ್ಸನು ಧೈರ್ಯದಲ್ಲಿಯೂ, ಸ್ಥೈರ್ಯದಲ್ಲಿಯೂ, ಮನೋಹರವಾಗಿ ಮಾತನಾಡುವುದರಲ್ಲಿಯೂ ಯೂಲಿಸಸ್ಸಿಗೆ ಸ್ವಲ್ಪವೂ ಕಡಮೆಯಾಗಿರುವಂತೆ ತೋರುವುದಿಲ್ಲ. ಇವನ ಆಕೃತಿಯು ಮನೋಹರವಾಗಿರುವುದು. ಇವನ ಸೌಂದರ್ಯವು ಅದ್ವಿತೀಯವಾಗಿರುವುದು. ಇವನ ಗಾಂಭೀರ್ಯವು ಅಸದೃಶವಾಗಿರುವುದು. ಇವನಲ್ಲಿ ಸತ್ಯವೂ, ಧರ್ಮವೂ, ನಿಗರ್ವಶಿರೋಮಣಿತ್ವವೂ, ಪಾಪಭೀತಿಯೂ, ಪರೋಪಕಾರದಲ್ಲಿ ಆಸಕ್ತಿಯೂ ಸುಶೋಭಿಸಿರುವುವು. ಇವನು ಯೂಲಿಸಸ್ಸನ ಮಗನೆಂದು ನಮಗೆ ಗೊತ್ತಾಗದೆ ಇದ್ದಿದ್ದರೆ, ಇವನೇ ದೇವರೆಂದು ನಾವು ತಿಳಿದುಕೊಳ್ಳುತ್ತಿದ್ದೆವು. ಇದು ಹಾಗಿರಲಿ. ಈ ಮೆಂಟರನು ಯಾರಾಗಿರಬಹುದು? ಉಪೇಕ್ಷೆಯಿಂದ ನೋಡಿದರೆ, ಇವನು ಸಾಮಾನ್ಯ ಮನುಷ್ಯನಂತೆ ಕಾಣುತ್ತಾನೆ. ಪರಿಶೀಲಿಸಿ ನೋಡಿದರೆ, ಇವನು ಮನುಷ್ಯನಂತೆ ತೋರುವುದಿಲ್ಲ."

ಈ ರೀತಿಯಲ್ಲಿ ದೇವತಾ ಸ್ತ್ರೀಯರು ಮಾತನಾಡಿಕೊಳ್ಳುತ್ತಿದ್ದರು. ಈ ಮಾತುಗಳನ್ನು ಕೆಲಿಪ್ಸೋ ಕೇಳಿದಳು. ಅವಳಿಗೂ ಭ್ರಮೆ ಉಂಟಾಯಿತು. ಟೆಲಿಮಾಕಸ್ಸನ ಮುಖವನ್ನೂ, ಮೆಂಟರನ ಮುಖವನ್ನೂ ಅವಳು ದೃಷ್ಟಿಸಿ ನೋಡಿದಳು. ಟೆಲಿಮಾಕಸ್ಸನು ಹೇಳಿದ ಕಥೆಯನ್ನು ಪುನಃ ಕೇಳಬೇಕೆಂದು ಅಭಿಲಾಷೆಯು ಅವಳಿಗೆ ಹುಟ್ಟಿತು. ಅದನ್ನು ನಿಗ್ರಹಿಸಿಕೊಂಡಳು. ತನ್ನ ಪೀಠದಿಂದ ಎದ್ದಳು. ಟೆಲಿಮಾಕಸ್ಸನನ್ನು ಕರೆದುಕೊಂಡು, ಸಮೀಪದಲ್ಲಿದ್ದ ಒಂದು ಲತಾಗೃಹಕ್ಕೆ ಹೋಗಿ,

ಈ ಮೆಂಟರು ಮನುಷ್ಯನೇ ಅಥವಾ ದೇವರೇ ಎಂದು ಕೇಳಲು, ಅವನು ಮನುಷ್ಯನೆಂಬದಾಗಿಯೂ, ತನ್ನ ಗುರುವೆಂಬದಾಗಿಯೂ ಟೆಲಿಮಾಕಸ್ಸನು ಹೇಳಿದನು. ಅವನ ಮಾತಿನಲ್ಲಿ ಅವಳಿಗೆ ಪ್ರತ್ಯಯವು ಹುಟ್ಟಲಿಲ್ಲ. ಮೆಂಟರನು ಮನುಷ್ಯನಂತೆ ಅವತರಿಸಿರುವ ದೇವರೆಂಬ ಜ್ಞಾನವು ಅವಳಿಗೆ ಹುಟ್ಟಿತು. ಹಾಗಿಲ್ಲದಿದ್ದ ಪಕ್ಷದಲ್ಲಿ, ಇಂಥಾ ಭಯಂಕರವಾದ ವಿಪತ್ತಿನಲ್ಲಿಯೂ ದೇವತೆಗಳಿಗೆ ಸಹಜವಾದ ಧೈರ್ಯಸ್ಥೈರ್ಯಗಳು ಇವನಿಗೆ ಉಂಟಾಗುವುದಕ್ಕೆ ಕಾರಣವಿಲ್ಲವೆಂದು ತಿಳಿದುಕೊಂಡಳು. ಈ ಮಧ್ಯೆ ದೇವತಾ ಸ್ತ್ರೀಯರು ಮೆಂಟರನನ್ನು ಆವರಿಸಿಕೊಂಡು, ಅನೇಕ ಪ್ರಶ್ನೆಗಳನ್ನು ಹಾಕಿದರು. ಇಥಿಯೋಪಿಯಾದಿಂದ ಪ್ರಯಾಣ ಮಾಡಿದಾಗ, ಉಂಟಾದ ತಪಶೀಲುಗಳನ್ನು ಒಬ್ಬಳು ಕೇಳಿದಳು. ಡೆಮಾಸ್ಕಸ್ ಪಟ್ಟಣದ ವೃತ್ತಾಂತವನ್ನು ಮತ್ತೊಬ್ಬಳು ಕೇಳಿದಳು. ಟ್ರಾಯ್ ದೇಶಕ್ಕೆ ಮುತ್ತಿಗೆ ಹಾಕಲ್ಪಡುವುದಕ್ಕೆ ಮುಂಚೆ, ನಿನಗೂ, ಯೂಲಿಸಸ್ಸಿಗೂ ಪರಿಚಯವಿತ್ತೇ ? ಎಂದು ಮತ್ತೊಬ್ಬಳು ಕೇಳಿದಳು. ಈ ಪ್ರಶ್ನೆಗಳಿಗೆಲ್ಲಾ ಕೇವಲ ಆದರದಿಂದ ಮೆಂಟರನು ಉತ್ತರವನ್ನು ಕೊಟ್ಟನು. ಅವನ ಮಾತುಗಳನ್ನು ಕೇಳಿ, ' ಇದು ಸಾಮಾನ್ಯ ಮನುಷ್ಯರ ಮಾತುಗಳಲ್ಲ. ಅವತಾರ ಪುರುಷರ ಮಾತುಗಳಾಗಿರಬಹುದು ಎಂದು ಅನೇಕರಿಗೆ ತೋರಿತು. ಅಷ್ಟರಲ್ಲಿಯೇ ಕೆಲಿಪ್ಸೊ ಎಂಬ ಕಿನ್ನರಿಯು ಅವನ ಬಳಿಗೆ ಬಂದು, ನಾನಾ ವಿಧವಾದ ಪುಷ್ಪಗಳನ್ನು ಅವನಿಗೆ ಒಪ್ಪಿಸಿ, ಲೋಕಾಭಿರಾಮವಾಗಿ ಅನೇಕ ಪ್ರಶ್ನೆಗಳನ್ನು ಹಾಕಿದಳು. ಈ ಪ್ರಶ್ನೆಗಳನ್ನ ಕೇಳುವುದರಲ್ಲಿ, ಅವಳು ತೋರಿಸಿದ ಮನೋಹರತೆಯು ಸಾಮಾನ್ಯ ಜನಗಳನ್ನು ಮರಳು ಮಾಡುವುದಕ್ಕೆ ಸಾಧಕವಾಗಿತ್ತು. ಮೆಂಟರನು ಜಿತೇಂದ್ರಿಯನು. ಇವಳ ಮರಳು ಮಾತುಗಳಿಗೆ ಅವನು ವಶನಾಗುವ ಸಂಭವವು ತೋರಲಿಲ್ಲ. ಇವಳ ಮಂಕುಬೂದಿಯು ಅವನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಶಕ್ತಿಯುಳ್ಳದ್ದಾಗಲಿಲ್ಲ. ಅವಳಲ್ಲಿ ಮಾತೃಭಾವವನ್ನೂ, ಸಹೋದರೀ ಭಾವವನ್ನೂ ಇಟ್ಟು, ಮೆಂಟರನು ಮಾತನಾಡುತ್ತಾ ಬಂದನು. ಪಾತಾಳಕ್ಕೂ, ಆಕಾಶಕ್ಕೂ ಹೋಗಿರತಕ್ಕ ಭಂಡೆಯು ಪ್ರಚಂಡವಾದ ಪ್ರಳಯಕಾಲದ ಗಾಳಿಗೂ ಕೂಡ ಹೇಗೆ ಚಲಿಸುವುದಿಲ್ಲವೋ ಹಾಗೆ ಇವಳ ಮರಳು ಮಾತುಗಳಿಗೆ ಮೆಂಟರನು ನಿಶ್ಚಲನಾಗಿದ್ದನು. ಇವಳು ಆಡತಕ್ಕ ಮಾತುಗಳನ್ನೆಲ್ಲಾ ಉಪೇಕ್ಷೆಯಿಂದ ಇವನು ಕೇಳಿದನು. ತನ್ನ ಪ್ರಶ್ನೆಗಳಿಂದಲೂ

ಪಾಟೀಸವಾಲುಗಳಿಂದಲೂ ಮೆಂಟರನ ಅಂತರ್ಗತವನ್ನು ತಿಳಿದುಕೊಳ್ಳುವುದು ಸಾಧ್ಯವೆಂದು ಇವಳು ತಿಳಿದುಕೊಂಡಿದ್ದಳು. ಶೀಘ್ರದಲ್ಲಿಯೇ ಭಗ್ನಮನೋರಥಳಾಗಲು, ಮೆಂಟರನ ಉತ್ತರಗಳಿಂದ ಇವಳ ಸಂದೇಹವು ಬಹಳವಾಗಿ ಹೆಚ್ಚಿತು. ಟೆಲಿಮಾಕಸ್ಸನನ್ನು ತನ್ನ ಮಂಕುಬೂದಿಗೆ ಅಧೀನನಾಗುವಂತೆ ಮಾಡಿಕೊಳ್ಳುವುದು ಸುಲಭವೆಂಬದಾಗಿಯೂ, ಅವನ ಚರ್ಯಗಳನ್ನು ನೋಡಿದರೆ, ಅಮಾನುಷವಾದ ಶಕ್ತಿಯು ಅವನಲ್ಲಿ ಇರುವುದೆಂಬದಾಗಿಯೂ ಅವಳಿಗೆ ತೋರಿತು. ಆದಾಗ್ಯೂ ಮೋಹಪರವಶಳಾದಳು. ಮೆಂಟರನನ್ನು ನಿಗ್ರಹಿಸಿ, ಟೆಲಿಮಾಕಸ್ಸನನ್ನು ವಶಪಡಿಸಿಕೊಳ್ಳುವುದು ಸುಲಭವೆಂದು ತಿಳಿದುಕೊಂಡಳು. ಟೆಲಿಮಾಕಸ್ಸಿಗೂ, ಮೆಂಟರಿಗೂ ಪರಸ್ಪರ ದ್ವೇಷವನ್ನು ಹುಟ್ಟಿಸುವುದು ಸುಲಭವೆಂಬದಾಗಿಯೂ, ಪುಷ್ಪಬಾಣಗಳಿಂದ ಪರಾಜಿತರಾಗದೆ ಇರತಕ್ಕ ಜನರು ಪ್ರಪಂಚದಲ್ಲಿ ಇರುವುದೇ ಇಲ್ಲವೆಂಬದಾಗಿಯೂ, ಮೋಹಪರವಶರಾದ ಸ್ತ್ರೀಪುರುಷರು ಲಜ್ಜೆಯನ್ನೂ ಕೂಡ ಬಿಟ್ಟು, ತಂದೆತಾಯಿಗಳನ್ನೂ, ಗುರುಹಿರಿಯರನ್ನೂ, ದೇವರನ್ನೂ ತಿರಸ್ಕರಿಸುವರೆಂಬದಾಗಿಯೂ, ಪ್ರಪಂಚ ಧರ್ಮವು ಹೀಗಿರುವುದರಿಂದ, ಮೋಹೋದ್ದೀಪನವನ್ನು ಮಾಡತಕ್ಕ ತನ್ನ ಮಧುರೋಕ್ತಿಗಳಿಂದಲೂ, ಉಪಚಾರಾತಿಶಯಗಳಿಂದಲೂ ಟೆಲಿಮಾಕಸ್ಸನನ್ನು ಸ್ವಾಧೀನ ಪಡಿಸಿಕೊಂಡು, ಪ್ರತಿಭಟಿಸಿದರೆ, ಮೆಂಟರನನ್ನು ಟೆಲಿಮಾಕಸ್ಸನು ಸಂಹರಿಸುವಂತೆ ಮಾಡುವುದೂ ಕೂಡ ಅಸಾಧ್ಯವಲ್ಲವೆಂದು ಕೆಲಿಪ್ಸಳು ಭಾವಿಸಿಕೊಂಡಳು. ಮೆಂಟರನಿಗೆ ಅಮಾನುಷ ಶಕ್ತಿ ಇರುವುದೆಂದು ತಿಳಿದಿದ್ದಾಗ್ಯೂ, ಮೋಹದ ಮಹಿಮೆಯಿಂದ ಇವಳಿಗೆ ಈ ವಿಷಯವು ತೋರಲಿಲ್ಲ. ಅಸಾಧ್ಯವನ್ನು ಸಾಧ್ಯವೆಂದು ತಿಳಿದುಕೊಂಡಳು. ಸತ್ಪುರುಷರನ್ನು ಜಗದೀಶ್ವರನು ಕಾಪಾಡುವನು. ಅವನ ಮಹಿಮೆಯಿಂದ ಮೆಂಟರನಿಗೆ ದಿವ್ಯದೃಷ್ಟಿಯು ಉಂಟಾಯಿತು. ಇವಳ ಇಂದ್ರಜಾಲ, ಮಹೇಂದ್ರಜಾಲ ವಿದ್ಯೆಗಳು ಅವನಿಗೆ ಸ್ಪಷ್ಟವಾಗಿ ತಿಳಿಯಿತು. ಅವನು ಟೆಲಿಮಾಕಸ್ಸನನ್ನು ಕುರಿತು ಹೇಳಿದ್ದೇನಂದರೆ:—

"ನೀನು ಬಹಳ ಜಾಗರೂಕನಾಗಿರಬೇಕು. ನಾವು ಅತ್ಯಂತ ವಿಷಮಾವಸ್ಥೆಯಲ್ಲಿರುತ್ತೇವೆ. ಈ ಕಿನ್ನರಿಯರು ಮನುಷ್ಯ ರೂಪವನ್ನು ವಹಿಸಿರುವ ಪಿಶಾಚಿಯರು. ಇವರ ಮನೋಹರವಾದ ವಾಕ್ಯಗಳು ಭಯಂಕರವಾದ ವಿಷಕ್ಕೆ ಸಮಾನವಾದವುಗಳು. ಸಾಮಾನ್ಯವಾದ ವಿಷದಿಂದ ದೇಹಕ್ಕೆ ಹಾನಿಯುಂಟು. ಈ ಕಿನ್ನ

ರಿಯರ ವಿಷದಿಂದ ದೇಹದ ಜೊತೆಗೆ ಸಂಚಿತವಾದ ಪುಣ್ಯವು ಭಸ್ಮವಾಗುವುದು. ಅಪಯಶಸ್ಸು ಬರುವುದು. ಜಾಗರೂಕನಾಗಿರು. ನಿನ್ನ ಮಾತಾಪಿತೃಗಳ ವಿಷಯ ದಲ್ಲಿ ನಿನಗಿರತಕ್ಕ ಕರ್ತವ್ಯವನ್ನು ಸ್ಮರಿಸಿಕೊ ಮೋಹದ ಪಾಶಕ್ಕೆ ಬೀಳಬೇಡ. ಇಂದ್ರಿಯಗ್ರಾಮಗಳಿಗೆ ಅಧೀನನಾಗಬೇಡ. ಲೋಕೈಕವೀರರಾದ ಅನೇಕ ಪ್ರಭು ಗಳು ವಿಷಕನ್ನಿಕೆಯರ ಪಾಶಕ್ಕೆ ಬಿದ್ದು ನಾಶವಾಗಿರುವರು. ಜಿತೇಂದ್ರಿಯನಾಗಿ ಜಗದೀಶ್ವರನ ಪ್ರಸನ್ನತೆಗೆ ಪಾತ್ರನಾಗು.'' ಈ ರೀತಿಯಲ್ಲಿ ಮೆಂಟರನು ಉಪ ದೇಶ ಮಾಡಿದನು. ಅದಕ್ಕೆ ಟೆಲಿಮಾಕಸ್ಸನು ಹೇಳಿದ್ದೇನೆಂದರೆ:—

"ಎಲೈ ಪಿತೃನಿರ್ವಿಶೇಷನಾದ ಮೆಂಟರನೇ,—ನಿನ್ನ ಹಿತೋಪದೇಶವನ್ನು ಶಿರಸಾ ವಹಿಸುವೆನು. ನನ್ನ ತಂದೆತಾಯಿಗಳಿಗೂ, ನಿನಗೂ ಅಪಯಶಸ್ಸು ಬರುವ ಕೆಲಸವನ್ನು ನಾನು ಎಂದಿಗೂ ಮಾಡುವುದಿಲ್ಲ. ಹೊನ್ನು, ಹೆಣ್ಣು, ಮಣ್ಣುಗಳಿಗೆ ಆಶೆಪಟ್ಟು, ಅನೇಕ ಚಕ್ರವರ್ತಿಗಳು ಹೇಗೆ ನಾಶವಾದರೋ ಅದನ್ನು ನಿನ್ನ ಮುಖ ದಿಂದಲೇ ನಾನು ಕೇಳಿರುವೆನು. ಈ ಆಶಾಪಾಶದಿಂದ ಬದ್ಧರಾಗಿ, ಹೇಗೆ ಚಕ್ರ ವರ್ತಿಗಳ ಮೊದಲ್ಗೊಂಡು ಝಾಡಮಾಲಿಗಳ ವರೆಗೂ ಜನಗಳು ಭಯಂಕರವಾದ ಪತನಕ್ಕೆ ಗುರಿಯಾಗುತ್ತಲಿರುವರೋ ಅದು ಪ್ರತಿ ನಿಮಿಷದಲ್ಲಿಯೂ ನನ್ನ ದೃಷ್ಟಿಗೆ ಬೀಳುತ್ತಲಿದೆ. ರಾತ್ರಿ ನೋಡಿದ ಭಾವಿಯಲ್ಲಿ ನಾನು ಹಗಲು ಬೀಳುತ್ತೇನೆಂದು ತಿಳಿದು ಕೊಳ್ಳಬೇಡ. ಈ ಕಿನ್ನರಿಯರ ವಶೀಕರಣೋಪಾಯಗಳಿಗೆ ಪ್ರತಿಭಟಿಸುವುದು ಕಷ್ಟ ವಾಗಿರಬಹುದು. ಆದರೆ, ಪರಿಣಾಮ ಫಲವನ್ನು ಪರಿಶೀಲಿಸಿ, ತಿಳಿದುಕೊಳ್ಳುವ ಶಕ್ತಿಯು ನಿನ್ನ ಅನುಗ್ರಹದಿಂದ ನನಗೆ ಸ್ವಲ್ಪ ಮಟ್ಟಿಗೆ ಉಂಟಾಗಿರುವುದು. ದೇವರ ದಯೆಯಿಂದಲೂ, ನಿನ್ನ ಅನುಗ್ರಹದಿಂದಲೂ ಇವರ ಪಾಶಕ್ಕೆ ಬೀಳದೇ ಇರುವ ಶಕ್ತಿ ಯನ್ನು ನಾನು ಸಂಪಾದಿಸಿಕೊಳ್ಳುತ್ತೇನೆ. ಈ ವಿಷಯದಲ್ಲಿ ವಿಚಾರಪರನಾಗಬೇಡ.''

ಈ ರೀತಿಯಲ್ಲಿ ಟೆಲಿಮಾಕಸ್ಸನು ಹೇಳಿದ್ದನ್ನು ಕೆಲಿಪ್ಸೋ ಹೊಂಚು ಕೇಳಿ ದಳು. ಸರ್ವ ಪ್ರಯತ್ನದಿಂದಲೂ ಇವನನ್ನು ನಿಗ್ರಹಿಸಬೇಕೆಂದು ನಿಷ್ಕರ್ಷೆ ಮಾಡಿ ಕೊಂಡಳು. ಮನ್ಮಥನನ್ನು ಕುರಿತು ತಪಸ್ಸು ಮಾಡಿದಳು. ಅವನು ಪ್ರಸನ್ನನಾಗಿ ಇಷ್ಟಾರ್ಥವನ್ನು ಕೇಳಿಕೊಳ್ಳಬಹುದೆಂದು ಹೇಳಿದನು. ಆಗ ಕೆಲಿಪ್ಸಳು ಹೇಳಿ ದ್ದೇನೆಂದರೆ:—

"ಟ್ರಾಯ್ ದೇಶವು ನಾಶವಾಗುವುದಕ್ಕೆ ಕಾರಣಭೂತನಾದ ಯೂಲಿಸಸ್ಸನು ನನಗೆ ವಂಚಿಸಿ ಹೊರಟು ಹೋದನು. ನಾನು ಪ್ರಯೋಗಿಸಿದ ಪುಷ್ಪಬಾಣಗಳೆಲ್ಲಾ ವಿಫಲವಾದವು. ಆತನು ನನ್ನ ಪಾಶಕ್ಕೆ ಬೀಳಲಿಲ್ಲ. ದೈವಯೋಗದಿಂದ ಅವನ ಮಗನಾದ ಟೆಲಿಮಾಕಸ್ಸನು ಇಲ್ಲಿಗೆ ಬಂದಿರುವನು. ತಂದೆಗಿಂತಲೂ ಅತಿಶಯವಾದ ರೂಪಲಾವಣ್ಯಾಗಳು ಇವನಲ್ಲಿ ಇರುವುವು. ಬುದ್ಧಿಯಲ್ಲಿಯೂ, ವಿವೇಕದಲ್ಲಿಯೂ, ಮನೋಹರವಾಗಿ ಮಾತನಾಡುವುದರಲ್ಲಿಯೂ, ಎಲ್ಲರ ಮನಸ್ಸನ್ನೂ ಆಕರ್ಷಿಸುವುದರಲ್ಲಿಯೂ ಇವನು ಯೂಲಿಸಸ್ಸಿಗಿಂತಲೂ ಅಧಿಕನಾಗಿರುವನು. ಇವನನ್ನು ವಶಪಡಿಸಿಕೊಳ್ಳುವುದಕ್ಕೆ ಸಮ್ಮೋಹನಾಸ್ತ್ರಗಳನ್ನು ಪ್ರಯೋಗಿಸಿರುತ್ತೇನೆ. ಇವನನ್ನು ವಶಮಾಡಿಕೊಳ್ಳುವುದೂ ಸುಲಭ. ಆದರೆ, ಈತನ ಜತೆಯಲ್ಲಿ ಮೆಂಟರನು ಬಂದಿರುವನು ಇವನು ಸಾಮಾನ್ಯ ಮನುಷ್ಯನಲ್ಲ. ಅಮಾನುಷವಾದ ಸ್ವಭಾವವು ಇವನಲ್ಲಿ ಇರುವಂತೆ ತೋರುತ್ತದೆ. ನಮ್ಮ ಅಸ್ತ್ರಶಸ್ತ್ರಗಳೆಲ್ಲಾ ಅವನಲ್ಲಿ ವಿಫಲವಾದವು. ಇವರಿಬ್ಬರನ್ನೂ ಮೋಹಪರವಶರನ್ನಾಗಿ ಮಾಡುವುದು ಸಾಧ್ಯವಾದರೆ, ಅದನ್ನು ಮಾಡಬೇಕು. ಹಾಗೆ ಇಲ್ಲದಿದ್ದರೆ, ಇವರಿಬ್ಬರಿಗೂ ಭೇದಭಾವವನ್ನು ಹುಟ್ಟಿಸಿ, ಮೆಂಟರು ಈತನನ್ನು ಬಿಟ್ಟು, ಈ ದ್ವೀಪದಿಂದ ಹೊರಟು ಹೋಗುವಂತೆ ಮಾಡಬೇಕು. ಈ ಕೆಲಸವು ಪರಾಕ್ರಮದಿಂದ ನಡೆಯುವಂತೆ ತೋರುವುದಿಲ್ಲ. ಉಪಾಯದಿಂದ ಮಾಡುವುದು ಸಾಧ್ಯವಾಗಬಹುದು. ಟೆಲಿಮಾಕಸ್ಸನು ನನ್ನಲ್ಲಿ ವಿಶೇಷ ಅನುರಕ್ತನಾಗುವಂತೆ ಮಾಡು. ಈ ಅನುರಾಗ ಮಹಿಮೆಯಿಂದ ಮೆಂಟರನನ್ನು ತಿರಸ್ಕರಿಸುವಂತೆಯೂ ಮಾಡು. ಶಿಷ್ಯನು ಮೂರ್ಖನಾದರೆ, ಹಿತೋಪದೇಶಗಳನ್ನು ಉಲ್ಲಂಘಿಸಿದರೆ, ಗುರುವಿಗೆ ಕೋಪ ಬರುವುದು ಸಹಜವಾದದ್ದು. ಮೆಂಟರಿಗೆ ಅಂಥಾ ಕೋಪವು ಬರಲಿ. ಅವನು ಈ ದ್ವೀಪವನ್ನು ಬಿಟ್ಟು ಹೊರಟು ಹೋಗಲಿ. ಅವನು ಹೊರಟು ಹೋದ ಉತ್ತರ ನಿಮಿಷದಲ್ಲಿಯೇ ಟೆಲಿಮಾಕಸ್ಸನು ನಿರ್ಭಯವಾಗಿ ನಮ್ಮೊಡನೆ ಆನಂದಸಾಗರದಲ್ಲಿ ಕ್ರೀಡಿಸುತ್ತಾ ಇರುವನು. ಹೀಗೆ ಆಗುವ ವಿಷಯದಲ್ಲಿ ನಿನ್ನ ಸಹಾಯವನ್ನು ಅಪೇಕ್ಷಿಸುತ್ತೇನೆ." ಈ ರೀತಿಯಲ್ಲಿ ಕೆಲಿಪ್ಸಳು ಹೇಳಿದಳು.

ಅದನ್ನು ಕೇಳಿ, ಮನ್ಮಥನು ಅವಳ ಇಷ್ಟಸಿದ್ಧಿಗೆ ಬೇಕಾದ ಸಹಾಯವನ್ನು ಮಾಡುವುದಾಗಿ ವಾಗ್ದಾನ ಮಾಡಿದನು. ಈ ಕಿನ್ನರಿಯರಲ್ಲಿ ಮೆಂಟರಿಗೆ ಅನುರಾಗ ಉಂಟಾಗುವಂತೆ ಮಾಡಬೇಕೆಂದು ಪ್ರಯತ್ನ ಮಾಡಿದನು. ಇವನ ಪ್ರಯತ್ನವು

ಸಫಲವಾಗಲಿಲ್ಲ. ಜೂಪಿಟರನ ಬಳಿಗೆ ಹೋಗಿ, ತಾನು ಕೆಲಿಪ್ಸಳಿಗೆ ಮಾಡಿದ ವಾಗ್ದಾನವನ್ನೂ, ತಾನು ಕೊಟ್ಟ ವರಕ್ಕೆ ಮೆಂಟರನು ವಿಘ್ನಕಾರಿಯಾದದ್ದನ್ನೂ ಅವನಿಗೆ ವಿಜ್ಞಾಪಿಸಿ, ಮೆಂಟರನನ್ನು ನಿಗ್ರಹಿಸುವುದರಲ್ಲಿ ಅವನ ಸಹಾಯವನ್ನು ಅಪೇಕ್ಷಿಸಿದನು. ಮನ್ಮಥನಿಗೆ ಜೂಪಿಟರ್ ಹೇಳಿದ್ದೇನೆಂದರೆ:—

" ಮೆಂಟರನನ್ನು ನಿಗ್ರಹಿಸುವುದಕ್ಕೆ ನನಗೂ ಸಾಮರ್ಥ್ಯವಿಲ್ಲ. ನಿನಗೆ ಸಾಮರ್ಥ್ಯವೆಲ್ಲಿಯದು ? ಇವನಲ್ಲಿ ಸತ್ವಗುಣವು ಮೂರ್ತೀಭವಿಸಿರುವುದು. ಈ ಗುಣಾತಿಶಯವೇ ಅವನಿಗೆ ವಜ್ರಕವಚವಾಗಿರುವುದು. ಅವನ ಮೇಲೆ ನಿನ್ನ ಬಾಣಗಳು ಕೆಂದುವುದಿಲ್ಲ. ಕೇವಲ ಧರ್ಮಿಷ್ಟರ ಮೇಲೆ ಹಾಕಲ್ಪಟ್ಟ ಶಸ್ತ್ರಾಸ್ತ್ರಗಳು ಹಿಂತಿರುಗಿ ನಮಗೇ ಬಾಧಕವನ್ನುಂಟುಮಾಡುವುವು. ಸತ್ವಗುಣಪ್ರಧಾನನಾದ ವಶಿಷ್ಠನ ಮೇಲೆ ಹಾಕಲ್ಪಟ್ಟ ಬಾಣಗಳೆಲ್ಲಾ ಆತನ ಬ್ರಹ್ಮದಂಡದಿಂದ ನುಂಗಲ್ಪಟ್ಟದ್ದನ್ನು ನೀನು ಕೇಳಿಲ್ಲವೇ ? ಮೆಂಟರನ ಮೇಲೆ ಬಾಣಪ್ರಯೋಗವನ್ನು ಮಾಡಬೇಡ. ಅವನು ಕೋಪಮಾಡಿಕೊಂಡರೆ, ಅವನ ಕೋಪಾಗ್ನಿಯು ನಿನ್ನನ್ನು ದಹಿಸಿಬಿಡುವುದು. ನಿನ್ನ ಪಿತಾಮಹನಾದ ಮನ್ಮಥನು ಪುಷ್ಪಬಾಣವನ್ನು ಹಾಕಿ, ಈಶ್ವರನಿಗೆ ತಪೋಭಂಗ ಮಾಡಲು, ಅವನ ಜ್ಞಾನದೃಷ್ಟಿಯಿಂದ ತನ್ನ ಮನಶ್ಚಾಂಚಲ್ಯದ ಕಾರಣವನ್ನು ತಿಳಿದುಕೊಂಡು, ಕೋಪದಿಂದ ಫಾಲನೇತ್ರವನ್ನು ಬಿಡಲು, ಅವನು ಭಸ್ಮೀಭೂತನಾದದ್ದು ನಿನಗೆ ತಿಳಿಯದೇ ? ಮೆಂಟರನು ಜಿತೇಂದ್ರಿಯನು. ಅವನಲ್ಲಿ ತಮೋಗುಣವಿರುವುದಿಲ್ಲ. ರಜೋಗುಣವೂ ಇರುವುದಿಲ್ಲ. ಕೇವಲ ಸತ್ವಗುಣಪ್ರಧಾನನಾಗಿರುವನು. ಅವನು ಧರ್ಮಕ್ಕೆ ಅಧೀನನಾಗುವನು. ಅಧರ್ಮಕ್ಕೆ ಸ್ವಾಧೀನನಾಗುವುದಿಲ್ಲ. ಪೂರ್ವಾಪರಗಳನ್ನು ಯೋಚಿಸದೆ, ಕೆಲಿಪ್ಸಳಿಗೆ ವರವನ್ನು ಏತಕ್ಕೆ ಕೊಟ್ಟೆ ? ನಿನ್ನ ವಾಗ್ದಾನವು ನಡೆಯುವಂತೆ ತೋರುವುದಿಲ್ಲ. ಪಾಪಿಷ್ಠರನ್ನು ಜಯಿಸುವುದು ಸುಲಭ. ಪುಣ್ಯವೂ, ಪಾಪವೂ ಎರಡೂ ಯಾರಲ್ಲಿ ಮಿಶ್ರವಾಗಿವೆಯೋ ಅವರನ್ನೂ ಜಯಿಸಬಹುದು. ಕೇವಲ ಧರ್ಮಿಷ್ಟರನ್ನು ಜಯಿಸುವುದು ದೇವರಿಗೂ ಅಸಾಧ್ಯ. ಮೆಂಟರು ಮನುಷ್ಯಮಾತ್ರನೆಂದು ತಿಳಿದುಕೊಂಡೆ. ನೀನು ಕೊಟ್ಟ ಅಭಯವು ನಿಷ್ಫಲವಾಗುವುದು. ಟೆಲಿಮಾಕಸ್ಸನನ್ನು ನಿನ್ನ ಸಹಾಯವಿಲ್ಲದೇಲೆ, ಕೆಲಿಪ್ಸಳು ಸ್ವಾಧೀನ ಮಾಡಿಕೊಳ್ಳಬಲ್ಲಳು. ನೀನೂ, ನಾನೂ ಇಬ್ಬರೂ ಸಹಾಯ ಮಾಡಿದಾಗ್ಯೂ, ಅವಳು ಮೆಂಟರನನ್ನು ಜಯಿಸಲಾರಳು. ಮೆಂಟರನ ಸಾನ್ನಿಧ್ಯದಿಂದ ನಮ್ಮೆಲ್ಲರ ಬಾಣಗಳೂ

ಕೂಡ ಹಿಂತಿರುಗುವುವು ಈ ಪ್ರಯತ್ನವನ್ನು ಬಿಡ. ಕೆಲಿಪ್ಸಳ ಮನೋರಥವು ನಡೆಯುವುದಿಲ್ಲ. ಮಾತಾಪಿತೃಕಾರ್ಯಾಸಕ್ತನಾಗಿರತಕ್ಕ ಟೆಲಿಮಾಕಸ್ಸನನ್ನು ವಶಪಡಿಸಿಕೊಳ್ಳುವುದಕ್ಕೆ ಇದು ಕಾಲವೂ ಅಲ್ಲ. ಅವನಲ್ಲಿ ಕೆಲಿಪ್ಸಳು ಅನುರಕ್ತಳಾಗಿದ್ದರೆ, ಅವನು ಇಥಾಕಾ ದ್ವೀಪಕ್ಕೆ ಹೋಗಿ, ಶತ್ರುಗಳನ್ನು ನಿಗ್ರಹಿಸುವುದಕ್ಕೆ ಸಹಾಯ ಮಾಡಲ್ಪಡಲಿ. ಪೆನಿಲೋಪಳ ಪ್ರೀತಿಗೂ, ಯೂಲಿಸಸ್ಸನ ಪ್ರಸನ್ನತೆಗೂ ಅವಳು ಪಾತ್ರಳಾಗಲಿ. ಧರ್ಮದಿಂದ ಟೆಲಿಮಾಕಸ್ಸನು ವರಿಸಲ್ಪಡಲಿ. ಆಗ ದೈವಾನುಗ್ರಹದಿಂದ ಇವಳ ಇಷ್ಟಾರ್ಥಸಿದ್ಧಿಯು ಆಗುವುದು. ಈ ವಿಷಯವನ್ನು ಹೇಳಿ, ಧರ್ಮಮಾರ್ಗದರ್ಶನವನ್ನು ಮಾಡು. ಹಾಗಿಲ್ಲದಿದ್ದರೆ, ನಿನ್ನ ಪ್ರಯತ್ನವೂ, ಅವಳ ಪ್ರಯತ್ನವೂ ಎರಡೂ ವಿಫಲವಾಗುವುದರಲ್ಲಿ ಸಂದೇಹವಿಲ್ಲ. ಈ ಭಾಗದಲ್ಲಿ ಮೆಂಟರಿಗೆ ದೈವಸಹಾಯವು ದೊರೆಯುವುದು. ನಿಮಗೆಂದಿಗೂ ದೊರೆಯುವುದಿಲ್ಲ.''

ಈ ರೀತಿಯಲ್ಲಿ ಜೂಪಿಟರನು ಹೇಳಿದನು. ಭಗ್ನಮನೋರಥನಾಗಿ, ಬಹಳ ವ್ಯಸನದಿಂದ ತಾನು ಕೊಟ್ಟ ಮಾತಿಗೆ ಭಂಗ ಬಂತಲ್ಲಾ ಎಂದು ಚಿಂತಾಕ್ರಾಂತನಾಗಿ, ಮನ್ಮಥನು ಕೆಲಿಪ್ಸಳ ಒಳಿಗೆ ಬಂದನು. ಇವನ ಮುಖವನ್ನು ನೋಡಿದ ಕೂಡಲೆ, ಅವನ ಮನೋಗತವನ್ನು ಅವಳು ತಿಳಿದುಕೊಂಡಳು. ಜೂಪಿಟರು ಮಾಡಿದ ಹಿತೋಪದೇಶಗಳನ್ನು ಮನ್ಮಥನು ಕೃತಪಡಿಸಿ, ಅವನ ಸಲಹೆಯಂತೆ ನಡೆಯುವುದು ಉತ್ತಮವೆಂದು ಕೇಳಿದನು. ಮೋಹಪರವಶರಾದವರಿಗೆ ಯುಕ್ತಾಯುಕ್ತ ವಿವೇಚನೆಯು ಇರುವುದಿಲ್ಲ. ಮನ್ಮಥನನ್ನು ಕುರಿತು ಕೆಲಿಪ್ಸಳು ಹೇಳಿದ್ದೇನಂದರೆ:—

"ಜೂಪಿಟರನ ಸಲಹೆಯು ಯುಕ್ತಿಯುಕ್ತವಾಗಿಲ್ಲ. ಮೆಂಟರನಲ್ಲಿ ಸತ್ವಗುಣವು ಮೂರ್ತೀಭವಿಸಿರಬಹುದು. ರಜೋಗುಣ, ತಮೋಗುಣಗಳು ಇಲ್ಲದೆ ಇರಬಹುದು. ಸತ್ವಗುಣಕ್ಕೇ ಜಯವಾಗುವುದೆಂಬದಾಗಿಯೂ, ತಮೋಗುಣಕ್ಕೆ ಪರಾಜಯವೆಂಬದಾಗಿಯೂ ಹೇಳಿದರೆ, ಯಾರು ತಾನೇ ನಂಬುವರು. ಪ್ರಪಂಚದ ಚರಿತ್ರೆಯನ್ನು ಪರಿಶೀಲಿಸಿ ನೋಡು. ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾದವರು ಎಷ್ಟು ಜನ ನಾಶವಾಗಿಲ್ಲ ? ಮನಸ್ಸಿನಲ್ಲಿ ಒಂದು ವಿಧವಾಗಿಯೂ, ವಾಚಾ ಒಂದು ವಿಧವಾಗಿಯೂ, ಕಾರ್ಯತಃ ಒಂದು ವಿಧವಾಗಿಯೂ ಇರತಕ್ಕವರು ಎಷ್ಟು ಜನ ಅಖಂಡ ಸಾಮ್ರಾಜ್ಯವನ್ನು ಅನುಭವಿಸಿಲ್ಲ ? ಶ್ರೀ ರಾಮನೇ ಮೊದಲಾದವರು ಧರ್ಮದಿಂದ ರಾಜ್ಯಭಾರ ಮಾಡಿದರು. ರಾವಣನೇ ಮೊದಲಾದವರು ರಾಜ್ಯಭಾರವನ್ನು

ಮಾಡಲಿಲ್ಲವೇ ? ಒಬ್ಬ ನ್ಯಾಸರುಡೀನನು ವೈರಾಗ್ಯ ಚಕ್ರವರ್ತಿಯಾಗಿದ್ದನು. ಸಾವಿರಾರು ಜನ ಔರಂಗಜೇಬರು ಪ್ರಭುತ್ವವನ್ನು ಮಾಡಲಿಲ್ಲವೇ ? ಒಬ್ಬ ಸಾವಿತ್ರಿಯು ಯಮಧರ್ಮರಾಜನನ್ನು ಜಯಿಸಿದಳು. ಲಕ್ಷೋಪಲಕ್ಷ ಸ್ವೈರಿಣಿಯರು ಸ್ವೇಚ್ಛಾಪ್ರವರ್ತಕರಾಗಿ, ಈ ಭೂಮಂಡಲವನ್ನೇ ಸ್ವರ್ಗವಾಗಿ ಮಾಡಿಕೊಳ್ಳಲಿಲ್ಲವೇ? ನಿರ್ವೀರ್ಯರಾದ ವೃದ್ಧರ ಸಲಹೆಯು ನನಗೆ ಬೇಕಾಗಿಲ್ಲ. ನನ್ನ ಪುಷ್ಪಬಾಣವು ಬ್ರಹ್ಮಾಸ್ತ್ರಕ್ಕಿಂತಲೂ ಹೆಚ್ಚು ಕೆಲಸವನ್ನು ಮಾಡಬಲ್ಲದು. ನೀನು ಆಡಿದ ಮಾತನ್ನು ತಪ್ಪಬೇಡ. ಟೆಲಿಮಾಕಸ್ಸನಿಗೆ ಮೋಹಪಾಶವನ್ನು ನಾನು ಬೀಸುತ್ತೇನೆ. ಅವನು ನನ್ನಲ್ಲಿ ಅನುರಕ್ತನಾಗುವಂತೆ ನೀನು ಮಾಡು. ಮೆಂಟರು ಅವನಲ್ಲಿ ಮೂರ್ತೀಭವಿಸಿರುವ ಸತ್ವಗುಣವು ಸುಟ್ಟು ಬೂದಿ ಮಾಡಲ್ಪಡುವಂತೆ ನಾನು ಮಾಡುವೆನು. ಭಯಪಡಬೇಡ '' ಎಂದು ಹೇಳಿದಳು.

ಮನ್ಮಥನಿಗೆ ಜೂಪಿಟರನ ಹಿತೋಪದೇಶದಲ್ಲಿ ತುಂಬಾ ನಂಬಿಕೆಯು ಇತ್ತು. ಆದಾಗ್ಯೂ ತಾನು ಕೊಟ್ಟ ಮಾತಿಗೆ ತಪ್ಪುವುದು ಸರಿಯಲ್ಲವೆಂಬ ಮನೋಭಾವವು ಇವನಿಗೆ ಹುಟ್ಟಿತು. ಅವಳ ಪ್ರತಾಪವೂ, ವಾಗ್ವೈಖರಿಯೂ ಇವನಿಗೆ ಮಂಕುಬೂದಿಯಂತೆ ಪರಿಣಮಿಸಿತು. ಪರಿಣಾಮ ಫಲವನ್ನು ನೋಡುವ ಶಕ್ತಿಯು ಇವನಿಗೆ ತಪ್ಪಿತು. ಇವನು ವಿವೇಕಶೂನ್ಯನಾದನು. ಈ ಕಿನ್ನರಿಯು ಹೇಳಿದ್ದು ನಿಜವೆಂದು ನಂಬಿದನು. ಇವಳ ಆಜ್ಞೆಗೆ ಅನುಸಾರವಾಗಿ ಟೆಲಿಮಾಕಸ್ಸನ ಮನಸ್ಸನ್ನು ಪ್ರವೇಶಿಸಿ, ಅವಳಲ್ಲಿ ಅವನಿಗೆ ಅಪ್ರತಿಹತವಾದ ಪ್ರೀತಿಯು ಹುಟ್ಟುವಂತೆ ಮಾಡಿದನು. ಕಾಮ ಪರವಶರಾದವರಿಗೆ ಭಯವೂ, ಲಜ್ಜೆಯೂ ಎರಡೂ ಇರುವುದಿಲ್ಲ. ಟೆಲಿಮಾಕಸ್ಸನ ಮನಸ್ಸಿನಿಂದ ಈ ಎರಡು ಗುಣಗಳೂ ಹೋದವು. ಕೆಲಿಪ್ಸಳಲ್ಲಿ ಟೆಲಿಮಾಕಸ್ಸಿಗೆ ಪ್ರೀತಿಯು ಪರಾಕಾಷ್ಠ ದೆಸೆಯನ್ನು ಹೊಂದಿತು. ಮೆಂಟರನಲ್ಲಿದ್ದ ಗುರುಭಕ್ತಿಯು ಹೋಯಿತು. ಮೆಂಟರನ ಸಾನ್ನಿಧ್ಯವನ್ನೇ ಬಿಟ್ಟು, ಕೆಲಿಪ್ಸಳ ಸನ್ನಿಧಿಯಲ್ಲಿ ಕಾಲಕ್ಷೇಪಣ ಮಾಡುತ್ತಾ, ಮೆಂಟರನ ಬಳಿಗೆ ಹೋಗುವುದನ್ನೇ ಬಿಟ್ಟನು. ಹೇಳಿ ಕಳುಹಿಸಿದಾಗ್ಯೂ, ತಪ್ಪಿಸಿಕೊಳ್ಳುತ್ತಾ ಬಂದನು. ಕೊನೆಗೆ ಮೆಂಟರನಿಗೆ ಬಹಳ ಅಸಮಾಧಾನವಾಯಿತು. ತಾನೇ ಬಲಾತ್ಕಾರವಾಗಿ ಟೆಲಿಮಾಕಸ್ಸನ ಬಳಿಗೆ ಹೋದನು. ಮೆಂಟರನ ಕಣ್ಣಿನಲ್ಲಿ ಕೋಪವು ಪ್ರಜ್ವಲಿಸುತ್ತಿತ್ತು. ಕೆಲಿಪ್ಸಳೇ ಮೊದಲಾದ ಕಿನ್ನರಿಯರೆಲ್ಲಾ ಅವನ ಎದುರಿಗೆ ನಿಲ್ಲುವ ಶಕ್ತಿ ಇಲ್ಲದೆ ಮರೆಯಾದರು. ಟೆಲಿಮಾಕಸ್ಸನನ್ನು ನೋಡಿ, ಮೆಂಟರನು ಹೇಳಿದ್ದೇನೆಂದರೆ:—

"ನೀನು ಯೂಲಿಸಸ್ಸನ ಮಗನೆಂಬದಾಗಿಯೂ, ಜಿತೇಂದ್ರಿಯನೆಂಬದಾಗಿಯೂ ನಾನು ತಿಳಿದುಕೊಂಡಿದ್ದೆನು. ನಿನ್ನ ತಂದೆಯ ಗುಣಾತಿಶಯಗಳೆಲ್ಲಾ ಮೂರ್ತೀಭವಿಸಿರುವುವೆಂಬದಾಗಿಯೂ, ವಯೋಧರ್ಮದಿಂದ ಆಗಾಗ್ಯೆ ದೌರ್ಬಲ್ಯವನ್ನು ತೋರಿಸಿದಾಗ್ಯೂ, ಪರಿಣಾಮದಲ್ಲಿ ನೀನು ಗುರುಹಿರಿಯರ ಮಾತನ್ನು ಉಲ್ಲಂಘಿಸತಕ್ಕವನಲ್ಲವೆಂಬದಾಗಿಯೂ ನಾನು ತಿಳಿದುಕೊಂಡಿದ್ದೆನು. ನೀನು ಮಾಡಿದ ಪ್ರತಿಜ್ಞೆಗಳೆಲ್ಲಾ ಕೇಳಿ, ನಿನ್ನ ಗುಣಾತಿಶಯಗಳಿಂದ ನಿನ್ನ ತಂದೆಗೂ ಪರಾಭವವನ್ನು ಮಾಡುತ್ತೀ ಎಂಬದಾಗಿ ನಾನು ನಂಬಿದ್ದೆನು. ನಿನ್ನ ತಂದೆಯಲ್ಲಿ? ನೀನೆಲ್ಲಿ? ದೇವರಿಗೂ, ಪಿಶಾಚಕ್ಕೂ ಇರತಕ್ಕ ಅಂತರವು ನಿಮ್ಮಿಬ್ಬರಿಗೂ ಇರುವುದು. ನಿನ್ನ ವಿಷಯದಲ್ಲಿ ನಾನು ವಂಚಿತನಾದೆ. ಅಯೋಗ್ಯನನ್ನು ನಾನು ಯೋಗ್ಯನೆಂದು ತಿಳಿದುಕೊಂಡೆನು. ಅಪಾತ್ರದಲ್ಲಿ ನಾನು ಹಿತೋಪದೇಶವನ್ನು ಮಾಡಿದೆನು. ಪೆನಿಲೋಪಳು ನೀನು ರಕ್ಷಕನಾಗುವಿ ಎಂದು ಆಶೆಯನ್ನಿಟ್ಟುಕೊಂಡಿರುವಳು. ನಿನ್ನ ದೌರಾತ್ಮ್ಯದಿಂದ ಅವಳು ಭಗ್ನವನೋರಥಳಾಗುವ ಅವಸ್ಥೆಯು ಬಂದಿತು. ನೀನು ರಕ್ಷಕನಾಗಿರುತ್ತೀ ಎಂದು ಯೂಲಿಸಸ್ಸನು ಧೈರ್ಯವಾಗಿ ದೇಶಾಟನವನ್ನು ಮಾಡುತ್ತಲಿರುವನು. ಅವನ ನಂಬಿಕೆಗೂ ನೀನು ಅರ್ಹನಲ್ಲವೆಂದು ತೋರಿಸಿಕೊಂಡಿರುವಿ. ಅನೇಕ ಕಷ್ಟಗಳಲ್ಲಿ ಧರ್ಮವನ್ನು ಪರಿತ್ಯಾಗ ಮಾಡದೆ, ನೀನು ನಡೆದುಕೊಳ್ಳುವಂತೆ ನಾನು ಉಪದೇಶ ಮಾಡಿದೆನು. ನನ್ನ ಮೆಹನತ್ತೆಲ್ಲಾ ಬೂದಿಯಲ್ಲಿ ಮಾಡಿದ ಹೋಮದಂತಾಯಿತು. ಇಂದ್ರಿಯಗ್ರಾಮಗಳು ಅಪ್ರತಿಹತವಾದವುಗಳೆಂಬದಾಗಿಯೂ, ಅದರಿಂದ ಆಕರ್ಷಿಸಲ್ಪಡದೆ ಇರತಕ್ಕವನು ದೇವರಿಗೆ ಸಮಾನನಾಗುವನೆಂಬದಾಗಿಯೂ ನಾನು ಉಪದೇಶ ಮಾಡಿದಾಗಲೆಲ್ಲಾ ಇಂದ್ರಿಯಪರವಶನಾಗುವ ಸ್ಥಿತಿಯು ಬಂದರೆ, ದೇಹವನ್ನಾದರೂ ಬಿಡುವೆನು, ಇಂದ್ರಿಯಪರವಶನಾಗುವುದಿಲ್ಲವೆಂದು ನೀನು ವಿಜೃಂಭಿಸುತ್ತಿದ್ದೆ. ಆ ವಿಜೃಂಭಣೆಗಳೆಲ್ಲಾ ಈಗ ಏನಾದವು? ನಾನು ಹೇಗೆ ಕಳುಹಿಸಿದಾಗ್ಯೂ ನೀನು ಬರಲಿಲ್ಲ. ನಿನ್ನ ಯಶಸ್ಸನ್ನೂ, ಕೀರ್ತಿಯನ್ನೂ ಸುಟ್ಟು ಬೂದಿ ಮಾಡುವದರಲ್ಲ ಉದ್ಯುಕ್ತಳಾಗಿರುವ ಈ ದುರಾತ್ಮಳ ಸಂಭಾಷಣವೂ, ಇವಳ ಸಹವಾಸವೂ ನಿನಗೆ ಹಿತವಾಯಿತು. ನನ್ನ ಸಹವಾಸವೂ, ನನ್ನ ಹಿತೋಪದೇಶವೂ ನಿನಗೆ ಅಹಿತವಾಯಿತು. ನೀನು ಶುದ್ಧ ಅಯೋಗ್ಯನು. ಸತ್ಯವೂ, ಧರ್ಮವೂ, ಕರ್ತವ್ಯಜ್ಞಾನವೂ ನಿನ್ನನ್ನು ತಿರಸ್ಕರಿಸಿಬಿಟ್ಟವು.

ಮೋಹವು ನಿನ್ನನ್ನು ಆವರಿಸಿಕೊಂಡಿತು. ಭ್ರಷ್ಟರಿಗೆ ಯಾವ ಗತಿಯೋ ಆ ಗತಿಯು ನಿನಗೆ ಬರುವುದು. ಮಹಾತ್ಮರ ಉದರದಲ್ಲಿ ಪಿಶಾಚವು ಜನಿಸಿದಂತಾಯಿತು. ಅಮೇಧ್ಯದ ಬಳಿಯಲ್ಲಿ ಕೂರಬೇಡವೆಂದು ಹೇಳಿದರೆ, ಅದನ್ನೇ ತಿನ್ನುತ್ತೇನೆಂಬುವ ಸ್ಥಿತಿಗೆ ಬಂದಿರುವಿ. ಯೂಲಿಸಸ್ಸನ ವಂಶಕ್ಕೇ ಕಳಂಕನಾಗಿ ಪರಿಣಮಿಸಿರುವಿ. ಅವನ ಮಗನಾಗಿರುವುದಕ್ಕೂ, ನನ್ನ ಶಿಷ್ಯನಾಗಿರುವುದಕ್ಕೂ ನೀನು ಅರ್ಹನಲ್ಲವೆಂದು ಗೊತ್ತಾಯಿತು. ಸದ್ವಂಶಕ್ಕೆ ಕಳಂಕವನ್ನು ತರತಕ್ಕವರು ಪರಿಹರ್ತವ್ಯರು. ಸದ್ಗುರುವಿಗೆ ಕಳಂಕವನ್ನು ತರತಕ್ಕವರು ದಂಡ್ಯರು. ಪೆನಿಲೋಪಳಿಗೂ, ಯೂಲಿಸಸ್ಸಿಗೂ, ನನಗೂ ನೀನು ದ್ರೋಹವನ್ನು ಮಾಡಿದ್ದೀಯೆ. ಗುರುಹಿರಿಯರ ಮಾತನ್ನು ಉಲ್ಲಂಘಿಸಿದ್ದೀಯೆ. ಸತ್ಯವನ್ನೂ, ಧರ್ಮವನ್ನೂ ನಿರಾಕರಿಸಿದ್ದೀಯೆ. "ಜನನಿಯ ಮಾನವಾದರೂ ಹೋಗಲಿ, ಪ್ರಾಣವಾದರೂ ಹೋಗಲಿ. ದುರ್ವಿಷಯಾಸಕ್ತನಾಗಿ ಬದುಕುವುದೇ ಮೇಲೆಂದು ನೀನು ನಿಷ್ಕರ್ಷಿಸಿದ್ದೀಯೆ. ಇದು ನಿನಗೆ ಅತ್ಯಂತ ಅನುಚಿತವಾದ ವ್ಯಾಪಾರ. ಇದು ದೊಡ್ಡ ಅಪರಾಧ. ಮಾತಾಪಿತೃಗಳಿಗೂ, ಗುರುಗಳಿಗೂ ಅಪಯಶಸ್ಸನ್ನು ತರತಕ್ಕವರು ಮಹಾಪಾತಕಿಗಳು. ಅಂಥಾವರು ಮರಣದಂಡನೆಗೆ ಅರ್ಹರು. ನೀನು ಬದುಕಿರುವುದಕ್ಕೆ ಯೋಗ್ಯನಲ್ಲ. ನಿನ್ನನ್ನು ಸಂಹರಿಸುತ್ತೇನೆ. ಈ ಕಿನ್ನರಿಯರನ್ನೂ ಸಂಹರಿಸುತ್ತೇನೆ" ಎಂದು ಕತ್ತಿಯನ್ನು ಹಿರಿದು, ಪ್ರಳಯಕಾಲದ ರುದ್ರನಂತೆ ನಿಲ್ಲಲು, ಕೆಲಿಪ್ಸೋ ಮೊದಲಾದ ಕಿನ್ನರಿಯರೆಲ್ಲಾ ಭಯಭ್ರಾಂತರಾಗಿ ಓಡಿಹೋದರು.

ಟೆಲಿಮಾಕಸ್ಸನು ನಡುಗುತ್ತಾ, ಮೆಂಟರನ ಪಾದವನ್ನು ಗಟ್ಟಿಯಾಗಿ ಹಿಡಿದುಕೊಂಡು ಸರ್ವಾಪರಾಧವಾಯಿತು. ಮೋಹಪರವಶನಾಗಿ ಕೆಟ್ಟೆನು. ಯೂಲಿಸಸ್ಸನು ದೇಹವನ್ನು ಬಿಟ್ಟಿರುವನು. ಪೆನಿಲೋಪಳಿಗೆ ಮಾನರಕ್ಷಣೆಯು ಅಸಾಧ್ಯವಾದದ್ದರಿಂದ ದೇಹವನ್ನು ಬಿಟ್ಟಿರುವಳು. ದೇಶವು ಪರಾಧೀನವಾಗಿರುವುದು. ಈ ಕಿನ್ನರಿಯರ ಸಹವಾಸ ಸುಖದಲ್ಲಿ ಪರಾಙ್ಮುಖನಾಗಿ, ಮಾತಾಪಿತೃ ಸೇವೆಯನ್ನು ಮಾಡಬೇಕೆಂದು ಪ್ರಯತ್ನ ಮಾಡಿದರೂ, ಆ ಪ್ರಯತ್ನವು ವಿಫಲವಾಗುವುದು. ಶತ್ರುಗಳು ನನ್ನನ್ನು ಸಂಹರಿಸುವರು. ಇಂಥಾ ವಿಪತ್ತಿಗೆ ಒಳಗಾಗುವುದಕ್ಕಿಂತ, ಈ ದ್ವೀಪದಲ್ಲಿ ಈ ಕಿನ್ನರಿಯರ ಸಹವಾಸದಲ್ಲಿ ಇರುವುದು ಮೇಲು ಎಂಬ ಮನೋ

ಭಾವವು ಹುಟ್ಟಿತು. ಈ ಮನೋಭಾವವು ಉತ್ಕಟಾವಸ್ಥೆಗೆ ಬಂದದ್ದರಿಂದ, ನಿನ್ನಲ್ಲಿ ಅನಾದರಣೆ ಉಂಟಾಯಿತು. ಇದಕ್ಕೆ ಏನು ಕಾರಣವೋ? ನನಗೆ ತಿಳಿಯದು. ನನ್ನ ದುರದೃಷ್ಟವೇ ಕಾರಣವಾಗಿರಬಹುದು. ನಾನು ಬಹಳ ಪಾಪಿಷ್ಠನು ನನಗೆ ಬಂದ ವಿಪತ್ಪರಂಪರೆಗಳಲ್ಲೆಲ್ಲಾ ದೇವರು ಸಹಾಯ ಮಾಡಿದನು. ಮುಂದೆಯೂ ಸಹಾಯ ಮಾಡುವನೆಂಬದಾಗಿಯೂ, ಮಾತಾಪಿತೃಗಳ ವಿಷಯದಲ್ಲಿಯೂ, ನಿನ್ನ ವಿಷಯದಲ್ಲಿಯೂ ನಾನು ಹೇಗೆ ನಡೆದುಕೊಳ್ಳಬೇಕೋ ಆ ರೀತಿಯಲ್ಲಿ ನಡೆದುಕೊಳ್ಳುವುದು ನನ್ನ ಕರ್ತವ್ಯವೆಂಬದಾಗಿ ನನಗೆ ತೋರಲಿಲ್ಲ. ನನ್ನನ್ನು ಉದ್ಧರಿಸುವುದರಲ್ಲಿ ಬದ್ಧಾದರನಾದ ನಿನ್ನ ಆಜ್ಞೆಯನ್ನು ಉಲ್ಲಂಘಿಸಿದೆನು. ನನ್ನ ಬುದ್ಧಿಯು ದುರ್ವಿಷಯಗಳಲ್ಲಿ ಆಸಕ್ತವಾಯಿತು. ಮೋಹಪರವಶನಾದೆನು. ಕರ್ತವ್ಯತಾಮೂಢನಾದೆನು. ಮಹಾಪಾಪಿಯಾದೆನು. ಬದುಕಿರುವುದಕ್ಕೆ ನಾನು ಅರ್ಹನಲ್ಲ. ನನ್ನನ್ನು ಶೀಘ್ರದಲ್ಲಿಯೇ ಸಂಹರಿಸು. ನಮ್ಮ ತಂದೆತಾಯಿಗಳು ಇನ್ನೂ ಬದುಕಿದ್ದರೆ, ಅವರ ಮಾನವನ್ನೂ, ಪ್ರಾಣವನ್ನೂ ರಕ್ಷಿಸು. ದುರ್ವಿಷಯದಲ್ಲಿ ಆಸಕ್ತನಾದ ನನ್ನ ವಿಷಯದಲ್ಲಿ ಲೇಶವೂ ಕೃಪೆಯನ್ನು ತೋರಿಸಬೇಡ ಕರ್ತವ್ಯಗಳನ್ನು ಮರೆತು, ಸತ್ಯವನ್ನೂ, ಧರ್ಮವನ್ನೂ ಪರಿತ್ಯಾಗ ಮಾಡಿ, ತಮ್ಮನ್ನು ತಾವೇ ವಂಚಿಸಿಕೊಳ್ಳತಕ್ಕವರು ದಂಡ್ಯರು. ಈ ದಂಡನೆಯು ನಮ್ಮ ತಂದೆತಾಯಿಗಳಿಗೂ, ನಿನಗೂ ಹೇಗೆ ಕರ್ತವ್ಯವೋ? ಜಗದೀಶ್ವರನಿಗೂ ಹಾಗೆ ಅದು ಸಮ್ಮತವಾದದ್ದು. ದುಷ್ಟರಾದವರು ಮಕ್ಕಳಾದರೇನು ? ಶಿಷ್ಯರಾದರೇನು ? ಆಪ್ತರಾದರೇನು ? ಅವರು ನಿಗ್ರಹಕ್ಕೆ ಪಾತ್ರರು. ನಾನು ದೊಡ್ಡ ಅಪರಾಧವನ್ನು ಮಾಡಿದೆನು. ಸಾಯುವುದಕ್ಕೆ ಸಿದ್ಧನಾಗಿರುತ್ತೇನೆ. ನನ್ನಲ್ಲಿ ಕೃಪೆಯನ್ನು ತೋರಿಸಬೇಡ. ದೇವರ ಸ್ಮರಣೆಯನ್ನು ಮಾಡುತ್ತಾ ದೇಹವನ್ನು ಬಿಡುವುದಕ್ಕೆ ಸಿದ್ಧನಾಗಿರುತ್ತೇನೆ. ನಿರ್ದಾಕ್ಷಿಣ್ಯದಿಂದ ಸಂಹರಿಸು.

ಈ ರೀತಿಯಲ್ಲಿ ಟೆಲಿಮಾಕಸ್ಸನು ವಿಜ್ಞಾಪಿಸಿದನು ಇವನ ಅನುತಾಪ ವಾಕ್ಯಗಳು ಪ್ರಳಯ ಕಾಲದ ವರ್ಷದಂತೆ ಮೆಂಟರನ ಕೋಪಾಗ್ನಿಯ ಶಮನಕ್ಕೆ ಸಾಧಕವಾಯಿತು. ಮೆಂಟರಿಗೆ ಅವನಲ್ಲಿ ದಯೆಯು ಹುಟ್ಟಿತು. ಇವನು ಮಾಡಿದ ಪಾಪಕ್ಕೆ ಇವನಿಗೆ ಉಂಟಾದ ಅನುತಾಪವೂ, ವ್ಯಸನವೂ ಪ್ರಾಯಶ್ಚಿತ್ತರೂಪವಾದದ್ದೆಂದು ಭಾವಿಸಲ್ಪಟ್ಟಿತು. ಕೋಪದಿಂದ ತಾನು ಆಡಿದ ಮಾತುಗಳು ವಜ್ರಾಯುಧದ ಏಟುಗಳಿಗಿಂತಲೂ ಹೆಚ್ಚಾದ ದಂಡನೆಯಾಗಿ ಪರಿಣಮಿಸಿತೆಂದು ಗೊತ್ತಾ

ಯಿತು. ದುರ್ವಿಷಯಗಳಲ್ಲಿ ಆಸಕ್ತವಾದ ಟಿಲಿಮಾಕಸ್ಸನ ಮನೋಭಾವವು ಸಂಹರಿಸಲ್ಪಟ್ಟಿತು. ಅವನಿಗೆ ನಿಸರ್ಗವಾದ ಸತ್ವಗುಣಪ್ರಧಾನವಾದ ಸ್ವಭಾವವು ಪುನಃ ಲಭ್ಯವಾಯಿತು. ದೌಷ್ಟ್ಯವು ಕೊಲ್ಲಲ್ಪಟ್ಟಿತು. ಶಸ್ತ್ರವನ್ನು ಉಪಯೋಗಿಸುವುದು ಅನಾವಶ್ಯಕವಾಯಿತು. ಇದನ್ನೆಲ್ಲಾ ನೋಡಿ, ಶಾಂತಚಿತ್ತನಾಗಿ, ಪ್ರಸನ್ನತೆಯಿಂದ ಮೆಂಟರನು ಟಿಲಿಮಾಕಸ್ಸನನ್ನು ಕುರಿತು ಹೇಳಿದ್ದೇನಂದರೆ:—

"ಶ್ರೇಯಸ್ಸಿಗೆ ಅನೇಕ ವಿಘ್ನಗಳು ಬರುವುವು. ಯೌವನವೂ, ಧನಸಂಪತ್ತಿಯೂ, ಪ್ರಭುತ್ವವೂ, ಅವಿವೇಕವೂ ಒಂದೊಂದು ಇದ್ದಾಗ್ಯೂ, ಎಷ್ಟೋ ಅನರ್ಥಗಳು ಉಂಟಾಗುವುವು ಎಂದು ಪ್ರಾಜ್ಞರು ಹೇಳುತ್ತಾರೆ. ಈ ನಾಲ್ಕೂ ಸೇರಿದ ಪಕ್ಷದಲ್ಲಿ, ಗತಿಯೇನು ಎಂಬದಾಗಿಯೂ ಕೇಳುವರು. ದೈವಯೋಗದಿಂದ ಈ ನಾಲ್ಕರಲ್ಲಿ ಯೌವನ ಒಂದು ಮಾತ್ರ ನಿನ್ನಲ್ಲಿ ಪರಿಪೂರ್ಣವಾಗಿರುವುದು. ಅವಿವೇಕವು ಆಗಾಗ್ಯೆ ನಿನಗೆ ಸಂಘಟನೆಯಾಗುವುದು. ಇದರಿಂದ ಕರ್ತವ್ಯತಾಮೌಢ್ಯವು ನಿನ್ನನ್ನು ಆವರಿಸುವುದು. ಕುರುಡನಂತೆಯೂ, ಅಜ್ಞಾನಿಯಂತೆಯೂ ನೀನು ನಡೆದುಕೊಳ್ಳುವಿ. ಏನೋ ಒಂದು ವಿಧವಾದ ಜನ್ಮಾಂತರ ಪುಣ್ಯಪರಿಪಾಕದಿಂದ ದೇವರು ನಿನ್ನಲ್ಲಿ ಪ್ರಸನ್ನನಾಗಿರುವನು. ಅದನ್ನು ತಿಳಿದುಕೊಳ್ಳುವ ಶಕ್ತಿಯು ನಿನಗಿರುವುದಿಲ್ಲ. ಆಗಾಗ್ಗೆ ಮೋಹಪರವಶನಾಗುತ್ತೀಯೆ ಉನ್ಮತ್ತಾವಸ್ಥೆಗೆ ಗುರಿಯಾಗುತ್ತೀಯೆ. ತಂದೆಯು ಸತ್ತಿರಬಹುದೆಂದು ಭಾವಿಸುತ್ತೀಯೆ. ತಾಯಿಯೂ ದೇಹವನ್ನು ಬಿಟ್ಟಿರಬಹುದೆಂದು ಎಣಿಸುತ್ತೀಯೆ. ನಿನ್ನ ಕರ್ತವ್ಯವು ಪೂರೈಸಿತೆಂದು ತಿಳಿದುಕೊಳ್ಳುತ್ತೀಯೆ. ಈ ಕಿನ್ನರಿಯರ ಸಹವಾಸದಲ್ಲಿರುವುದು ಸ್ವರ್ಗಸುಖವೆಂದು ಭಾವಿಸುತ್ತೀಯೆ. ಈ ಭಾವನೆಯು ಸಾಧುವಾದದ್ದೆಂದು ತೋರಿಸುವುದಕ್ಕೆ ಚಿತ್ರವಿಚಿತ್ರವಾದ ಕಾರಣಗಳನ್ನು ಹೇಳುತ್ತೀಯೆ. ನಿಷಿದ್ಧವಾದ ಸುಖಾನುಭವದಲ್ಲಿ ಆಸಕ್ತನಾಗುತ್ತೀಯೆ. ನಿನಗೆ ನೀನೇ ಮೋಸವನ್ನು ಮಾಡಿಕೊಳ್ಳುತ್ತೀಯೆ. ನಿನಗೆ ಒಂದ ವಿಪತ್ತುಗಳನ್ನೆಲ್ಲಾ ದೇವರು ಪರಿಹರಿಸಿರುವನು. ಏತಕ್ಕೋಸ್ಕರ ಹೀಗೆ ಮಾಡಿದನೋ ಅದನ್ನು ನೀನು ಗೊತ್ತುಮಾಡಿಕೊಳ್ಳಲಿಲ್ಲ. ಸಿಸಲಿ, ಈಜಿಪ್ಟ್, ಟೈರ್ ಮೊದಲಾದ ಸ್ಥಳಗಳಲ್ಲಿ ನಿನಗೆ ಉಂಟಾದ ವಿಪತ್ತುಗಳು ಸಾಮಾನ್ಯವಾದವುಗಳೇ? ದೇವರ ಅನುಗ್ರಹದಿಂದ ಆ ವಿಪತ್ತುಗಳು ನಿನಗೆ ತಪ್ಪಲಿಲ್ಲವೇ? ಸದರಿ ವಿಪತ್ತುಗಳನ್ನು ದೇವರು ಏತಕ್ಕೆ ತಪ್ಪಿಸಿದನು? ಮುಂದೆ ಮಾಡತಕ್ಕ ಕೆಲಸಗಳೇನಿರುವುವೆಂದು

ಯೋಚಿಸುವುದು ನಿನಗೆ ಕರ್ತವ್ಯವಲ್ಲವೇ ? ಈ ವಿಷಯಗಳನ್ನು ಪರ್ಯಾಲೋಚಿಸದೆ, ಆಗಮ್ಯಾಗಮನಗಳಲ್ಲಿ ಆಸಕ್ತನಾಗಿ, ಇಹಪರಗಳನ್ನು ಕಳೆದುಕೊಂಡು, ಈ ಕಿನ್ನರಿಯರ ಬಲೆಗೆ ಬೀಳುವುದು ನಿನಗೆ ಯೋಗ್ಯವೇ ? ನಿನ್ನ ಬುದ್ಧಿಯು ಒಂದೊಂದು ನಿಮಿಷಕ್ಕೆ ಒಂದೊಂದು ವಿಧವಾಗುತ್ತದೆ. ಗೋಸುಂಬೆಯ ಅವಸ್ಥೆಯನ್ನು ನೀನು ಹೊಂದುತ್ತಲಿದೀಯೆ. ಕೆಲಿಪ್ಪಳ ಮಾತನ್ನು ಕೇಳಿದಾಗ, ತಂದೆತಾಯಿಗಳನ್ನೂ ಮರೆಯುತ್ತೀಯೆ. ಗುರುಹಿರಿಯರನ್ನೂ ಮರೆಯುತ್ತೀಯೆ. ದೇವರನ್ನೂ ಮರೆಯುತ್ತೀಯೆ. ನಾನು ಎದುರಿಗಿರುವಾಗ, ಯೂಲಿಸಸ್ಸನ ಮಗನಂತೆ ನಡೆಯುತ್ತೀಯೆ. ತಪ್ಪುಗಳನ್ನು ಒಪ್ಪಿಕೊಳ್ಳುತ್ತೀಯೆ. ಜಿತೇಂದ್ರಿಯನಂತೆ ಅಭಿನಯಿಸುತ್ತೀಯೆ. ವಿವೇಕಿಯಂತೆ ನಡೆಯುತ್ತೀಯೆ. ಸಾಮಾನ್ಯ ಜನಗಳು ಈ ರೀತಿಯಲ್ಲಿ ನಡೆಯುವುದು ಸಹಜ. ನೀನು ಸಾಮಾನ್ಯನೇ ? ನಿನ್ನ ತಂದೆತಾಯಿಗಳು ಸಾಮಾನ್ಯರೇ ? ನಿನಗೆ ಮಾಡಲ್ಪಟ್ಟ ಹಿತೋಪದೇಶಗಳು ಸಾಮಾನ್ಯವಾದವುಗಳೇ ? ಇವುಗಳೆಲ್ಲಾ ನಿನಗೆ ಅಧೀನವಾಗಿದ್ದಾಗ್ಯೂ, ಹೀಗೆ ಮೋಹಪರವಶನಾಗಿ, ತಿರ್ಯಗ್ಜಂತುವಿನ ಅವಸ್ಥೆಗೆ ನೀನು ಬರಬಹುದೇ ? ಮಹಾತ್ಮರಿಗೆ ಸತ್ಸಂಕಲ್ಪವು ಹುಟ್ಟುವುದು. ಅದರಂತೆ ನಡೆಯುವ ಶಕ್ತಿಯು ದೈವಯೋಗದಿಂದ ಕೋಟಿಯಲ್ಲಿ ಒಬ್ಬೊಬ್ಬರಿಗೆ ಬರುವುದು. ಬುದ್ಧಿಯನ್ನು ಕೆಡಿಸುವ ದುರ್ವಿಷಯಗಳು ಆವರಿಸಿಕೊಂಡಿದ್ದಾಗ್ಯೂ, ಅಂಥಾ ವಿಷಯಗಳಿಗೆ ಅವರ ದೃಷ್ಟಿಯು ಬೀಳುವುದಿಲ್ಲ. ಅವರು ಕೇವಲ ಅಂತರ್ಮುಖಿಗಳಾಗಿರುವರು. ನಿನಗೆ ಈ ಯೋಗ್ಯತೆಯು ಇರುವುದಿಲ್ಲ. ಈ ದ್ವೀಪವು ನಿನ್ನ ವಾಸಕ್ಕೆ ಯೋಗ್ಯವಾದದ್ದಲ್ಲ. ಈ ಕಿನ್ನರಿಯರ ಸಹವಾಸವು ನಿನಗೆ ತಕ್ಕದ್ದಲ್ಲ. ಇವರಿಂದ ಸುತ್ತುವರಿಯಲ್ಪಟ್ಟಿದ್ದಾಗ, ಸತ್ಸಂಕಲ್ಪಗಳೆಲ್ಲಾ ಉತ್ತರಕ್ರಿಯೆಗಳಾಗುವಂತೆ ನೀನು ಮಾಡಿಕೊಳ್ಳುತ್ತೀಯೆ. ನನ್ನಲ್ಲಿ ಗುರುಭಕ್ತಿ ಇದ್ದಾಗ್ಯೂ, ಇವರ ಮಹಿಮೆಯಿಂದ ಅದನ್ನೂ ದೂರಮಾಡುತ್ತೀಯೆ. ಈ ದ್ವೀಪವಾಸವೇ ನಿನ್ನ ಶ್ರೇಯಸ್ಸಿಗೆ ಪ್ರತಿಬಂಧಕವಾಗಿರುವುದು. ಇವರ ಸಹವಾಸವು ನಿನ್ನ ಇಹಪರಗಳನ್ನು ನಾಶಮಾಡುವುದಕ್ಕೆ ಸಾಧಕವಾಗಿರುವುದು. ಈ ದ್ವೀಪವನ್ನು ಬಿಡುವುದು ಶ್ರೇಯಸ್ಕರವಾದದ್ದು. ಒಂದು ನಿಮಿಷವೂ ಸಾವಕಾಶ ಮಾಡದೆ, ಈ ದ್ವೀಪವನ್ನು ಬಿಟ್ಟು ಹೋಗಬೇಕು. ಇದಕ್ಕೆ ನೀನು ಒಪ್ಪಿದರೆ ಸರಿ. ಹಾಗಿಲ್ಲದಿದ್ದರೆ ನೀನು ಬದುಕಿ ಪ್ರಯೋಜನವಿಲ್ಲ. ನಿನ್ನನ್ನೂ, ಈ ಕಿನ್ನರಿಯರನ್ನೂ ಸಂಹರಿಸುವುದೇ ನನಗೆ ಕರ್ತವ್ಯವಾಗು

ತ್ತದೆ. ಅವರ ಯೋಗಕ್ಷೇಮವು ನನಗೆ ಬೇಕಾಗಿಲ್ಲ. ನಿನ್ನನ್ನು ಸಂಹರಿಸಿದರೆ, ಅವರನ್ನು ಸಂಹರಿಸಿದಂತೆಯೇ ಆಗುವುದು. ಈ ದ್ವೀಪವನ್ನೂ, ಈ ಕಿನ್ನರಿಯರನ್ನೂ ಬಿಟ್ಟು ಹೋಗುವುದು ಉತ್ತಮ. ನೀನು ಈ ದ್ವೀಪವನ್ನು ಬಿಟ್ಟು ಹೊರಡುವುದಕ್ಕೆ ಸಿದ್ಧನಾದರೆ, ನಿನ್ನ ಅಪರಾಧಗಳನ್ನೆಲ್ಲಾ ಮನ್ನಿಸುವೆನು. ಹಾಗಿಲ್ಲದಿದ್ದರೆ, ನಿನ್ನನ್ನು ಸಂಹರಿಸಿ, ಹೊರಟು ಹೋಗುವೆನು. ಪೆನಿಲೋಪಳಿಗೂ, ಯೂಲಿಸಸ್ಸಿಗೂ ನಾನೇ ಸ್ವೀಕೃತ ಪುತ್ರನಾಗಿ, ಅವರಿಗೆ ಬಂದಿರತಕ್ಕ ಕಷ್ಟಗಳನ್ನು ತಪ್ಪಿಸುವೆನು. ನಿನ್ನ ಅಭಿಪ್ರಾಯವನ್ನು ತಿಳಿಸು '' ಎಂದು ಹೇಳಿದನು.

ಮೆಂಟರನ ಮಾತುಗಳು ಹೃದಯಶಲ್ಯಗಳಾಗಿ ಪರಿಣಮಿಸಿದವು. ವ್ಯಸನವೂ, ನಾಚಿಕೆಯೂ, ಭಯವೂ ಇವನನ್ನು ಜೀವಶ್ಶವವನ್ನಾಗಿ ಮಾಡಿದವು. ಅದುವರೆಗೆ ಅವನಿಗೆ ಸಂಭವಿಸಿದ ಕಷ್ಟಗಳನ್ನು ಮೆಂಟರನು ಹೇಗೆ ತಪ್ಪಿಸಿದನೋ ಅವೆಲ್ಲಾ ಒಂದಾಗುತ್ತಲೂ ಒಂದು ಟೆಲಿಮಾಕಸ್ಸನ ಸ್ಮೃತಿಪಥಕ್ಕೆ ಬಂದವು. ಆದಾಗ್ಯೂ, ಕೆಲಿಪ್ಸಳನ್ನು ಬಿಟ್ಟು ಹೋಗುವುದು ಇವನಿಗೆ ಕಷ್ಟವಾಯಿತು.

(ಅಂತರ್ಗತ) ಬಹಳ ಕಷ್ಟ ಕಾಲವು ಬಂದಿತು. ಇವನು ನನ್ನನ್ನು ಸಂಹರಿಸುವುದಕ್ಕೆ ಸಿದ್ಧವಾಗಿ ಇದಾನೆ. ಈ ದ್ವೀಪವನ್ನೂ ಬಿಡಬೇಕೆಂದು ಹೇಳುತ್ತಾನೆ. ಕೆಲಿಪ್ಸಳನ್ನು ಪರಿತ್ಯಾಗಮಾಡಬೇಕೆಂದು ಹೇಳುತ್ತಾನೆ. ಅವಳನ್ನೂ ಸಂಹರಿಸುವನೆಂದೂ ಹೇಳುತ್ತಾನೆ. ಇದೆಲ್ಲಾ ಇವನಿಗೆ ಸಾಧ್ಯವೇ ? ಇವನಿಗೆ ಪ್ರತಿಭಟಿಸಿದರೆ, ನಾನು ಗೆಲ್ಲಲಾರೆನೇ? ಇವನು ವೃದ್ಧನು. ನಾನು ಪ್ರಾಯಸ್ಥನು. ಇವನಿಗೆ ಯಾರ ಸಹಾಯವೂ ಇಲ್ಲ ನನಗೆ ಕೆಲಿಪ್ಸಳೇ ಮೊದಲಾದ ಎಲ್ಲಾ ಕಿನ್ನರಿಯರ ಸಹಾಯವೂ ಇರುವುದ . ಈತನ ಮಾತಿಗೆ ಒಪ್ಪುವುದಿಲ್ಲವೆಂದು ನಾನು ಏತಕ್ಕೆ ಹೇಳಕೂಡದು ? ಇವನು ನನ್ನನ್ನು ದಂಡಿಸುವುದಕ್ಕೆ ಪ್ರಯತ್ನ ಮಾಡಿದ್ದಕ್ಕೆ, ನಾನೂ ಅವನನ್ನು ಏತಕ್ಕೆ ಸಂಹರಿಸಕೂಡದು ? ನಮ್ಮ ತಂದೆತಾಯಿಗಳು ಬದುಕಿದ್ದರೆ, ಅವರ ಯೋಗಕ್ಷೇಮಚಿಂತೆಯನ್ನು ಅವರು ಮಾಡಿಕೊಳ್ಳಲಿ. ಅಪ್ರಾರ್ಥಿತವಾಗಿ ನನಗೆ ಲಭ್ಯವಾಗಿರುವ ಈ ಕೆಲಿಪ್ಸಳ ಸಹವಾಸ ಸುಖವನ್ನು ನಾನು ಏತಕ್ಕೆ ಕಳೆದುಕೊಳ್ಳಬೇಕು ? ಈ ರೀತಿಯಲ್ಲಿ ಪರ್ಯಾಲೋಚಿಸಿ,—

(ಪ್ರಕಾಶ) '' ಎಲೈ ಮೆಂಟರನೇ,—ನೀನು ಹೇಳಿದ್ದೆಲ್ಲಾ ನಿಜ. ನನ್ನ ತಂದೆತಾಯಿಗಳು ಬದುಕಿರುವುದಿಲ್ಲ. ಅವರು ದೇಹವನ್ನು ಬಿಟ್ಟಿರುವರು. ಇಥಾಕಾ

ದ್ವೀಪಕ್ಕಿಂತಲೂ ಈ ದ್ವೀಪವು ವಿಸ್ತಾರವಾಗಿಯೂ, ಸಂಪತ್ಸಮೃದ್ಧಿವುಳ್ಳದ್ದಾಗಿಯೂ ಇರುವುದು. ದೇವತಾ ಸ್ತ್ರೀಯರಾದ ಕೆಲಿಪ್ಸಳೇ ಮೊದಲಾದ ಕಿನ್ನರಿಯರು ಇಲ್ಲೇ ಇರಬೇಕೆಂದು ನನ್ನನ್ನು ಪ್ರಾರ್ಥಿಸುವರು. ಕೆಲಿಪ್ಸಳನ್ನು ಪರಿಗ್ರಹಿಸಿದರೆ, ಅವಳಂತೆ ನಾನೂ ಅಮರತ್ವನಾಗುತ್ತೇನೆ. ನೀನೂ ಈ ಕಿನ್ನರಿಯರಲ್ಲಿ ಯಾರನ್ನಾದರೂ ಒಬ್ಬರನ್ನು ಪರಿಗ್ರಹಿಸು. ಆಚಂದ್ರಾರ್ಕವಾದ ಸುಖವನ್ನು ಅನುಭವಿಸುತ್ತಾ, ನಾವು ಸುಖವಾಗಿ ಇರೋಣ'' ಎಂದು ಹೇಳಿದನು. ಅದಕ್ಕೆ ಮೆಂಟರನು ಹೇಳಿದ್ದೇನಂದರೆ:—

'' ಎಲೈ ದುರಾತ್ಮನೇ,—ನೀನು ಗೋಸುಂಬೆಯಂತೆ ನಡೆಯುತ್ತೀ ಎಂದು ನಾನು ಹೇಳಿದೆನು. ನಿನ್ನ ಮಾತುಗಳಿಂದ ಇದು ಸ್ಥಿರಪಡುತ್ತದೆ. ನೀನು ಜಘನ್ಯವಾದ ಮೋಹಕ್ಕೆ ಪರವಶನಾಗಿರುತ್ತೀಯೆ. ಕರ್ತವ್ಯತಾಜ್ಞಾನವನ್ನು ಕಳೆದುಕೊಂಡಿರುತ್ತೀಯೆ. ಜಗದೀಶ್ವರನ ಆಜ್ಞೆಯನ್ನು ಮೀರಿ ನಡೆಯುವುದಕ್ಕೆ ಸಿದ್ಧನಾಗಿರುತ್ತೀಯೆ. ಧರ್ಮದಲ್ಲಿ ಪರಾಙ್ಮುಖನಾಗಿರುತ್ತೀಯೆ. ಮಾತಾಪಿತೃಗಳಿಗೆ ದ್ರೋಹಿಯಾಗಿರುತ್ತೀಯೆ. ಗುರು ದ್ರೋಹಿಯಾಗಿರುತ್ತೀಯೆ. ಅಪಾತ್ರಳಾದ ಹೆಂಗಸಿನಲ್ಲಿ ಆಸಕ್ತನಾಗಿರುತ್ತೀಯೆ. ದೇವರ ಪ್ರಸನ್ನತೆಗೆ ಅನರ್ಹನಾಗಿರುತ್ತೀಯೆ. ದುರ್ವಿಷಯಗಳಿಗೆ ಅಧೀನನಾಗಿರುತ್ತೀಯೆ. ಅಪಕೀರ್ತಿಗೆ ಗುರಿಯಾಗಬೇಕೆಂದು ಪ್ರಯತ್ನ ಮಾಡುತ್ತೀಯೆ. ಆಚಂದ್ರಾರ್ಕವಾಗಿ ಸುಖಿಯಾಗಿರುವೆನೆಂಬದಾಗಿ ತಿಳಿದುಕೊಂಡಿರುತ್ತೀಯೆ ವಿಷಯಸುಖದಲ್ಲಿ ಮುಳುಗಿತೇಲುವುದು ಸುಖವೇ? ಸ್ವೈರಿಣಿಯರ ಖಾಸದಾರನಾಗಿರುವುದು ಸೌಖ್ಯವೇ? ಧರ್ಮವನ್ನು ಪರಿತ್ಯಾಗಮಾಡಿ, ಆಚಂದ್ರಾರ್ಕವಾಗಿ ಜಘನ್ಯವಾದ ವ್ಯಾಪಾರದಲ್ಲಿ ಮುಳುಗಿತೇಲುವ ಅಮರತ್ವವು ಅಪೇಕ್ಷಣೀಯವಾದದ್ದೇ ? ಪಾಪಿಷ್ಠವಾದ ಜೀವನವನ್ನು ಮಾಡುವುದರಲ್ಲಿ, ಕೋಟ್ಯಂತರ ವರ್ಷಗಳು ಬದುಕುವುದಕ್ಕಿಂತ ಸತ್ಯದಿಂದಲೂ, ಧರ್ಮದಿಂದಲೂ ಒಂದು ನಿಮಿಷ ಬದುಕುವುದೂ ಕೂಡ ಉತ್ತಮವಲ್ಲವೇ ? ಪ್ರಾಯಸ್ಥನಾದಮಾತ್ರದಿಂದಲೇ ಗುರುವಧೆಯನ್ನು ಮಾಡಿ, ಈ ಪಿಶಾಚಗಳ ಜೊತೆಯಲ್ಲಿ ಆಚಂದ್ರಾರ್ಕವಾಗಿ, ಅಗಮ್ಯಾಗಮನ ಸುಖದಲ್ಲಿ ಬದುಕುವುದು ಸಾಧ್ಯವೇ ? ವೃದ್ಧನಾದ ಮಾತ್ರದಿಂದಲೇ ಮೆಂಟರನು ನಿನ್ನಿಂದ ಹತನಾಗುವನೇ ? ಅಜಿತೇಂದ್ರಿಯನಾದ ನಿನ್ನಂಥ ಪಶುವನ್ನು ನಿಗ್ರಹಿಸುವುದು ಜಿತೇಂದ್ರಿಯನಾದ ಮೆಂಟರಿಗೆ ಅಸಾಧ್ಯವೇ ? ನೀನು ಶುದ್ಧ ದುರಾತ್ಮನು. ನೀನು ರಕ್ಷಣೆಗೆ ಅರ್ಹನಲ್ಲ.'' ಈ ರೀತಿಯಲ್ಲಿ

ಹೇಳಿ, ಮೆಂಟರನು ತನ್ನ ತೇಜೋಮಯವಾದ ಶರೀರವನ್ನು ಧರಿಸಿ, ಭೂನಭೋಂತರಾಳ ಗಳೆಲ್ಲಾ ತನ್ನ ತೇಜಸ್ಸಿನಿಂದ ವ್ಯಾಪ್ತವಾಗುವಂತೆ ಮಾಡಿ, ಕತ್ತಿಯನ್ನು ಒರೆಯಿಂದ ತೆಗೆದನು.

ಆಗ ಟೆಲಿಮಾಕಸ್ಸನಿಗೆ ಇವನು ಮನುಷ್ಯನಲ್ಲ. ಇವನು ದೇವರೇ ಸರಿ. ನನ್ನ ಮನಸ್ಸಿನಲ್ಲಿ ಇದ್ದ ವಿಷಯಗಳನ್ನು ಇವನು ತಿಳಿದುಕೊಂಡಿರುವುದಕ್ಕೆ ಇದೇ ಸಾಕ್ಷಿ. ಇನ್ನು ಗತಿ ಏನು ! ನನ್ನ ಮನೋಭಾವವೆಲ್ಲಾ ಇವನಿಗೆ ಗೊತ್ತಾಯಿತು. ನನ್ನ ದೌಷ್ಟ್ಯವು ಇವನಿಗೆ ತಿಳಿಯಿತು. ಇನ್ನೇನು ಗತಿ ! ಎಂದುಕೊಂಡನು. ಅಸಾಧಾರಣವಾದ ಮನೋವ್ಯಥೆಯು ಇವನಿಗೆ ಉಂಟಾಯಿತು. ಕತ್ತಿಯಿಂದ ಹೊಡೆಯಲ್ಪಟ್ಟಂತೆ ಟೆಲಿಮಾಕಸ್ಸನು ಭೂಮಿಗೆ ಬಿದ್ದನು. ಪ್ರಜ್ಞೆಯು ಅವನಿಗೆ ತಪ್ಪಿತು.

ಇದನ್ನು ಏಕಾಂತವಾಗಿ ನೋಡುತ್ತಾ, ಟೆಲಿಮಾಕಸ್ಸನಿಗೆ ಪುಷ್ಪಬಾಣ ಪ್ರಯೋಗವನ್ನು ಮಾಡುತ್ತಿದ್ದ ಮನ್ಮಥನು ತನ್ನ ಪಿತಾಮಹನಿಗೆ ಈಶ್ವರನಿಂದ ಉಂಟಾದ ಅವಸ್ಥೆಯು ಎಲ್ಲಿ ಬರುವುದೋ ಎಂದು ಆ ದ್ವೀಪವನ್ನು ಬಿಟ್ಟು, ಓಡಿ ಹೋದನು. ಕೆಲಿಪ್ಸಳೇ ಮೊದಲಾದವರು ಅವನ ಭಯಂಕರವಾದ ರೂಪನ್ನು ನೋಡಿದ ಕೂಡಲೇ, ಮೂರ್ಛಿತರಾಗಿ ನೆಲಕ್ಕೆ ಬಿದ್ದರು.

ಮೆಂಟರನು ಇದೇ ಸಮಯವೆಂದು ಭಾವಿಸಿ, ಮೂರ್ಛಿತನಾಗಿರುವ ಟೆಲಿಮಾಕಸ್ಸನನ್ನು ಎತ್ತಿಕೊಂಡು ಹೋಗಿ, ಸದರಿ ದ್ವೀಪದ ತೀರದಲ್ಲಿದ್ದ ಒಂದು ದೋಣಿಗೆ ಹಾಕಿ, ಸದರಿ ದೋಣಿಯನ್ನು ನಡೆಸಿಕೊಂಡು ಹೊರಟು ಹೋದನು.

ಸ್ವಲ್ಪ ಹೊತ್ತಾದ ಮೇಲೆ, ಮೆಂಟರನ ವಿಶ್ವರೂಪವನ್ನು ನೋಡಿ, ಮೂರ್ಛೆಯನ್ನು ಹೊಂದಿದ್ದ ಕಿನ್ನರಿಯರಿಗೆ ಪ್ರಜ್ಞೆಯು ಬಂದಿತು. ಟೆಲಿಮಾಕಸ್ಸನನ್ನೂ, ಮೆಂಟರನನ್ನೂ ಅವರು ಹುಡುಕಿದರು. ಅವರು ಅಲ್ಲಿ ಇರಲಿಲ್ಲ. ಮೆಂಟರನು ತನ್ನ ಮಹಾಮಹಿಮೆಯಿಂದ ಟೆಲಿಮಾಕಸ್ಸನನ್ನು ಬಲಾತ್ಕಾರದಿಂದ ತೆಗೆದುಕೊಂಡು ಹೋಗಿರಬಹುದೆಂದು ನಿಷ್ಕರ್ಷೆ ಮಾಡಿಕೊಂಡರು. ಇದರಿಂದ ಕೆಲಿಪ್ಸಳು ವ್ಯಸನ ಪಡಲಿಲ್ಲ. ಕೇವಲ ಸಂತೋಷಭರಿತಳಾದಳು ಇದಕ್ಕೆ ಕಾರಣವಿತ್ತು. ಇವಳ ದಾಸಿಯರಲ್ಲಿ ಯೂಕರಿಸ್ ಎಂಬ ಕಿನ್ನರಿಯು ಇದ್ದಳು. ಅವಳು ಮಹಾರೂಪವತಿಯಾಗಿದ್ದಳು. ಸಕಲ ವಿದ್ಯಾವಿಶಾರದೆಯಾಗಿದ್ದಳು. ಇವುಗಳ ಜೊತೆಗೆ ವಿನಿಯಾದಿ ಸದ್ಗುಣಗಳೂ ಅವಳಲ್ಲಿ ಮೂರ್ತೀಭವಿಸಿದ್ದವು. ಪ್ರಭುತ್ವ ಮಾಡತಕ್ಕವರಲ್ಲ

ಇರತಕ್ಕ ಅಹಂಕಾರವೂ, ತಿರಸ್ಕಾರ ಬುದ್ಧಿಯೂ ಅವಳಲ್ಲಿ ಇರಲಿಲ್ಲ. ಟೆಲಿಮಾಕಸ್ಸನು ಅವಳಲ್ಲಿ ಅನುರಕ್ತನಾದನು. ಅಥವಾ ಯೂಕರಿಸ್ಸಳ ಅಸಾಧಾರಣವಾದ ಗುಣಾತಿಶಯಗಳು ಅವನ ಪ್ರೀತಿಗೆ ಪಾತ್ರಗಳಾದವು ಪ್ರೀತಿಯಿಂದ ಪ್ರೀತಿಯು ಹುಟ್ಟುವುದು. ವೃದ್ಧಿಯನ್ನೂ ಹೊಂದುವುದು. ಇದನ್ನು ಕೆಲಿಪ್ಸಳು ನೋಡಿದಳು.

ಶಿಕಾರಿಗೆ ಹೋಗುವ ನೆಪದಿಂದ ಟೆಲಿಮಾಕಸ್ಸೂ, ಯೂಕರಿಸ್ಸೂ ಆ ದ್ವೀಪದ ಕಾಡುಗಳಿಗೆ ಹೊರಟು ಹೋಗುತ್ತಿದ್ದರು. ಇದನ್ನು ನೋಡಿ, ಕೆಲಿಪ್ಸಳು ಯೂಕರಿಸ್ಸಳಲ್ಲಿ ಬಹಳ ಆಗ್ರಹವನ್ನು ಮಾಡುತ್ತಿದ್ದಳು. ಈ ಹೊಟ್ಟೇಕಿಚ್ಚನ್ನೂ, ಆಗ್ರಹವನ್ನೂ ನೋಡಿ, ತನ್ನ ಪ್ರಯತ್ನವಿಲ್ಲದೇಲೆ, ಟೆಲಿಮಾಕಸ್ಸನು ಕೆಲಿಪ್ಸಳಿಂದ ಗಡೀಪಾರು ಮಾಡುವ ಸನ್ನಿವೇಶವು ಬರಬಹುದೆಂದು ಮೆಂಟರನು ತಿಳಿದುಕೊಂಡಿದ್ದನು. ಆದರೆ, ಕೆಲಿಪ್ಸಳು ಯೂಕರಿಸ್ಸಳನ್ನು ಶಿಕ್ಷಿಸಿ, ಅಥವಾ ಸಂಹರಿಸಿ, ತನ್ನ ಇಷ್ಟಾರ್ಥಕ್ಕೆ ಪ್ರತಿಬಂಧಕವಾಗದಂತೆ ಮಾಡಿಕೊಳ್ಳಬೇಕೆಂದು ಉದ್ದೇಶ ಮಾಡಿಕೊಂಡಿದ್ದಳು. ಟೆಲಿಮಾಕಸ್ಸನೂ, ಮೆಂಟರೂ ಇಬ್ಬರೂ ಹೊರಟು ಹೋದರೆಂದು ಗೊತ್ತಾದ ಕೂಡಲೇ, ಕೆಲಿಪ್ಸಳಿಗೆ ಉಂಟಾದ ವ್ಯಸನಕ್ಕಿಂತಲೂ ಯೂಕರಿಸ್ಸಳಿಗೆ ಹೆಚ್ಚಾಗಿ ವ್ಯಸನ ಉಂಟಾಯಿತು. ಈ ವ್ಯಸನದ ಜೊತೆಗೆ ಕೆಲಿಪ್ಸಳ ಅಪ್ರಸನ್ನತೆಯೂ ಉಂಟಾಯಿತು. ಈ ಎರಡು ದುಃಖಗಳನ್ನೂ ಅನುಭವಿಸುವುದು ಬಹಳ ಕಷ್ಟವೆಂಬದಾಗಿಯೂ, ಈ ಕಷ್ಟವನ್ನು ಅನುಭವಿಸುವುದಕ್ಕಿಂತ ಸಾಯುವುದು ಮೇಲೆಂದಾಗಿಯೂ ಅವಳು ಭಾವಿಸಿದ್ದಳು. ಟೆಲಿಮಾಕಸ್ಸನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಕೆಲಿಪ್ಸಳೂ, ಯೂಕರಿಸ್ಸಳೂ ಪ್ರಯತ್ನ ಮಾಡುತ್ತಿದ್ದಾಗ, ಮೆಂಟರನು ಈ ದ್ವೀಪದಿಂದ ಹೊರಟು ಹೋಗುವುದಕ್ಕೆ ಸಾಧಕವಾದ ಒಂದು ದೋಣಿಯನ್ನು ಕಟ್ಟುತ್ತಿದ್ದನು. ಅದನ್ನು ಪತ್ತೆಮಾಡಿ, ಕೆಲಿಪ್ಸಳು ಸುಡಿಸಿಬಿಟ್ಟಿದ್ದಳು. ಯೂಕರಿಸ್ಸಳು ಟೆಲಿಮಾಕಸ್ಸನನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿ, ಸದರಿ ಪ್ರಯತ್ನವು ಸಫಲವಾಗುವುದೆಂದು ತೋರಿದ ಕೂಡಲೇ, ಟೆಲಿಮಾಕಸ್ಸಿನಲ್ಲಿ ಕೆಲಿಪ್ಸಳಿಗೆ ಸ್ವಲ್ಪ ಅಪ್ರೀತಿಯು ಹುಟ್ಟಿತು. ಈ ಅಪ್ರೀತಿಯಿಂದ ಟೆಲಿಮಾಕಸ್ಸನನ್ನು ರಕ್ಷಿಸುವುದಕ್ಕೆ ಮೆಂಟರು ಮಾಡುತ್ತಿದ್ದ ಪ್ರಯತ್ನಗಳ ವಿಷಯದಲ್ಲಿ ಉದಾಸೀನಳಾದಳು. ಮೆಂಟರನನ್ನು ಕಂಡಾಗಲೆಲ್ಲಾ ಟೆಲಿಮಾಕಸ್ಸನಿಗೂ, ಯೂಕರಿಸ್ಸಳಿಗೂ ಪರಸ್ಪರ ಪ್ರೀತಿಯು ಹೇಗೆ ಹೆಚ್ಚುತ್ತಲಿರುವುದೋ, ಅದನ್ನು ತಪ್ಪಿಸುವುದಕ್ಕೆ ಹೇಗೆ ಪ್ರಯತ್ನ ಮಾಡಲ್ಪಡಬೇಕೋ? ಅದನ್ನು

ಮೆಂಟರಿಗೆ ಸೂಚಿಸುತ್ತಲೂ ಇದ್ದಳು. ಇವರಿಬ್ಬರ ಮೋಹಪಾಶದಿಂದಲೂ ಟೆಲಿಮಾಕಸ್ಸನನ್ನು ರಕ್ಷಿಸಬೇಕೆಂಬ ಸಂಕಲ್ಪವನ್ನು ಮೆಂಟರು ಮಾಡುತ್ತಿದ್ದನು. ಕೊನೆಗೆ ಮೇಲೆ ಹೇಳಿದ ರೀತಿಯಲ್ಲಿ ಅವನನ್ನು ರಕ್ಷಿಸಿದನು. ಸದರಿ ದೋಣಿಯಲ್ಲಿ ಮೂರ್ಖತನದ ಟೆಲಿಮಾಕಸ್ಸನ್ನು ಹಾಕಿಕೊಂಡು, ಹೋಗುತ್ತಿದ್ದಾಗ, ಒಂದು ಬಿರುಗಾಳಿಯು ಬಂದಿತು. ಅಷ್ಟು ಹೊತ್ತಿಗೆ ಸರಿಯಾಗಿ ಟೆಲಿಮಾಕಸ್ಸನಿಗೆ ಪ್ರಜ್ಞೆಯು ಉಂಟಾಯಿತು. ಸ್ವಲ್ಪದೂರ ದೋಣಿಯು ಹೋಗಿ, ಸದರಿ ದೋಣಿಯು ಒಂದು ಬಂಡೆಗೆ ತಗಲಿ, ಚೂರುಚೂರಾಯಿತು. ಟೆಲಿಮಾಕಸ್ಸನು ನೀರಿನಲ್ಲಿ ಮುಳುಗಿ ಒದ್ದಾಡುತ್ತಿರುವಾಗ, ಆ ದೋಣಿಯ ಹಲಿಗೆಗಳಲ್ಲಿ ಒಂದು ಸಿಕ್ಕಿತು. ಮೆಂಟರನು ಸದರಿ ಹಲಿಗೆಯನ್ನು ಭದ್ರವಾಗಿ ಹಿಡಿದುಕೊಳ್ಳುವಂತೆ ಆತನಿಗೆ ಆಜ್ಞೆಯನ್ನು ಮಾಡಿ, ತಾನೂ ಈಜುತ್ತಾ ಅವನ ರಕ್ಷಣೋಪಾಯದಲ್ಲಿ ಉದ್ಯುಕ್ತನಾಗಿದ್ದನು. ದೈವಯೋಗದಿಂದ ಒಂದು ಹಡಗು ಅಲ್ಲಿಗೆ ಬಂದಿತು. ಈ ನೀರಿನಲ್ಲಿ ಒದ್ದಾಡತಕ್ಕ ಮೆಂಟರನನ್ನೂ, ಟೆಲಿಮಾಕಸ್ಸನನ್ನೂ ಆ ಹಡಗಿನ ನಾವಿಕರು ರಕ್ಷಿಸಿದರು. ಅವರಿಗೆ ಒಣಗಿದ ಉಡಿಗೆಗಳನ್ನು ಕೊಟ್ಟು, ವಿಶ್ರಮಿಸಿಕೊಳ್ಳುವುದಕ್ಕೆ ಅವಕಾಶವು ಮಾಡಲ್ಪಟ್ಟಿತು. ಅವರು ವಿಶ್ರಮಿಸಿಕೊಂಡ ನಂತರ, ಆ ಹಡಗಿನ ಯಜಮಾನನಾದ ಅಡೋಮನು ಹೀಗೆ ರಕ್ಷಿಸಲ್ಪಟ್ಟವರನ್ನು ಕರೆದುಕೊಂಡು ಬರಬೇಕೆಂದು ಆಜ್ಞೆ ಮಾಡಿದನು. ಅವನ ದೂತರು ಬಂದು, ಈ ವಿಷಯವನ್ನು ತಿಳಿಸಿದರು. ಇವರಿಬ್ಬರೂ ಅವನ ಬಳಿಗೆ ಹೋದರು. ಇವರನ್ನು ನೋಡಿದ ಕೂಡಲೇ, ಅಡೋಮನು ಅತ್ಯಂತ ಸಂತುಷ್ಟನಾಗಿ, ಇವರನ್ನು ಆಲಿಂಗಿಸಿಕೊಂಡು, ಈ ಕಷ್ಟವು ಅವರಿಗೆ ಬರುವುದಕ್ಕೆ ಕಾರಣವನ್ನು ಕೇಳಿದನು. ಈ ಅಡೋಮನು ನಾರ್ಬಲ್‌ನ ಸಹೋದರನು. ಮೆಂಟರು ಮತ್ತು ಟೆಲಿಮಾಕಸ್ಸರ ಮಹಿಮೆಯನ್ನೆಲ್ಲಾ ತನ್ನ ಸಹೋದರನಾದ ನಾರ್ಬಲ್‌ನಿಂದ ತಿಳಿದುಕೊಂಡಿದ್ದನು. ಈಜಿಪ್ಟ ದೇಶದಲ್ಲಿ ಇವರನ್ನು ನೋಡಿಯೂ ಇದ್ದನು. ಇಂಥಾ ಕಷ್ಟದೆಸೆಯಿಂದ ಇವರನ್ನು ರಕ್ಷಿಸುವ ಸಂಭವವು ಉಂಟಾದ್ದಕ್ಕೋಸ್ಕರ ಬಹಳ ಸಂತೋಷಪಟ್ಟು, ಇವರ ವೃತ್ತಾಂತವನ್ನು ಕೇಳಿದನು. ಮೆಂಟರನು ಅವನನ್ನು ಕುರಿತು ಶೃತಪಡಿಸಿದ್ದೇನೆಂದರೆ —

" ಎಲ್ಫೈ ಅಡೋಮನೇ,—ನಾವು ಕ್ರೀಟ್ ದ್ವೀಪದಿಂದ ಹೊರಟು, ಇಥಾಕಾ ದ್ವೀಪಕ್ಕೆ ಹೋಗಬೇಕೆಂದು ಪ್ರಯಾಣ ಮಾಡಿ, ಅನೇಕ ವಿಧವಾದ ವಿಪತ್ತಿಗೆ ಗುರಿಯಾದೆವು. ಕೆಲಿಪ್ಸೋ ಎಂಬ ಕಿನ್ನರಿಯ ದ್ವೀಪ ಸಮೀಪದಲ್ಲಿ ನಮ್ಮ ಹಡಗು ಮುಳುಗಿಹೋಯಿತು. ಹಡಗಿನಲ್ಲಿದ್ದವರೆಲ್ಲರೂ ಸತ್ತರು. ದೈವಯೋಗದಿಂದ ನಾವಿಬ್ಬರು ಮಾತ್ರ ಬದುಕಿಕೊಂಡೆವು. ಬಹಳ ಶ್ರಮಪಟ್ಟು ಈ ದ್ವೀಪದ ತೀರಕ್ಕೆ ಬಂದೆವು. ಕೆಲಿಪ್ಸಳೇ ಮೊದಲಾದ ಕಿನ್ನರಿಯರು ನಮ್ಮನ್ನು ಬಹಳ ಆದರದಿಂದ ಕಂಡರು. ಕೆಲಿಪ್ಸಳು ನಮ್ಮ ವೃತ್ತಾಂತವನ್ನು ಕೇಳಿದಳು. ಟೆಲಿಮಾಕಸ್ಸನು ನಮಗೆ ಬಂದ ವಿಪತ್ತುಗಳನ್ನೂ, ದೈವಯೋಗದಿಂದ ನಾವು ಹೇಗೆ ಆ ವಿಪತ್ತುಗಳನ್ನು ಜಯಿಸಿದೆವೋ ಅದರ ವೃತ್ತಾಂತವನ್ನೆಲ್ಲಾ ಶೃತಪಡಿಸಿದನು. ಅವಳು ಇವನಲ್ಲಿ ಅನುರಕ್ತಳಾದಳು. ನಾನಾವಿಧವಾದ ಇಂದ್ರಜಾಲ, ಮಹೇಂದ್ರಜಾಲ ವಿದ್ಯೆಗಳಿಂದಲೂ, ಅಪ್ರತಿಹತವಾದ ಮೋಹಪಾಶದಿಂದಲೂ ಇವನನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದಳು. ಅದಕ್ಕೆ ಅವಕಾಶವು ನಾನು ಕೊಡಲಿಲ್ಲ. ನನ್ನನ್ನೂ ತನ್ನ ಪಾಶಕ್ಕೆ ಹಾಕಿಕೊಳ್ಳಬೇಕೆಂದು ಪ್ರಯತ್ನ ಮಾಡಿದಳು. ಅದು ಸಾಗಲಿಲ್ಲ ತನ್ನ ಕಿನ್ನರಿಯರಲ್ಲಿ ಅನೇಕರನ್ನು ಬಿಟ್ಟು, ನನ್ನನ್ನು ಮರುಳು ಮಾಡುವ ಪ್ರಯತ್ನವನ್ನು ಮಾಡಿದಳು. ಆ ಪ್ರಯತ್ನಗಳೆಲ್ಲಾ ನಿಷ್ಫಲವಾದವು ಮನ್ಮಥನ ಸಹಾಯವನ್ನು ಪಡೆದು, ಅವನಿಂದ ದುರ್ವಿಷಯಗಳಿಗೆ ಬೀಳುವಂತೆ ಪುಷ್ಪಬಾಣಪ್ರಯೋಗವನ್ನು ಮಾಡಿಸಿದಳು. ಆ ಬಾಣಗಳು ನನ್ನಿಂದ ಹಿಂತಿರುಗಿದವು. ಟೆಲಿಮಾಕಸ್ಸನ ಮೇಲೆ ಹಾಕಲ್ಪಟ್ಟ ಬಾಣಗಳು ಫಲಕಾರಿಯಾದವು. ಈತನು ಅವರ ಮೋಹಪಾಶಕ್ಕೆ ಸಿಕ್ಕಿದನು. ಯೂಲಿಸಸ್ಸನು ಸ್ವರ್ಗಸ್ಥನಾದನೆಂಬದಾಗಿಯೂ, ಪೆನಿಲೋಪಳು ದೇಹವನ್ನು ಬಿಟ್ಟಳೆಂಬದಾಗಿಯೂ, ಇಥಾಕಾ ಪಟ್ಟಣಕ್ಕೆ ಹೋಗಿ ಮಾಡತಕ್ಕ ಕಾರ್ಯಗಳೇನೂ ಇರುವುದಿಲ್ಲವೆಂಬದಾಗಿಯೂ, ತಾನು ಅಮರ್ತ್ಯಳೆಂಬದಾಗಿಯೂ, ತನ್ನನ್ನು ವಿವಾಹ ಮಾಡಿಕೊಂಡರೆ, ಅವನಿಗೂ ಅಮರ್ತ್ಯತ್ವವು ಬರುವುದೆಂಬದಾಗಿಯೂ, ಆಜನ್ಮಪ್ರಾರ್ಕವಾಗಿ ವಿಷಯ ಸುಖಗಳನ್ನು ಅನುಭವಿಸುತ್ತಲಿರಬಹುದೆಂಬದಾಗಿಯೂ, ಇಥಾಕಾ ಪಟ್ಟಣದಲ್ಲಿ ಕ್ಷಣಭಂಗುರವಾದ ಮರ್ತ್ಯಸುಖವನ್ನು ಅನುಭವಿಸುವುದಕ್ಕಿಂತ ತನ್ನೊಡನೆ ನಿತ್ಯಸುಖವನ್ನು ಅನುಭವಿಸಿಕೊಂಡು, ಆ ದ್ವೀಪದ ಸಾಮ್ರಾಜ್ಯವನ್ನು ಅನುಭವಿಸುವುದು ಉತ್ತಮವೆಂಬದಾಗಿಯೂ, ಅವನಿಗೆ ಹೇಳಿ, ತನ್ನ ಮಾತಿನಲ್ಲಿ ನಂಬಿಕೆ

ಯನ್ನು ಹುಟ್ಟಿಸಿದಳು. ಅವಳು ಹೇಳಿದ ಮಾತುಗಳು ಸತ್ಯವಲ್ಲವೆಂಬದಾಗಿಯೂ, ಯೂಲಿಸಸ್ಸನೂ, ಪೆನಿಲೋಪಳೂ ಬದುಕಿರುವರೆಂಬದಾಗಿಯೂ, ಅವನ ಕರ್ತವ್ಯವು ಪೂರೈಸಲಿಲ್ಲವೆಂಬದಾಗಿಯೂ, ಇಂದ್ರಿಯಪರವಶನಾಗಿ, ಮಾತಾಪಿತೃಗಳ ಸೇವೆಯಲ್ಲಿ ಪರಾಙ್ಮುಖನಾಗುವುದು ತಪ್ಪೆಂಬದಾಗಿಯೂ ನಾನು ಎಷ್ಟೋ ಹೇಳಿದೆನು. ಇವೆಲ್ಲಾ ಪುರಾಣ ವೈರಾಗ್ಯವನ್ನು ಕಲ್ಪಿಸಿದವೇ ಹೊರತು, ಇವನ ಅನುಷ್ಠಾನಕ್ಕೆ ಬರಲಿಲ್ಲ. ಕೆಲಿಪ್ಸಳ ಮಾತಿನಲ್ಲಿ ಇವನಿಗೆ ಪಕ್ಷವು ಉಂಟಾಯಿತೇ ಹೊರತು, ನನ್ನ ಮಾತಿನಲ್ಲಿ ನಂಬಿಕೆಯು ಉಂಟಾಗಲಿಲ್ಲ. ನನ್ನ ಆಜ್ಞೆಗಳನ್ನು ಉಲ್ಲಂಘಿಸಿದನು. ಈ ಮೋಹ ಮಹಿಮೆಯಿಂದ ನನ್ನಲ್ಲಿದ್ದ ಪ್ರೀತಿಯೂ ಹೋಯಿತು. ಸರ್ವಪ್ರಯತ್ನದಿಂದಲೂ ನನ್ನನ್ನು ಸದರಿ ದ್ವೀಪದಿಂದ ಹೊರಡಿಸಿ, ತಾನು ಕೆಲಿಪ್ಸಳ ಸೇವಕನಾಗಿರಬೇಕೆಂದು ಇವನು ನಿಷ್ಕರ್ಷಿಸಿದನು. ದೈವಯೋಗದಿಂದ ಯೂಕರಿಸ್ ಎಂಬ ಕಿನ್ನರಿಯು ಇವನಲ್ಲಿ ಆಸಕ್ತಳಾದಳು. ಅವಳಲ್ಲಿ ಟೆಲಿಮಾಕಸ್ಸನು ಅನುರಕ್ತನಾದನು. ಇದರಿಂದ ಈ ಇಬ್ಬರು ಕಿನ್ನರಿಯರಿಗೂ ಪರಸ್ಪರ ದ್ವೇಷವು ಹುಟ್ಟಿತು. ಅವರಿಂದ ಇವನನ್ನು ರಕ್ಷಿಸುವುದಕ್ಕೆ ಈ ಪರಸ್ಪರ ದ್ವೇಷವು ಸ್ವಲ್ಪ ಸಹಾಯ ಮಾಡಿತು. ಇವನನ್ನು ಕರೆದುಕೊಂಡು ಹೋಗಬೇಕೆಂದು ಬಹಳ ಕಷ್ಟಪಟ್ಟು, ನಾನು ಒಂದು ಹಡಗನ್ನು ಕಟ್ಟಿದೆನು. ಆದಕ್ಕೆ ಈ ಕಿನ್ನರಿಯು ಬೆಂಕಿಯನ್ನು ಹಾಕಿಸಿದಳು. ಯೂಕರಿಸ್ಸಳಲ್ಲಿ ಟೆಲಿಮಾಕಸ್ಸನು ಅನುರಕ್ತನಾಗಿದ್ದದ್ದನ್ನು ನೋಡಿ, ಕೆಲಿಪ್ಸಳು ಟೆಲಿಮಾಕಸ್ಸನನ್ನು ಕರೆದುಕೊಂಡು ಹೋಗು ಎಂಬದಾಗಿ ನನಗೆ ಆಜ್ಞೆಯನ್ನು ಮಾಡಿ, ಏಕಾಂತವಾಗಿ ನನಗೆ ಒಂದು ದೋಣಿಯನ್ನೂ ಕೂಡ ಕೊಟ್ಟಳು. ಅನೇಕ ಹಿತೋಪದೇಶಗಳನ್ನು ಮಾಡಿ, ಟೆಲಿಮಾಕಸ್ಸನನ್ನು ಕರೆದುಕೊಂಡು ಹೋಗುವ ಪ್ರಯತ್ನವನ್ನು ಮಾಡಿದೆನು. ಅವನು ಹಕೋಟಿಗೆ ಬರಲಿಲ್ಲ. ಆಗ ನನಗೆ ಅಭೂತಪೂರ್ವವಾದ ಕೋಪವು ಬಂದಿತು. ಅವನನ್ನು ಸಂಹರಿಸುವುದೇ ಸರಿಯೆಂದು ರೌದ್ರಾವತಾರವನ್ನು ವಹಿಸಿದೆನು. ಬಹು ಕಾಲದಿಂದ ಇವನನ್ನು ಪುತ್ರನಿರ್ವಿಶೇಷವಾಗಿ ನೋಡುತ್ತಿದ್ದೆನು. ಅದ್ಭುತವಾದ ಕೋಪವನ್ನು ವಹಿಸಿ, ಇವನನ್ನು ಸಂಹರಿಸುವುದಕ್ಕೆ ಕತ್ತಿಯನ್ನು ಹಿರಿಯಲು, ಭಯಭ್ರಾಂತನಾಗಿ ಅವನು ಮೂರ್ಛೆಯಿಂದ ಕೆಳಗೆ ಬಿದ್ದನು. ಕಿನ್ನರಿಯರೆಲ್ಲರೂ ಮೂರ್ಛಿತರಾದರು. ತಕ್ಷಣದಲ್ಲಿಯೇ ಟೆಲಿಮಾಕಸ್ಸನನ್ನು ಎತ್ತಿಕೊಂಡು ಬಂದು, ಕೆಲಿಪ್ಸಳಿಂದ ಕೊಡಲ್ಪಟ್ಟಿದ್ದ ದೋಣಿಗೆ ಹಾಕಿ,

ಅದನ್ನು ನಡೆಸಿಕೊಂಡು. ಇಥಾಕ ದ್ವೀಪಕ್ಕೆ ಹೋಗಬೇಕೆಂದು ಪ್ರಯಾಣ ಮಾಡಿದೆನು. ಇವನಿಗೆ ಸ್ವಲ್ಪ ಪ್ರಜ್ಞೆಯು ಬರುವುದರೊಳಗಾಗಿ ಆ ದೋಣಿಯು ಒಂದು ಬಂಡೆಗೆ ತಗಲಿ ಛಿದ್ರವಾಯಿತು. ನೀರಿನಲ್ಲಿ ಒದ್ದಾಡುತ್ತಾ, ಪ್ರಾಣವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾ ಇದ್ದೆವು. ದೈವಯೋಗದಿಂದ ನಿನ್ನ ಹಡಗು ಬಂದಿತು. ನಿನ್ನ ನಾವಿಕರು ನಮ್ಮನ್ನು ರಕ್ಷಿಸಿದರು. ದೈವಯೋಗವು ಅದ್ಭುತವಾದದ್ದು. ಅಕಸ್ಮಾತ್ತಾಗಿ ವಿಪತ್ತುಗಳು ಬರುತ್ತವೆ. ಹಠಾತ್ತಾಗಿ ಅವುಗಳು ನಿವಾರಣೆಯಾಗುತ್ತವೆ. ಅನೇಕರ ಹಡಗಿನಲ್ಲಿ ಪ್ರಯಾಣ ಮಾಡುತ್ತೇವೆ. ವಿಪತ್ತುಗಳನ್ನು ತಪ್ಪಿಸಿಕೊಂಡು, ಕೆಲವರು ಬದುಕುತ್ತಾರೆ ಕೆಲವರು ಸಾಯುತ್ತಾರೆ. ಮೋಹಪಾಶಕ್ಕೆ ಅನೇಕರು ಅಧೀನರಾಗುತ್ತಾರೆ ಕೆಲವರು ರಕ್ಷಿಸಲ್ಪಡುತ್ತಾರೆ. ವಿದ್ವಾಂಸರೂ ಕೂಡ ಇಂದ್ರಿಯಗ್ರಾಮಗಳಿಗೆ ಅಧೀನರಾಗುವರು. ದೈವಯೋಗದಿಂದ ಈ ಪಾಶದಿಂದ ಕೆಲವರು ಮೋಕ್ಷವನ್ನು ಹೊಂದುವರು. ಈ ಟೆಲಿಮಾಕಸ್ಸನಿಗೆ ಹಡಗು ಮುಳುಗಿದ್ದರಿಂದ ಉಂಟಾದ ವಿಪತ್ತಿಗಿಂತಲೂ ಕೆಲಿಪ್ಸೋ ಮತ್ತು ಯೂಕರಿಸ್ಸಳ ಮೋಹಪಾಶದಿಂದ ಉಂಟಾದ ವಿಪತ್ತು ಬಹಳ ಭಯಂಕರವಾಗಿತ್ತು. ಈ ವಿಪತ್ತಿನಿಂದ ಇವನನ್ನು ತಪ್ಪಿಸುವುದು ಸಾಧ್ಯವೋ ಅಸಾಧ್ಯವೋ ಎಂಬ ಸಂದೇಹ ಉಂಟಾಗಿತ್ತು. ದೈವಯೋಗದಿಂದ ಸಾಧ್ಯವಾಯಿತು. ಹೀಗೆ ಸಾಧ್ಯವಾಗುವುದಕ್ಕೆ ಟೆಲಿಮಾಕಸ್ಸನ ಗುಣಾತಿಶಯಗಳು ಕಾರಣವಲ್ಲ. ನನ್ನ ಶಕ್ತಿಯೂ ಕಾರಣವಲ್ಲ. ಕೇವಲ ದುರಾತ್ಮರಾದ ಕೆಲವು ಜನ ಪ್ರಭುಗಳು ಮಹಾ ಪತಿವ್ರತೆಯಾದ ಪೆನಿಲೋಪಳ ಮಾನಭಂಗವನ್ನು ಮಾಡಬೇಕೆಂದು ಪ್ರಯತ್ನ ಪಡುತ್ತಲಿದ್ದಾರೆ. ಇವರ ದುಷ್ಟಕರ್ಮಗಳಿಗೆ ಅನುರೂಪವಾದ ಶಿಕ್ಷೆಯು ಇವರಿಗೆ ಆಗಬೇಕು. ಈ ಶಿಕ್ಷೆಯನ್ನು ಮಾಡುವುದಕ್ಕೆ ಯೂಲಿಸಸ್ಸನೂ, ಟೆಲಿಮಾಕಸ್ಸನೂ ಇಬ್ಬರೂ ಸೇರಬೇಕು. ಹಾಗೆ ಸೇರುವ ಸನ್ನಿವೇಶವು ಸನ್ನಿಹಿತವಾಯಿತು. ಇಂಥಾ ಕಷ್ಟಕಾಲದಲ್ಲಿ ನಮ್ಮನ್ನು ರಕ್ಷಿಸುವುದಕ್ಕೆ ಅಪ್ರಾರ್ಥಿತವಾಗಿ ನೀನು ಬಂದದ್ದೇ ಗುರುತಾಗಿರುವುದು.'' ಈ ರೀತಿಯಲ್ಲಿ ಮೆಂಟರನು ಹೇಳಿದನು.

ಇದನ್ನು ಟೆಲಿಮಾಕಸ್ಸನು ಕಣ್ಣೀರು ಬಿಡುತ್ತಾ ಕೇಳಿದನು. ಇವನು ಈ ವೃತ್ತಾಂತಗಳನ್ನು ಮುಗಿಸುವುದರೊಳಗಾಗಿ ಟೆಲಿಮಾಕಸ್ಸನು ನೂರಾರು ಸಿಡಿಲುಗಳಿಂದ ಹೊಡೆಯಲ್ಪಟ್ಟವನಂತೆ ಭೂಮಿಗೆ ಬಿದ್ದನು. ಅಡೋಮನೇ ಮೊದಲಾದವರು

ಮಾಡಿದ ಕೈಕೋಪಚಾರದಿಂದ ನನ್ನ [illegible] ಆಗ ಮಾಂಟರನು ಟೆಲಿಮಾಕಸ್ಸನನ್ನು ಕುರಿತು ಹೇಳಿದ್ದೇನೆಂದರೆ:—

"ಎಲೈ ಟೆಲಿಮಾಕಸ್ಸನೇ, ನಿನ್ನ ಅಪರಾಧದಿಂದ ನಿನಗೆ ಉಂಟಾಗಿರುವ ಸಂತಾಪವೇ ನಿನ್ನ ದೋಷವನ್ನು ಹೋಗಲಾಡಿಸುವುದು. ಅಡೋಮನು ನಡೆದ ವಿದ್ಯಮಾನಗಳನ್ನು ಕೇಳಿದನು. ಅವನು ನಮಗೆ ಪರಮ ಮಿತ್ರನು. ಅವನು ನಮ್ಮನ್ನು ರಕ್ಷಿಸಿರುವನು. ಅವನಿಂದ ಕೇಳಲ್ಪಟ್ಟ ಪ್ರಶ್ನೆಗೆ ಉತ್ತರವು ಕೊಡಬೇಕಾಯಿತು. ಉತ್ತರವನ್ನು ಕೊಡದಿದ್ದರೆ, ನಿನ್ನ ಮರ್ಯಾದೆಗೆ ಅವಮಾನವಾಗುವುದೆಂದು ತೋರಿತು. ಉತ್ತರವನ್ನು ಕೊಡದಿದ್ದರೆ, ಉಪಕಾರ ಮಾಡಿದ ಈ ಅಡೋಮನಿಗೆ ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಈ ಸಂಕಟವು ನನಗೆ ಉಂಟಾಯಿತು. ಎಷ್ಟು ಉಚಿತವೋ ಅಷ್ಟನ್ನು ಹೇಳಿದೆನು. ತಪಸಿಲ್ಲುವಾರಾಗಿ ಹೇಳಿ, ನಿನ್ನ ಮನಸ್ಸು ವಿಶೇಷವಾಗಿ ನೊಂದುವಂತೆ ಮಾಡಲಿಲ್ಲ. ಅಪರಾಧ ಮಾಡಿದವನಿಗೆ ಅದರ ಫಲವು ತಪ್ಪುವುದಿಲ್ಲ. ನಾನು ಸೂಕ್ಷ್ಮವಾಗಿ ಹೇಳಿದಾಗ್ಯೂ, ನನ್ನ ಮಾತುಗಳೆಲ್ಲಾ ನಿನಗೆ [illegible] ಬೋಧಿಸಿರುವುವು. ಪಾಪಕ್ಕೆ ಶಿಕ್ಷೆಯು ಆದರೆ, ಅದು ಪಾಪದ [illegible]. ನಿನಗೆ ಉಂಟಾಗಿರುವ ಮನಃಕ್ಲೇಶವೇ ನಿನ್ನ ಅಪರಾಧಕ್ಕೆ ತಕ್ಕ ದಂಡನೆಯಾದ ಶಿಕ್ಷೆ. ಇದು ಮಾನುಷ ಶಿಕ್ಷೆಯಲ್ಲ. ದೈವಿಕ ಶಿಕ್ಷೆಯೆಂದು ತಿಳಿದುಕೊ. ನಿನ್ನ ಪಾಪಗಳಿಗೆ ಇದೇ ಪ್ರಾಯಶ್ಚಿತ್ತವೆಂದು ತಿಳಿದುಕೊ. ಈ ಪ್ರಾಯಶ್ಚಿತ್ತದಿಂದ ನೀನು ಪವಿತ್ರನಾಗಿರುವಿ. ದುರ್ವಿಷಯಗಳಲ್ಲಿ ಸಂಕಲ್ಪಗಳನ್ನು ಮಾಡಿದರೆ, ದುರ್ವಿಷಯಾಸಕ್ತಿಯು ಉಂಟಾಗುವುದು. ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಒಂದೇ ಒಂದು ಮಾರ್ಗವಿರುವುದು. ಇಲ್ಲದಿದ್ದರೆ ಅಗಮ್ಯಾಗಮನಕ್ಕೆ ಉತ್ತೇಜನ ಉಂಟಾಗುವುದು. ಆ ಸ್ಥಳವನ್ನು ಬಿಟ್ಟು ಓಡಿಹೋಗುವುದೇ ಅಂಥಾ ವಿಷಯಾಸಕ್ತಿರೂಪವಾದ ರೋಗಕ್ಕೆ ಸಿದ್ಧೌಷಧ. ಈ ಚಿಕಿತ್ಸೆಯನ್ನು ಅನೇಕ ವೇಳೆ ನಾನು ನಿನಗೆ ತಿಳಿಸಿದೆನು. ಅದು ನಿನಗೆ ರುಚಿಸಲಿಲ್ಲ. ನೀನು ಮಾಡಬೇಕಾದ ಕೆಲಸವನ್ನು ನಿನಗೋಸ್ಕರ ನಾನು ಮಾಡಬೇಕಾಯಿತು. ದೈವಯೋಗದಿಂದ ನನ್ನ ಪ್ರಯತ್ನವು ಸಫಲವಾಯಿತು. ನಮಗೆ ಬಂದಿದ್ದ ವಿಪತ್ತು ಪರಿಹಾರವಾಯಿತು. ಸ್ವಪ್ನವನ್ನು ಬಿಡು. ವಿಶ್ವಾಮಿತ್ರ, ಪರಾಶರಾದಿಗಳೂ ಕೂಡ ಮೋಹಪರವಶರಾಗಿ, ಮಾಡಬಾರದ ಕೆಲಸಗಳನ್ನು ಮಾಡಿ, ದುಸ್ಸಹ

ವಾದ ಕ್ಲೇಶಗಳನ್ನು ಅನುಭವಿಸಿ, ಪರ್ಯಾವಸಾನದಲ್ಲಿ ತಮ್ಮ ತಪೋಮಹಿಮೆಯಿಂದ ಲೋಕೋತ್ತರವಾದ ಪದವಿಯನ್ನು ಹೊಂದಿದರು. 'ನಡೆಯುತಕ್ಕವರು ಎಡವುತ್ತಾರೆ' ಎಡವುತ್ತೇನೆಂಬ ಭಯದಿಂದ ನಡೆಯುವುದನ್ನೇ ಯಾರಾದರೂ ಬಿಡುವರೇ? ಹಾಗೆ ಬಿಡುವುದು ಯುಕ್ತವೇ? ಎಂದಿಗೂ ಯುಕ್ತವಲ್ಲ. ಈಗ ದೈವಯೋಗದಿಂದ ಎಲ್ಲಾ ವಿಪತ್ತುಗಳೂ ಪರಿಹಾರವಾದವು. ನಿಮ್ಮ ತಂದೆಯೊಡನೆ ಸೇರಿ, ನಿಮ್ಮ ತಾಯಿಗೆ ಮಾನಭಂಗ ಮಾಡುವುದರಲ್ಲಿ ಬದ್ಧಾದರರಾಗಿರುವ ಶತ್ರುಗಳನ್ನು ನಿಗ್ರಹಿಸುವ ಕಾಲವು ಬಂದಿದೆ. ಗತಗೋಷ್ಠಿಯನ್ನು ಕುರಿತು ವ್ಯಸನಪಡಬೇಡ. ಮುಂದಿನ ಉದ್ಯೋಗವನ್ನು ಪರ್ಯಾಲೋಚಿಸು. ದೇವರು ನಿನಗೆ ಮಂಗಳವನ್ನು ಮಾಡುವನು.'' ಅದಕ್ಕೆ ಟೆಲಿಮಾಕಸ್ಸನು ಹೇಳಿದ್ದೇನೆಂದರೆ:—

"ಎಲೈ ಮೆಂಟರನೇ,—ನಿನ್ನ ವಿಷಯದಲ್ಲಿ ನಾನು ಬಹಳ ಅಪರಾಧವನ್ನು ಮಾಡಿದೆನು. ಆದಾಗ್ಯೂ ನೀನು ನನ್ನಲ್ಲಿ ಸುಪ್ರೀತನಾಗಿರುತ್ತೀಯೆ. ಇದು ನನ್ನ ಪುಣ್ಯಪರಿಪಾಕದ ಫಲ. ಕೆಲಿಪ್ಸೋ ಮತ್ತು ಯೂಕರಿಸ್ಸಳ ಮೋಹಪಾಶಕ್ಕೆ ಬಿದ್ದು, ನಾನು ನಾಶವಾಗುವ ಸ್ಥಿತಿಗೆ ಬಂದಿದ್ದೆನು. ನಿನ್ನ ಹಿತೋಪದೇಶಗಳನ್ನು ಕೇಳಲಿಲ್ಲ. ನಿನ್ನಿಂದ ವಿಮುಕ್ತನಾಗಿ, ಈ ವಿಷಕನ್ನಿಕೆಯರೊಡನೆ ಬದುಕುವುದೇ ಶ್ರೇಯಸ್ಕರವಾದದ್ದೆಂದು ತಿಳಿದುಕೊಂಡಿದ್ದೆನು. ಇವರ ಸಾನ್ನಿಧ್ಯದಿಂದ ಓಡಿಹೋಗುವುದು ನನಗೆ ಅಸಾಧ್ಯವಾಯಿತು. ಅವರ ಸಹವಾಸದಲ್ಲಿರುವವರೆಗೂ ಅವರಲ್ಲಿ ಪ್ರೀತಿಯೂ, ನಿನ್ನಲ್ಲಿ ಅಪ್ರೀತಿಯೂ ನನಗೆ ಹುಟ್ಟಿತ್ತು. ನೀನು ಪ್ರಳಯಕಾಲದ ರುದ್ರನಂತೆ ಕೋಪವನ್ನು ವಹಿಸಿ, ನನ್ನನ್ನು ರಕ್ಷಿಸದಿದ್ದರೆ, ನನ್ನ ಗತಿಯು ಅಧೋಗತಿಯಾಗುತ್ತಿತ್ತು. ನೀನು ನನ್ನಲ್ಲಿ ಕೃಪೆಯನ್ನು ಇಟ್ಟು ನನಗೆ ಉಪಕಾರವನ್ನು ಮಾಡಿರುತ್ತೀಯೆ. ಈ ಉಪಕಾರಕ್ಕೆ ಪ್ರತಿಫಲವನ್ನು ಜಗದೀಶ್ವರನು ಮಾಡಬೇಕೇ ಹೊರತು, ನಾನು ಎಂದಿಗೂ ಮಾಡಲಾರೆನು. ಆದರೆ ಮನಃಪೂರ್ವಕವಾಗಿ ಕೃತಜ್ಞನಾಗಿರುವುದು ನನಗೆ ಸಾಧ್ಯ. ನನ್ನ ಭಾಗಕ್ಕೆ ನೀನು ವಿದ್ಯಾಗುರು ಮಾತ್ರವೇ ಅಲ್ಲ. ನೀನು ನನ್ನ ಭಾಗ್ಯದ ದೇವರಾಗಿರುವಿ. ಮನೋವಾಕ್ಕರ್ಮಗಳಲ್ಲಿಯೂ ನಾನು ನಿನ್ನನ್ನು ಪೂಜಿಸುತ್ತೇನೆ. ನಿನ್ನಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸುವುದಿಲ್ಲ. ನಾನು ಮಾಡಿದ ಅಪರಾಧಗಳನ್ನು ಕ್ಷಮಿಸು ಎಂಬದಾಗಿ ಮಾತ್ರ ನಾನು ಭಕ್ತಿಪುರಸ್ಸರವಾಗಿ ಬೇಡುತ್ತೇನೆ.''

---

## ಎಂಟನೆಯ ಅಧ್ಯಾಯ.

ಟೆಲಿಮಾಕಸ್ಸನನ್ನೂ, ಮೆಂಟರನನ್ನೂ ರಕ್ಷಿಸಿದ ನಾವಿಕರು ಫಿನೀಷಿಯನ್ನರು. ಅವರ ಹಡಗು ಟೈರ್ ದೇಶದಿಂದ ಎಪಿರಸ್ ಪಟ್ಟಣಕ್ಕೆ ಹೋಗುತ್ತಿತ್ತು. ಸದರಿ ನಾವಿಕರು ಈಜಿಪ್ಟ್ ದೇಶದಲ್ಲಿ ಟೆಲಿಮಾಕಸ್ಸನನ್ನು ನೋಡಿದ್ದರು. ಈಜುತ್ತಿದ್ದಾಗ ಇವನ ವ್ಯಕ್ತಿಜ್ಞಾನವು ಆ ನಾವಿಕರಿಗೆ ಉಂಟಾಗಲಿಲ್ಲ. ಹಡಗಿನ ಒಳಿಗೆ ಈಜಿಕೊಂಡು ಹೋಗಿ, ಮೆಂಟರನು ನೀರಿನ ಮೇಲೆ ತಲೆಯನ್ನೆತ್ತಿ, ತಮ್ಮನ್ನು ರಕ್ಷಿಸಬೇಕೆಂದು ಘಟ್ಟಿಯಾಗಿ ಕೂಗಿದನು. ಮೆಂಟರನು ಹೇಳಿದ್ದೇನಂದರೆ:—

“ಎಲೈ ಫಿನೀಷಿಯನ್ ನಾವಿಕರೇ,—ನಾವಿಬ್ಬರೂ ಪರದೇಶಿಗಳು. ಮುಳುಗಿ ಹೋಗುವ ಸ್ಥಿತಿಯಲ್ಲಿರುತ್ತೇವೆ. ನಮ್ಮನ್ನು ದಯವಿಟ್ಟು ರಕ್ಷಿಸಿ. ನೀವು ಯಾವ ದೇಶಕ್ಕೆ ಹೋಗುತ್ತೀರೋ ಅಲ್ಲಿಗೆ ಬರುತ್ತೇವೆ.” ಈ ರೀತಿಯಲ್ಲಿ ಮೆಂಟರನು ಘಟ್ಟಿಯಾಗಿ ಕೂಗಿ ಹೇಳಲು, ಈ ಹಡಗಿನ ಯಜಮಾನನು ‘ಭಯಪಡಬೇಡಿ, ನೀವು ರಕ್ಷಿಸಲ್ಪಡುವಿರಿ. ಇಂಥಾ ಕಷ್ಟದೆಸೆಯುಳ್ಳರತಕ್ಕವರನ್ನು ರಕ್ಷಿಸುವ ಭಾಗ್ಯವು ನಮಗೆ ಲಭ್ಯವಾದದ್ದಕ್ಕೋಸ್ಕರ ನಾವು ತುಂಬಾ ಸಂತೋಷಿಸುತ್ತೇವೆ. ನೀವು ಸ್ವದೇಶಿಗಳಾದರೇನು? ಪರದೇಶಿಗಳಾದರೇನು? ಇಂಥಾ ಕಷ್ಟದೆಸೆಯುಳ್ಳರತಕ್ಕವರನ್ನು ರಕ್ಷಿಸುವ ಪುಣ್ಯವು ಎಲ್ಲರಿಗೂ ಲಭ್ಯವಾಗುವುದಿಲ್ಲ’ ಎಂದು ಹೇಳುವುದರೊಳಗಾಗಿ ನಾವಿಕರು ಅವರನ್ನು ಹಡಗಿನ ಮೇಲಕ್ಕೆ ಎತ್ತಿ, ಅವರಿಗೆ ಒಣಗಿದ ಉಡಿಗೆಗಳನ್ನು ಕೊಟ್ಟು ಉಪಚರಿಸಿದರು. ಅವರು ಬಹಳ ದಣಿದಿದ್ದರು. ದೀರ್ಘವಾಗಿ ಉಸರು ಬಿಡುತ್ತಿದ್ದರು. ಮಾತನಾಡುವುದಕ್ಕೂ ಅವರಿಗೆ ಶಕ್ತಿ ಇರಲಿಲ್ಲ. ನಿಲ್ಲುವುದು ಅಸಾಧ್ಯವಾಗಿತ್ತು. ಬಹಳ ಹೊತ್ತು ಅಲೆಗಳಲ್ಲಿ ಒದ್ದಾಡಿ ನಿಶ್ಶಕ್ತರಾಗಿದ್ದರು. ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ಮೇಲೆ, ಅವರಿಗೆ ಮಾತನಾಡುವ ಶಕ್ತಿಯು ಬಂದಿತು. ಅವರು ಮಾತನಾಡುವುದಕ್ಕೆ ಉಪಕ್ರಮಿಸಿದ ಕೂಡಲೆ, ನಾವಿಕರು ಅವರ ವೃತ್ತಾಂತವನ್ನು ಕೇಳಿದರು. ‘ಈ ಕೆಲಿಪ್ಸಳ ದ್ವೀಪಕ್ಕೆ ನೀವು ಏತಕ್ಕೆ ಹೋದಿರಿ? ಅಲ್ಲಿಂದ ಬರುವಾಗ್ಗೆ, ಈ ಅವಸ್ಥೆಯು ನಿಮಗೆ ಹೇಗೆ ಉಂಟಾಯಿತು? ಈ ದ್ವೀಪಕ್ಕೆ ಕೆಲಿಪ್ಸಳು ಯಾರನ್ನೂ ಬಿಡುವುದಿಲ್ಲ. ಈ ದ್ವೀಪದ ಸುತ್ತಲೂ ಬಂಡೆಗಳಿರುತ್ತವೆ. ಇಲ್ಲಿಗೆ ಹಡಗುಗಳು ಹೋಗುವುದು ಅಸಾಧ್ಯ’ ಎಂದು ಈ ನಾವಿಕರು ಹೇಳಿದರು. ಅದಕ್ಕೆ ಮೆಂಟರನು ಹೇಳಿದ್ದೇನಂದರೆ:—

"ನಾವು ಇಥಾಕಾ ದ್ವೀಪನಿವಾಸಿಗಳು. ಇದು ಎಪಿರಸ್ ಸಮೀಪದಲ್ಲಿ ಇರುವುದು. ಈ ಕೆಲಿಪ್ಸೋಳ ದ್ವೀಪದ ಸಮೀಪದಲ್ಲಿ ನಮ್ಮ ಹಡಗು ಬಂಡೆಗೆ ತಗುಲಿ ಚೂರುಚೂರಾಯಿತು. ನಮ್ಮ ಹಡಗಿನಲ್ಲಿ ಇದ್ದವರೆಲ್ಲಾ ಮೃತಪಟ್ಟರು. ನಾವು ಬಹಳ ಕಷ್ಟಪಟ್ಟುಕೊಂಡು ಆ ದ್ವೀಪಕ್ಕೆ ಹೋದೆವು. ಆ ದ್ವೀಪದಲ್ಲಿ ನಡೆದ ವಿಷಯಗಳನ್ನೆಲ್ಲಾ ತಿಳಿಸುವೆನು. ನೀವು ಎಪಿರಸ್ ಪಟ್ಟಣದ ಕಡೆಗೆ ಹೋಗುತ್ತಲಿದೀರಿ. ಇಥಾಕಾ ಪಟ್ಟಣಕ್ಕೆ ನಮ್ಮನ್ನು ಬಿಡುವುದು ಅಸಾಧ್ಯವಾದರೆ, ನಿಮ್ಮ ಜತೆಯಲ್ಲಿ ಎಪಿರಸ್ ದ್ವೀಪಕ್ಕೆ ಬರುತ್ತೇವೆ. ಅಲ್ಲಿಂದ ಇಥಾಕಾ ದ್ವೀಪಕ್ಕೆ ಪ್ರಯಾಣ ಮಾಡುತ್ತೇವೆ." ಈ ರೀತಿಯಲ್ಲಿ ಮೆಂಟರನು ಹೇಳಿದನು.

ಟೆಲಿಮಾಕಸ್ಸನು ಮೌನವನ್ನು ಅವಲಂಬಿಸಿದನು. ಕೆಲಿಪ್ಸೋ ಮೊದಲಾದ ಕಿನ್ನರಿಯರೊಡನೆ ಮಾತುಕತೆಯನ್ನು ನಡೆಸಿದ್ದರಿಂದ ಉಂಟಾದ ಅನರ್ಥವು ಮನಸ್ಸಿಗೆ ಬಂದಿತು. ತನ್ನ ಮಾತುಗಳಿಗೆ ಈ ಮರೆಯಿಂದ ಏನಾದರೂ ಬಾಧಕವಾಗಬಹುದೆಂಬುದಾಗಿ ಇವನಿಗೆ ಭಯ ಉಂಟಾಯಿತು. ಮೆಂಟರನ ಉಪದೇಶವನ್ನು ಹೊಂದದೆ, ಮಾತನಾಡ ಕೂಡದೆಂದು ಸಂಕಲ್ಪ ಮಾಡಿಕೊಂಡನು. ಇವನ ಮೌನವನ್ನೂ, ವಿಚಾರವನ್ನೂ ನೋಡಿ ಇವನ ಮನೋಭಾವವನ್ನು ಮೆಂಟರನು ತಿಳಿದುಕೊಂಡನು. ಆ ಹಡಗಿನ ಯಜಮಾನನು ಟೆಲಿಮಾಕಸ್ಸನನ್ನು ನೋಡಿ, ನಿನ್ನನ್ನು ಎಲ್ಲಿಯೋ ಪೂರ್ವದಲ್ಲಿ ನೋಡಿದ್ದಂತೆ ತೋರುತ್ತದೆ. ಎಲ್ಲಿ ನಾವು ಒಬ್ಬರನ್ನು ಒಬ್ಬರು ನೋಡಿದ್ದೇವೋ ಅದು ನನ್ನ ಜ್ಞಾಪಕಕ್ಕೆ ಬಂದಿಲ್ಲ. ನನ್ನನ್ನು ನೋಡಿದ ಜ್ಞಾಪಕವು ನಿನಗಿರುವುದೇ ಎಂದು ಕೇಳಿದನು. ಈಜಿಪ್ಟ್ ದೇಶದಲ್ಲಿಯೋ ಅಥವಾ ಟೈರ್ ದೇಶದಲ್ಲಿಯೋ ನಿನ್ನನ್ನು ನೋಡಿದಂತೆ ನನಗೆ ತೋರುತ್ತದೆ ಎಂದು ಟೆಲಿಮಾಕಸ್ಸನು ಹೇಳಿದನು. ಹಾಗಾದರೆ ನೀನೇ ಟೆಲಿಮಾಕಸ್ಸನು. ನಾರ್ಬಲ್‌ನಿಗೂ, ನಿನಗೂ ನಾವು ಈಜಿಪ್ಟಿನಿಂದ ಹಿಂತಿರುಗುವಾಗ್ಗೆ ಸ್ನೇಹವಾಯಿತು. ನಾನು ನಾರ್ಬಲ್‌ನ ಸಹೋದರನು. ನಿನ್ನ ಮಾತುಗಳನ್ನು ಆಗಾಗ್ಗೆ ನಾರ್ಬಲ್‌ನು ಹೇಳುತ್ತಿದ್ದನು. ನಿನ್ನನ್ನು ನೋಡಿದ ಕೂಡಲೇ ನನಗೆ ವ್ಯಕ್ತಿಜ್ಞಾನವು ಸರಿಯಾಗಿ ಆಗಲಿಲ್ಲ ಎಂದು ಹಡಗಿನ ಯಜಮಾನನು ಹೇಳಿದನು. ಹಾಗಾದರೆ, ನೀನೇ ಅಡೋಮನು. ನಿನ್ನ ವಿಷಯವನ್ನು ನಿನ್ನ ಸಹೋದರನಾದ ನಾರ್ಬಲ್‌ನಿಂದ ಕೇಳಿರುತ್ತೇನೆ. ಅವನು ಈಗ ಟೈರ್ ಪಟ್ಟಣದಲ್ಲಿಯೇ ಇರುತ್ತಾನೆಯೋ? ನಾರ್ಬಲ್‌ನ

ವಿಷಯದಲ್ಲಿ ಪಿಗ್ ಮೇಲಿಯನ್ನನು ಪ್ರತಿಕೂಲನಾಗಿದ್ದನು. ಅವನ ಸಂಶಯದಿಂದಲೂ, ಕ್ರೌರ್ಯದಿಂದಲೂ ನಾಬಲ್ಲಿನಿಗೇನಾದರೂ ಕೇಡು ಸಂಭವಿಸಿತೇ ? ಎಂಬದಾಗಿ ಟೆಲಿಮಾಕಸ್ಸನು ಕೇಳಿದನು. ಆ ಮಾತನ್ನು ಕೇಳಿ, ಟೆಲಿಮಾಕಸ್ಸನನ್ನು ಕುರಿತು ಅಡೋವಮನು ಹೇಳಿದ್ದೇನಂದರೆ:—

"ನನ್ನ ಸಹೋದರನ ವೃತ್ತಾಂತವನ್ನು ತಿಳಿಸುತ್ತೇನೆ ಕೇಳು. ಪಿಗ್ ಮೇಲಿಯನ್ನನ ಅವತಾರವು ಪೂರ್ತಿಯಾಯಿತು. ಅವನು ಯಾರನ್ನೂ ನಂಬುತ್ತಿರಲಿಲ್ಲ. ಅವನನ್ನು ಯಾರೂ ನಂಬುತ್ತಿರಲಿಲ್ಲ. ಸಜ್ಜನರೆಲ್ಲರೂ ಏಕಾಂತವಾಗಿ ನಿಟ್ಟುಸುರು ಬಿಡುತ್ತಿದ್ದರು. ಅವನಿಂದ ಎಲ್ಲರಿಗೂ ಪ್ರಾಣಭಯ ಉಂಟಾಗಿತ್ತು. ಅವನಿಗೂ ಯಾರು ತನ್ನನ್ನು ಕೊಲ್ಲುವರೋ ಎಂಬ ಭಯವು ಉಂಟಾಗಿತ್ತು. ಅವನು ಬಹಳ ಸಂಶಯಾತ್ಮನಾಗಿದ್ದನು. ತನ್ನ ಅರಮನೆಯ ಪಹರೆಯವರಲ್ಲಿಯೂ ಕೂಡ ಇವನಿಗೆ ನಂಬಿಕೆಯು ಇರಲಿಲ್ಲ. ತನ್ನ ಅಂಗರಕ್ಷಕರೇ ತನ್ನನ್ನು ಕೊಲ್ಲುವರೋ ಎಂಬ ಭಯವು ಇವನಿಗೆ ಇತ್ತು. ಪ್ರೀತಿಯಿಂದ ಪ್ರೀತಿಯು ಹೇಗೆ ಹುಟ್ಟುವುದೋ ದ್ವೇಷದಿಂದ ದ್ವೇಷವು ಹಾಗೆ ಹುಟ್ಟುವುದು. ಸಂದೇಹದಿಂದ ಸಂದೇಹವು ಹುಟ್ಟುವುದು. ದುರ್ಮಾರ್ಗಳಾದ ಆಸ್ಟಾರ್ಬಳ ಕಥೆಯನ್ನು ನೀನು ಕೇಳಿದ್ದೆ. ಇವಳು ಟೈರ್ ದೇಶದ ಯುವಕನಾದ ಜೋಸರ್‌ನಲ್ಲಿ ಅನುರಕ್ತಳಾಗಿದ್ದಳು. ಪಿಗ್ ಮೇಲಿಯನ್ನನನ್ನು ಕೊಂದು, ಜೋಸರ್‌ನಿಗೆ ಪ್ರಭುತ್ವವನ್ನು ಕೊಡಿಸಬೇಕೆಂದು ಅವಳು ಸಂಕಲ್ಪ ಮಾಡಿದಳು. ಅವನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಫೇಡಲ್ ಎಂಬುವನೇ ಹಿರಿಯವನು. ಈತನು ಪಿಗ್ ಮೇಲಿಯನ್ನನನ್ನು ಕೊಂದು ಪ್ರಭುತ್ವವನ್ನು ಆಕ್ರಮಿಸಬೇಕೆಂದಿರುವನೆಂದು ವರ್ತಮಾನವನ್ನು ಹುಟ್ಟಿಸಿ, ಅದು ಪಿಗ್ ಮೇಲಿಯನ್ನನಿಗೆ ತಿಳಿಯುವಂತೆ ಮಾಡಿದಳು. ಅದು ನಿಜವೆಂದು ತಿಳಿದುಕೊಂಡು, ವಿಚಾರಹೀನನಾಗಿ, ಅವನು ಫೇಡಲ್‌ನನ್ನು ಕೊಲ್ಲಿಸಿದನು. ಇವನ ಎರಡನೇ ಮಗನು ಬಾಲಿಜಾರ್ ಎಂಬುವನು. ವಿದ್ಯಾಭ್ಯಾಸಕ್ಕೋಸ್ಕರ ಅವನು ಸೇಮಾಸ್ ದ್ವೀಪಕ್ಕೆ ಕಳುಹಿಸಲ್ಪಡುವಂತೆ ಮಾಡಿದಳು. ಅವನನ್ನು ಗ್ರೀಸ್ ದೇಶಕ್ಕೆ ಕರೆದುಕೊಂಡು ಹೋಗುವ ಹಡಗನ್ನು ನಡೆಸತಕ್ಕವರಿಗೆ ಲಂಚವನ್ನು ಕೊಟ್ಟು, ಸದರಿ ಹಡಗು ಮುಳುಗಿ ಹೋಗುವಂತೆಯೂ, ನಾವಿಕರು ದೋಣಿಗಳಲ್ಲಿ ತಪ್ಪಿಸಿಕೊಳ್ಳುವಂತೆಯೂ

ಏರ್ಪಾಡು ಮಾಡಿದಳು. ಈ ಏರ್ಪಾಡಿನಂತೆ ಬಾಲಿಜಾರನ ಹಡಗು ಮುಳುಗುವಂತೆ ಮಾಡಲ್ಪಟ್ಟಿತ. ಪಿಗ್‌ಮೇಲಿಯನ್ನನ ಇಬ್ಬರ ಮಕ್ಕಳಿಗೂ ಈ ಅವಸ್ಥೆಯು ಬಂದಿತು. ತನ್ನ ಮಕ್ಕಳಿಗೆ ಈ ಅವಸ್ಥೆಯು ಬರುವುದಕ್ಕೆ ಇವಳು ಕಾರಣಭೂತಳಾಗಿದ್ದಾಗ್ಯೂ, ಪಿಗ್‌ಮೇಲಿಯನ್ನನನ್ನೂ ಕೂಡ ಕೊಲ್ಲಬೇಕೆಂಬ ಉದ್ದೇಶವು ಅವಳಿಗೆ ಇದ್ದಾಗ್ಯೂ, ಅವಳಲ್ಲಿ ಇವನಿಗೆ ನಂಬಿಕೆಯು ಇತ್ತು. ಜೋಸರ್‌ನಲ್ಲಿ ಅವಳಿಗೆ ಪ್ರೀತಿಯು ಇರುವುದೆಂದು ಪಿಗ್‌ಮೇಲಿಯನ್ನನಿಗೆ ತಿಳಿಯಬಂತು. ಅವನನ್ನು ಕೊಲ್ಲಿಸಿ, ಅವನ ಆಸ್ತಿಯನ್ನು ಅಪಹರಿಸಬೇಕೆಂದು ಇವನು ಉದ್ದೇಶ ಮಾಡಿಕೊಂಡನು. ಜೋಸರ್‌ನನ್ನು ಅವನು ಕೊಲ್ಲುವುದಕ್ಕೆ ಮುಂಚೆ, ಅವನನ್ನೇ ಕೊಲ್ಲಬೇಕೆಂದು ಇವಳು ಸಂಕಲ್ಪ ಮಾಡಿದಳು. ಪಿಗ್‌ಮೇಲಿಯನ್ನನಿಗೆ ದ್ವೇಷಿಗಳಾದವರು ಅನೇಕರು ಇದ್ದರು. ಅವರ ಮೂಲಕ ಅವನನ್ನು ಕೊಲ್ಲಿಸುವುದು ಸಾಧ್ಯವೆಂದು ತೋರಿದಾಗ್ಯೂ, ಈ ಪ್ರಯತ್ನವನ್ನು ಮಾಡಿದರೆ, ಅವರೆಲ್ಲಿ ತನಗೆ ಶತ್ರುಗಳಾಗುವರೋ ಎಂಬ ಭಯದಿಂದ ತಾನೇ ಅವನನ್ನು ಖುದ್ದಾಗಿ ಕೊಲ್ಲಬೇಕೆಂದು ನಿಷ್ಕರ್ಷೆ ಮಾಡಿದಳು. ಪಿಗ್‌ಮೇಲಿಯನ್ನನು ಯಾರನ್ನೂ ನಂಬುತ್ತಿರಲಿಲ್ಲ. ಸ್ವಯಂ ಪಾಕವನ್ನು ಮಾಡಿಕೊಂಡು, ಭೋಜನ ಮಾಡುತ್ತಿದ್ದನು. ಬಾಗಿಲುಗಳನ್ನು ಹಾಕಿಕೊಂಡು, ಅಡಿಗೆ ಮಾಡಿಕೊಳ್ಳುತ್ತಿದ್ದನು. ಪ್ರಾಣಭಯವಿದೆಯೆಂದು ಯಾರಿಗೂ ತಿಳಿಯದೆ, ಏರ್ಪಾಡು ಮಾಡಿಕೊಂಡಿದ್ದನು. ಇತರರು ಪಾಕಮಾಡಿದ್ದನ್ನು ಅವನು ತಿನ್ನುತ್ತಿರಲಿಲ್ಲ. ಹಾಗೆ ತಿಂದರೆ, ಯಾರಾದರೂ ವಿಷ ಹಾಕಿಬಿಡುವರೆಂದು ಇವನಿಗೆ ಭಯ ಉಂಟಾಗಿತ್ತು. ದ್ರಾಕ್ಷಿರಸ, ರೊಟ್ಟಿ, ಉಪ್ಪು, ಎಣ್ಣೆ, ಹಾಲು, ಮೊದಲಾದ ಪದಾರ್ಥಗಳನ್ನು ತೆಗೆದುಕೊಂಡರೆ, ಅವುಗಳು ವಿಷಮಿಶ್ರವಾಗಿ ಎಲ್ಲಿ ಬರುವುವೋ ಎಂದು ಇವನು ಭಯಪಡುತ್ತಿದ್ದನು. ಭಕ್ಷ್ಯಗಳು ಇವನಿಗೆ ಸ್ವಪ್ನದಲ್ಲಿಯೂ ದೊರೆಯುತ್ತಿರಲಿಲ್ಲ. ತಾನೇ ಖುದ್ದಾಗಿ ತೋಟಕ್ಕೆ ಹೋಗಿ, ಕೊಯಿದುಕೊಂಡ ಬಂದ ಹಣ್ಣುಗಳನ್ನು ತಿನ್ನುತ್ತಿದ್ದನು. ತಾನೇ ತಂದ ಗೆಡ್ಡೆಗೆಣಸುಗಳನ್ನು ತಾನು ಉಪಯೋಗಿಸಿಕೊಳ್ಳುತ್ತಿದ್ದನು. ತಾನು ಉಪಯೋಗಿಸುವ ನೀರಿಗೆ ವಿಷಮಿಶ್ರವಾದೀತೆಂಬ ಭಯದಿಂದ ನೀರಿನ ನಲ್ಲಿಯ ಕೊಠಡಿಗೆ ಬೀಗ ಹಾಕಿ ಇಟ್ಟುಕೊಳ್ಳುತ್ತಿದ್ದನು. ಆಸ್ಟಾರ್ಬ್‌ಳಲ್ಲಿಯೂ ಇವನಿಗೆ ನಂಬಿಕೆಯು ಇರಲಿಲ್ಲ. ತಾನು ತಿನ್ನತಕ್ಕ ಪದಾರ್ಥವನ್ನು ಮೊದಲು ಅವಳ ಕೈಲಿ ತಿನ್ನಿಸಿ, ಅನಂತರ ತಾನು

ತಿನ್ನುತ್ತಿದ್ದನು. ಇವನನ್ನು ವಂಚಿಸುವುದಕ್ಕೆ ಅವಳು ಒಂದು ಉಪಾಯವನ್ನು ಮಾಡಿದಳು. ಅವನೂ, ತಾನೂ ತಿನ್ನತಕ್ಕ ಆಹಾರಕ್ಕೆ ವಿಷವನ್ನು ಸೇರಿಸಿದಳು. ಸದರಿ ವಿಷವನ್ನು ಪರಿಹಾರಕತಕ್ಕ ಒಂದು ಔಷಧವನ್ನು ತಾನು ಇಟ್ಟುಕೊಂಡಿದ್ದಳು. ವಿಷಮಿಶ್ರವಾದ ಆಹಾರವನ್ನು ತಾನು ಮೊದಲು ತಿಂದಳು. ಅನಂತರ ಅವನು ಆ ಆಹಾರವನ್ನು ತಿನ್ನುವಂತೆ ಮಾಡಿದಳು. ಏಕಾಂತನಾಗಿ ಸದರಿ ವಿಷವನ್ನು ಪರಿಹರಿಸುವ ಔಷಧವನ್ನು ತಾನು ತೆಗೆದುಕೊಂಡಳು. ಸ್ವಲ್ಪ ಹೊತ್ತಿನಲ್ಲಿ ಅವನಿಗೆ ವಿಷವು ವ್ಯಾಪಿಸಿ, ಅವನು ನೆಲಕ್ಕೆ ಬಿದ್ದನು. ಆ ವಿಷದ ಮಹಿಮೆಯಿಂದ ಮೂರ್ಛೆ ರೋಗವು ಬಂದ ವರಿಗೆ ಹೇಗೋ ಹಾಗೆ ನರಗಳೆಲ್ಲಾ ಎಳೆಯುವುದಕ್ಕೆ ಉಪಕ್ರಮವಾಯಿತು. ಅದನ್ನು ನೋಡಿ, ಅಸಾಧಾರಣವಾದ ರೋದನವನ್ನು ಮಾಡುತ್ತಾ, ಬಟ್ಟೆಗಳನ್ನು ಹರಿದುಕೊಂಡು, ಒಡವೆಗಳನ್ನು ಕಳೆದು ಬಿಸಾಟು, ಕೂದಲನ್ನು ಕೆದರಿಕೊಂಡು, ಪತಿಯಲ್ಲಿ ಅತ್ಯಂತ ಅನುರಕ್ತಳಾದ ಸಾಧ್ವಿಯು ಸಂಕಟ ಪಡುವುದಕ್ಕಿಂತಲೂ ಹೆಚ್ಚಾದ ಸಂಕಟವನ್ನು ಅಭಿನಯಿಸುತ್ತಾ, ಅವನನ್ನು ತಬ್ಬಿಕೊಂಡು, ಕಣ್ಣೀರುಗಳನ್ನು ಸುರಿಸುತ್ತಾ, ಸರ್ವರೂ ಇವಳಲ್ಲಿ ಅನುತಾಪವುಳ್ಳವರಾಗುವಂತೆ ಮಾಡಿಕೊಂಡಳು. ಅವನಿಗೆ ನಿಶ್ಶಕ್ತಿಯಾದ ಕೂಡಲೆ, ಆಲಿಂಗಿಸುವ ನೆಪದಿಂದ ಬೇಗ ಸತ್ತುಹೋಗಲೆಂದು ತನ್ನ ಶಕ್ತಿಯನ್ನೆಲ್ಲಾ ಬಿಟ್ಟು, ಅವನ ಕತ್ತನ್ನು ಕಿವಿಚಿಬಿಟ್ಟಳು. ಅನಂತರ ಅವನ ಬೆರಳುಗಳಿಂದ ಮೊಹರನ್ನೂ, ಅವನ ತಲೆ ಕಿರೀಟವನ್ನೂ ತೆಗೆದುಕೊಂಡು, ಅಲ್ಲಿ ಹಾಜರಾಗಿದ್ದ ಜೋಸರನಿಗೆ ಕೊಟ್ಟಳು. ತನ್ನ ಕಡೆ ಜನಗಳೆಲ್ಲರೂ ಈ ದುಷ್ಕೃತ್ಯಕ್ಕೆ ಸಹಾಯ ಮಾಡುವರೆಂದು ತಿಳಿದುಕೊಂಡಿದ್ದಳು. ಜೋಸರನು ಪ್ರಭುವಾಗಿ, ಸರ್ವರಿಂದಲೂ ಅಂಗೀಕರಿಸಲ್ಪಡುವನೆಂದು ಭಾವಿಸಿದ್ದಳು. ಪಿಗ್ ಮೇಲಿಯನ್ನನು ಸಾಯುವಾಗ, ಇವಳು ತೋರಿಸಿದ ಶೋಕಾತಿಶಯವನ್ನೂ, ಅವನು ಸತ್ತ ಕೂಡಲೇ, ಜೋಸರನಲ್ಲಿ ಇವಳು ತೋರಿಸಿದ ಅನುರಾಗವನ್ನೂ, ಅವನಿಗೆ ಕಿರೀಟವನ್ನೂ, ಮೊಹರನ್ನೂ ಇವಳು ಕೊಟ್ಟದ್ದನ್ನು ನೋಡಿ, ಬಹು ಜನಗಳಿಗೆ ಸಂದೇಹ ಉಂಟಾಯಿತು. ಇವಳೇ ಅವನನ್ನು ಕೊಂದಿರಬಹುದೆಂಬ ಸಂದೇಹವು ಹುಟ್ಟಿತು. ಪಿಗ್ ಮೇಲಿಯನ್ನನು ಸತ್ತನೆಂಬ ವರ್ತಮಾನವು ಎಲ್ಲೆಲ್ಲಿಯೂ ಹರಡಿಕೊಂಡಿತು. ಒಂದು ಗಂಟೆಗೆ ಮುಂಚೆ '' ಅವನು ಆರೋಗ್ಯವಾಗಿದ್ದನು. ಭೋಜನವಾದ ಕೂಡಲೆ ಸತ್ತಿರುವನು. ಹೀಗೆ ಹಠಾತ್ತಾಗಿ ಸತ್ತಿರುವುದನ್ನು ನೋಡಿದರೆ ಸಂದೇಹ

ವಾಗುತ್ತದೆ ಆಸ್ಟ್ಯಾರ್ಬಳು ಮೊಹರನ್ನೂ, ಕಿರೀಟವನ್ನೂ ಅವನು ಸತ್ತ ಉತ್ತರ ಕ್ಷಣದಲ್ಲಿಯೇ ಜೋಸರನಿಗೆ ಒಪ್ಪಿಸಿರುವಳು. ಇದರಿಂದ ಈ ಸಂದೇಹವು ಇನ್ನೂ ಬಲವಾಗಿರುವುದು. ಶವವು ಪರೀಕ್ಷಿಸಲ್ಪಡಬೇಕು. ಅವನ ಆಹಾರಕ್ಕೆ ವಿಷವೇನಾದರೂ ಸೇರಿರುವುದೇ ? ಅದು ಪರೀಕ್ಷಿಸಲ್ಪಡಬೇಕು '' ಎಂದು ಕೆಲವರು ಹೇಳಿದರು. ಇದನ್ನು ಸರ್ವರೂ ಅನುಮೋದಿಸಿದರು. ಡಾಕ್ಟರುಗಳು ಕರೆಸಲ್ಪಟ್ಟರು. ಶವವು ಪರೀಕ್ಷಿಸಲ್ಪಟ್ಟಿತು. ಆಹಾರದಲ್ಲಿ ಬಲವಾದ ವಿಷವು ಇರುವುದೆಂಬದಾಗಿಯೂ, ಕತ್ತುಮಿಸುಕಲ್ಪಟ್ಟು, ಕೊಲ್ಲಲ್ಪಟ್ಟಿರುವನೆಂಬದಾಗಿಯೂ ಡಾಕ್ಟರುಗಳು ಅಭಿಪ್ರಾಯವನ್ನು ಕೊಟ್ಟರು. ಸಮಸ್ತ ಜನಗಳಿಗೂ ಇದು ಆಸ್ಟ್ಯಾರ್ಬಳ ಕೆಲಸವೆಂದು ಗೊತ್ತಾಯಿತು. ಆದಾಗ್ಯೂ ಪಿಗ್‌ಮೇಲಿಯನ್ನನು ಕೇವಲ ದುರಾತ್ಮನೆಂಬದಾಗಿಯೂ, ಇವನು ಸತ್ತದ್ದರಿಂದ, ದೇಶಕ್ಕೇ ಕ್ಷೇಮವಾಯಿತೆಂಬದಾಗಿಯೂ ಜನಗಳು ಅಭಿಪ್ರಾಯ ಪಟ್ಟರು. ಆದರೆ, ಪಿಗ್‌ಮೇಲಿಯನ್ನನು ಎಷ್ಟು ದುರಾತ್ಮನಾದಾಗ್ಯೂ, ಅವನನ್ನು ವಂಚಿಸಿ, ಅವನಿಗೆ ವಿಷವನ್ನು ಹಾಕಿ, ಕತ್ತುಮಿಸುಕಿ ಕೊಂದದ್ದು ದೊಡ್ಡ ಅಪರಾಧವೆಂಬದಾಗಿಯೂ, ಈ ಅಪರಾಧಕ್ಕೆ ಜೋಸರನು ಸಹಾಯ ಮಾಡಿರುವನೆಂಬದಾಗಿಯೂ ಸಂದೇಹ ಉಂಟಾಯಿತು. ಇದನ್ನು ವಿಚಾರಣೆ ಮಾಡುವುದಕ್ಕೋಸ್ಕರ ಒಂದು ಸ್ಪೆಷಲ್ ಕೋರ್ಟು ಏರ್ಪಾಡು ಮಾಡಲ್ಪಟ್ಟಿತು. ಅರಮನೆಯನೆಯಲ್ಲಿದ್ದ ನೌಕರರಲ್ಲಿ ಪಿಗ್‌ಮೇಲಿಯನ ಪಕ್ಷವಾಗಿರತಕ್ಕವರೂ, ಆಸ್ಟ್ಯಾರ್ಬಳ ಪಕ್ಷವಾಗಿರತಕ್ಕವರೂ, ಉದಾಸೀನರೂ, ಜೋಸರೂ ಇವರೇ ಮೊದಲಾದವರ ಎಲ್ಲರ ಕೈಫೀತುಗಳೂ ತೆಗೆದುಕೊಳ್ಳಲ್ಪಟ್ಟವು. ಆಸ್ಟ್ಯಾರ್ಬಳ ಸೇವಕರೂ ಕೂಡ ಇವಳ ದೌರಾತ್ಮ್ಯದ ವಿಷಯದಲ್ಲಿ ಯಥಾರ್ಥವನ್ನು ಹೇಳಿದರು. ಇವಳು ಪಿಗ್‌ಮೇಲಿಯನ್ನನ ಒಬ್ಬ ಮಗನನ್ನು ಹೇಗೆ ಕೊಲ್ಲಿಸಿದಳೋ, ಇನ್ನೊಬ್ಬನನ್ನು ಹೇಗೆ ಸಮುದ್ರಕ್ಕೆ ನೂಕಿಸಿದಳೋ, ಪಿಗ್‌ಮೇಲಿಯನ್ನನನ್ನು ಕೊಂದು, ಪ್ರಭುತ್ವವನ್ನು ಜೋಸರನಿಗೆ ಕೊಡಿಸುವುದಕ್ಕೆ ಹೇಗೆ ಪ್ರಯತ್ನ ಮಾಡಿದಳೋ, ಆ ಪ್ರಯತ್ನಕ್ಕೆ ಜೋಸರನು ಹೇಗೆ ಸೇರಿದ್ದನೋ ಇವೆಲ್ಲಾ ರುಜುವಾತಾದವು. ಇವಳು ಖೂನಿಯನ್ನು ಮಾಡಿದಳೆಂಬದಾಗಿಯೂ, ಇವಳಿಗೆ ಖೂನಿಮಾಡುವುದಕ್ಕೆ ಜೋಸರನು ಸಹಾಯ ಮಾಡಿದನೆಂಬದಾಗಿಯೂ ಸ್ಪಷ್ಟವಾಗಿ ಗೊತ್ತಾಯಿತು. ಇವರಿಬ್ಬರಿಗೂ ಮರಣದಂಡನೆಯು ವಿಧಿಸಲ್ಪಟ್ಟಿತು. ಇವರಿಬ್ಬರೂ ಗಲ್ಲಿಗೆ ಹಾಕಲ್ಪಟ್ಟರು. ''

ನಾರ್ಬಲ್‌ನಿಗೆ ಪಿಗ್‌ಮೇಲಿಯನ್ನನಿಗೆ ಸಂಭವಿಸಿದ ಅಕಾಲ ಮರಣಕ್ಕೆ ಅವನ ದೌರಾತ್ಮ್ಯವೇ ಮುಖ್ಯ ಕಾರಣವೆಂದು ಗೊತ್ತಾಯಿತು. ಸ್ವೈರಿಣಿಯರಲ್ಲಿ ಅತ್ಯಂತ ಜಘನ್ಯಳಾದ ಅಸ್ಟಾರ್ಬರ್ಳಲ್ಲಿ ಪಿಗ್‌ಮೇಲಿಯನ್ನನು ಅಕೃತ್ರಿಮವಾದ ಪ್ರೀತಿಯನ್ನೂ, ನಂಬಿಕೆಯನ್ನೂ ಇಟ್ಟನು. ಅವಳೇ ಇವನಿಗೆ ಮೃತ್ಯುವಾದಳು. ಈ ವಿಷಯವು ಗೊತ್ತಾದ ಕೂಡಲೆ, ಮಹಾಜನಗಳಿಗೆ ಪಿಗ್‌ಮೇಲಿಯನ್ನನಲ್ಲಿ ಎಷ್ಟು ತಿರಸ್ಕಾರವು ಇತ್ತೋ ಅದಕ್ಕಿಂತಲೂ ಹೆಚ್ಚಾದ ತಿರಸ್ಕಾರವು ಉಂಟಾಯಿತು. ಅವಳನ್ನೂ, ಜೋಸರನನ್ನೂ ಗಲ್ಲಿಗೆ ಹಾಕುವಂತೆ ಸ್ಪೆಷಲ್ ಕೋರ್ಟಿನವರು ಮಾಡಿದ ಏರ್ಪಾಡು ಸರ್ವಸಮರ್ಪಕವಾಯಿತು. ಈ ವಿಷಯವು ನಾರ್ಬರ್ಲ್‌ನಿಗೆ ಗೊತ್ತಾದ ಕೂಡಲೆ, ಆತನು ಮಹಾಜನಗಳನ್ನೆಲ್ಲಾ ಸೇರಿಸಿ, ಮುಂದಿನ ಏರ್ಪಾಡುಗಳು ಹೇಗೆ ಆಗಬೇಕೋ ಅದನ್ನು ಪರ್ಯಾಲೋಚಿಸಿದನು. ಪಿಗ್‌ಮೇಲಿಯನ್ನನ ಎರಡನೇ ಮಗನಾದ ಬೇಲಿಯಾಜರನನ್ನು ಈ ದುರಾತ್ಮಳಾದ ಅಸ್ಟಾರ್ಬರ್ಳು ಸಮುದ್ರಕ್ಕೆ ನೂಕಿಸಿದ್ದಳಷ್ಟೆ. ಅವನು ಸತ್ತನೆಂದು ಇವಳು ತಿಳಿದುಕೊಂಡಿದ್ದಳು. ದೈವಯೋಗದಿಂದ ಬೇಲಿಯಾಜರನು ಆ ಕತ್ತಲೆಯಲ್ಲಿ ಈಜಿಕೊಂಡು, ಸೀರಿಯಾದ ಕೋಸ್ಟಿಗೆ ತಲಪಿದನು. ಅಲ್ಲಿ ಒಬ್ಬ ಪರದೇಶಿಯುವನ ವೇಷವನ್ನು ಹಾಕಿಕೊಂಡು, ಒಬ್ಬ ಕುರುಬನ ಆಶ್ರಯವನ್ನು ಹೊಂದಿ, ಕುರಿಗಳನ್ನು ಕಾಯುವ ಕೆಲಸಕ್ಕೆ ನಿಯಮಿಸಲ್ಪಟ್ಟಿದ್ದನು. ಪಿಗ್‌ಮೇಲಿಯನ್ನನು ಸತ್ತನೆಂಬ ವರ್ತಮಾನವೂ, ಅಸ್ಟಾರ್ಬರ್ಳೂ ಮತ್ತು ಜೋಸರನೂ ಗಲ್ಲಿಗೆ ಹಾಕಲ್ಪಟ್ಟರೆಂಬ ವರ್ತಮಾನವೂ ಬೇಲಿಯಾಜರನಿಗೆ ತಿಳಿಯಿತು. ಕೂಡಲೆ ಆತನು ತನ್ನ ಪೂರ್ವೋತ್ತರಗಳನ್ನು ನಾರ್ಬರ್ಲ್‌ನಿಗೆ ಏಕಾಂತವಾಗಿ ಬರೆದು ಕಳುಹಿಸಿದನು. ಗಾಢಾಂಧಕಾರದಲ್ಲಿ ಸಮುದ್ರಕ್ಕೆ ತಳ್ಳಲ್ಪಟ್ಟಾಗ್ಯೂ, ಅವನು ಈಜಿಕೊಂಡು ಹೋಗಿ, ಸೀರಿಯಾ ದೇಶಕ್ಕೆ ತಲಪುವಂತೆ ಆದದ್ದೇ ಅವನಲ್ಲಿ ಜಗದೀಶ್ವರನ ಪ್ರಸನ್ನತೆಯು ಇರುವುದೆಂಬದಾಗಿಯೂ, ಅವನು ತಂದೆಯಂತೆ ದುಷ್ಟನಾಗಿದ್ದರೆ, ಈ ವಿಪತ್ತಿನಲ್ಲಿ ಬದುಕುತ್ತಿರಲಿಲ್ಲವೆಂಬದಾಗಿಯೂ ನಾರ್ಬರ್ಲ್‌ನಿಗೆ ತೋರಿತು. ಮಹಾಜನಗಳಿಗೆ ಪಿಗ್‌ಮೇಲಿಯನ್ನನಿಗೆ ಮಾತ್ರವೇ ಅಲ್ಲದೆ, ಅವನ ಕುಟುಂಬಕ್ಕೆ ಸೇರಿದ ಸರ್ವರಲ್ಲಿಯೂ ಅಸಮಾಧಾನ ಉಂಟಾಗಿತ್ತು. ಬೇಲಿಯಾಜರನನ್ನು ಪ್ರಭುತ್ವಕ್ಕೆ ತರುವುದಕ್ಕೆ ಯಾರೂ ಒಪ್ಪುವುದಿಲ್ಲವೆಂದು ಇವನಿಗೆ ಗೊತ್ತಾಯಿತು. ಅಸ್ಟಾರ್ಬರ್ಳು ಮಾಡಿದ ದೌರಾತ್ಮ್ಯವನ್ನೂ, ದೈವಬಲದಿಂದ ಅವನು

ಬದುಕಿರುವುದನ್ನೂ, ಸೀರಿಯಾ ದೇಶದಲ್ಲಿ ಅವನು ಕುರಿಗಳನ್ನು ಕಾಯುತ್ತಾ ಇರುವುದನ್ನೂ ತಿಳಿಸಿದ ಕೂಡಲೆ, ಸರ್ವರೂ ಅವನನ್ನು ಕರೆಸಬೇಕೆಂಬದಾಗಿ ಅಭಿಪ್ರಾಯಪಟ್ಟರು. ಈ ಅಭಿಪ್ರಾಯವು ಬೇಲಿಯೂಜರನಿಗೆ ತಿಳಿಸಿ, ಅವನನ್ನು ಕರೆದುಕೊಂಡು ಬರುವುದಕ್ಕೋಸ್ಕರ ಮುಖ್ಯ ಮಂತ್ರಿಗಳಲ್ಲಿ ಕೆಲವರೂ, ಮಹಾಜನಗಳ ಪ್ರತಿನಿಧಿಗಳಲ್ಲಿ ಕೆಲವರೂ ಸೀರಿಯಾ ದೇಶಕ್ಕೆ ಕಳುಹಿಸಲ್ಪಟ್ಟರು. ಅವರು ಸದರಿ ದೇಶಕ್ಕೆ ಹೋಗಿ, ಇಲ್ಲಿನ ವರ್ತಮಾನಗಳನ್ನೆಲ್ಲಾ ತಿಳಿಸಿದರು. ಆತನು ಪ್ರಭುತ್ವವನ್ನು ವಹಿಸುವುದಕ್ಕೆ ತನಗೆ ಇಷ್ಟವಿಲ್ಲವೆಂಬದಾಗಿಯೂ, ತಾನು ಸೀರಿಯಾ ದೇಶದಲ್ಲಿ ಕುರುಬನಾಗಿದ್ದುಕೊಂಡು ಇರುವುದೇ ಉತ್ತಮವೆಂಬದಾಗಿಯೂ ಅಪ್ಪಣೆ ಕೊಡಿಸಿದನು. ಆದರೆ, ಈ ಮಹಾಜನಗಳು ಅನೇಕ ವಿಧವಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿ, ಟೈರ್ ದೇಶಕ್ಕೆ ಅವನು ಬರುವಂತೆ ಮಾಡಿ, ಅಲ್ಲಿಗೆ ಕರೆದುಕೊಂಡು ಬಂದರು. ಅವನು ಬರುತ್ತಾನೆಂಬ ವರ್ತಮಾನವು ತಿಳಿದ ಕೂಡಲೆ, ಮಹಾಜನಗಳೆಲ್ಲರೂ ಅವನನ್ನು ಎದುರುಗೊಂಡು, ಪ್ರಭುವಿಗೆ ಮಾಡತಕ್ಕ ಸ್ವಾಗತಪೂರ್ವಕವಾದ ಮರ್ಯಾದೆಗಳನ್ನೆಲ್ಲಾ ಮಾಡಿದರು. ಆ ದಿನವೇ ಒಂದು ದೊಡ್ಡ ಮಹಾಸಭೆಯು ಸೇರಿತು. ಟೈರ್ ಪಟ್ಟಣದ ಅಧಿಕಾರಿಗಳೂ, ಖಾಸಗಿ ಜನಗಳಲ್ಲಿ ಮುಖಂಡರಾದವರೂ, ವೈದಿಕ ಮಹಾಜನಗಳೂ, ಎಲ್ಲರೂ ಸೇರಿದ್ದರು. ಪಿಗ್‌ಮೇಲಿಯನ್ನನು ಹೇಗೆ ಆಸ್ಟಾರ್ಟಳಲ್ಲಿ ಅನುರಕ್ತನಾಗಿದ್ದನೋ, ಅವಳು ಜೋಸರನಿಗೆ ಪ್ರಭುತ್ವವನ್ನು ಕೊಡಿಸುವುದಕ್ಕೋಸ್ಕರ ಹೇಗೆ ಪಿಗ್‌ಮೇಲಿಯನ್ನನ್ನು ಕೊಲ್ಲಿಸಿದಳೋ, ಎರಡನೇ ಮಗನಾದ ಬೇಲಿಯೂಜರನನ್ನು ಹೇಗೆ ಸಮುದ್ರಕ್ಕೆ ನೂಕಿಸಿ, ಅವನು ಸತ್ತನೆಂಬ ಭಾವನೆಯುಳ್ಳವಳಾಗಿದ್ದಳೋ, ಅವನು ದೈವವಶಾತ್ತಿನಿಂದ ಹೇಗೆ ಈಜಿಕೊಂಡು ಹೋಗಿ ಸೀರಿಯಾ ದೇಶವನ್ನು ತಲುಪಿದನೋ, ಪಿಗ್‌ಮೇಲಿಯನ್ನನು ಹೇಗೆ ವಿಷ ಹಾಕಲ್ಪಟ್ಟು, ಕತ್ತು ಹಿಸುಕಲ್ಪಟ್ಟು ಕೊಲ್ಲಲ್ಪಟ್ಟನೋ, ಡಾಕ್ಟರುಗಳು ಅವನ ಮರಣದ ವಿಷಯದಲ್ಲಿ ಹೇಗೆ ಅಭಿಪ್ರಾಯವನ್ನು ಕೊಟ್ಟರೋ, ಇವಳ ಅಪರಾಧವು ಸ್ಪೆಷಲ್ ಕೋರ್ಟಿನಲ್ಲಿ ಹೇಗೆ ರುಜುವಾತು ಮಾಡಲ್ಪಟ್ಟಿತ್ತೋ, ಅವಳೂ, ಜೋಸರೂ ಇವರ ತೀರ್ಪಿನಂತೆ ಹೇಗೆ ಗಲ್ಲಿಗೆ ಹಾಕಲ್ಪಟ್ಟರೋ, ಬೇಲಿಯೂಜರನು ಪಿಗ್‌ಮೇಲಿಯನ್ನನ ಮಗನಾದಾಗ್ಯೂ, ಹೇಗೆ ಧರ್ಮಿಷ್ಟನಾಗಿರುವನೋ, ಪ್ರಭುತ್ವವನ್ನು ವಹಿಸಬೇಕೆಂಬುವುದರಲ್ಲಿಯೂ ಕೂಡ ಹೇಗೆ ಉದಾಸೀನನಾ

ಗಿರುವನೋ, ಬಲಾತ್ಕಾರದಿಂದ ಅನ್ಯನ ಪ್ರಭುತ್ವವು ವಹಿಸಲ್ಪಡುವ ಸನ್ನಿವೇಶವು ಹೇಗೆ ಉಂಟಾಗಿರುವುದೋ, ಅವುಗಳೆಲ್ಲಾ ತಿಳಿಸಲ್ಪಟ್ಟವು ಸಮಸ್ತ ಜನಗಳೂ ಏಕವಾಕ್ಯತೆಯಿಂದ ಬೇಲಿಯಾಜರನೇ ನಮಗೆ ಪ್ರಭುವಾಗಿರಬೇಕೆಂದು ಹೇಳಿದರು. ಆ ರೀತಿಯಲ್ಲಿ ಠರಾವು ಮಾಡಲ್ಪಟ್ಟಿತು. ಮಹಾಜನಗಳ ಪ್ರತಿನಿಧಿಗಳು ಬೇಲಿಯಾಜರನ ಬಳಿಗೆ ಹೋಗಿ, ತಮ್ಮ ಪ್ರಾರ್ಥನೆಯನ್ನು ತಿಳಿಸಿದರು. ಆಗ ಬೇಲಿಯಾಜರನು ಮಹಾಜನಗಳಿಗೆ ತನ್ನ ಕೃತಜ್ಞತೆಯನ್ನು ತೋರಿಸಿ ಹೇಳಿದ್ದೇನೆಂದರೆ:—

"ದೇವರ ಮಹಿಮೆಯು ಅನಿರ್ವಚನೀಯವಾದದ್ದು. ಮಧ್ಯರಾತ್ರಿಯಲ್ಲಿ ಕತ್ತಲೆಯು ಕವಿದುಕೊಂಡಿದ್ದಾಗ, ನಾನು ಸಮುದ್ರಕ್ಕೆ ನೂಕಲ್ಪಟ್ಟೆನು. ನಾನು ಸತ್ತೆನೆಂದು ಆಪ್ತವರ್ಗದ ಸಿಬಂದಿಗಳೂ, ಆಪ್ತವರ್ಗರೂ ಇಷ್ಟರೂ ಭಾವಿಸಿದರು. ದೇವರ ದಯೆಯು ಇಲ್ಲದಿದ್ದರೆ, ಅಂಥಾ ಸಂದರ್ಭದಲ್ಲಿ ಬದುಕುವುದು ಸಾಧ್ಯವೇ ? ಎಂದಿಗೂ ಇಲ್ಲ. ದೇವರ ಮೇಲೆ ಭಾರವನ್ನು ಹಾಕಿ, ಆತ್ಮರಕ್ಷಣೆಯ ಪ್ರಯತ್ನವನ್ನು ಮಾಡಿದೆನು. ಅಭೂತಪೂರ್ವವಾದ ಧೈರ್ಯಸ್ಥೈರ್ಯಗಳು ನನಗೆ ಉಂಟಾದವು. ಅಕಸ್ಮಾತ್ತಾಗಿ ನನ್ನ ಬಳಿಗೆ ಒಂದು ಹಲಗೆಯು ತೇಲಿಕೊಂಡು ಬಂದಿತು. ಅದರ ಸಹಾಯದಿಂದ ಅಲೆಗಳ ಜತೆಯಲ್ಲಿ ನಾನು ತೇಲಿಕೊಂಡು ಹೋದೆನು. ಬೆಳಗಾಗುವುದರೊಳಗಾಗಿ ಸಿರಿಯಾದ ದಡಕ್ಕೆ ಸೇರಿದೆನು. ಸಮುದ್ರದಲ್ಲಿ ಶಾರ್ಕ್ ಮೊದಲಾದ ಜಲಚರಗಳು ಸಕಲ ಪ್ರಾಣಿಗಳನ್ನೂ ಭಕ್ಷಿಸುವುವು. ಅವುಗಳಿಗೆ ತುತ್ತಾಗುವ ಅವಸ್ಥೆಯು ನನಗೆ ಬರಲಿಲ್ಲ. ದುರ್ಮಾರ್ಗಪ್ರವರ್ತಕರಾದ ಪಾಪಿಗಳು ಒಂದು ವಿಧವಾಗಿ ಪರ್ಯಾಲೋಚಿಸಿದರೆ, ದೇವರು ಮತ್ತೊಂದು ವಿಧವಾಗಿ ಪರ್ಯಾಲೋಚಿಸುವನು. ಇದಕ್ಕೆ ದೃಷ್ಟಾಂತವು ನಾನೇ ಆದೆನು. ಸಿರಿಯಾ ದೇಶದಲ್ಲಿ ಕುರಿಗಳನ್ನು ಕಾದುಕೊಂಡು, ಕುರುಬರ ಪ್ರಸನ್ನತೆಗೂ ಪ್ರೀತಿಗೂ ಪಾತ್ರನಾಗಿ, ಚಕ್ರವರ್ತಿಗಳಿಗೂ ದುರ್ಲಭವಾದ ಮನಶ್ಶಾಂತಿಯಿಂದ ನನ್ನ ಗುಡಿಸಲಿನಲ್ಲಿ ನಾನು ಸುಖವಾಗಿದ್ದೆನು. ನನ್ನನ್ನು ಹಿಡಿದುಕೊಂಡು ಬಂದು, ಈ ರಾಜ್ಯಭಾರವನ್ನು ನನಗೆ ಹೊರಿಸಿರುವಿರಿ. ಈ ಭಾರವು ದುಸ್ಸಹವಾದದ್ದು. ನನ್ನ ಕೊನೆಯ ಪರಿಣಾಮವನ್ನು ನೋಡಿದರೆ, ಪ್ರಭುತ್ವವನ್ನು ಪರಿಗ್ರಹಿಸುವುದಕ್ಕೆ ಯಾರು ತಾನೇ ಒಪ್ಪುವರು ? ಅರಿಷಡ್ವರ್ಗಗಳಿಗೆ ಅಧೀನರಾಗದೆ ಇರುವುದಕ್ಕೂ, ಹೊನ್ನು ಹೆಣ್ಣು, ಮಣ್ಣುಗಳಲ್ಲಿ ಪರಾಙ್ಮುಖನಾಗುವುದಕ್ಕೂ ಯಾರಿಗೆ ಶಕ್ತಿಯು ಇರುವುದಿಲ್ಲವೋ ಅವರಿಗೆ

ಪ್ರಭುತ್ವವು ಯೋಗ್ಯವಾಪದ್ದಲ್ಲ. ಅವರ ಭಾಗಕ್ಕೆ ಅದು ಕಾಲಕೂಟವಾಗಿ ಪರಿಣ ಮಿಸುವುದು. ನಮ್ಮ ತಂದೆಯು ಆಸ್ಟಾರ್ಬಳ ಮಾತನ್ನು ಕೇಳಿ, ಧರ್ಮಮಾರ್ಗೈಕಪರಾಯಣನಾದ ನಮ್ಮ ಅಣ್ಣನನ್ನು ಕೊಲ್ಲಿಸಿದನು. ನನಗೆ ಅವನಿಗೆ ಸಂಭವಿಸಿದ ಮರಣಕ್ಕಿಂತಲೂ ಅಧಿಕವಾದ ಮರಣವು ಸನ್ನಿಹಿತವಾಗಿತ್ತು. ನಮ್ಮ ತಂದೆಯು ದುರಾತ್ಮಳಾದ ಆಸ್ಟಾರ್ಬಳ ಬಲೆಗೆ ಸಿಕ್ಕಿ, ನಿರಪರಾಧಿಗಳಾದ ಮಕ್ಕಳನ್ನೂ ಕೂಡ ಮೃತ್ಯುವಿಗೆ ತುತ್ತಾಗುವಂತೆ ಮಾಡಿಕೊಂಡನು. ಕೊನೆಗೆ ತಾನೇ ಮೃತ್ಯುವಿಗೆ ತುತ್ತಾದನು. ಇಂಥಾ ಕಷ್ಟವಾದ ಕೆಲಸಕ್ಕೆ ನನ್ನನ್ನು ಒಪ್ಪಬೇಕೆಂದು ಹೇಳುತ್ತೀರಿ. ಈ ಪ್ರಭುತ್ವಕ್ಕೆ ನಾನು ಅರ್ಹನಲ್ಲ. ಪೂರ್ವ ವಯಸ್ಸು ಕಳೆದವನಾಗಿಯೂ, ವಿದ್ಯಾಸಿದ್ಧಿಯಾಗಿಯೂ, ಶಾಂತಿಸಿದ್ಧಿಯಾಗಿಯೂ, ಲೋಕಸೇವಾನಿರತನಾಗಿಯೂ ಇರತಕ್ಕ ಮನುಷ್ಯನನ್ನು ಪರಿಶೀಲಿಸಿ, ಪ್ರಭುತ್ವಕ್ಕೆ ಆರಿಸಿ ಈ ಭಾಗದಲ್ಲಿ ನಾನೂ ಸಹಾಯ ಮಾಡುವೆನು. ಪ್ರಭುತ್ವ ಮಾಡತಕ್ಕ ಶಕ್ತಿಯು ನನಗೆ ಇಲ್ಲ ಅಪೇಕ್ಷೆಯು ಮೊದಲೇ ಇಲ್ಲ. ನನ್ನಲ್ಲಿ ಕೃಪೆಯಿಟ್ಟು, ಈ ಭಾರವನ್ನು ತಪ್ಪಿಸಬೇಕು. ಸಕಲ ವಿಷಯಗಳಲ್ಲಿಯೂ ಸಮರ್ಪಕವಾದ ಯೋಗ್ಯತೆಯುಳ್ಳವರನ್ನು ನೋಡಿ, ಅವರಿಗೆ ಈ ಪ್ರಭುತ್ವವನ್ನು ವಹಿಸಬೇಕು. ಪಿಗ್‌ಮೇಲಿಯನ್ನನು ಈ ರಾಜ್ಯಕ್ಕೆ ಬಹಳ ಅಪಕಾರವನ್ನು ಮಾಡಿದನು. ಅವನ ಮಗನಾದ ನಾನು ಈ ಕೆಲಸಕ್ಕೆ ಸುತರಾಂ ಯೋಗ್ಯನಲ್ಲ. ನನ್ನಲ್ಲಿ ಕೃಪೆಯಿಟ್ಟು, ಈ ಜವಾಬ್ದಾರಿ ಕೆಲಸದಿಂದ ಬಿಡುಗಡೆ ಮಾಡಬೇಕು '' ಎಂದು ಮಹಾಜನಗಳನ್ನು ಪ್ರಾರ್ಥಿಸಿದನು.

ಇವನು ಹೇಳಿದ್ದನ್ನು ಕೇಳಿ, ಮಹಾಜನಗಳಲ್ಲಿ ಕೆಲವರು ಆಶ್ಚರ್ಯ ಪಟ್ಟರು. ಕೆಲವರು ವಿಷಾದಭರಿತರಾದರು. ಅನೇಕರು ಭಗ್ನಮನೋರಥರಾದರು. ಇಂಥಾ ದುರಾತ್ಮನಾದ ಪಿಗ್‌ಮೇಲಿಯನ್ನನಿಗೆ ನಿಸ್ಪೃಹ ಚಕ್ರವರ್ತಿಯಾದ ಇವನು ಹೇಗೆ ಮಗನಾದನೆಂದು ಕೆಲವರು ಅಂದುಕೊಂಡರು. ಕೆಲವರು ಕಣ್ಣೀರುಗಳನ್ನು ಬಿಡುತ್ತಿದ್ದರು. ಮಹಾಜನಗಳು ಈ ಅವಸ್ಥೆಯಲ್ಲಿರುವಾಗ, ನಾರ್ಬಲ್ಲನು ಜೇಲಿಯಾಜರನ್ನು ಕುರಿತು ಹೇಳಿದ್ದೇನಂದರೆ:—

'' ನೀನು ಹೇಳಿದ ಮಾತುಗಳೆಲ್ಲಾ ಸಾಧುವಾದವುಗಳು. ಮನುಷ್ಯನಲ್ಲಿ ದೇವತಾಂಶಗಳು ಹೇಗೋ ಹಾಗೆ ಪಿಶಾಚಾಂಶವೂ ಕೂಡ ಇರುತ್ತವೆ ಸುಶಿಕ್ಷಣವೂ, ಒಳ್ಳೇ ಸಹವಾಸವೂ ಲಭ್ಯವಾದರೆ, ಜನಗಳು ಧರ್ಮಿಷ್ಟರಾಗುವರು. ದುಷ್ಟವಾದ

ಶಿಕ್ಷಣವೂ, ಕೆಟ್ಟವರ ಸಹವಾಸವೂ ಲಭ್ಯವಾದರೆ ಕೆಟ್ಟವರಾಗುವರು. ಪಿಗ್‌ಮೇಲಿಯನ್ನನು ದುರದೃಷ್ಟವಂತನು. ಇವನಿಗೆ ಸರಿಯಾದ ಶಿಕ್ಷಣವು ದೊರೆಯಲಿಲ್ಲ. ದುರ್ಮಾರ್ಗಪ್ರವರ್ತಕರ ಸಹವಾಸವು ದೊರೆಯಿತು. ಇವನು ಅಜಿತೇಂದ್ರಿಯನಾದನು. ದುರ್ವಿಷಯಗಳಲ್ಲಿ ಮನಸ್ಸು ಪ್ರವರ್ತಿಸುವಂತೆ ಮಾಡಿಕೊಂಡನು. ಕಾಮಕ್ರೋಧಾದಿಗಳಿಗೆ ಅಧೀನನಾದನು. ದುರ್ಮಾರ್ಗಪ್ರವರ್ತಕರ ಸಹವಾಸವು ಇವನಿಗೆ ಉಂಟಾಯಿತು. ಪ್ರಭುತ್ವ ಮಾಡುವುದಕ್ಕೆ ಅನರ್ಹನಾದನು. ಅವರವರ ಪಾಪಗಳಿಗೆ ಅನುರೂಪವಾದ ಪಾಪಫಲವನ್ನು ಈ ಜನ್ಮದಲ್ಲಿಯೇ ಅನುಭವಿಸಬೇಕಾಗುವುದು. ಅದನ್ನು ಅನುಭವಿಸಿದನು. ದೇವತೆಗಳೂ ಕೂಡ ಅವರವರ ಕರ್ಮಫಲವನ್ನು ಅನುಭವಿಸಿಯೇ ಅನುಭವಿಸಬೇಕು. ಇದನ್ನು ಜಗದೀಶ್ವರನೂ ತಪ್ಪಿಸಲಾರನು. ನಿನ್ನ ತಂದೆಯು ಆವನ ದುಷ್ಕರ್ಮಗಳಿಗೆ ಅನುರೂಪವಾದ ಫಲವನ್ನು ಹೇಗೆ ಹೊಂದಿದನೋ ಅದನ್ನು ನೀನು ಪ್ರತ್ಯಕ್ಷವಾಗಿ ನೋಡಿದ್ದೀಯೆ. ನೀನು ಯೋಗ್ಯನಾಗಿರುವುದಕ್ಕೆ ಇದಕ್ಕಿಂತಲೂ ಬಲವಾದ ಶಿಕ್ಷಣವು ಬೇರೆ ಉಂಟೇ? ಆಸ್ಟಾರ್ಬಳು ನಿನ್ನನ್ನು ಕೊಲ್ಲಿಸಬೇಕೆಂದು ಮಧ್ಯರಾತ್ರಿಯಲ್ಲಿ ನಿನ್ನನ್ನು ಸಮುದ್ರಕ್ಕೆ ನೂಕಿಸಿದಳು. ಇಂಥಾ ಅವಸ್ಥೆಯಲ್ಲಿ ಮನುಷ್ಯನು ಬದುಕುವುದು ಸಾಧ್ಯವೇ? ದೇವರ ಸಹಾಯವಿಲ್ಲದಿದ್ದರೆ ನೀನು ಬದುಕುತ್ತಿದ್ದೆಯಾ? ನಿರಪರಾಧಿಗಳಾಗಿಯೂ, ಸತ್ಯವಂತರಾಗಿಯೂ ಇರತಕ್ಕವರನ್ನು ದೇವರು ರಕ್ಷಿಸುವನು ಎಂಬುವುದಕ್ಕೆ ನೀನೇ ದೃಷ್ಟಾಂತವಲ್ಲವೇ? ದೇವರಿಂದ ನೀನು ಏತಕ್ಕೆ ರಕ್ಷಿಸಲ್ಪಟ್ಟೆ? ನಿನ್ನ ತಂದೆಯು ದೌರಾತ್ಮ್ಯದಿಂದ ನೊಂದವರನ್ನು ರಕ್ಷಿಸುವುದಕ್ಕೋಸ್ಕರ ನೀನು ರಕ್ಷಿಸಲ್ಪಟ್ಟಿರುವುದಿಲ್ಲವೇ? ನಿಮ್ಮ ವಂಶಕ್ಕೆ ನಿನ್ನ ತಂದೆಯಿಂದ ಉಂಟಾದ ಕಳಂಕವನ್ನು ನಿವಾರಣೆ ಮಾಡಿ, ನಿನ್ನ ವಂಶದ ಕೀರ್ತಿಯು ಜಾಜ್ವಲ್ಯಮಾನವಾಗಿ ಶೋಭಿಸುವಂತೆ ಮಾಡುವುದು ನಿನಗೆ ಕರ್ತವ್ಯವಲ್ಲವೇ? ಸಿರಿಯಾ ದೇಶದಲ್ಲಿ ಕುರುಬನಾಗಿದ್ದುಕೊಂಡಿರಬೇಕೆಂದು ಹೇಳುತ್ತೀಯೆ. ಪೂರ್ವಾಪರಜ್ಞರಾದವರು ನಿನ್ನ ಮಾತುಗಳನ್ನು ಕೇಳಿದರೆ ನಗುವುದಿಲ್ಲವೇ? ಈ ದೇಶದ ಪ್ರಜೆಗಳೆಲ್ಲರೂ ನಿನ್ನ ಮಕ್ಕಳಲ್ಲವೇ? ಇವರ ರಕ್ಷಣೆಯಲ್ಲಿ ಪರಾಙ್ಮುಖನಾಗಿ, ಕುರಿಗಳನ್ನು ಕಾಯುವುದಕ್ಕೆ ನೀನು ಹೊರಟು ಹೋದರೆ, ನೀನು ಕೃತಕೃತ್ಯನಾಗುತ್ತೀಯಾ? ಧನ್ಯತೆಯು ನಿನಗೆ ಲಭ್ಯವಾಗುವುದೇ? ಪ್ರಾಜ್ಞರಾದವರು ನಿನ್ನನ್ನು ಕರ್ತವ್ಯತಾಮೂಢನೆಂದು ಹೇಳುವುದಿಲ್ಲವೇ? ರಾಜ್ಯಭಾರವು ದುಸ್ಸಹವಾ

ದದ್ದೆಂದು ಪ್ರಭುವಾದವನು ಭಯಪಡಬಹುದೇ ? ಪ್ರಜೆಗಳೆಲ್ಲರೂ ಸುಖವಾಗಿರುವಂತೆ ಪ್ರಭುತ್ವ ಮಾಡಿ, ಪ್ರಜೆಗಳು ಸಂತೋಷಾತಿಶಯದಲ್ಲಿ ಮುಳುಗಿ ತೇಲುತ್ತಿದ್ದರೆ, ಅದರಿಂದ ಉಂಟಾಗುವ ಸುಖಕ್ಕೆ ಸಮಾನವಾದ ಸುಖವು ಈ ಲೋಕದಲ್ಲಾಗಲಿ, ಲೋಕಾಂತರದಲ್ಲಾಗಲಿ ಇರುವುದೇ ? ಮಹಾ ಪ್ರಾಜ್ಞನಂತೆ ಮಾತನಾಡುತ್ತಾ, ನಿನ್ನ ಕರ್ತವ್ಯವನ್ನೂ ಕೂಡ ನೀನು ಪರ್ಯಾಲೋಚಿಸುತ್ತಲಿಲ್ಲ. ನಿನ್ನ ಪದವಿಗೆ ಅನುರೂಪವಾದ ಈ ಯೋಚನೆಯನ್ನು ಬಿಡು. ಈ ರಾಜ್ಯಭಾರವನ್ನು ವಹಿಸು. ನೀನು ಧರ್ಮದಿಂದ ನಡೆದರೆ, ಈ ರಾಜ್ಯಭಾರವನ್ನು ವಹಿಸುವುದರಲ್ಲಿ ನಿನಗೆ ಮಹಾಜನಗಳ ಸಹಾಯವಾಗುವುದಲ್ಲದೆ, ದೇವರ ಸಹಾಯವೂ ಆಗುವುದು. ''

ಈ ರೀತಿಯಲ್ಲಿ ನಾರ್ಬಲ್ಲನು ಹೇಳಲು, ಮಹಾಜನಗಳು ಏಕವಾಕ್ಯತೆಯಿಂದ ಅದನ್ನು ಅನುಮೋದಿಸಿದರು. ಸರ್ವರೂ ಅದಕ್ಕೆ ಒಪ್ಪಿದರು. ನಾರ್ಬಲ್ಲನು ಹೇಳಿದ್ದು ಸರಿಯಾದ ಹಿತೋಪದೇಶವೆಂದು ಬೇಲಿಯಮಾಜರಸಿಗೂ ತೋರಿತು. ಅವನು ಹೇಳಿದ್ದೇನಂದರೆ:—

" ಎಲೈ ನಾರ್ಬಲ್ಲನೇ,—ನಿನ್ನ ಹಿತೋಪದೇಶದಿಂದ ನಾನು ಜಯಿಸಲ್ಪಟ್ಟೆನು. ಕರ್ತವ್ಯಜ್ಞಾನವು ನನಗೆ ಉಂಟಾಯಿತು. ಸಕಲ ಪ್ರಜೆಗಳೂ ಸುಖವಾಗಿರುವಂತೆ ಮಾಡುವ ಕ್ಲೇಶವೂ ಕೂಡ ಸ್ವರ್ಗಸುಖಕ್ಕಿಂತಲೂ ಉತ್ತಮವಾದದ್ದು. ಇದರಲ್ಲಿ ಸಂದೇಹವೇನೂ ಇಲ್ಲ. ಈ ಭಾಗದಲ್ಲಿ ಜ್ಞಾನೋದಯವಾಗುವಂತೆ ನೀನು ಮಾಡಿದ ಹಿತೋಪದೇಶಕ್ಕೋಸ್ಕರ ನಾನು ಬಹಳ ಕೃತಜ್ಞನಾಗಿ ಇದೇನೆ. ಪ್ರಭುತ್ವವನ್ನು ವಹಿಸುವುದಕ್ಕೆ ನಾನು ಒಪ್ಪುತ್ತೇನೆ. ಆದರೆ, ಈ ಸಂಸ್ಥಾನದ ಪ್ರಜೆಗಳೆಲ್ಲರೂ ನನ್ನ ಜತೆಯಲ್ಲಿ ಈ ಪ್ರಭುತ್ವದ ಭಾರವನ್ನು ಅವರ ಶಕ್ತ್ಯನುಸಾರ ವಹಿಸುವುದಕ್ಕೆ ಒಪ್ಪಿಕೊಳ್ಳಬೇಕು. ನಾನು ಮಾಡಬೇಕಾದ ಕೆಲಸಗಳನ್ನು ಧರ್ಮಶಾಸ್ತ್ರಗಳು ವಿಧಿಸಿರುವುವು. ನಿಮ್ಮಿಂದ ಅಪೇಕ್ಷಿಸುವ ಉಪಕಾರವನ್ನು ನಾನು ವಿಜ್ಞಾಪಿಸುತ್ತೇನೆ. ಪ್ರಭುಗಳು ಕೇವಲ ದುರದೃಷ್ಟಶಾಲಿಗಳು. ಅವರನ್ನು ಅವರಿಸಿಕೊಂಡಿರತಕ್ಕವರಲ್ಲಿ ಧರ್ಮಿಷ್ಟರು ಇರುವುದುಂಟು. ಅನೇಕ ಅಧರ್ಮಿಷ್ಟರೂ ಇರುವುದುಂಟು. ಯಾರಿಗೆ ಧರ್ಮಿಷ್ಟರ ಸಹಾಯವು ದೊರೆಯುವುದೋ ಅವರ ಪ್ರಭುತ್ವವು ಮನು, ಮಾಂಧಾತ, ಹರಿಶ್ಚಂದ್ರ, ಶ್ರೀ ರಾಮ ಮೊದಲಾದವರ ಪ್ರಭುತ್ವದಂತೆ ಧರ್ಮಕ್ಕೆ ಮಾತೃಸ್ಥಾನವಾಗುವುದು. ಯಾರಿಗೆ ಸತ್ಪುರುಷರ ಸಹಾಯವು

ದೊರೆಯುವುದಿಲ್ಲವೋ ಅವರ ಪ್ರಭುತ್ವವು ರಾವಣನೇ ಮೊದಲಾದವರ ಪ್ರಭುತ್ವಕ್ಕೆ ಸಮಾನವಾಗುವುದು. ದುರ್ಮಂತ್ರಿಗಳ ಮಾತುಗಳೇ ಸತ್ಯವೆಂದು ಪ್ರಭುವು ನಡೆಯುವನು. ಕೊನೆಗೆ ಅವನೂ, ಅವನ ಪುತ್ರಮಿತ್ರಕಳತ್ರಾದಿಗಳೂ ಎಲ್ಲರೂ ನಾಶವಾಗುವ ಗತಿಯು ಬರುವುದು. ಇದಕ್ಕೆ ನಮ್ಮ ತಂದೆಯ ಪ್ರಭುತ್ವವೇ ಸಾಕ್ಷಿಯಾಗಿರುವುದು. ನೀನು ಹೇಳಿದ ಹಿತೋಪದೇಶವು ಸಾಧುವಾಗಿದ್ದಾಗ್ಯೂ, ಪ್ರಭುತ್ವವನ್ನು ವಹಿಸುವುದು ಬಹಳ ಕಷ್ಟವಾಗಿ ತೋರುತ್ತದೆ. ಮಹಾಜನಗಳ ಕುಂದುಕೊರತೆಗಳನ್ನು ಸಮಗ್ರವಾಗಿ ತಿಳಿದ ಹೊರತು, ಅವುಗಳನ್ನು ನಿವಾರಣೆ ಮಾಡುವುದು ಅಸಾಧ್ಯ. ಪ್ರಭುಗಳಿಗೆ ಅನೇಕ ವಿಷಯಗಳಲ್ಲಿ ನಿಜಸ್ಥಿತಿಯು ಗೊತ್ತಾಗುವುದಿಲ್ಲ. ಇವರುಗಳಿಗೆ ಕಣ್ಣುಗಳು ಇದ್ದಾಗ್ಯೂ, ಇತರರ ಕಣ್ಣುಗಳಿಂದ ಲೋಕದ ವಿದ್ಯಮಾನಗಳನ್ನು ನೋಡಬೇಕು. ಇವರಿಗೆ ಕಿವಿಗಳಿದ್ದಾಗ್ಯೂ, ಇತರರ ಕಿವಿಗಳ ಸಹಾಯದಿಂದ ಬಂದ ವರ್ತಮಾನಗಳು ಸತ್ಯವಾದವುಗಳೆಂದು ನಂಬಬೇಕು. ಇವರಿಗೆ ಬುದ್ಧಿ ಇದ್ದಾಗ್ಯೂ, ಇತರರು ಯೋಚಿಸಿ ಹೇಳಿದ್ದನ್ನು ಕೇಳಿ, ಅದರಂತೆ ಅನೇಕ ಬಾಬುಗಳನ್ನು ವ್ಯವಸ್ಥೆ ಮಾಡಬೇಕು. ಸ್ತುತಿಪಾಠಕರ ಹಾವಳಿಯನ್ನು ತಡೆಯುವುದು ಕಷ್ಟ. ನೀನೇ ಇಂದ್ರ, ಚಂದ್ರ, ದೇವೇಂದ್ರನೆಂದು ಹೇಳಿ, ಮುಖೋಲ್ಲಾಸವಾಗುವಂತೆ ಮಾಡಿ, ಮಾಡಬಾರದ ಕೆಲಸಗಳನ್ನು ನಮ್ಮಿಂದ ಮಾಡಿಸತಕ್ಕವರು ನಮ್ಮನ್ನೇ ಆವರಿಸಿಕೊಂಡಿರುತ್ತಾರೆ. ನಮ್ಮ ಬಂಧು, ಪುತ್ರ, ಮಿತ್ರ, ಕಳತ್ರಾದಿಗಳು ತಮಗೆ ಬೇಕಾದ ಕೆಲಸಗಳನ್ನು ನಾವು ಮಾಡುವ ಹಾಗೆ ಮಾಡುತ್ತಾರೆ. ಅಧರ್ಮವಾದ ಕೆಲಸವನ್ನು ಮಾಡಬೇಕೆಂದು ಅವರು ಆಜ್ಞಾಪಿಸಿದಾಗ್ಯೂ ನಾವು ಮಾಡಬೇಕು. ಹಾಗೆ ಮಾಡದಿದ್ದರೆ, ನಮ್ಮ ಪಾಲಿಗೆ ಸಂಸಾರವೇ ನರಕವಾಗುವುದು. ಪ್ರಭುಗಳಾದವರು ಕೇವಲ ಪರಾಧೀನರು. ತಮಗೆ ಬೇಕಾದ ಕೆಲಸಗಳನ್ನು ಸ್ವಯಂ ಮಾಡುವ ಶಕ್ತಿಯು ಇವರಿಗೆ ಇರುವುದಿಲ್ಲ. ಭೃತ್ಯರೂ ಕೂಡ ಇವರ ಮೇಲೆ ಸವಾರಿ ಮಾಡುವರು. ಅವರ ಮಾತುಗಳನ್ನು ಕೇಳದೆ ಇದ್ದಾಗ್ಯೂ ಎಷ್ಟೋ ಕಷ್ಟವು ಬರುವುದು. ಪ್ರಭುಗಳ ಅವಸ್ಥೆಯು ಹೀಗಿರುವುದರಿಂದ, ಅವರು ನಿಸ್ಪೃಹ ಚಕ್ರವರ್ತಿಗಳಾಗಿರಬೇಕೆಂದು ಯಾರಾದರೂ ಅಪೇಕ್ಷಿಸಿದರೆ, ಅದು ಸಾಧ್ಯವಾಗುವುದೆ ? ಇದನ್ನು ಪರ್ಯಾಲೋಚಿಸಿದರೆ ನನಗೆ ಭಯವಾಗುತ್ತದೆ. ನಮ್ಮ ತಂದೆಯ ಅವಸ್ಥೆಯು ನನಗೂ ಎಲ್ಲಿ ಬರುವುದೋ ಎಂಬ ಸಂದೇಹವು ನನಗೆ ಉಂಟಾಗುತ್ತದೆ. ಅಸಹಾಯ

ನಾಗಿ ನಾನು ಪ್ರಭುತ್ವವನ್ನು ಮಾಡುವುದು ಅಸಾಧ್ಯ. ಮಹಾಜನಗಳೆಲ್ಲರೂ ಮನಃಪೂರ್ವಕವಾಗಿ ಸಹಾಯ ಮಾಡುವುದಾದರೆ, ನಾನು ನಿಮ್ಮ ಆಜ್ಞೆಯಂತೆ ಪ್ರಭುತ್ವವನ್ನು ವಹಿಸುವೆನು.

ಈ ರೀತಿಯಲ್ಲಿ ಬೇಲಿಯಾಜಾರನು ಹೇಳಲು, ನಿನ್ನ ಆಜ್ಞೆಗನುಸಾರವಾಗಿ ನಾವೆಲ್ಲರೂ ನಿನಗೆ ಸಹಾಯ ಮಾಡುವುದಕ್ಕೆ ಸಿದ್ಧರಾಗಿ ಇದೇವೆ ಎಂದು ಹೇಳಿದರು. ಅದಕ್ಕೆ ಬೇಲಿಯಾಜರನು ಹೇಳಿದ್ದೇನಂದರೆ :—

'' ಆಜ್ಞೆಯನ್ನು ಮಾಡುವುದಕ್ಕೆ ದೇವರು ದಕ್ಷನೇ ಹೊರತು, ಅಜಿತೇಂದ್ರಿಯರಾಗಿಯೂ, ಅರಿಷಡ್ವರ್ಗಗಳಿಗೆ ಅಧೀನರಾಗಿಯೂ ಇರತಕ್ಕ ಜನಗಳು ಎಂದಿಗೂ ಅರ್ಹರಲ್ಲ. ತಮಗೆ ವಿಜ್ಞಾಪನೆಯನ್ನು ಮಾಡುವುದು ನನಗೆ ಕರ್ತವ್ಯ. ನಾನು ಜಗದೀಶ್ವರನ ಭೃತ್ಯನು. ನಿಮ್ಮ ಸೇವೆಯೇ ನನ್ನ ಕರ್ತವ್ಯ. ಈ ಸೇವೆಯು ಸರಿಯಾಗಿ ಮಾಡಲ್ಪಟ್ಟಿತೆಂದು ನಿಮಗೆ ತೋರಿದರೆ, ಆಗ ನಾನು ಕೃತಕೃತ್ಯನಾಗುತ್ತೇನೆ. ನನ್ನಲ್ಲಿ ದೇವರು ಪ್ರಸನ್ನನಾಗುತ್ತಾನೆ. ರಾಜ್ಯಭಾರವನ್ನು ವಹಿಸುವುದರಲ್ಲಿ ನಿಮ್ಮಿಂದ ನನಗೆ ಆಗತಕ್ಕ ಕೆಲಸಗಳು ಬೇಕಾದಹಾಗಿರುವುವು. ಪ್ರಭುವಿಗೆ ದೇಶದಲ್ಲಿ ಇರತಕ್ಕ ಸಕಲ ಜನಗಳೂ ಮಕ್ಕಳಂತೆ ಪೋಷ್ಯರು. ಯಾರಿಗೆ ಏನು ನ್ಯೂನಾತಿರಿಕ್ತಗಳಾದಾಗ್ಯೂ, ಅದಕ್ಕೆ ಪ್ರಭುವು ಉತ್ತರವಾದಿಯಾಗಿರಬೇಕು. ಮನೆಯ ಯಜಮಾನನು ಮನೆಯಲ್ಲಿ ಇರತಕ್ಕ ಯಾರ್ಯಾರಿಗೆ ಯಾವ ಕಷ್ಟ ಬಂದಾಗ್ಯೂ, ಅದನ್ನು ನಿವಾರಣೆ ಮಾಡುವುದರಲ್ಲಿ ಆಸಕ್ತನಾಗಿರಬೇಕು. ಅದೇ ರೀತಿಯಲ್ಲಿ ಪ್ರಭುವು ತನ್ನ ಸಂಸ್ಥಾನದಲ್ಲಿರತಕ್ಕವರಿಗೆ ಏನು ಕಷ್ಟ ಬಂದಾಗ್ಯೂ ಅದನ್ನು ನಿವಾರಣೆ ಮಾಡಬೇಕು. ಕೋಟ್ಯಂತರ ಜನ ಪ್ರಜೆಗಳಲ್ಲಿ ಯಾರ್ಯಾರಿಗೆ ಏನು ಕಷ್ಟಗಳುಂಟಾಗಿರುವುವೋ ಅದು ಸರಿಯಾಗಿ ತಿಳಿದ ಹೊರತು, ನಿವಾರಣೋಪಾಯಗಳನ್ನು ಮಾಡುವುದು ಅಸಾಧ್ಯ. ಇದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅನೇಕ ನೌಕರರು ನಿಯಮಿಸಲ್ಪಟ್ಟಿರುವರು. ಇವರಲ್ಲಿ ಧರ್ಮಿಷ್ಟರಾದವರು ಇರುವುದುಂಟು. ಅಧರ್ಮಿಷ್ಟರೂ ಇರುವುದುಂಟು. ವಾಸ್ತವಾಂಶಗಳು ಗೊತ್ತಾಗದಂತೆ ಮಾಡಲ್ಪಟ್ಟಿರುವುದುಂಟು. ನೌಕರರಿಂದ ಬರತಕ್ಕ ಅಭಿಪ್ರಾಯಗಳು ನಿಜವೇ ಸುಳ್ಳೇ ಎಂದು ಗೊತ್ತುಮಾಡಿಕೊಳ್ಳುವುದು ಅತ್ಯಾವಶ್ಯಕ. ಈ ಸಂಸ್ಥಾನದ ಮಹಾಜನಗಳೆಲ್ಲರೂ ಮಹಾಜನ ಸಭೆಗಳನ್ನು ಮಾಡಿ

ಕೊಂಡು, ಪ್ರತಿ ಒಂದು ಗ್ರಾಮದ ವಿದ್ಯಮಾನಗಳನ್ನೂ, ಪ್ರತಿ ಒಂದು ಊರಿನ ವಿದ್ಯಮಾನಗಳನ್ನೂ ಲೇಶವೂ ಆಚ್ಛಾದನೆ ಮಾಡದೆ ನನಗೆ ತಿಳಿಸುತ್ತಾ, ದುಷ್ಟನಿಗ್ರಹಕ್ಕೂ, ಶಿಷ್ಟಪರಿಪಾಲನಕ್ಕೂ ಸಹಾಯ ಮಾಡುತ್ತಾ ಬಂದರೆ, ಸರ್ಕಾರದ ನೌಕರರಿಗೂ, ನನಗೂ ತುಂಬಾ ಸಹಾಯ ಮಾಡಿದಂತಾಗುತ್ತದೆ. ದೋಷೋದ್ಘಾಟನೆಗಳನ್ನು ಮಾಡುವುದಕ್ಕೆ ಮಹಾಜನಗಳ ಸಹಾಯ ಮಾತ್ರವೇ ಸಾಲದು. ಸರ್ಕಾರದ ಕೆಲಸಗಳಲ್ಲಿ ಯಾವ ನ್ಯೂನಾತಿರಿಕ್ತಗಳು ಒಂದಾಗ್ಯೂ, ನಿರ್ಭಯವಾಗಿ, ವರ್ತಮಾನ ಪತ್ರಿಕಾಕರ್ತರೂ, ಬಾತ್ಮೀದಾರರುಗಳೂ, ಮಹಾಜನಗಳೂ ಅಂಥಾ ನ್ಯೂನಾತಿರಿಕ್ತಗಳನ್ನು ತೋರಿಸಿ, ಸರಿಯಾದ ಪರಿಹಾರಗಳಿಗೆ ಏರ್ಪಾಡನ್ನು ಮಾಡಿಸಿಕೊಳ್ಳಬೇಕು. ಸರ್ಕಾರದವರಿಂದ ಅಂಥಾ ಏರ್ಪಾಡುಗಳು ಆಗದೇ ಇದ್ದರೆ, ನನ್ನಲ್ಲಿ ಬಂದು ತಿಳಿಸಬೇಕು. ನಾನು ಮಾಡಿದ ಏರ್ಪಾಡು ಅಸಮರ್ಪಕವೆಂದು ತೋರಿದರೆ, ಮಹಾಜನಗಳು ದೊಡ್ಡ ಮೀಟಿಂಗನ್ನು ಮಾಡಿ, ನನಗೂ, ನನ್ನ ಸರ್ಕಾರದವರಿಗೂ ವಾಗ್ದಂಡನವನ್ನು ಮಾಡಬೇಕು. ಪ್ರಭುಗಳೂ, ಸರ್ಕಾರದವರೂ ಎಷ್ಟು ಧರ್ಮಿಷ್ಠರಾಗಿದ್ದಾಗ್ಯೂ, ಪ್ರಜೆಗಳ ಭಯವಿಲ್ಲದಿದ್ದರೆ, ನಿರಂಕುಶಪ್ರವರ್ತಕರಾಗುವರು. ಅದೇ ರೀತಿಯಲ್ಲಿ ಪ್ರಜೆಗಳಿಗೂ ಕೂಡ ಪ್ರಭುಗಳ ಭಯವು ಇರಬೇಕು. ಕಾನೂನುಗಳ ವಿಧಿಗಳಿಗೆ ವಿರೋಧವಾಗಿ ನಡೆದರೆ, ಧರ್ಮೋಲ್ಲಂಘನೆಗೆ ಅನುರೂಪವಾದ ಶಿಕ್ಷೆಯು ತಪ್ಪುವುದಿಲ್ಲವೆಂಬ ಭಯವು ಪ್ರಜೆಗಳಿಗೆ ಇರಬೇಕು. ಪ್ರಭುಗಳ ಪುತ್ರ, ಮಿತ್ರ, ಕಳತ್ರಾದಿಗಳೆಲ್ಲರೂ ತಾವೂ ಪ್ರಜೆಗಳೆಂಬದಾಗಿಯೂ, ತಪ್ಪುಗಳನ್ನು ಮಾಡಿದರೆ, ಇತರ ಪ್ರಜೆಗಳಂತೆ ತಾವೂ ಶಿಕ್ಷೆಗೆ ಗುರಿಯಾಗುವೆವೆಂಬದಾಗಿಯೂ ತಿಳಿದುಕೊಳ್ಳುವಂತೆ ಮಾಡಲ್ಪಡಬೇಕು. ಪ್ರಭುವಿಗೆ ದಾಕ್ಷಿಣ್ಯಪರತೆಯು ಇದ್ದಾಗ್ಯೂ, ಪ್ರಭುವಿನ ಬಂಧು, ಮಿತ್ರರು ದುರ್ಮಾರ್ಗಪ್ರವರ್ತಕರಾದರೆ, ಅವರಿಗೆ ವಾಗ್ದಂಡನೆಯನ್ನು ಮಾಡುವುದರಲ್ಲಿ ಪ್ರಜೆಗಳು ಬದ್ಧಕಂಕಣರಾಗಿರಬೇಕು. ಹಾಗ ಇಲ್ಲದಿದ್ದರೆ, ದುಷ್ಟನಿಗ್ರಹಕ್ಕೆ ಅವಕಾಶವೇ ತಪ್ಪುವುದು. ಈ ಭಾಗದಲ್ಲಿ ನೀವೆಲ್ಲರೂ ನಿರ್ಭಯವಾಗಿ ಸಹಾಯ ಮಾಡುವುದಾದರೆ, ನಾನು ಪ್ರಭುತ್ವಕ್ಕೆ ಒಪ್ಪುತ್ತೇನೆ. ಹಾಗೆ ಇಲ್ಲದಿದ್ದರೆ ಈ ಪ್ರಭುತ್ವವು ನನಗೆ ಆವಶ್ಯಕವಿಲ್ಲ'' ಎಂದು ಬೇಲಿಯಾಜರನು ವಿಜ್ಞಾಪಿಸಿದನು.

ಇವನ ಸರತ್ತನ್ನು ಕೇಳಿ, ಮಹಾಜನಗಳು ಪರಮಾಶ್ಚರ್ಯವನ್ನು ಪಟ್ಟರು. '' ಸಾಮಾನ್ಯವಾಗಿ ಪ್ರಭುಗಳು ನಿರಂಕುಶವಾದ ಅಧಿಕಾರವನ್ನು ಅಪೇಕ್ಷಿಸುವರು,

ಅವರ ನ್ಯೂನಾತಿರಿಕ್ತಗಳನ್ನು ಉದ್ಘಾಟಿಸಿದರೆ, ದುರಾಗ್ರಹಪ್ರತಿನಿವಿಷ್ಠರಾಗಿ, ಅವು ಗಳ ಉದ್ಘಾಟಕರಿಗೆ ಬಲವಾದ ಶಿಕ್ಷೆಯನ್ನೂ ಕೂಡ ಮಾಡುವರು. ನ್ಯೂನಾತಿರಿಕ್ತಗಳನ್ನು ಉದ್ಘಾಟಿಸದಿದ್ದರೆ, ತನಗೆ ಪ್ರಭುತ್ವವೇ ಬೇಡವೆಂದು ಇವನು ಹೇಳುತ್ತಾನೆ. ಇವನು ಕೇವಲ ನಿಸ್ಪೃಹ ಚಕ್ರವರ್ತಿ. ಪ್ರಭುತ್ವ ಮಾಡುವುದಕ್ಕೆ ಮಹಾಜನಗಳ ಪುಣ್ಯಾಪರಿಪಾಕದಿಂದ ಇಂಥಾ ಮಹಾತ್ಮನು ಸಿಕ್ಕಬೇಕು. ಸಮುದ್ರದಲ್ಲಿ ವಿಷ ಹುಟ್ಟಿರುವುದು. ಸತ್ಕುಲದಲ್ಲಿ ದುರಾತ್ಮರು ಹುಟ್ಟಿದರೆ, ಕ್ಷೀರಸಾಗರದಲ್ಲಿ ವಿಷ ಹುಟ್ಟಿದಂತಾಗುವುದು. ಕೆಸರಿನಲ್ಲಿ ಮನೋಹರವಾದ ಕಮಲವು ಹುಟ್ಟುವುದು. ದುರಾತ್ಮನಾದ ಪಿಗ್‌ಮೇಲಿಯನ್ನನಲ್ಲಿ ಇವನು ಜನಿಸಿರುವುದನ್ನು ನೋಡಿದರೆ, ಕಮಲದ ಉತ್ಪತ್ತಿ ಸ್ಥಾನವು ಸ್ಮೃತಿಪಥಕ್ಕೆ ಬರುವುದು'' ಎಂದು ಭಾವಿಸಿ, ಅಲ್ಲಿ ಸೇರಿದ್ದ ಮಹಾಜನಗಳೆಲ್ಲರೂ ಬೇಲಿಯಾಜರನ ಷರತ್ತಿಗೆ ಒಪ್ಪಿದರು. ಆರುವಾಯ ಬೇಲಿಯಾಜರನು ಮತ್ತೊಂದು ಷರತ್ತನ್ನು ಅಪೇಕ್ಷಿಸಿದನು. ಅವನು ಹೇಳಿದ್ದೇನಂದರೆ:—

"ನಾನು ಇನ್ನೂ ವಿದ್ಯಾರ್ಥಿದೆಸೆಯಲ್ಲಿರುತ್ತೇನೆ. ಲೋಕವ್ಯವಹಾರಜ್ಞಾನವು ಸಮರ್ಪಕವಾಗಿ ಇರುವುದಿಲ್ಲ. ಪ್ರಭುತ್ವವು ಪ್ರಜಾರಂಜನೆಗೆ ಸಾಧಕವಾಗಬೇಕಾದರೆ, ಸಕಲ ವಿದ್ಯಾವಿಶಾರದನಾಗಿಯೂ, ಸತ್ಯವಂತನಾಗಿಯೂ, ಧರ್ಮಿಷ್ಟನಾಗಿಯೂ, ಪ್ರಜೆಗಳ ಕ್ಷೇಮವೇ ತನ್ನ ಮೆಹನತ್ತಿಗೆ ಪ್ರತಿಫಲವೆಂಬದಾಗಿಯೂ ಭಾವಿಸತಕ್ಕ ಸಚಿವನ ಸಹಾಯವು ಅತ್ಯಾವಶ್ಯಕ. ಈ ಗುಣಾತಿಶಯಗಳು ನಾರ್ಬಲ್‌ನಲ್ಲಿ ಎಷ್ಟುಮಟ್ಟಿಗಿರುವುದೋ ಅಷ್ಟು ಮಟ್ಟಿಗೆ ಈ ಸಂಸ್ಥಾನದಲ್ಲಿ ಯಾರಿಗೂ ಇರುವಂತೆ ತೋರುವುದಿಲ್ಲ. ಈತನು ನನಗೆ ಮುಖ್ಯ ಸಚಿವನಾಗುವಂತೆ ಒಪ್ಪಿದರೆ, ಅಥವಾ ಈತನು ಒಪ್ಪುವಂತೆ ನೀವು ಮಾಡಿದರೆ, ಈ ಪ್ರಭುತ್ವವು ನನಗೆ ಇರಲಿ. ಈತನ ಸಹಾಯವು ನನಗೆ ಬೇಕು" ಎಂದು ಬೇಲಿಯಾಜರನು ವಿಜ್ಞಾಪಿಸಿದನು.

ಆತನು ಅನೇಕ ಕಾರ್ಯಾಂತರಗಳನ್ನು ಹೊಂದಿ ಇದ್ದನು. ಆದರೆ, ಬೇಲಿಯಾಜರನು ಈ ರೀತಿಯಲ್ಲಿ ವಿಜ್ಞಾಪಿಸಿದ ಕೂಡಲೆ, ಮಹಾಜನಗಳೆಲ್ಲರೂ ಬೇಲಿಯಾಜರನ ಪ್ರಾರ್ಥನೆಗೆ ಒಪ್ಪಬೇಕೆಂದು ಬಹಳ ವಿನಯಪೂರ್ವಕವಾಗಿ ಪ್ರಾರ್ಥಿಸಿದರು. ಈ ಪ್ರಾರ್ಥನೆಯನ್ನು ನಿರಾಕರಿಸುವುದು ಧರ್ಮವಲ್ಲವೆಂದು ಆತನು ಸಚಿವ ಪದವಿಯನ್ನು ಅಲಂಕರಿಸುವುದಕ್ಕೆ ಒಪ್ಪಿದನು. ಕೂಡಲೆ ಪ್ರಭುತ್ವವನ್ನು ವಹಿಸುವುದಕ್ಕೆ ಬೇಲಿ

ಯೂಜರನು ಒಪ್ಪಿದನು. ಮಹಾಜನಗಳೆಲ್ಲರೂ ಸಂತೋಷಭರಿತರಾಗಿ ಪಟ್ಟಾಭಿಷೇಕ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನಡೆಸಿದರು. ಬೇಲಿಯೂಜರನ ಪ್ರಭುತ್ವವು ಪ್ರಜೆಗಳ ಕ್ಷೇಮಕ್ಕೆ ಸಾಧಕವಾಗಲೆಂಬದಾಗಿಯೂ, ಧರ್ಮವಾದ ಪ್ರಜಾರಂಜನೆಯಿಂದ ನಿರ್ದುಷ್ಟವಾದ ಕೀರ್ತಿಯು ಬೇಲಿಯೂಜರನಿಗೆ ಉಂಟಾಗುವಂತೆ ಜಗದೀಶ್ವರನು ಅನುಗ್ರಹಿಸಲೆಂಬದಾಗಿಯೂ ದೇವತಾಪ್ರಾರ್ಥನೆಯು ಮಾಡಲ್ಪಟ್ಟಿತು. ಕೂಡಲೆ ಬೇಲಿಯೂಜರನೂ ಮತ್ತು ನಾರ್ಬಲ್‌ನೂ ಪ್ರಜಾರಂಜನೆಯ ಕೆಲಸಗಳಲ್ಲಿ ಉದ್ಯುಕ್ತರಾದರು. ಅಹೋರಾತ್ರಿಗಳಲ್ಲಿಯೂ ಪರ್ಯಾಲೋಚಿಸಿ, ಕೃಷಿ, ಕೈಗಾರಿಕೆ, ವ್ಯಾಪಾರ ಮೊದಲಾದವುಗಳಲ್ಲಿ ಪ್ರಜೆಗಳಿಗೆ ಪ್ರೋತ್ಸಾಹ ಪ್ರಯತ್ನಗಳು ಮಾಡಲ್ಪಟ್ಟವು. ಸಂಪದಭಿವೃದ್ಧಿಯ ಕೆಲಸಗಳಲ್ಲಿ ವಿಶೇಷ ಮೆಹನತ್ತು ಮಾಡತಕ್ಕವರಿಗೆ ಬಹುಮಾನಗಳು ಮಾಡಲ್ಪಡುತ್ತಾ ಬಂದವು. ಯಾರು ತಮ್ಮ ಕುಟುಂಬಗಳಲ್ಲಿ ಇರತಕ್ಕವರನ್ನು ಸಂತೋಷವಾಗಿ ಇಟ್ಟುಕೊಂಡಿರುತ್ತಾರೋ, ಸರ್ವರೂ ಆರೋಗದೃಢಕಾಯರಾಗಿಯೂ, ಸಚ್ಚಾರಿತ್ರ್ಯಯುಳ್ಳವರಾಗಿಯೂ ಇರುವಂತೆ ಯಾರು ಮಾಡಿಕೊಂಡಿರುತ್ತಾರೋ ಅವರಿಗೆ ಬಿರುದುಗಳೂ, ಬಹುಮಾನಗಳೂ ಕೊಡಲ್ಪಡುತ್ತಾ ಬಂದವು. ಯಾರ ಜಮೀನುಗಳು, ದನಕರುಗಳು, ಅತ್ಯಂತ ಸಮರ್ಪಕವಾದ ಸ್ಥಿತಿಯಲ್ಲಿ ಇಡಲ್ಪಟ್ಟಿರುತ್ತವೆಯೋ, ಯಾರು ಬಹಳ ಮೆಹನತ್ತಿನಿಂದ ಶಾಸ್ತ್ರವಿಧಿಗಳಿಗೆ ಅನುಸಾರವಾಗಿ ಕೃಷಿಯನ್ನು ಮಾಡಿ, ನಾನಾವಿಧವಾದ ಭೋಗ್ಯವಸ್ತುಗಳನ್ನು ಬೆಳೆಯುವರೋ ಅವರಿಗೂ ಬಹುಮಾನಗಳು ಕೊಡಲ್ಪಡುತ್ತಾ ಬಂದವು. ಯಾರು ನಾನಾವಿಧವಾದ ಕೈಗಾರಿಕೆಗಳನ್ನು ಅವಲಂಬಿಸಿ, ಅವುಗಳಲ್ಲಿ ಕೌಶಲ್ಯವನ್ನು ತೋರಿಸಿ, ಭೋಗ್ಯವಸ್ತುಗಳನ್ನು ನಿರ್ಮಾಣ ಮಾಡುವರೋ ಅವರಿಗೆ ಬಹುಮಾನಗಳು ಮಾಡಲ್ಪಡುವುದಕ್ಕೆ ಉಪಕ್ರಮವಾಯಿತು. ಪ್ರಪಂಚದ ವರ್ತಕ ಧರ್ಮವನ್ನು ಪರಿಶೀಲಿಸಿ, ಆಮದು-ರಫ್ತುಗಳ ಮೂಲಕ ದೇಶದಲ್ಲಿ ಭೋಗ್ಯವಸ್ತುಗಳು ಬೇಕಾದ ಹಾಗೆ ಸಿಕ್ಕುವಂತೆಯೂ, ಧಾರಣವಾಸಿಗಳು ಸುಲಭವಾಗಿರುವಂತೆಯೂ, ಉದ್ಯೋಗಿಗಳಿಗೆ ನೆಮ್ಮದಿಯಾಗಿ ಬದುಕುವುದಕ್ಕೆ ಜೀವಿಕೆಯು ಸಿಕ್ಕುವಂತೆ ಯಾರು ಮೆಹನತ್ತು ಮಾಡುತ್ತಲಿದ್ದರೋ ಅವರಿಗೆ ಬಹುಮಾನಗಳು ಮಾಡಲ್ಪಡುತ್ತಾ ಬಂದವು. ಆಯುರಾರೋಗ್ಯೈಶ್ವರ್ಯಗಳಿಗೆ ಸಾಧಕವಾದ ಕೆಲಸಗಳನ್ನು ಶ್ರದ್ಧೆಯಿಂದ ಮಾಡತಕ್ಕ ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳ ನೌಕರರಲ್ಲಿ ಯಾರು ಅಕೃತ್ರಿಮ

ವಾದ ವಿಶ್ವಾಸದಿಂದ ಕೆಲಸವನ್ನು ಮಾಡುವರೋ ಅವರಿಗೆ ಬಹುಮಾನಗಳು ಮಾಡ ಲ್ಪಡುತ್ತಾ ಬಂದವು. ಸರ್ಕಾರದ ನೌಕರರಲ್ಲಿ ಸಂಬಳದ ಮೇಲೆ ಇರುವ ದೃಷ್ಟಿಗಿಂ ತಲೂ ಪ್ರಜೆಗಳ ಸೇವೆಯಲ್ಲಿ ಯಾರಿಗೆ ಹೆಚ್ಚು ದೃಷ್ಟಿಯು ಇತ್ತೋ ಅವರಿಗೆ ಬಹು ಮಾನವನ್ನು ಮಾಡುತ್ತಾ ಬಂದರು. ಕೆಲವು ದಿವಸಗಳಲ್ಲಿ ಬೇಲಿಯಾಜರನ ಮತ್ತು ನಾರ್ಬಲ್ಲನ ಮೆಹನತ್ತಿನಿಂದ ದುಷ್ಟರು ಅಪೂರ್ವವಾದರು. ಸೋಮಾರಿಗಳು ವ್ಯಗ್ರ ರಾದರು. ಸ್ವಶಕ್ತಿಯಿಂದ ಬದುಕತಕ್ಕವರು ಹೆಚ್ಚಿದರು. ಉದ್ಯೋಗವು ಪುರುಷ ರಿಗೆ ಮಾತ್ರವೇ ಅಲ್ಲದೆ, ಸ್ತ್ರೀಯರಿಗೂ ಲಕ್ಷಣವಾಗಿ ಪರಿಣಮಿಸಿತು. ದೇಶದಲ್ಲೆಲ್ಲ ಸುಭಿಕ್ಷವು ರೂಢಮೂಲವಾಯಿತು. ಎಲ್ಲರೂ ಅವರವರ ಕೆಲಸಗಳಲ್ಲಿ ನಿರತರಾದರು. ಜಗಳಗಳು ಅಪೂರ್ವವಾದವು. ಕ್ರಿಮಿನಲ್ ಕೋರ್ಟುಗಳಿಗೆ ಕೆಲಸಗಳು ಇರಲಿಲ್ಲ. ಪೊಲೀಸಿನವರಿಗೆ ಉದ್ಯೋಗವು ಕಡಮೆಯಾಯಿತು. ಜೈಲುಗಳು ಬರಿದಾದವು ಲಾಯರುಗಳಿಗೂ, ಟೌಟುಗಳಿಗೂ ಜೀವನಕ್ಕೆ ಇಲ್ಲದೇ ಹೋಯಿತು. ಎಲ್ಲಿ ನೋಡಿ ದರೂ, ಸ್ತ್ರೀಪುರುಷರೂ, ಮಕ್ಕಳೂ ಆರೋಗ್ಯದೃಢಕಾಯರಾಗಿ ಕಾಣುತ್ತಾ ಬಂದರು. ದೇಶವೆಲ್ಲಾ ಒಂದು ಕುಟುಂಬದಂತೆ ಪರಿಣಮಿಸಿತು. ಈ ಸಂಸ್ಥಾನವೇ ಸ್ವರ್ಗದಂತೆ ಕಾಣುವುದಕ್ಕೆ ಉಪಕ್ರಮವಾಯಿತು. ಇದನ್ನು ನೋಡಿ, ಬೇಲಿಯಾಜರನೂ ನಾರ್ಬ ಲ್ಲನೂ ಅತ್ಯಂತ ಸಂತುಷ್ಟರಾದರು. ಪ್ರಭುತ್ವ ಮಾಡತಕ್ಕವರು ರಾಜ್ಯಭಾರವನ್ನು ಮಾಡುವುದು ದೇವತಾರಾಧನೆಯೆಂದು ತಿಳಿದುಕೊಳ್ಳಬೇಕು. ಜನಗಳಿಗೆ ಕಷ್ಟ ನಿಷ್ಟುರಗಳನ್ನು ತಪ್ಪಿಸುವುದೇ ಜಪವೆಂಬದಾಗಿಯೂ, ತಪವೆಂಬದಾಗಿಯೂ ಭಾವಿಸ ಬೇಕು. ಆ ರೀತಿಯಲ್ಲಿ ಬೇಲಿಯಾಜರನು ಪ್ರವರ್ತಿಸಿದ್ದರಿಂದ, ಅವನು ಪ್ರಭುತ್ವವನ್ನು ವಹಿಸಿದ ಕೆಲವು ದಿವಸಗಳೊಳಗಾಗಿ ಅವನ ಪ್ರಜೆಗಳಿಗೆ ನರಕವು ಸ್ವರ್ಗವಾಗಿ ಪರಿಣ ಮಿಸಿತು. ಬೇಲಿಯಾಜರನಿಗೂ ಮತ್ತು ನಾರ್ಬಲ್ಲನಿಗೂ ತಾವು ಕೃತಕೃತ್ಯರಾದೆವೆಂಬ ಭಾವನೆಯು ಉಂಟಾಯಿತು.

ಮಹಾಜನಗಳಿಗೆ ಸಿಗ್‌ಮೋಲಿಯನ್ನನ ಪ್ರಭುತ್ವಕ್ಕೂ, ಬೇಲಿಯಾಜರನ ಪ್ರಭು ತ್ವಕ್ಕೂ ಇರತಕ್ಕ ವೈಲಕ್ಷಣ್ಯಗಳು ಸ್ಪಷ್ಟವಾಗಿ ಗೊತ್ತಾದವು. ರಾವಣನ ಪ್ರಭು ತ್ವವು ಹೋಗಿ, ಶ್ರೀ ರಾಮನ ಪ್ರಭುತ್ವವು ಲಭ್ಯವಾಯಿತೆಂದು ಮಹಾಜನಗಳೆಲ್ಲರೂ ಸಂತೋಷಪಟ್ಟರು. ಬಹು ಕಾಲದಿಂದ ವ್ಯಾಪಾರವು ಶಿಥಿಲವಾಗಿತ್ತು. ಬೇಲಿ ಯಾಜರನ ಕಾಲದಲ್ಲಿ ಅದಕ್ಕೆ ಅಸಾಧಾರಣವಾದ ಉತ್ತೇಜನ ಉಂಟಾಯಿತು.

ರಾಜ್ಯಭಾರವನ್ನು ಮಾಡುವುದರಲ್ಲಿ ಯಾವ ತೊಡಕುಗಳು ಬಂದಾಗ್ಯೂ, ಚೇಲಿಯಾಜರನು ನಾರ್ಬಲ್ಲನ ಸಹಾಯವನ್ನು ತೆಗೆದುಕೊಳ್ಳುತ್ತಿದ್ದನು. ತನ್ನ ಸಂಸ್ಥಾನದಲ್ಲಿ ಹಿರಿಯರಾಗಿಯೂ, ಅನುಭವಶಾಲಿಗಳಾಗಿಯೂ ಇರತಕ್ಕವರನ್ನು ಕರೆಸಿಕೊಂಡು, ಅವರೊಡನೆ ಇಂಥಾ ವಿಷಯಗಳ ಗುಣದೋಷಗಳನ್ನು ಕುರಿತು ಚರ್ಚೆಮಾಡುತ್ತಿದ್ದನು. ಪ್ರತಿ ಒಂದು ವಿಷಯದ ಪೂರ್ವಾಪರಗಳನ್ನೂ ಚನ್ನಾಗಿ ನೋಡಿ, ಸಾಕ್ಷಾತ್ತಾಗಿ ವಿಚಾರಣೆ ಮಾಡುತ್ತಿದ್ದನು. ದೊಡ್ಡ ವಿಷಯಗಳಲ್ಲಿ ಬಹಿರಂಗವಾಗಿ ಮಹಾಜನಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಲ್ಲದೆ, ಏಕಾಂತವಾಗಿಯೂ ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುತ್ತಿದ್ದನು. ನಾರ್ಬಲ್ಲನಿಂದ ಕೊಡಲ್ಪಟ್ಟ ಅಭಿಪ್ರಾಯವು ತನಗೆ ಸಮ್ಮತವಾದರೆ, ತಮ್ಮಿಬ್ಬರ ಅಭಿಪ್ರಾಯವೂ ಮಹಾಜನಗಳಿಗೆ ಸಮ್ಮತವಾದರೆ, ಆಗ ಕೆಲಸವನ್ನು ಜಾರಿಗೆ ತರುತ್ತಿದ್ದನು. ಜಾರಿಗೆ ತಂದ ಮೇಲೂ ಕೂಡ ತಾನು ಮಾಡಿದ ಏರ್ಪಾಡು ತಪ್ಪೆಂದು ರುಜುವಾತು ಬಂದರೆ ಆ ರುಜುವಾತನ್ನು ನಮೂದಿಸಿ, ತನ್ನ ತೀರ್ಪನ್ನು ಯುಕ್ತವಾಗಿ ಪುನರಾಲೋಚಿಸಿ, ಫೈಸಲನ್ನು ಕೊಡುತ್ತಿದ್ದನು. ತಾನು ಮಾಡಿದ ತೀರ್ಪು ತಪ್ಪೆಂದು ಗೊತ್ತಾದಾಗ್ಯೂ, ಅದನ್ನು ಬದಲಾಯಿಸಕೂಡದೆಂದು ಹಠವನ್ನು ಹಿಡಿಯುತ್ತಿರಲಿಲ್ಲ. ತನ್ನ ಮಂತ್ರಿಗಳೇ ಮೊದಲಾದವರು ಯಾವ ಸಲಹೆಯನ್ನು ಕೊಟ್ಟಾಗ್ಯೂ, ತನ್ನ ಪುತ್ರ, ಮಿತ್ರ, ಕಳತ್ರಾದಿಗಳು ಯಾವ ಸಲಹೆಯನ್ನು ಕೊಟ್ಟಾಗ್ಯೂ, ಅದನ್ನೆಲ್ಲಾ ಕೇಳಿ, ಪರ್ಯಾಲೋಚಿಸುವುದಾಗಿ ಅವರಿಗೆ ಕೃತಪಡಿಸಿ, ಆತುರಪಡದೆ, ಸಾವಧಾನವಾಗಿ ಪರ್ಯಾಲೋಚಿಸಿ, ನ್ಯಾಯವಾದ ಏರ್ಪಾಡುಗಳನ್ನು ಮಾಡುತ್ತಿದ್ದನು. ಅಂಗರಕ್ಷಣೆಯ ಏರ್ಪಾಡನ್ನು ಇವನು ಮಾಡಿಕೊಂಡಿರಲಿಲ್ಲ. ಈ ಏರ್ಪಾಡು ಅನಾವಶ್ಯಕವಾಗಿತ್ತು. ಇವನಿಗೆ ಪ್ರಜೆಗಳೇ ಅಂಗರಕ್ಷಕರಾಗಿದ್ದರು. ಪ್ರಜೆಗಳಲ್ಲಿ ಪ್ರತಿ ಒಬ್ಬರೂ ಇಂಥಾ ದೊರೆಗೆ ಅಪಾಯ ಬಂದರೆ, ತಾವು ಬದುಕುತ್ತಿದ್ದರೂ ಸತ್ತಂತೆ ಎಂಬ ಭಾವನೆಯುಳ್ಳವರಾಗಿದ್ದರು. ಇವನ ರಕ್ಷಣೆಗೋಸ್ಕರ ಪ್ರಾಣವನ್ನೂ ಕೂಡ ಒಪ್ಪಿಸುವುದಕ್ಕೆ ಸಕಲರೂ ಸಿದ್ಧವಾಗಿದ್ದರು. ಇವನು ಸುಖಿಯಾಗಿದ್ದನು. ಅವನ ಸೌಖ್ಯಕ್ಕೆ ಪ್ರಜೆಗಳ ಸೌಖ್ಯವೇ ಕಾರಣವಾಗಿತ್ತು. ಅವನು ಧರ್ಮವಾದ ಕಂದಾಯವನ್ನು ಮಾತ್ರ ತೆಗೆಯುತ್ತಿದ್ದನು. ನ್ಯಾಯವಾದ ಮೊಬಲಗಿಗಿಂತ ಹೆಚ್ಚು ಮೊಬಲಗು ಯಾವ ಪ್ರಜೆಯಿಂದಲೂ ವಸೂಲಾಗುತ್ತಿರಲಿಲ್ಲ. ನ್ಯಾಯವಾದ ಮೊಬಲಗಿಗಿಂತ ಕಡಮೆ

ಯಾಗಿ ಕೊಡುವುದು ಅಧರ್ಮವೆಂದು ಪ್ರಭುಗಳು ಭಾವಿಸುತ್ತಿದ್ದರು. ಹೀಗೆ ಇದ್ದದ್ದರಿಂದ ಪ್ರಜೆಗಳು ಉಪಪನ್ನರಾಗಿದ್ದರು. ಅವರು ಸಾಧುಗಳಾಗಿಯೂ ಇದ್ದರು. ಅವನ ರಾಜ್ಯಭಾರದಲ್ಲಿ ಸಕಲರೂ ವಿದ್ಯಾವಿನಯಸಂಪತ್ತುಳ್ಳವರಾಗಿದ್ದರು. ಯಾರೂ ದುರಹಂಕಾರಿಗಳಾಗಿರಲಿಲ್ಲ. ಸರ್ವರಲ್ಲಿಯೂ ಪುರುಷಕಾರವಿತ್ತು. ಸೋಮಾರಿಗಳು ಅವನ ಕಾಲದಲ್ಲಿ ಇರಲಿಲ್ಲ. ಎಲ್ಲರೂ ಉದ್ಯೋಗಿಗಳಾಗಿದ್ದರು. ಧರ್ಮರಕ್ಷಣೆಯಲ್ಲಿ ಎಲ್ಲರೂ ನಿರತರಾಗಿದ್ದರು. ಫಿನೀಷಿಯಾ ದೇಶದಲ್ಲಿ ಜನಗಳ ಸಂಪತ್ತೂ, ಪ್ರಭುಗಳ ಕೀರ್ತಿಯೂ ಇಷ್ಟು ಪರಾಕಾಷ್ಠದೆಸೆಯಲ್ಲಿ ಯಾವಾಗಲೂ ಇರಲಿಲ್ಲ.

ನಾರ್ಬಲ್ಲನು ಬೇಲಿಯಾಜರನ ಮಂತ್ರಿಯಾಗಿದ್ದನು. ಅವನ ವಿವೇಕಕ್ಕೂ, ಧರ್ಮಕ್ಕೂ ಉತ್ತೇಜಕನಾಗಿಯೂ ಇದ್ದನು. "ಎಲೈ ಟೆಲಿಮಾಕಸ್ಸನೇ,—ಈಗ ನಾರ್ಬಲ್ಲನು ನಿನ್ನನ್ನು ನೋಡಿದರೆ ಎಷ್ಟು ಸಂತೋಷದಿಂದ ಪರವಶನಾಗುವನೋ, ನಿನಗೆ ಬೇಕಾದ ಸಹಾಯಗಳನ್ನು ಮಾಡಿ, ಬೇಲಿಯಾಜರನಿಂದಲೂ ಸಹಾಯವನ್ನು ಮಾಡಿಸಿ, ಇಥಾಕಾದ ಸಿಂಹಾಸನಾರೋಹಣವನ್ನು ಮಾಡಿಸುವುದರಲ್ಲಿ ಎಷ್ಟು ಆಸಕ್ತನಾಗುವನೋ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಅದನ್ನು ಊಹಿಸುವುದು ಮಾತ್ರ ಸಾಧ್ಯ."

ಈ ರೀತಿಯಲ್ಲಿ ಅಡೋಮನು ಹೇಳಲು, ಟೆಲಿಮಾಕಸ್ಸನು ಈ ವೃತ್ತಾಂತಗಳನ್ನೆಲ್ಲಾ ಅತ್ಯಂತ ಆದರದಿಂದ ಕೇಳಿದನು. ತನಗೆ ಸಂಘಟನೆಯಾಗಿದ್ದ ವಿಪತ್ತಿನಲ್ಲಿ ಅಡೋಮನ ಅನುತಾಪವು ಉಂಟಾದದ್ದಕ್ಕೋಸ್ಕರ ಟೆಲಿಮಾಕಸ್ಸನು ತುಂಬಾ ಸಂತೋಷಪಟ್ಟನು. ಅಡೋಮನ ವಿಷಯದಲ್ಲಿ ಅವನಿಗೆ ಪ್ರೀತಿಯೂ, ಗೌರವವೂ ಬಹಳವಾಗಿ ಹೆಚ್ಚಿತು. ಈ ಕೆಲಿಪ್ಸಳ ದ್ವೀಪಕ್ಕೆ ಹೇಗೆ ಬಂದಿಯೆಂದು ಅಡೋಮನು ಟೆಲಿಮಾಕಸ್ಸನನ್ನು ಕೇಳಿದನು? ಅದಕ್ಕೆ ಟೆಲಿಮಾಕಸ್ಸನು ಟೈರ್ ದೇಶದಿಂದ ತಾನು ಹೊರಟಿದ್ದನ್ನೂ, ಸೈಪ್ರಸ್ ದ್ವೀಪಕ್ಕೆ ತಾನು ಹೋದದ್ದನ್ನೂ, ದಾರಿಯಲ್ಲಿ ಮೆಂಟರು ಸಿಕ್ಕಿದ್ದನ್ನೂ, ಅವರೆಲ್ಲರೂ ಸೇರಿ, ಕ್ರೀಟ್ ದ್ವೀಪಕ್ಕೆ ಹೋದದ್ದನ್ನೂ, ಇಡುಮಿನಾಸಿಯಸ್ ಎಂಬುವನು ಹೊರಟುಹೋದ ತರುವಾಯ ಹೊಸ ದೊರೆಯನ್ನು ಚುನಾಯಿಸುವುದಕ್ಕೆ ಅಂಗಸಂಘಟನೆಯೇ ಮೊದಲಾದವುಗಳ ಪೋಟಾಪೋಟಿಯು ನಡೆದದ್ದನ್ನೂ, ತನ್ನ ಹಡಗು ಮುಳುಗಿ, ಕೆಲಿಪ್ಸಳ ದ್ವೀಪಕ್ಕೆ ತಾನೂ, ಮೆಂಟರೂ ಹೋದದ್ದನ್ನೂ, ಯೂಕರಿಸ್ಸಳಿಗೂ, ತನಗೂ ಉಂಟಾದ ಸ್ನೇಹವನ್ನೂ, ಅದರಿಂದ ಕೆಲಿಪ್ಸಳಿಗೆ ಉಂಟಾದ ಹೊಟ್ಟೇ

ಶಿಕ್ಷನ್ನೂ, ತಾನು ಮೋಹಪರವಶನಾಗಿ ಪ್ರತಿಭಟಿಸಿದಾಗ್ಯೂ, ತನ್ನನ್ನು ಮೆಂಟರು ಹೇಗೆ ರಕ್ಷಿಸಿದನೋ ಅದನ್ನೂ ಟೆಲಿಮಾಕಸ್ಸನು ಅಸೋಮನಿಗೆ ತಪಶೀಲುವಾರಾಗಿ ತಿಳಿಸಿದನು.

ಆಗ ಅಸೋಮನು ಇವರ ಸಂತರ್ಪಣೆಗೆ ಏರ್ಪಾಡು ಮಾಡಿಸಿದನು. ನಾನಾ ವಿಧವಾದ ಭಕ್ಷ್ಯಭೋಜ್ಯಗಳೆಲ್ಲಾ ಸಿದ್ಧಮಾಡಲ್ಪಟ್ಟವು. ದೇವತಾರಾಧನೆಯೂ, ಧೂಪ, ದೀಪ, ನೈವೇದ್ಯಗಳೂ ಶಾಸ್ತ್ರವಿಧಿಗನುಸಾರವಾಗಿ ನಡೆಸಲ್ಪಟ್ಟವು. ಸಂತರ್ಪಣೆಯು ಅತಿ ವಿಜೃಂಭಣೆಯಿಂದ ನಡೆಯಿತು. ಭೋಜನಾನಂತರ ದರ್ಬಾರ್ ಹಾಲ್‌ನಲ್ಲಿ ಸರ್ವರೂ ಸೇರಿದರು. ಪುಷ್ಪಹಾರ, ತಾಂಬೂಲ ಮೊದಲಾದವುಗಳು ಕೊಡಲ್ಪಟ್ಟವು. ಆಗ ಗಾನವಿಶಾರದರಾದ ಅಕೆಯೋನ್ಸ್ ಎಂಬಾತನು ವೀಣೆಯನ್ನು ನುಡಿಸುವುದಕ್ಕೆ ಉಪಕ್ರಮಿಸಿದನು. ಈ ಗಾನದ ಮಹಿಮೆಯಿಂದ ಚರಾಚರ ವಸ್ತುಗಳೆಲ್ಲಾ ವಿಸ್ಮಿತವಾದವು. ಟೆಲಿಮಾಕಸ್ಸನು ಸಂತೋಷಪರವಶನಾದನು. ಅನಂತರ ಈಜಿಪ್ಟ್ ದೇಶದ ಕಿನ್ನರಿಯರಲ್ಲಿ ಕೆಲವರೂ, ಗ್ರೀಕ್ ದೇಶದ ಯುವತಿಯರಲ್ಲಿ ಕೆಲವರೂ ನರ್ತನವನ್ನು ಮಾಡಿದರು. ಇವರ ನರ್ತನವು ಅತ್ಯಂತ ಮನೋಹರವಾಗಿತ್ತು. ರಾತ್ರಿಯು ನಿಶ್ಶಬ್ದವಾಗಿತ್ತು. ಸಮುದ್ರವು ಶಾಂತಿಯುಳ್ಳದ್ದಾಗಿತ್ತು. ಚಂದ್ರಿಕೆಯು ಪ್ರಪಂಚವನ್ನೆಲ್ಲಾ ಆವರಿಸಿಕೊಂಡಿತ್ತು. ಆಕಾಶವೆಲ್ಲಾ ನಕ್ಷತ್ರಗಳಿಂದ ಥಳಥಳಿಸುತ್ತಿತ್ತು. ಇವುಗಳಿಂದ ಉಂಟಾಗತಕ್ಕ ಸಂತೋಷಾತಿಶಯವನ್ನು ಟೆಲಿಮಾಕಸ್ಸನು ನಿಟ್ಟುಸಿರು ಬಿಡುತ್ತಾ ಅನುಭವಿಸಿದನು. ಆದರೆ, ಈ ಸಂತೋಷದಲ್ಲಿ ಪರವಶನಾಗಲಿಲ್ಲ. ಕೆಲಿಪ್ಸಳ ದ್ವೀಪದಲ್ಲಿ ಹೇಗೆ ಮೋಹಪರವಶನಾಗಿ, ಮೆಂಟರನ ಆಗ್ರಹಕ್ಕೆ ಪಾತ್ರನಾದನೋ ಅದೆಲ್ಲಾ ಇವನ ಸ್ಮೃತಿಪಥಕ್ಕೆ ಬಂದಿತು. ಕಳವಳದಿಂದ ಮೆಂಟರನ ಮುಖವನ್ನು ನೋಡಿದನು. ಈ ಕಳವಳವನ್ನು ನೋಡಿ, ಮೆಂಟರನು ಇವನ ಮನೋಭಾವವನ್ನು ತಿಳಿದುಕೊಂಡು, ಮಂದಹಾಸಪೂರ್ವಕವಾಗಿ ಹೇಳಿದ್ದೇನೆಂದರೆ:—

" ಎಲೈ ಟೆಲಿಮಾಕಸ್ಸನೇ,—ನಿನ್ನ ಕಳವಳಕ್ಕೆ ಕಾರಣವು ಗೊತ್ತಾಯಿತು. ಈ ಭಯವು ನಿನಗೆ ಗೌರವವನ್ನು ಉಂಟುಮಾಡುವುದು. ಸಂಗೀತ-ಸಾಹಿತ್ಯವೇ ಮೊದಲಾದವುಗಳಿಂದ ಉಂಟಾಗತಕ್ಕ ಸಂತೋಷಾತಿಶಯವು ನಿಂದ್ಯವಾದದ್ದಲ್ಲ.

ಆದರೆ, ಅವುಗಳಿಗೆ ಅಧೀನನಾಗಿ, ನಿನ್ನ ಕರ್ತವ್ಯಗಳನ್ನು ಮರೆಯುವ ಸ್ಥಿತಿಗೆ ಬಂದರೆ, ಆಗ್ಯೆ ಅವುಗಳು ನಿಂದ್ಯವಾಗುವುವು. ಲೋಕಸೇವೆಯನ್ನು ಮಾಡತಕ್ಕದ್ದರಲ್ಲಿ ಬೇಜಾರಾದಾಗ, ವಿಶ್ರಾಂತಿ ರೂಪವಾಗಿ ಸಂಗೀತ-ಸಾಹಿತ್ಯಗಳು ಉಪಾದೇಯಗಳು. ಇವುಗಳು ವಿಷಯಸುಖಪರವಶತೆಗೆ ಆಕರ್ಷಣಗಳಾಗಿ ಪರಿಣಮಿಸಿದರೆ, ಆಗ್ಯೆ ನಿಂದ್ಯಗಳಾಗುತ್ತವೆ. ಸಂಗೀತ-ಸಾಹಿತ್ಯಗಳು ನಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೆ ಸಾಧಕಗಳಾಗಿಯೂ, ಪ್ರೋತ್ಸಾಹಕಾರಿಗಳಾಗಿಯೂ ಮಾಡಲ್ಪಡಬಹುದು. ಈಗ ಅಡೋಮನು ನಿನಗೆ ಲಭ್ಯವಾಗುವಂತೆ ಮಾಡಿದ ಸಂತೋಷಾತಿಶಯಕ್ಕೆ ಕಾರಣವಾದ ಸಂಗೀತ-ಸಾಹಿತ್ಯಗಳು ಎಂದಿಗೂ ನಿಂದ್ಯವಾದದ್ದಲ್ಲ. ನಿರ್ಭಯವಾಗಿ ಈ ಸುಖವನ್ನು ಅನುಭವಿಸಬಹುದು. ಈ ಸುಖವು ದುರ್ವಿಷಯಕ್ಕೆ ಸಾಧಕವಾದದ್ದಲ್ಲ. ಬುದ್ಧಿಯನ್ನು ದುರ್ವ್ಯಾಪಾರಗಳಿಗೆ ಎಳೆಯತಕ್ಕ ಸಂದರ್ಭಗಳು ಇಲ್ಲಿ ಲೇಶವೂ ಇರುವುದಿಲ್ಲ. ಧರ್ಮಕ್ಕೆ ಲೋಪ ಬರುವ ಸಂದರ್ಭವೂ ಇರುವುದಿಲ್ಲ. ಈ ಸಂಗೀತ ಸುಖವನ್ನು ನೀನು ನಿರ್ಭಯವಾಗಿ ಅನುಭವಿಸು '' ಎಂದು ಹೇಳಿ, ಅಚಿಟೌಸ್ಕನ ಕೈಯಲ್ಲಿದ್ದ ವೀಣೆಯನ್ನು ತೆಗೆದುಕೊಂಡು ಮೆಂಟರನು ನುಡಿಸುವುದಕ್ಕೆ ಉಪಕ್ರಮ ಮಾಡಿದನು. ಅಚಿಟೌಸ್ಕನು ತಾನು ವೈಣಿಕ ಶಿಖಾಮಣಿ ಎಂಬದಾಗಿಯೂ, ತನ್ನಮಟ್ಟಿಗೆ ವೀಣೆಯನ್ನು ನುಡಿಸತಕ್ಕವರು ಪ್ರಪಂಚದಲ್ಲಿ ಯಾರೂ ಇರುವುದಿಲ್ಲವೆಂಬದಾಗಿಯೂ ತಿಳಿದುಕೊಂಡಿದ್ದನು. ಬಹು ಜನಗಳಿಗೆ ಇದೇ ಅಭಿಪ್ರಾಯವು ಇತ್ತು. ಮೆಂಟರು ವೀಣೆಯನ್ನು ನುಡಿಸುವುದಕ್ಕೆ ಉಪಕ್ರಮಿಸಲು, ಇವನಿಗೆ ಆಶ್ಚರ್ಯವಾಯಿತು. ಇವನ ಕಣ್ಣುಗಳಲ್ಲಿಯೂ, ಮುಖದಲ್ಲಿಯೂ ತೇಜಸ್ಸು ಕಡಮೆಯಾಯಿತು. ಮೆಂಟರನ ವೀಣಾಗಾನವು ಸದರಿ ದರ್ಬಾರಿನಲ್ಲಿದ್ದ ಸರ್ವರಿಗೂ ಅಸಾಧಾರಣವಾದ ಸಂತೋಷಪರವಶತೆಯನ್ನುಂಟುಮಾಡಿತು. ಉಸುರು ಬಿಟ್ಟರೆ, ಈ ಗಾನರಸವು ಎಲ್ಲಿ ಕೆಡುವುದೋ ಎಂದು ಜನಗಳು ಉಸುರನ್ನೂ ಕೂಡ ಬಿಡದೆ ಕೇಳುತ್ತಿದ್ದರು. ಸರ್ವರಿಗೂ ತಾವು ಭೂಮಿಯ ಮೇಲೆ ಇರುತ್ತೇವೋ, ಸ್ವರ್ಗದಲ್ಲಿ ಇರುತ್ತೇವೋ ಎಂಬ ಸಂದೇಹ ಉಂಟಾಯಿತು. ವೀಣೆಯ ಜೊತೆಗೆ ಮೆಂಟರನು ಕ್ರಮಕ್ರಮವಾಗಿ ತನ್ನ ಗಾನವನ್ನೂ ಸೇರಿಸಿದನು. ಇವನ ಶಾರೀರವು ಇವನ ವೀಣೆಯ ನಾದಕ್ಕಿಂತ ಕಡಮೆಯಾದ ಸುಖವನ್ನು ಉಂಟುಮಾಡಲಿಲ್ಲ. ಇವನು ನುಡಿಸಿದ

ಕೀರ್ತನೆಗಳು ಪ್ರಪಂಚದ ಸೃಷ್ಟಿ, ಸ್ಥಿತಿ, ಪ್ರಳಯಗಳಲ್ಲಿ ಸ್ಪಷ್ಟವಾಗಿ ತೋರುವ ಜಗದೀಶ್ವರನ ಮಹಿಮೆಯನ್ನು ಪ್ರಕಾಶಪಡಿಸುತ್ತಿತ್ತು. ಸಂಕಲ್ಪಮಾತ್ರದಿಂದ ಜಗದೀಶ್ವರನು ಹೇಗೆ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ಮಾಡುವನೋ, ಚಕ್ರವರ್ತಿಗಳೇ ಮೊದಲಾದವರು ಧರ್ಮವನ್ನು ಅವಲಂಬಿಸಿ ನಡೆಯುವವರಿಗೂ ಹೇಗೆ ಮರಣಾನಂತರ ಮೇಲೆ ಸ್ವರ್ಗ ಸುಖವನ್ನು ಅನುಭವಿಸುವರೋ, ದುರ್ವಿಷಯಗಳಿಗೆ ಮನಸ್ಸನ್ನು ಕೊಟ್ಟ ಕೂಡಲೆ, ಅಲ್ಲಿಂದ ಅಗಾಧವಾದ ಪಾತಾಳಕ್ಕೆ ಹೇಗೆ ಬೀಳುವರೋ, ಸರ್ವರೂ ಅವರವರ ಕರ್ಮಗಳಿಗೆ ಅನುಸಾರವಾಗಿ ಅಸಾಧಾರಣವಾದ ಸಂಪತ್ತನ್ನೂ, ವಿಪತ್ತನ್ನೂ ಹೇಗೆ ಹೊಂದುವರೋ, ಈ ವಿಷಯಗಳನ್ನೆಲ್ಲಾ ದೃಷ್ಟಾಂತಪೂರ್ವಕವಾಗಿ ಮನಸ್ಸಿಗೆ ತಗಲುವಂತೆ ರಚಿಸಲ್ಪಟ್ಟಿದ್ದ ಗಾನಗಳನ್ನು ವೀಣೆಯ ಶ್ರುತಿಗೆ ಸೇರಿಸಿ, ಮೆಂಟರನು ಹಾಡಲು, ಸರ್ವರೂ ಆನಂದಪರವಶರಾದರು. ಎಲ್ಲರ ಕಣ್ಣುಗಳಿಂದಲೂ ಆನಂದಭಾಷ್ಪವು ಧಾರಾಸಂಪಾತವಾಗಿ ಸುರಿಯುತ್ತಿತ್ತು. ಶೋಕರಸಪ್ರಧಾನವಾದ ವಿಷಯಗಳು ಹಾಡಲ್ಪಟ್ಟಾಗ, ಅಗಾಧವಾದ ಸಂತಾಪದಿಂದ ಜನಗಳು ಬಿಕ್ಕಿ ಬಿಕ್ಕಿ ಅಳುವುದಕ್ಕೆ ಉಪಕ್ರಮ ಮಾಡಿದರು. ಇವನೇ ಆರ್ಫಿಯಸ್ನಾಗಿರಬೇಕೆಂದು ಕೆಲವರು ಹೇಳಿದರು. ಗಾನದ ಮಹಿಮೆಯಿಂದ ಚರಾಚರಾತ್ಮಕವಾದ ಪ್ರಪಂಚವನ್ನೆಲ್ಲಾ ಆತನು ವ್ಯಾಪಿಸುವಂತೆ ಮಾಡಿ, ದುಷ್ಟ ಜಂತುಗಳೂ ಕೂಡ ಪ್ರಸನ್ನವಾಗುವಂತೆಯೂ, ಪರಸ್ಪರ ವೈರವುಳ್ಳ ಪ್ರಾಣಿಗಳೆಲ್ಲಾ ಸೌಹಾರ್ದದಿಂದ ಬದುಕುವಂತೆಯೂ ಮಾಡುತ್ತಿದ್ದನೆಂದು ಕೇಳಿರುವೆವು. ಅವನೇ ಈ ಮೆಂಟರಾಗಿರಬಹುದು. ಎಲ್ಲರೂ ಪರಮಾಶ್ಚರ್ಯದಿಂದ ಈತನ ಗಾನವನ್ನು ಕೇಳುತ್ತಿದ್ದರು. ಮತ್ತೆ ಕೆಲವರು ಈ ಮೆಂಟರು ಅಮಾನುಷನೆಂಬದಾಗಿಯೂ, ಮನುಷ್ಯನಿಗೆ ಇಂಥಾ ಅದ್ಭುತ ಶಕ್ತಿಯು ಇರುವುದಿಲ್ಲವೆಂಬದಾಗಿಯೂ, ಇವನು ದೇವರ ಅವತಾರವಾಗಿರಬೇಕೆಂಬದಾಗಿಯೂ, ತಮ್ಮ ಪುಣ್ಯಪರಿಪಾಕದಿಂದ ಇವನ ಗಾನಾಮೃತವನ್ನು ಕೇಳಿ ಸಂತೋಷ ಪಡುವ ಸಂಪತ್ತು ತಮಗೆ ಉಂಟಾಯಿತೆಂಬದಾಗಿಯೂ ಅಂದುಕೊಂಡರು. ಇವರೆಲ್ಲರಿಗಿಂತಲೂ ಟೆಲಿಮಾಕಸ್ಸನಿಗೆ ಅತ್ಯಂತ ಆಶ್ಚರ್ಯವಾಯಿತು. ಸಕಲ ವಿದ್ಯೆಗಳಲ್ಲಿಯೂ ಮೆಂಟರನ ಪಾಂಡಿತ್ಯವು ಅಸಮಾನವಾದದ್ದೆಂದು ಇವನಿಗೆ ತಿಳಿದಿದ್ದಾಗ್ಯೂ, ಸಂಗೀತ ಶಾಸ್ತ್ರದಲ್ಲಿ ಇವನ ಪಾಂಡಿತ್ಯವು ಇಷ್ಟು ಅದ್ವಿತೀಯವಾದದ್ದೆಂಬದಾಗಿಯೂ, ಇಂಥಾ ಜಗನ್ಮೋಹನ ಶಕ್ತಿಯು ಇವ

ನಿಗೆ ಇರುವುದೆಂಬದಾಗಿಯೂ ಟೆಲಿಮಾಕಸ್ಸನು ತಿಳಿದುಕೊಂಡಿರಲಿಲ್ಲ. ಇವರ ಮನೋಭಾವಗಳನ್ನೆಲ್ಲಾ ತಿಳಿದುಕೊಂಡು, ಮೆಂಟರನು ಸಂಗೀತ ಸುಖದಿಂದ ಅವರ ಮನಸ್ಸನ್ನು ಎಳೆದು, ಪ್ರಪಂಚ ವ್ಯಾಪಾರಗಳಲ್ಲಿ ಮಗ್ನರಾಗಿ, ಮೋಹಾಂಧರಾಗಿ ಹೇಗೆ ದುರ್ವಿಷಯಗಳಿಗೆ ಮನಸ್ಸನ್ನು ಕೊಟ್ಟು, ಇಹಪರಗಳನ್ನು ಕಳೆದುಕೊಳ್ಳುವರೋ ಆ ವಿಷಯಗಳಲ್ಲಿ ಮಹಾಮಹಿಮರು ಬರೆದಿರತಕ್ಕ ಕೀರ್ತನೆಗಳಿಗೆ ವ್ಯಾಖ್ಯಾನ ಮಾಡುವುದಕ್ಕೆ ಉಪಕ್ರಮಿಸಿದನು. ಆಗ ಜನಗಳ ಮನಸ್ಸು ಗಾನಸುಖದಿಂದ ಹಿತೋಪದೇಶಸುಖವನ್ನು ಅನುಭವಿಸುವುದಕ್ಕೆ ಉಪಕ್ರಮವಾಯಿತು. ಈ ಹಿತೋಪದೇಶವು ಪರ್ಯವಸಾನವಾದ ಕೂಡಲೆ, ಆಸೋಮಸು ಸ್ವಪ್ನಾವಸ್ಥೆಯಿಂದ ಜಾಗ್ರದವಸ್ಥೆಯನ್ನು ಹೊಂದಿ ಹೇಳಿದ್ದೇನಂದರೆ :—

"ಎಲೈ ಮೆಂಟರನೇ,—ನೀನು ಮನುಷ್ಯಮಾತ್ರದವನೆಂದು ತಿಳಿದುಕೊಂಡಿದ್ದೆನು. ನೀನು ಮನುಷ್ಯನಾಗಿರುವಿ. ಆದರೆ, ನಿನಗೆ ಸಮಾನವಾದ ಮನುಷ್ಯನನ್ನು ನಾನು ನೋಡಿ ಇಲ್ಲ. ಒಂದೊಂದು ವಿದ್ಯೆಯಲ್ಲಿ ಒಬ್ಬೊಬ್ಬರಿಗೆ ಅದ್ವಿತೀಯವಾದ ಸಾಮರ್ಥ್ಯವು ಇರುವುದು. ಮಿಕ್ಕ ವಿಷಯಗಳಲ್ಲಿ ಸಾಮಾನ್ಯವಾದ ಶಕ್ತಿಯು ಇರುವುದು. ನಿನ್ನಲ್ಲಿ ಇರುವಂತೆ ಸಕಲ ವಿದ್ಯಾವಿಶಾರದತ್ವವನ್ನೂ, ಸರ್ವತೋಮುಖವಾದ ಪ್ರಜ್ಞೆಯನ್ನೂ ನಾನು ನೋಡಿ ಇಲ್ಲ. ಮನುಷ್ಯರಲ್ಲಿ ಇಂಥಾ ಶಕ್ತಿಯೂ, ಕೌಶಲ್ಯವೂ ಇರುವುದನ್ನು ನಿನ್ನಲ್ಲಿ ನೋಡಿದೆನು. ಇದನ್ನು ನೋಡುವುದಕ್ಕೆ ಮುಂಚೆ ಹೀಗಿರುವುದೆಂದು ಯಾರಾದರೂ ಹೇಳಿದ್ದರೆ, ಅದನ್ನು ನಾನು ಎಂದಿಗೂ ನಂಬುತ್ತಿರಲಿಲ್ಲ. ನೀನು ದೇವತಾಂಶಸಂಭೂತನೆಂದು ಗೊತ್ತಾಗುತ್ತದೆ. ಜಗದೀಶ್ವರನ ಪ್ರಸನ್ನತೆಯು ನಿನ್ನಲ್ಲಿ ವಿಶೇಷವಾಗಿರುವುದು. ಹಾಗೆ ಇಲ್ಲದಿದ್ದರೆ, ಪ್ರತಿ ಒಂದು ಬಾಬಿನಲ್ಲಿಯೂ ಇಂಥಾ ಅದ್ಭುತವಾದ ಕೌಶಲ್ಯವು ನಿನಗೆ ಎಂದಿಗೂ ಉಂಟಾಗುತ್ತಿರಲಿಲ್ಲ. ನಿನ್ನಂತೆ ದೇವರ ಪ್ರಸನ್ನತೆಗೆ ಪಾತ್ರರಾದವರು ದೇವರಂತೆ ಪೂಜ್ಯರಾಗುವರು. ದೈವಯೋಗದಿಂದ ನಿನ್ನ ಸೇವೆಯು ನನಗೆ ದೊರೆತಿತು. ಇದಕ್ಕಾಗಿ ನಾನು ತುಂಬಾ ಸಂತೋಷಿಸುತ್ತೇನೆ" ಎಂದು ಹೇಳಿ, ಟೆಲಿಮಾಕಸ್ಸನನ್ನು ಕುರಿತು, "ಎಲೈ ಟೆಲಿಮಾಕಸ್ಸನೇ,—ನೀನು ಪುಣ್ಯಶಾಲಿ. ಹಾಗಿಲ್ಲದಿದ್ದರೆ, ಇಂಥಾ ಮಹಾನುಭಾವನು ನಿನಗೆ ಗುರುವಾಗಿ ಎಂದಿಗೂ ದೊರೆಯುತ್ತಿರಲಿಲ್ಲ. ತಂದೆ ತಾಯಿಗಳಂತೆ ಮಕ್ಕಳು ಆಗುವರು. ಗುರುಗಳಂತೆ ಶಿಷ್ಯರಾಗುವರು. ಮೆಂಟರನಲ್ಲಿ ಇರತಕ್ಕ

ಗುಣಾತಿಶಯಗಳು ನಿನ್ನಲ್ಲಿಯೂ ಇರುವುದು. ಅವುಗಳು ನಿನ್ನಲ್ಲಿ ಎಷ್ಟುಮಟ್ಟಿಗೆ ಮೂರ್ತೀಭವಿಸಿರುವುವೋ ಅದು ನನಗೆ ಸ್ಪಷ್ಟವಾಗಿ ತಿಳಿಯದು. ಆದರೆ, ಕೆಲಿಪ್ಸಳ ದ್ವೀಪಕ್ಕೆ ಹೋಗಿ, ಅವಳ ಇಂದ್ರಜಾಲ, ಮಹೇಂದ್ರಜಾಲ ವಿದ್ಯೆಯೆಂಬ ಮಹಾ ಪಾಶದಿಂದ ತಪ್ಪಿಸಿಕೊಂಡು ಬಂದಿರುವುದನ್ನು ನೋಡಿದರೆ, ಮೆಂಟರನಲ್ಲಿ ಇರತಕ್ಕ ಸತ್ಯ, ಧರ್ಮ, ಧೈರ್ಯಸ್ಥೈರ್ಯಗಳು ನಿನ್ನಲ್ಲಿಯೂ ವಿಶೇಷವಾಗಿರುವುವೆಂದು ಊಹಿಸ ಬಹುದು. ಜಗದೀಶ್ವರನ ಲೀಲೆಯು ಅದ್ಭುತವಾದದ್ದು. ಜಗತ್ತಿನ ಸೃಷ್ಟಿಯನ್ನು ನೋಡಿದರೆ, ಇವನ ಅದ್ಭುತವಾದ ಲೀಲೆಯು ಸ್ಪಷ್ಟವಾಗುತ್ತದೆ. ಸರ್ವಸಮದೃಷ್ಟಿ ಯಿಂದ ಸರ್ವೇಶ್ವರನು ಸೃಷ್ಟಿ, ಸ್ಥಿತಿ, ಪ್ರಳಯಗಳಿಗೆ ಸಂಬಂಧಪಟ್ಟ ವಿಧಿಗಳನ್ನು ವಿಧಾಯಿಸಿರುವನು. ಆ ವಿಧಿಗಳಿಗೆ ಅನುಸಾರವಾದ ಸಂಸ್ಕಾರವು ಅಣುಗಳು ಮೊದ ಲ್ಗೊಂಡು ಮಹತ್ತಿನ ವರೆಗೂ ಎಲ್ಲಾ ಪದಾರ್ಥಗಳಲ್ಲಿಯೂ ವ್ಯಾಪ್ತವಾಗಿರುವುದು. ಎಲ್ಲಾ ಪ್ರಾಣಿಗಳೂ ಅವುಗಳ ಕರ್ಮಕ್ಕೆ ಅನುರೂಪವಾದ ಫಲವನ್ನು ಹೊಂದಿ, ಜಗದೀ ಶ್ವರನ ನಿಷ್ಪಕ್ಷಪಾತತ್ವವು ದಿಗಂತವಿಶ್ರಾಂತವಾಗುವಂತೆ ಮಾಡುತ್ತಲಿರುವುವು. ಪಾರ್ಥಿವ ಶರೀರವು ಈ ಸಭೆಯಲ್ಲಿರತಕ್ಕ ಎಲ್ಲಾ ಜನಗಳಿಗೂ ಇರುವುದು. ಈ ಪ್ರಪಂಚದಲ್ಲಿರತಕ್ಕ ಎಲ್ಲಾ ಪ್ರಾಣಿಗಳಿಗೂ ಇರುವುದು. ಆದರೆ, ಅದೃಷ್ಟವಾದ ಸಂಸ್ಕಾರಕ್ಕೆ ಅನುಸಾರವಾಗಿ ಬುದ್ಧಿಪ್ರತಿಭೆಯು ಒಬ್ಬೊಬ್ಬರಲ್ಲಿ ಒಂದೊಂದು ವಿಧ ವಾಗಿರುವುದು. ಕಾಡುಮೃಗಗಳ ಜೊತೆಯಲ್ಲಿರತಕ್ಕ ಕುರುಬನ ಮನೋವ್ಯಾ ಪಾರಗಳನ್ನೂ, ಮೆಂಟರನ ಮನೋವ್ಯಾಪಾರಗಳನ್ನೂ ಪರಿಶೀಲಿಸಿದರೆ, ಅದ್ಭುತ ವಾದ ಅಂತರವು ಎಷ್ಟುಮಟ್ಟಿಗಿರುವುದೋ ಅದು ಗೊತ್ತಾಗುವುದು. ಜಡವಸ್ತು ಗಳಿಗೂ, ಅವನ ಮನಸ್ಸಿಗೂ ಇರುವ ಅಂತರವನ್ನು ನೋಡಿದರೆ ಇನ್ನೂ ಅಧಿಕವಾದ ಅಂತರವು ತೋರುವುದು. ಚರ್ಮಚಕ್ಷುಸ್ಸಿಗೆ ಹೇಗೋ ಹಾಗೆ ಜ್ಞಾನಚಕ್ಷುಸ್ಸಿಗೂ ಕೂಡ ಅಜ್ಞಾನ ರೂಪವಾದ ಪರೆಯು ಇರುವುದು. ಜ್ಞಾನಾರ್ಜನೆಯ ರೂಪ ವಾದ ಕರ್ಮಪರಿಪಾಕದಿಂದ ಈ ಪರೆಯು ಹೋಗಿ, ಸಕಲ ವಸ್ತುತತ್ವಜ್ಞಾನವೂ ಲಭ್ಯವಾಗುವುದು. ಇದಕ್ಕೆ ಕರ್ಮಪರಿಪಾಕವೆಂದು ಹೇಳಬಹುದು. ಮೆಂಟ ರನು ಅಸಾಧಾರಣವಾದ ಕರ್ಮಗಳನ್ನು ಮಾಡಿ, ಅಜ್ಞಾನಾಂಧಕಾರಮಯವಾದ ಪ್ರಪಂಚವನ್ನು ಬಿಟ್ಟು ತೇಜೋಮಯವಾದ ಪ್ರಪಂಚವನ್ನು ಪ್ರವೇಶಿಸಿರುವನು. ಸಕಲ ವಿಷಯಗಳಲ್ಲಿಯೂ ತತ್ವಾರ್ಥವು ಪ್ರಕಾಶಿಸಲ್ಪಟ್ಟ ಕೂಡಲೆ, ಇವನ ವ್ಯ

ಸ್ಸಿಗೆ ಹೊಳೆಯುವುದು. ಇವನು ಧನ್ಯನು. ಇವನ ಸಹವಾಸವನ್ನು ಪಡೆದಿರತಕ್ಕ ನೀನೂ ಧನ್ಯನು. ನನ್ನ ಪುಣ್ಯಪರಿಪಾಕದಿಂದ ನಿಮ್ಮ ಸಹವಾಸವು ನನಗೆ ದೊರೆಯಿತು. ಇದಕ್ಕಾಗಿ ನಾನೂ ತುಂಬಾ ಸಂತುಷ್ಟನಾಗಿರುತ್ತೇನೆ.''

ಈ ರೀತಿಯಲ್ಲಿ ಅಡೋಮನು ಹೇಳಲು, ಈ ವಿಷಯದಿಂದ ಸರ್ವರ ಮನಸ್ಸನ್ನೂ ಬೇರೆ ವಿಷಯಗಳಿಗೆ ತಿರುಗಿಸಬೇಕೆಂಬ ಭಾವನೆಯು ಮೆಂಟರನಿಗೆ ಉಂಟಾಯಿತು. ಅವನ ಮುಖಭಾವದಿಂದಲೇ ಟೆಲಿಮಾಕಸ್ಸನು ಇದನ್ನು ತಿಳಿದುಕೊಂಡನು. ಅಡೋಮನನ್ನು ಕುರಿತು ಟೆಲಿಮಾಕಸ್ಸನು ಹೇಳಿದ್ದೇನಂದರೆ :—

"ನಾನು ಈಜಿಪ್ಟ್ ದೇಶದಿಂದ ಬಂದಾಗ ಬಿಯೋಟಿಕಾ ದೇಶಕ್ಕೆ ನೀನು ಹಡಗಿನಲ್ಲಿ ಹೋದ ವೃತ್ತಾಂತವನ್ನು ಹೇಳುತ್ತಿದ್ದೆ. ಆ ದೇಶದ ವೃತ್ತಾಂತಗಳಲ್ಲಿ ಅನೇಕ ಅದ್ಭುತಗಳಿರುವುದಾಗಿಯೂ, ಅವುಗಳು ನಿಜವೆಂದು ನಂಬುವುದೂ ಕೂಡ ಕಷ್ಟವೆಂಬದಾಗಿಯೂ ಹೇಳಿದಿ. ಅದನ್ನು ತಪಶೀಲುವಾರಾಗಿ ಹೇಳಲಿಲ್ಲ. ಆ ಆಶ್ಚರ್ಯಗಳ್ಯಾವುವು ?'' ಎಂದು ಟೆಲಿಮಾಕಸ್ಸನು ಕೇಳಿದನು. ಅದಕ್ಕೆ ಅಡೋಮನು ಹೇಳಿದ್ದೇನಂದರೆ :—

"ಆ ದೇಶದ ವೃತ್ತಾಂತವನ್ನು ಹೇಳುತ್ತೇನೆ. ಅದು ಶ್ರೋತವ್ಯವಾದದ್ದು. ಬಿಯೋಟಿಕಾ ಎಂಬುವುದು ಫಲವತ್ತಾದ ದೇಶ. ಬಿಯೋಟಿಸ್ ಎಂಬ ನದಿಯು ಇದರಲ್ಲಿ ಹರಿಯುತ್ತದೆ. ಇದರಿಂದಲೇ ಅದಕ್ಕೆ ಬಿಯೋಟಿಕಾ ಎಂಬದಾಗಿ ಹೆಸರು ಉಂಟಾಗಿರುವುದು. ಈ ರಾಜ್ಯವು ಸಮಶೀತೋಷ್ಣದಲ್ಲಿರುವುದು. ಮಂದಮಾರುತದ ಸಂಚಾರದಿಂದ ಈ ದೇಶದ ಹವಾವು ಸದಾ ಮನೋಹರವಾಗಿರುವುದು. ಈ ನದಿಯು ಹರ್ಕ್ಯುಲೀಸನ ಸ್ತಂಭಗಳ ಸಮೀಪದಲ್ಲಿ ಸಮುದ್ರಕ್ಕೆ ಸಂಗಮವಾಗುವುದು. ಈ ಪ್ರಾಂತ್ಯದಲ್ಲಿ ಸಮುದ್ರದ ಅಲೆಗಳು ಬಂಡೆಗಳಿಗೆ ಹೊಡೆದು ಗಗನಚುಂಬಿಗಳಾಗಿ, ಆಕಾಶ ಮಾರ್ಗದಿಂದ ಮಾಡಲ್ಪಟ್ಟ ವಿಸ್ತಾರವಾದ ಜಾಜಿ, ಕುಸುಮ ವೃಷ್ಟಿಯೋಪಾದಿಯಲ್ಲಿ ಕೆಳಕ್ಕೆ ಬೀಳುವುದು. ಈ ಪ್ರಾಂತ್ಯವು ನಂದನವನದಂತೆ ಶೋಭಿಸುತ್ತಲಿರುವುದು. ಧರ್ಮಯುಗದ ಚಿನ್ಹೆಗಳು ಇಲ್ಲಿ ನಿತ್ಯವಾಗಿರುವುವು. ಶೀತವೂ, ಔಷ್ಣ್ಯವೂ ಇವೆರಡೂ ಈ ಪ್ರಾಂತ್ಯದಲ್ಲಿ ಸುಖವಾದ ಮಿತಿಯನ್ನು ಅತಿಕ್ರಮಿಸುವುದಿಲ್ಲ. ಬೇಸಿಗೆ ಕಾಲದಲ್ಲಿ ಪಶ್ಚಿಮದಿಕ್ಕಿನಿಂದ ಸುಗಂಧಗರ್ಭಿತಗಳಾದ ಮಲಯಾನಿಲಗಳು ಬೀಸುವವು. ಅದರ ಮಹಿಮೆಯಿಂದ ಸೂರ್ಯನ ತೀಕ್ಷ್ಣವಾದ

ಕಿರಣಗಳೂ ಕೂಡ ಮನೋಹರವಾಗಿ ಪರಿಣಮಿಸುವುವು. ಈ ಪ್ರಾಂತ್ಯದಲ್ಲಿ ಯಾವಾಗ್ಯೂ ವಸಂತರುತುವಿನ ಧರ್ಮಗಳು ಎಲ್ಲಿ ನೋಡಿದಾಗ್ಯೂ ಕಾಣುತ್ತಿರುವುವು. ಈ ಪ್ರಾಂತ್ಯದ ಕಣಿವೆಗಳಲ್ಲಿಯೂ, ಮೈದಾನಗಳಲ್ಲಿಯೂ, ಗುಡ್ಡಗಳಲ್ಲಿಯೂ ವರ್ಷಕ್ಕೆ ಎರಡಾವರ್ತಿ ಭೋಗ್ಯವಸ್ತುಗಳು ಬೆಳೆಯುವುವು. ಬೇಲಿಗಳಲ್ಲಿ ನಾನಾ ವಿಧವಾದ ಫಲಪುಷ್ಪಗಳನ್ನು ಬಿಡತಕ್ಕ ವೃಕ್ಷಗಳಿರುವುವು. ಪರ್ವತಾಗ್ರಗಳಲ್ಲಿ ದನಕರುಗಳು, ಕುರಿಗಳು, ಆಡುಗಳು ಇವೇ ಮೊದಲಾದ ಜನಗಳ ಸೌಖ್ಯಕ್ಕೆ ಸಾಧಕವಾದ ಪ್ರಾಣಿಗಳು ಸ್ವೇಚ್ಛೆಯಿಂದ ಮೇಯುತ್ತಲಿರುವುವು ಈ ದೇಶದಲ್ಲಿ ಚಿನ್ನ, ಬೆಳ್ಳಿ ಮೊದಲಾದ ಅನೇಕ ವಿಧವಾದ ಲೋಹದ ಗಣಿಗಳು ಇರುವುವು. ಜನಗಳು ಸೋಮಾರಿಗಳಲ್ಲ. ಇವುಗಳನ್ನು ರೂಢಿಸುವುದರಲ್ಲಿ ಎಲ್ಲರೂ ದಕ್ಷರಾಗಿರುವರು. ರೂಢಿಸುವುದಕ್ಕೆ ಬೇಕಾದ ಯಂತ್ರಸಾಮಗ್ರಿಗಳು ಇವರಲ್ಲಿ ಗೊತ್ತಿಲ್ಲದ ಹಾಗಿರುವುವು. ಅವುಗಳನ್ನು ತಯಾರ್ಮಾಡುವುದರಲ್ಲಿ ಈ ಜನಗಳು ನಿಸ್ಸೀಮರಾಗಿರುವರು. ಈ ದೇಶದಲ್ಲಿ ಚಿನ್ನ, ಬೆಳ್ಳಿ, ರತ್ನ ಮೊದಲಾದವುಗಳಿಗೆ ಬೆಲೆಯಿಲ್ಲ. ಭೋಗ್ಯವಸ್ತುಗಳ ಪ್ರಾಪ್ತಿಯೇ ಇವರಿಗೆ ಮುಖ್ಯಗುರಿಯಾಗಿರುವುದು. ಈ ದೇಶಕ್ಕೆ ನಾವು ಮೊದಲು ಹೋದಾಗ, ನೇಗಲಿಗೆ ಚಿನ್ನ, ಬೆಳ್ಳಿ ಮೊದಲಾದವುಗಳನ್ನು ಉಪಯೋಗಿಸುತ್ತಿದ್ದರು. ಕ್ರಮಕ್ರಮವಾಗಿ ಈ ಕೆಲಸಕ್ಕೆ ಕಬ್ಬಿಣವು ಪ್ರಯೋಜನಕರವಾದದ್ದೆಂದು ಗೊತ್ತಾಯಿತು. ಈಗ ಕಬ್ಬಿಣಕ್ಕೆ ಇರುವ ಬೆಲೆಯು ಆ ದೇಶದಲ್ಲಿ ಚಿನ್ನ, ಬೆಳ್ಳಿಗೆ ಇರುವುದಿಲ್ಲ. ಈ ದೇಶೀಯರು ಕುರುಬರಾಗಿಯೂ, ಕರ್ಷಕರಾಗಿಯೂ ಇರುವರು. ಅನ್ನವಸ್ತ್ರಗಳಿಗೆ ಬೇಕಾದ ಪದಾರ್ಥಗಳನ್ನು ನಿರ್ಮಾಣ ಮಾಡುವುದೇ ಇವರ ಮುಖ್ಯ ಉದ್ಯೋಗವಾಗಿರುವುದು. ಕರ್ಷಕ ವೃತ್ತಿಗೆ ಸಾಧಕವಾದ ಉಪವೃತ್ತಿಗಳೆಲ್ಲಾ ಇವರಲ್ಲಿ ಪರಾಕಾಷ್ಠದಸೆಯನ್ನು ಹೊಂದಿರುವುವು. ದನಕರುಗಳನ್ನು ಸಾಕುವುದು, ಮೇವನ್ನು ಬೆಳೆಯುವುದು, ಗೊಬ್ಬರವನ್ನು ಉಪಯೋಗಿಸುವುದು, ಮನೆಗಳನ್ನು ಕಟ್ಟುವುದು, ಬಡಗಿ ಕೆಲಸ, ಕಬ್ಬಿಣದ ಕೆಲಸ, ತುಪಟದ ಬಟ್ಟೆಗಳನ್ನು ಮಾಡುವುದು, ಅರಳೇ ಬಟ್ಟೆಗಳನ್ನು ಮಾಡುವುದು, ಉಡಿಗೆಗಳನ್ನು ಮಾಡುವುದು, ಪಾಕಶಾಸ್ತ್ರ, ಹಣ್ಣುಗಳನ್ನು ಕೊಳೆಯದಂತೆ ಇಡುವುದು, ಕಾಯಿಗಳು ಬಹುಕಾಲದವರೆಗೂ ಇರುವಂತೆ ಮಾಡುವುದು, ಹಾಲನ್ನು ಕೆಡದಂತೆ ಇಡುವುದು, ಸತ್ತ ಪ್ರಾಣಿಗಳ ಅಸ್ತಿ, ಚರ್ಮ ಮೊದಲಾದವುಗಳಿಂದ ಉಡಿಗೆ-ತೊಡಿಗೆ

ಮೊದಲಾದ ಪದಾರ್ಥಗಳನ್ನು ಮಾಡುವುದು, ಸಕಲ ಪ್ರಾಣಿಗಳನ್ನೂ ಸಾಕಿ, ಅವುಗಳಿಂದ ನಿರ್ಮಾಣ ಮಾಡಲ್ಪಟ್ಟ ಪದಾರ್ಥಗಳು ಮನುಷ್ಯರಿಗೆ ಉಪಯೋಗವಾಗುವಂತೆ ಮಾಡುವುದು, ಮನೆಗಳನ್ನೂ, ಉಡಿಗೆ-ತೊಡಿಗೆಗಳನ್ನೂ ನಿರ್ಮಲವಾಗಿರುವಂತೆ ಇಟ್ಟುಕೊಳ್ಳುವುದು, ಋತುಧರ್ಮಗಳಿಗೆ ಅನುಸಾರವಾದ ಬಟ್ಟೆಗಳನ್ನು ನೇಯುವುದು. ಮರದಲ್ಲಿಯೂ, ಕಬ್ಬಿಣದಲ್ಲಿಯೂ ಗೃಹಕೃತ್ಯಕ್ಕೂ, ಭೋಗ್ಯವಸ್ತುಗಳ ನಿರ್ಮಾಣಕ್ಕೂ ಬೇಕಾದ ಸಾಮಾನುಗಳನ್ನು ಮಾಡುವುದು ಇವುಗಳಲ್ಲೆಲ್ಲಾ, ಈ ದೇಶೀಯರು ಕೇವಲ ನಿಸ್ಸೀಮರಾಗಿರುತ್ತಾರೆ. ಇಲ್ಲಿನ ಜನಗಳು ಕೃಷಿಯನ್ನು ಮಾಡುವುದರಲ್ಲಿ ಬಹಳ ಸಮರ್ಥರು. ದನಗಳನ್ನೂ, ಕುರಿಗಳನ್ನೂ ಪುತ್ರನಿರ್ವಿಶೇಷವಾಗಿ ಸಾಕುತ್ತಾರೆ. ಇವುಗಳೇ ಇವರ ಧನ. ಮರದಿಂದಲೂ, ಕಬ್ಬಿಣದಿಂದಲೂ, ಗೃಹಕೃತ್ಯಕ್ಕೆ ಬೇಕಾದ ಪಾತ್ರೆಗಳನ್ನೆಲ್ಲಾ ಮಾಡಿಕೊಳ್ಳುತ್ತಾರೆ. ಅಪೂರ್ವವಾಗಿಯೂ, ಕಷ್ಟಸಾಧ್ಯವಾಗಿಯೂ ಇರುವ ಲೋಹಗಳು ಹೆಚ್ಚಾದದ್ದರಿಂದ, ಅವುಗಳನ್ನು ಅವರು ಉಪಯೋಗಿಸುವುದಿಲ್ಲ. ಕಬ್ಬಿಣವನ್ನೂ ಕೂಡ ಜಿರಾಯಿತು ಯಂತ್ರಗಳಿಗೂ, ಮುಟ್ಟುಗಳಿಗೂ ವಿಶೇಷವಾಗಿ ಉಪಯೋಗಿಸುತ್ತಾರೆ. ಅಲಂಕಾರವಾದ ಕಟ್ಟಡಗಳಲ್ಲಿಯೂ, ಭೋಗ್ಯವಸ್ತುಗಳಲ್ಲಿಯೂ ಇವರು ತಮ್ಮ ಕೌಶಲ್ಯವನ್ನು ಉಪಯೋಗಿಸುವುದಿಲ್ಲ. ಈ ನಶ್ವರವಾದ ಪ್ರಾಣವನ್ನು ಕಾಪಾಡುವುದಕ್ಕೆ ಶಾಶ್ವತವಾದ ಪ್ರಾಸಾದಗಳಿಂದ ಪ್ರಯೋಜನವಿರುವುದಿಲ್ಲವೆಂದು ಭಾವಿಸಿ, ಅವರು ಕಟ್ಟಡಗಳಿಗೆ ತುಂಬಾ ದ್ರವ್ಯವನ್ನು ವಿನಿಯೋಗಿಸುವುದಿಲ್ಲ. ದುಸ್ಸಹವಾದ ಛಳಿ, ಗಾಳಿ, ಮಳೆ, ಬಿಸಿಲು ಮೊದಲಾದವುಗಳಿಂದ ರಕ್ಷಿಸಿಕೊಂಡರೆ ಸಾಕೆಂದು ಇವರು ಅಭಿಪ್ರಾಯವುಳ್ಳವರಾಗಿರುತ್ತಾರೆ. ಗ್ರೀಸ್, ಈಜಿಪ್ಟ್ ಮೊದಲಾದ ದೇಶಗಳಲ್ಲಿ ನಾಗರಿಕತೆಯ ಮಹಿಮೆಯಿಂದ ಚಿತ್ರವಿಚಿತ್ರವಾಗಿಯೂ, ಮನೋಹರವಾಗಿಯೂ ಇರತಕ್ಕ ಭೋಗ್ಯವಸ್ತುಗಳು ಲಕ್ಷಾಧಿಕಾರಿಗಳ ಮತ್ತು ಕೋಟೀಶ್ವರರ ಉಪಯೋಗಕ್ಕಾಗಿ ನಿರ್ಮಿಸಲ್ಪಡುತ್ತಲಿರುವುವು. ಅಂಥಾ ಪದಾರ್ಥಗಳಲ್ಲಿ ಅವರು ಆಸಕ್ತರಾಗಿರುವುದಿಲ್ಲ. ಅವುಗಳಲ್ಲಿ ತಿರಸ್ಕಾರ ಬುದ್ಧಿಯನ್ನೇ ತೋರಿಸುವರು. ಅರಮನೆಗಳು, ಪ್ರಾಸಾದಗಳು, ನವರತ್ನಖಚಿತವಾದ ಆಭರಣಗಳು, ಅಮೌಲ್ಯವಾದ ಪೀತಾಂಬರಗಳು ಇವುಗಳಿಂದ ಈ ಕ್ಷಣಭಂಗುರವಾದ ದೇಹಗಳಿಗೆ ಪ್ರಯೋಜನವಿಲ್ಲವೆಂದು ಇವರು ತಿಳಿದುಕೊಂಡು, ಅವುಗಳಲ್ಲಿ ಉದಾಶೀನರಾಗಿರುವರು. ಅತ್ಯಂತ ಸುಂದರವಾದ ಕಟ್ಟಡಗ

ಳಲ್ಲಿ ವಾಸಮಾಡುವುದರಿಂದ, ಪರ್ಣಶಾಲೆಯಲ್ಲಿ ವಾಸಮಾಡುವುದರಿಂದ ಉಂಟಾಗ ತಕ್ಕ ಆಯುರಾರೋಗ್ಯೈಶ್ವರ್ಯಗಳುಂಟಾಗುವುವೇ ಎಂದು ಇವರು ಕೇಳುತ್ತಾರೆ. ಕೋಟ್ಯಂತರ ರೂಪಾಯಿಗಳು ಬಾಳತಕ್ಕ ಉಡಿಗೆ-ತೊಡಿಗೆಗಳ ಭಾರವನ್ನು ವಹಿಸು ವುದರಿಂದ, ನಿಸರ್ಗವಾಗಿ ಇಲ್ಲದ ಪ್ರಯೋಜನಗಳು ಉಂಟಾಗುವುವೇ ಎಂದು ಇವರು ಕೇಳುವರು. ಮಣ್ಣಿನ ಪಾತ್ರೆಗಳಿಗಿಂತಲೂ, ಮರದ ಪಾತ್ರೆಗಳಿಗಿಂತಲೂ ನವರತ್ನ ಖಚಿತವಾದ ಚಿನ್ನದ ಪಾತ್ರೆಗಳಿಂದಲೂ, ಬೆಳ್ಳಿ ಪಾತ್ರೆಗಳಿಂದಲೂ ಹೆಚ್ಚು ಪ್ರಯೋಜ ನವುಂಟೇ ಎಂದು ಕೇಳುವರು. ಕಸೂತಿ ಬಟ್ಟೆಗಳಿಂದಲೂ, ಜರತಾರಿ ಬಟ್ಟೆಗಳಿಂ ದಲೂ, ಪೀತಾಂಬರಗಳಿಂದಲೂ, ಹೊಲಮಗ್ಗದ ಬಟ್ಟೆಗಳಿಗಿಂತಲೂ ಹೆಚ್ಚಾದ ಪ್ರಯೋಜನವು ಉಂಟೇ ಎಂದು ಕೇಳುವರು. ಹಂಸತೂಲಿಕಾತಲ್ಪಗಳು ಸಾಮಾ ನ್ಯವಾದ ಮಂದಲಿಗೆಗಳಿಗಿಂತಲೂ, ಬಂತೆಗಳಿಗಿಂತಲೂ ಹೆಚ್ಚಾದ ಪ್ರಯೋಜನ ವುಂಟೇ ಎಂದು ಕೇಳುವರು. ಅತ್ಯಂತ ಬೆಲೆಯಾಗತಕ್ಕ ಪದಾರ್ಥಗಳು ಅಪಹ ರಿಸಲ್ಪಟ್ಟರೆ, ಕೇವಲ ವ್ಯಸನವಾಗುವುದೆಂಬದಾಗಿಯೂ, ಮಣ್ಣಿನ ಪಾತ್ರೆಗಳು, ಮರದ ಪಾತ್ರೆಗಳು, ಬಿದರು ಪಾತ್ರೆಗಳು ಅಪಹರಿಸಲ್ಪಟ್ಟಾಗ್ಯೂ, ಅವುಗಳಿಗೆ ಬದಲಾಗಿ ವಿಶೇಷ ಖರ್ಚಿಲ್ಲದೆ, ಅದೇ ಪಾತ್ರೆಗಳನ್ನು ತಂದುಕೊಳ್ಳಬಹುದೆಂಬ ದಾಗಿಯೂ, ಸಕಲ ಭಾಗಗಳಲ್ಲಿಯೂ ಅರಮನೆ, ಪ್ರಾಸಾದ ಮೊದಲಾದವುಗ ಳಿಗಿಂತಲೂ ಪರ್ಣಶಾಲೆಗಳು, ಗುಡಿಸಲುಗಳು ಉತ್ತಮವೆಂಬದಾಗಿಯೂ, ಷಡ್ರಸೋ ಪೇತವಾದ ಆಹಾರಗಳಿಗಿಂತಲೂ ಅಂಬಲಿ, ಹಿಟ್ಟು, ಮಜ್ಜಿಗೆ, ನೀರು ಮೊದಲಾದ ಬಡವರ ಆಹಾರಗಳು, ಆಯುರಾರೋಗ್ಯಗಳಿಗೆ ವಿಶೇಷ ಸಾಧಕಗಳಾಗುವುವೆಂಬದಾ ಗಿಯೂ ಈ ಜನಗಳು ತಿಳಿದುಕೊಂಡಿರುವರು. ಬಹಳ ಬೆಲೆಯುಳ್ಳ ಆಹಾರದ ಲ್ಲಿಯೂ, ಪಾನದಲ್ಲಿಯೂ ಆಸಕ್ತರಾದವರ ಶರೀರಗಳು ಅನೇಕ ರೋಗಗಳಿಗೆ ಮಾತ್ರ ಸ್ಥಾನವಾಗುವುವೆಂಬದಾಗಿಯೂ, ಅಂಥಾ ಜನಗಳಿಗೆ ಧೈರ್ಯಸ್ಥೈರ್ಯಗಳು ಕಡಮೆ ಯಾಗುವುವೆಂಬದಾಗಿಯೂ, ಅನೇಕ ಭೋಗ್ಯವಸ್ತುಗಳು ಉನ್ಮತ್ತತೆಗೆ ಕಾರಣವಾ ಗುವುವೆಂಬದಾಗಿಯೂ, ಭೋಗ್ಯವಸ್ತುಗಳನ್ನು ಉಪಯೋಗಿಸುವ ಪದ್ಧತಿಯು ಬಿದ್ದ ಕೂಡಲೆ, ಅವುಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಗತಿಯಿಲ್ಲದೆ ಹೋದರೆ, ಮೋಸ, ಕಳ್ಳತನ ಮೊದಲಾದವುಗಳನ್ನಾದರೂ ಮಾಡಿ, ಅವುಗಳನ್ನು ಸಂಪಾದಿಸಿಕೊಳ್ಳುವ ಪ್ರಯತ್ನವು ಮಾಡಲ್ಪಡುತ್ತದೆಂಬದಾಗಿಯೂ, ಇಷ್ಟು ಮಾಡಿದಾಗ್ಯೂ, ಆಯುರಾ

ರೋಗ್ಯಗಳು ಹೆಚ್ಚುವುದಿಲ್ಲವೆಂಬದಾಗಿಯೂ, ಇವುಗಳ್ಯಾವುವೂ ಶಾಂತಿಗೆ ಸಾಧಕಗಳಲ್ಲವೆಂಬದಾಗಿಯೂ, ಪರಸ್ಪರ ದ್ವೇಷಕ್ಕೂ, ಅದರಿಂದ ಉಂಟಾಗತಕ್ಕ ಅನರ್ಥಗಳಿಗೂ ಈ ಭೋಗ್ಯವಸ್ತುಗಳು ಕಾರಣವಾಗುವುವೆಂಬದಾಗಿಯೂ, ಮಿತಾಹಾರವೂ, ವೈರಾಗ್ಯವೂ ಸಕಲ ತಾಪತ್ರಯಗಳನ್ನೂ ಹೋಗಲಾಡಿಸಿ, ಈ ಲೋಕವೂ, ಲೋಕಾಂತರವೂ ಎರಡೂ ನಮ್ಮ ಭಾಗಕ್ಕೆ ಸ್ವರ್ಗವಾಗಿ ಪರಿಣಮಿಸುವಂತೆ ಮಾಡತಕ್ಕ ಶಕ್ತಿಯುಳ್ಳವುಗಳೆಂಬದಾಗಿಯೂ ಈ ಮಹಾಜನಗಳು ಹೇಳುತ್ತಾರೆ. ಭೋಗ್ಯವಸ್ತುಗಳಲ್ಲಿ ಆಸಕ್ತರಾಗಿ, ನಮ್ಮನ್ನು ನೋಡಿ, ಅವರು ಪರಿಹಾಸ ಮಾಡುತ್ತಾರೆ. ಅವರಲ್ಲಿ ಪಾರೀಖತ್ತು ಮಾಡಿಕೊಳ್ಳುವುದೇ ಅಪೂರ್ವ. ಎಲ್ಲರೂ ಅವಿಭಕ್ತರಾಗಿರುತ್ತಾರೆ. ಪ್ರತಿ ಒಂದು ಕುಟುಂಬವೂ ಒಂದು ರಿಪಬ್ಲಿಕ್ಕಾಗಿರುತ್ತದೆ. ಕುಟುಂಬದ ಯಜಮಾನನು ರಿಪಬ್ಲಿಕ್ಕಿಗೆ ಪ್ರೆಸಿಡೆಂಟನಂತೆ ಗಣಿಸಲ್ಪಡುತ್ತಿದಾನೆ. ಅವನು ಕುಟುಂಬದಲ್ಲಿ ಅಪರಾಧಿಗಳನ್ನು ನಿದಾಕ್ಷಿಣ್ಯವಾಗಿ ಶಿಕ್ಷಿಸುವನು. ಶಿಕ್ಷೆಯನ್ನು ಮಾಡುವುದಕ್ಕೆ ಮುಂಚೆ ಕುಟುಂಬದಲ್ಲಿ ಎಲ್ಲರನ್ನೂ ಸೇರಿಸಿ, ಅಪರಾಧಿಯ ಅಪರಾಧಗಳನ್ನು ಎಲ್ಲರಿಗೂ ತೋರಿಸಿ, ಅಪರಾಧಿಯು ಹೇಳುವುದನ್ನೂ, ಕುಟುಂಬದ ಎಲ್ಲಾ ಜನಗಳ ಅಭಿಪ್ರಾಯವನ್ನೂ ತೆಗೆದುಕೊಂಡು, ಸರ್ವಸಮ್ಮತವಾದ ದಂಡನೆಯನ್ನು ವಿಧಿಸುವನು. ಅಪರಾಧಿಯು ಆ ಶಿಕ್ಷೆಯನ್ನು ಶಿರಸಾ ವಹಿಸಿ ಅನುಭವಿಸುವನು. ಈ ದೇಶದಲ್ಲಿ ಪೋಲೀಸಿನವರು ಇಲ್ಲ. ಮ್ಯಾಜಿಸ್ಟ್ರೇಟುಗಳು ಇಲ್ಲ. ನ್ಯಾಯಾಧಿಪತಿಗಳು ಇರುವುದಿಲ್ಲ. ಪ್ರತಿ ಒಂದು ಕುಟುಂಬವೂ ಒಂದು ಪಂಚಾಯಿತ ಕೋರ್ಟಾಗಿರುವುದು. ಪ್ರತಿ ಒಬ್ಬರೂ ವಿಧಿಯಿಲ್ಲದೆ ಮನಸ್ಸಾಕ್ಷಿಗೆ ಅನುಸಾರವಾಗಿ ನಡೆಯುವರು. ಈ ದೇಶದಲ್ಲಿ ಹೊಲಗಳಲ್ಲಿಯೂ, ಗದ್ದೆಗಳಲ್ಲಿಯೂ, ತೋಟಗಳಲ್ಲಿಯೂ ಜನಗಳ ಅನ್ನವಸ್ತ್ರಕ್ಕೆ ಬೇಕಾದ ಪದಾರ್ಥಗಳೆಲ್ಲಾ ಬೆಳೆಯಲ್ಪಡುವುವು. ಜನಗಳು ಆಸ್ತಿಯನ್ನು ಮಾಡಿಕೊಳ್ಳಬೇಕೆಂಬ ಆಶೆಯನ್ನು ಹೊಂದಿರುವುದಿಲ್ಲ. ಕುಟುಂಬಕ್ಕೆ ತಗಲತಕ್ಕ ಪದಾರ್ಥಗಳನ್ನು ಸರ್ವರೂ ಹಂಚಿಕೊಳ್ಳುವರು. ಕುಟುಂಬಕ್ಕೆ ಎಷ್ಟು ಬೇಕೋ ಅಷ್ಟನ್ನು ಉಪಯೋಗಿಸಿಕೊಂಡ ಮೇಲೆ, ಏನಾದರೂ ಉಳಿದರೆ, ನೆರೆಹೊರೆಯವರಿಗೂ, ಗ್ರಾಮಸ್ಥರಿಗೂ ಹಂಚಲ್ಪಡುವುದು. ಕುಟುಂಬಗಳು ಚಿಕ್ಕ ರಿಪಬ್ಲಿಕ್ಕುಗಳಾದಾಗ್ಯೂ, ಪಟ್ಟಣಗಳೂ, ಗ್ರಾಮಗಳೂ ಫೆಡರೇಟೆಡ್ ರಿಪಬ್ಲಿಕ್ಕುಗಳಾಗಿರುವುವು. ಅಂದರೆ ಅನೇಕ ರಿಪಬ್ಲಿಕ್ಕುಗಳು ಸೇರಿದ ಒಂದು ರಿಪಬ್ಲಿಕ್ಕಾಗಿರುವುದು. ದುರ್ಮಾರ್ಗ

ಪ್ರವರ್ತಕರು ಪ್ರಥಮತಃ ಕುಟುಂಬಗಳಿಂದ ಬಹಿಷ್ಕೃತರಾಗಿರುವರು. ಅನಂತರ ಊರಿನಿಂದಲೂ, ಗ್ರಾಮಗಳಿಂದಲೂ ಬಹಿಷ್ಕೃತರಾಗುವರು. ದುಷ್ಟನಿಗ್ರಹದ ಏರ್ಪಾಡುಗಳನ್ನು ಮಹಾಜನಗಳು ತಾವೇ ಮಾಡಿಕೊಳ್ಳುವರು. ಭೋಗ್ಯವಸ್ತುಗಳ ಅನುಭವದಲ್ಲಿ ಸರ್ವಸಮದೃಷ್ಟಿ ಇದ್ದಾಗ್ಯೂ, ಗುಣಾತಿಶಯಗಳಿಗೆ ಸನ್ಮಾನ ಮಾಡುವುದರಲ್ಲಿ ತಾರತಮ್ಯವು ಇವರಲ್ಲಿ ವಿಶೇಷವಾಗಿ ಇರುವುದು. ಯಾರು ಸಕಲ ವಿದ್ಯಾವಿಶಾರದರಾಗಿಯೂ, ಸಕಲ ಧರ್ಮಗಳನ್ನೂ ಅನುಷ್ಠಿಸುವುದರಲ್ಲಿ ಅಗ್ರಗಣ್ಯರಾಗಿಯೂ ಇರುವರೋ ಅವರಿಗೆ ವಿಶೇಷ ಮರ್ಯಾದೆಯು ತೋರಿಸಲ್ಪಡುವುದು. ಮೋಸ, ವಂಚನೆ, ದೌರ್ಜನ್ಯ, ವಿವಾದ, ಗಲಾಟೆ, ದುರಹಂಕಾರ, ಕ್ರೌರ್ಯ ಇವೇ ಮೊದಲಾದ ದುರ್ಗುಣಗಳಿಗೆ ಮೇಲೆ ಹೇಳಿದ ರಿಪಬ್ಲಿಕ್ಕಿನವರು ತಾವಾಗಿಯೇ ಶಿಕ್ಷೆಯನ್ನು ಮಾಡಿಕೊಳ್ಳುವರು. ಅನೇಕರು ಹತರಾಗುವ ಯುದ್ಧಗಳು, ಜಯಗಳು, ಚಕ್ರಾಧಿಪತ್ಯಗಳ ಪ್ರಳಯಗಳು, ಇವುಗಳ್ಯಾವುವೂ ಈ ದೇಶದಲ್ಲಿ ಇರುವುದಿಲ್ಲ. ಹುಟ್ಟಿದವರು ಸಾಯಬೇಕು. ದೈವಸಂಕಲ್ಪವೇ ಹೀಗಿರುವಾಗ, ರಾಗದ್ವೇಷಗಳಿಂದ ಜನಗಳು ಒಬ್ಬರನ್ನೊಬ್ಬರು ಕೊಲ್ಲುವುದು ಧರ್ಮವೇ ಎಂದು ಈ ಮಹಾಜನಗಳು ಕೇಳುವರು. ಸರ್ವರಿಗೂ ಆಯುಸ್ಸು ಬಹಳ ಮಿತವಾಗಿರುವುದು. ಬದುಕಿರುವವರೆಗೂ ಎಲ್ಲರೂ ಸುಖವಾಗಿರುವಂತೆ ಮಾಡಿ, ತಾವೂ ಸುಖವಾಗಿರುವಂತೆ ಮಾಡಿಕೊಳ್ಳದೆ, ಒಬ್ಬರನ್ನೊಬ್ಬರು ಮೂಲೋತ್ಪಾಟನ ಮಾಡಬೇಕೆಂದು ಪ್ರಯತ್ನ ಮಾಡುವುದು ಅತ್ಯಂತ ಜಘನ್ಯವಾದದ್ದಲ್ಲವೇ ಎಂದು ಈ ಮಹಾಜನಗಳು ಕೇಳುವರು. ಜಯಶಾಲಿಗಳೆಂಬ ಶಬ್ದವೇ ಜಘನ್ಯವಾದದ್ದೆಂಬದಾಗಿಯೂ, ಒಬ್ಬರಿಗೆ ಪರಾಜಯ ಮಾಡಿದ ಹೊರತು, ಜಯಶಾಲಿ ಎಂಬ ಬಿರುದು ಬರುವುದಿಲ್ಲವೆಂಬದಾಗಿಯೂ, ಪರಾಜಯದ ಕ್ಲೇಶವನ್ನು ಇತರರಿಗೆ ಮಾಡುವುದೂ ಕೂಡ ಮಹಾ ಪಾಪವೆಂಬದಾಗಿಯೂ, ದೇಶವು ವಿಶಾಲವಾಗಿರುವುದೆಂಬದಾಗಿಯೂ, ಸರ್ವರೂ ಸುಖವಾಗಿರಬೇಕೆಂಬುವುದೇ ಜಗದೀಶ್ವರನ ಸಂಕಲ್ಪವೆಂಬದಾಗಿಯೂ, ಬಲಾತ್ಕಾರವಾಗಿ ನಮ್ಮ ಬಂಧುಗಳಿಂದಲೂ, ನೆರೆಹೊರೆಯವರಿಂದಲೂ ಸೇವೆಯನ್ನು ಮಾಡಿಸಿಕೊಳ್ಳುವ ಅಭಿನಿವೇಶವು ಜಘನ್ಯವಾದದ್ದೆಂಬದಾಗಿಯೂ, ವಿದ್ವತ್ತಿನಲ್ಲಿಯೂ, ಗುಣಾತಿಶಯಗಳಲ್ಲಿಯೂ ತಾರತಮ್ಯವಿರಬಹುದೇ ಹೊರತು, ಈ ಪ್ರಪಂಚವೆಂಬ ರಿಪಬ್ಲಿಕ್ಕಿನಲ್ಲಿ ಅನ್ನವಸ್ತ್ರಗಳನ್ನು ಹೊಂದಿ, ಜೀವಿಸುವ ವಿಷಯದಲ್ಲಿ ಸರ್ವಸಮದೃಷ್ಟಿಯು ಇರಬೇಕೆಂಬದಾಗಿಯೂ,

ಭಯ, ಕ್ಲೇಶ, ತಾಪತ್ರಯ ಮೊದಲಾದವುಗಳು ಯಾವ ದೇಶದಲ್ಲಿರುವುವೋ ಆ ದೇಶದ ಪ್ರಭುಗಳು ಪ್ರಭುತ್ವಕ್ಕೆ ಅನರ್ಹರೆಂಬದಾಗಿಯೂ, ಸ್ವಾತಂತ್ರ್ಯಕ್ಕೂ ಅನರ್ಹರೆಂಬದಾಗಿಯೂ ಈ ದೇಶೀಯರು ಹೇಳುವರು. ಸರ್ವರೂ ಸುಖವಾಗಿರಲೆಂದು ದೇವರು ಸಂಕಲ್ಪ ಮಾಡಿರುವಾಗ, ಆ ಸಂಕಲ್ಪವನ್ನು ನೆರವೇರಿಸಿದರೆ, ತಮಗೆ ಹೆಚ್ಚು ಸಂಪತ್ತು ಬೇಕೆಂಬದಾಗಿಯೂ, ಇತರರಿಗೆ ಕಡಮೆ ಸಂಪತ್ತು ಸಾಕೆಂಬದಾಗಿಯೂ ಪ್ರಭುಗಳೇ ಆಗಲಿ, ಅಧಿಕಾರಿಗಳೇ ಆಗಲಿ, ಮಹಾಜನಗಳೇ ಆಗಲಿ ವಿಧಿಯನ್ನು ಮಾಡಿದರೆ, ಆ ವಿಧಿಯು ಧರ್ಮವಾದ ವಿಧಿಯಲ್ಲವೆಂಬದಾಗಿ ಈ ದೇಶೀಯರು ಹೇಳುವರು. ಯಾವ ಮನುಷ್ಯನು ಈ ಪ್ರಪಂಚದ ಸಂಪತ್ತುಗಳನ್ನು ಅನುಭವಿಸುವುದಕ್ಕೆ ತನಗೆ ಎಷ್ಟು ಹಕ್ಕುಬಾಧ್ಯತೆಯು ಇರುವುದೋ ಅಷ್ಟು ಹಕ್ಕುಬಾಧ್ಯತೆಯು ಸರ್ವರಿಗೂ ಇರುವುದೆಂದು ಯಾವನು ಭಾವಿಸುವನೋ, ಈ ಭಾವನೆಯು ಯಾವನ ಅನುಷ್ಠಾನದಲ್ಲಿ ಇರುವುದೋ ಅವನೇ ಕೃತಕೃತ್ಯನೆಂಬದಾಗಿಯೂ, ಅವನಿಗೆ ಇಹಪರಗಳೆರಡೂ ದೊರೆಯುವುವೆಂಬದಾಗಿಯೂ, ಈ ಅಭಿಪ್ರಾಯವಿಲ್ಲದವರಿಗೆ ಈ ಲೋಕವೂ, ಲೋಕಾಂತರವೂ, ಎರಡೂ ನರಕಪ್ರಾಯವಾಗುವುದೆಂಬದಾಗಿಯೂ ಈ ದೇಶೀಯರು ತಿಳಿದುಕೊಂಡಿರುತ್ತಾರೆ.'' ಈ ರೀತಿಯಲ್ಲಿ ಅಡೋಮನು ಟೆಲಿಮಾಕಸ್ಸನಿಗೂ, ಮೆಂಟರಿಗೂ ಶ್ರುತಪಡಿಸಿದನು. ಇದನ್ನು ಕೇಳಿ, ಆಶ್ಚರ್ಯಪಟ್ಟು, ಟೆಲಿಮಾಕಸ್ಸನು ಈ ಬಿಯೋಟಿಕಾ ದೇಶದ ಜನಗಳು ದ್ರಾಕ್ಷಿರಸದ ಪಾನವನ್ನು ಮಾಡುವುದಿಲ್ಲವೇ ಎಂದು ಕೇಳಿದನು. ಅದಕ್ಕೆ ಅಡೋಮನು ಹೇಳಿದ್ದೇನಂದರೆ:—

'' ಈ ದೇಶದಲ್ಲಿ ನಿಷಾ ಬರತಕ್ಕ ಪಾನಗಳನ್ನು ತಯಾರುಮಾಡಿದವರಿಗೆ ಮರಣದಂಡನೆಯು ಆಗುವುದು. ಯಾವ ವಿಧವಾದ ಸಾರಾಯಿಯೂ ಈ ದೇಶದಲ್ಲಿ ತಯಾರಾಗುವುದಿಲ್ಲ. ಇದಕ್ಕೆ ಇಲ್ಲಿ ದ್ರಾಕ್ಷಿ ಹಣ್ಣು ಇರುವುದಿಲ್ಲವೆಂದರ್ಥವಲ್ಲ. ಹಣ್ಣನ್ನು ತಿನ್ನುವುದರಿಂದ ಬುದ್ಧಿವಿಕಲ್ಪವಾಗುವುದಿಲ್ಲ. ಇತರ ಹಣ್ಣುಗಳನ್ನು ತಿನ್ನುವಂತೆ ದ್ರಾಕ್ಷಿಹಣ್ಣನ್ನು ತಿನ್ನಬಹುದು. ದ್ರಾಕ್ಷಿಹಣ್ಣನ್ನು ಕೊಳೆಸಿದರೆ ವಿಷಮಯವಾದ ಮಾದಕ ದ್ರವ್ಯವು ಹುಟ್ಟುವುದು. ಆ ರಸಪಾನದಿಂದ ಜನಗಳು ಉನ್ಮತ್ತರಾಗುವರು. ಇಂಥಾ ಉನ್ಮತ್ತರು ಯುಕ್ತಾಯುಕ್ತವಿಹೀನರಾಗುವರು. ಮಾಡಬಾರದ ಕೆಲಸಗಳನ್ನು ಮಾಡುವರು. ಅದರಿಂದ ಇವರ ಆರೋಗ್ಯವೂ, ಇವರ ಶಕ್ತಿಯೂ, ಇವರ ಸ್ಥೈರ್ಯವೂ, ಇವರ ಸಾರಾಸಾರವಿಚಾರತೆಯೂ ಎಲ್ಲಾ

ಹೋಗುವುವು. ಇಂಥಾ ಅನರ್ಥಕಾರಿಗಳಾದ ನಿಷಾದ್ರವ್ಯಗಳ ತಯಾರಿಯು ನಿಷೇಧಿಸಲ್ಪಟ್ಟಿರುವುದು." ಹೀಗಾದರೆ ವಿವಾಹದ ವಿಷಯದಲ್ಲಿ ಈ ದೇಶದಲ್ಲಿ ಯಾವ ಕಾನೂನುಗಳು ಜಾರಿಯಲ್ಲಿರುವುವು ? ಎಂದು ಟೆಲಿಮಾಕಸ್ಸನು ಕೇಳಿದನು. ಅದಕ್ಕೆ ಅಡೋಮನು ಹೇಳಿದ್ದೇನಂದರೆ:—

"ಈ ದೇಶದಲ್ಲಿ ಎಲ್ಲಾ ಗಂಡಸರೂ ಏಕಪತ್ನಿವ್ರತರಾಗಿರುವರು. ಒಬ್ಬ ಹೆಂಡತಿಯು ಬದುಕಿರುವಾಗ ಮತ್ತೊಬ್ಬಳನ್ನು ಅವನು ಮದುವೆ ಮಾಡಿಕೊಳ್ಳ ಕೂಡದು. ಹೆಂಡತಿಯನ್ನು ಮನೆಯ ದೇವತೆಯಂತೆ ಇವನು ಕಾಣಬೇಕು. ಇವನನ್ನು ತನ್ನ ಸದ್ಗತಿಗೆ ಮಾತೃಸ್ಥಾನದಂತೆ ಅವಳು ಕಾಣಬೇಕು. ಪುರುಷರು ಈ ದೇಶದಲ್ಲಿ ಪರನಾರೀಸಹೋದರರಾಗಿರುವರು. ಸ್ತ್ರೀಯರು ಈ ದೇಶದಲ್ಲಿ ಪತಿವ್ರತಾಶಿರೋಮಣಿಗಳಾಗಿರುವರು. ಪುರುಷರಿಗೆ ಏಕಪತ್ನೀವ್ರತವು ಹೇಗೆ ಶೋಭೆಯನ್ನುಂಟುಮಾಡುವುದೋ ಹಾಗೆ ಸ್ತ್ರೀಯರಿಗೆ ಪಾತಿವ್ರತ್ಯವು ಶೋಭೆಯನ್ನುಂಟುಮಾಡುತ್ತಲಿರುವುದು. ಈ ಗುಣಾತಿಶಯಗಳೇ ಅವರಿಗೆ ಆಭರಣಗಳಾಗಿರುವುವು. ಈ ದೇಶೀಯರಲ್ಲಿ ಉದ್ಯೋಗವು ಪುರುಷರಿಗೆ ಹೇಗೋ ಹಾಗೆ ಸ್ತ್ರೀಯರಿಗೂ ಭಾಗ್ಯಲಕ್ಷಣವಾಗಿರುವುದು. ಆರೋಗದೃಢಕಾಯರಾದವರೆಲ್ಲರೂ ಉದ್ಯೋಗವಿಲ್ಲದೆ, ಕಾಲಕ್ಷೇಪ ಮಾಡುವುದಿಲ್ಲ. ಅವರ ವಿವಾಹಗಳು ಅತ್ಯಂತ ಸ್ವಲ್ಪವೂ ಬೆಲೆಯಿಲ್ಲದವುಗಳಾಗಿರುವುವು. ಮಹಾಜನಗಳು ಸೇರಿ, ವಧೂವರರು ಯಾವಜ್ಜೀವವೂ ಪರಸ್ಪರ ಪ್ರೀತಿಯುಳ್ಳವರಾಗಿರಬೇಕೆಂದು ಮಹಾಜನಗಳೆದುರಿಗೆ ಪಂಚಭೂತಗಳ ಸನ್ನಿಧಿಯಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳ ಸನ್ನಿಧಿಯಲ್ಲಿ ಪ್ರತಿಜ್ಞೆ ಮಾಡುವರು. ಇವರಿಗೆ ಮಂಗಳವಾಗಲೆಂದು ಮಹಾಜನಗಳು ಆಶೀರ್ವಾದ ಮಾಡುವರು. ಕೂಡಲೆ ಅವರು ದಂಪತಿಗಳಾಗುವರು. ಈ ದಂಪತಿಗಳ ಶರೀರಗಳು ಬೇರೆ ಬೇರೆಯಾಗಿದ್ದಾಗ್ಯೂ, ವಿವಾಹವಾದಾರಭ್ಯ ಮನಸ್ಸೂ, ಆತ್ಮವೂ ಒಂದೇ ವಿಧವಾಗಿ ಪರಿಣಮಿಸುವುವು. ಮನೆಯಲ್ಲಿ ಹೆಂಡತಿಯು ಕಾರ್ಯಾಚಾರ್ಯೆಯಳಾಗುವಳು. ಹೊರಗಿನ ಕೆಲಸಗಳನ್ನು ಮಾಡುವುದರಲ್ಲಿ ಗಂಡನು ಕಾರ್ಯಾಚಾರ್ಯನಾಗುವನು. ಹೊರಗಿನ ಕೆಲಸಗಳನ್ನು ಪೂರೈಸಿಕೊಂಡು, ಮನೆಗೆ ಬಂದ ಕೂಡಲೆ, ಅವನಿಗೆ ಸ್ವರ್ಗಾನುಭವವು ಉಂಟಾಗುವಂತೆ ಹೆಂಡತಿಯು ಮಾಡುವಳು. ತನ್ನ ಉಪಚಾರಗಳಿಂದ ಹೇಗೋ ಹಾಗೆ ಅಕೃತ್ರಿಮವಾದ ಪ್ರೀತಿಯಿಂದಲೂ, ಅವನ ಸುಖವು ಸ್ವರ್ಗಸುಖವಾಗುವಂತೆ ಆಕೆಯು

ಮಾಡುವಳು. ದಂಪತಿಗಳು ಮತ್ತು ಮಕ್ಕಳು ಭೋಗ್ಯವಸ್ತುಗಳಲ್ಲಿ ಪರಾಂಗ್ಮುಖರಾಗಿ, ದೇಹಧಾರಣೆಗೆ ಸಾಧಕವಾದ ಪದಾರ್ಥಗಳಲ್ಲಿ ಅನುರಕ್ತರಾಗಿ, ಸಕಲ ಭೂತಗಳನ್ನೂ ತಮ್ಮಂತೆ ತಿಳಿದುಕೊಂಡು, ಯಾರಿಗೂ ಬಾಧಕವಾಗದಂತೆ ಕೈಲಾದ ಮಟ್ಟಿಗೂ ಪರೋಪಕಾರವನ್ನು ಮಾಡುತ್ತಾ, ಅವರು ಆಯುರಾರೋಗ್ಯೈಶ್ವರ್ಯವನ್ನು ಹೊಂದುವರು. ಇವರಲ್ಲಿ ನೂರಾರು ವರ್ಷಗಳಾದ ಸ್ತ್ರೀಪುರುಷರು ಆರೋಗದೃಢಕಾಯರಾಗಿ, ಉದ್ಯೋಗಿಗಳಾಗಿರುವುದನ್ನು ನೀವು ನೋಡಬಹುದು.'' ಈ ರೀತಿಯಲ್ಲಿ ಅಡೋಮನು ಹೇಳಲು, ಟೆಲಿಮಾಕಸ್ಸನು ಯುದ್ಧವನ್ನು ತಪ್ಪಿಸಿಕೊಳ್ಳುವುದಕ್ಕೆ ಇವರು ಏನುಮಾಡುತ್ತಾರೆ? ಎಂಬದಾಗಿ ಕೇಳಿದನು. ಅದಕ್ಕೆ ಅಡೋಮನು ಹೇಳಿದ್ದೇನಂದರೆ :—

"ಇವರ ದೇಶವು ಮೂರುಕಡೆ ಸಮುದ್ರದಿಂದಲೂ, ಮತ್ತೊಂದು ಕಡೆ ಅತ್ಯಂತ ಉನ್ನತವಾದ ಪರ್ವತಗಳಿಂದಲೂ ಸುತ್ತುವರಿಯಲ್ಪಟ್ಟಿದೆ. ಇವರ ನೆರೆಹೊರೆಯವರ ರಾಜ್ಯದವರು ಇವರಲ್ಲಿ ಸುಪ್ರೀತರಾಗಿರುತ್ತಾರೆ. ಈ ದೇಶೀಯರು ತಮ್ಮ ನೆರೆಯ ದೇಶಗಳಲ್ಲಿ ಭ್ರಾತೃಭಾವವನ್ನು ಇಟ್ಟುಕೊಂಡು, ಪರಸ್ಪರ ಪ್ರೀತಿಯಿಂದ ಬದುಕುವರು. ಇವರು ಆಸ್ತಿಯನ್ನು ಶೇಖರಿಸಿಟ್ಟುಕೊಂಡಿರುವುದಿಲ್ಲ. ತಾವು ಬೆಳೆದ ಪದಾರ್ಥಗಳಲ್ಲಿ ತಮಗೆ ಬೇಕಾದಷ್ಟನ್ನು ಇಟ್ಟುಕೊಂಡು, ಉಳಿದದ್ದನ್ನು ಅಪ್ರಾರ್ಥಿತವಾಗಿ ತಮ್ಮ ನೆರೆ ದೇಶದವರಿಗೆ ಕೊಡುವರು. ಪ್ರೀತಿಯಿಂದ ಪ್ರೀತಿಯು ಹೇಗೆ ಹೆಚ್ಚುವುದೋ ಹಾಗೆ ಪರೋಪಕಾರದಿಂದ ಪರೋಪಕಾರವು ಹುಟ್ಟುವುದು. ನೆರೆಹೊರೆ ರಾಜ್ಯದವರಿಗೂ ವೈಮನಸ್ಯ ಉಂಟಾಗಿರುವುದೆಂದು ಯಾರಾದರೂ ಹೇಳಿದರೆ ಇವರು ನಗುವರು. ದೇಶವು ವಿಶಾಲವಾಗಿರುವುದಿಲ್ಲವೆ? ಭೂಮಿಯ ಮೇಲೆ ಹುಟ್ಟಿದವರಿಗೆಲ್ಲಾ ಈ ಭೂಮಾತೆಯು ಸಕಲ ಇಷ್ಟಾರ್ಥಗಳನ್ನೂ ಕೊಡಲಾರಳೇ? ಈ ಪ್ರಪಂಚದಲ್ಲಿ ಯಾವುದು ಶಾಶ್ವತ. ಭೂಪತಿಗಳೆಂದು ತಿಳಿದುಕೊಂಡು, ತಾವು ಆಚಂದ್ರಾರ್ಕವಾಗಿ ಈ ಭೂಮಿಯನ್ನು ಆಳುತ್ತೇವೆಂದು ಭಾವಿಸಿಕೊಂಡಿದ್ದ ಕೋಟ್ಯಂತರ ಭೂಪತಿಗಳ ಅವಸ್ಥೆಯೇನಾಗಿರುವುದೋ ಅದನ್ನು ವೇದ, ಶಾಸ್ತ್ರ, ಪುರಾಣೇತಿಹಾಸಗಳು ದಿಗಂತವಿಶ್ರಾಂತವಾಗುವಂತೆ ಉದ್ಘೋಷಿಸುತ್ತಿರುವುದಿಲ್ಲವೇ? ಭೂಮಿಯಲ್ಲಿ ಭೋಗ್ಯವಸ್ತುಗಳನ್ನು ಬೆಳೆಯುವುದಕ್ಕೆ ಬೇಕಾದಷ್ಟು ಅವಕಾಶವಿರುವುದಿಲ್ಲವೆ? ಒಬ್ಬರ ದೇಶವನ್ನು ಮತ್ತೊಬ್ಬರು ಆಕ್ರಮಿಸಬೇಕಾದರೆ, ಭೂಮಿಯ ಮೇಲೆ ಅವಕಾಶವು

ಬೇಕಾದ ಹಾಗೆ ಇರುವುದಿಲ್ಲವೇ ? ಸಕಲ ಜನಗಳೂ ಜೀವಿಸುವುದಕ್ಕೆ ಸಾಕಾದಷ್ಟು ಫಲವನ್ನು ಈ ಭೂಮಾತೆಯು ಕೊಡಲಾರಳೇ ? ಯಾರಿಗೂ ಯಾವ ಬಾಧಕವನ್ನೂ ಮಾಡದೆ, ಜೀವಿಸುವುದಕ್ಕೆ ಪ್ರಪಂಚದಲ್ಲಿ ಅವಕಾಶವಿರುವುದಿಲ್ಲವೇ ? ಸಕಲ ಜನಗಳೂ ಒಬ್ಬರಿಗೊಬ್ಬರು ಬಾಧಕವನ್ನು ಮಾಡದೆ, ಸುಖವಾಗಿರುವುದಕ್ಕೆ ಅವಕಾಶವಿರುವುದಿಲ್ಲವೇ ? ದುರಾಶೆ, ದುರಹಂಕಾರ, ವಂಚನೆ, ಭಯ, ದಾಸತ್ವ ಮೊದಲಾದವುಗಳಿಗೆ ಅವಕಾಶ ಕೊಡದೆ, ಸಕಲ ಜನಗಳೂ ಸನ್ಮಾರ್ಗಾವಲಂಬಿಗಳಾಗಿ, ಕಾಲಕ್ಷೇಪವನ್ನು ಮಾಡಿ, ಲೋಕಾಂತರವನ್ನು ಹೊಂದುವುದಕ್ಕೆ ಬೇಕಾದ ಏರ್ಪಾಡುಗಳನ್ನು ಜಗದೀಶ್ವರನು ಮಾಡಿರುವಾಗ, ಜನಗಳು ದುರಾಶಾಪ್ರತಿನಿವಿಷ್ಟರಾಗಿ ಈ ಭೂಮಿಯನ್ನೇ ನರಕವನ್ನಾಗಿ ಮಾಡಿಕೊಳ್ಳುವುದನ್ನು ನೋಡಿದರೆ ತುಂಬಾ ವಿಷಾದವಾಗುತ್ತದೆ '' ಎಂದು ಹೇಳುವರು.

ಇವರ ದೇಶದಲ್ಲಿ ಭೋಗ್ಯವಸ್ತುಗಳ ರೂಪವಾದ ಸಂಪತ್ತು ಇರುವುದೇ ಹೊರತು, ಧನಕನಕಾದಿಗಳ ರಾಶಿಯು ಇರುವುದಿಲ್ಲ. ಇವರ ದೇಶಕ್ಕೆ ಮುತ್ತಿಗೆಯನ್ನು ಹಾಕಿದರೂ, ಪ್ರಯೋಜನವಿಲ್ಲವೆಂದು ನೆರೆಹೊರೆಯ ಪ್ರಭುಗಳು ಇವರ ಮೇಲೆ ಯುದ್ಧಕ್ಕೆ ತೊಡಗುವುದಿಲ್ಲ. ಇವರಿಗೆ ಅನ್ನವಸ್ತ್ರಗಳಿಗೆ ನೆಮ್ಮದಿಯಾಗಿರುವುದರಿಂದ, ನೆರೆಹೊರೆಯುವರ ಮೇಲೆ ಯುದ್ಧವನ್ನು ಮಾಡಿ, ವಿಜಯವನ್ನು ಹೊಂದಬೇಕೆಂಬ ಅಪೇಕ್ಷೆಯು ಇವರಿಗೂ ಇರುವುದಿಲ್ಲ. ಈ ದೇಶೀಯರಿಗೆ ಅಹಂಕಾರ, ಮೋಸ, ಬುದ್ಧಿ, ದುರಾಶೆ, ವಕ್ರಮಾರ್ಗಾವಲಂಬನೆ ಮೊದಲಾದವುಗಳ್ಯಾವುವೂ ಇರುವುದಿಲ್ಲ. ಎಲ್ಲರಿಗೂ ಇವರು ಉಪಕಾರಿಗಳಾಗಿರುತ್ತಾರೆ ಎಲ್ಲರ ಉಪಕಾರಕ್ಕೂ ಇವರು ಪಾತ್ರರಾಗಿರುತ್ತಾರೆ. ವ್ಯಾಪಾರಾರ್ಥವಾಗಿ ಈ ದೇಶಕ್ಕೆ ನಾವು ಹೋದೆವು. ಅಪ್ರಾರ್ಥಿತವಾಗಿ ಪ್ರತಿಫಲದ ಮೇಲೆ ದೃಷ್ಟಿ ಇಡದೆ, ನಮಗೆ ಬೇಕಾದ ಭೋಗ್ಯವಸ್ತುಗಳನ್ನು ಇವರು ಸರಬರಾಜು ಮಾಡಿದರು. ನಾವು ಗಣಿಗಳನ್ನು ತೋಡಿ, ಚಿನ್ನ, ಬೆಳ್ಳಿ, ರತ್ನ ಮೊದಲಾದವುಗಳನ್ನು ಹೇಗೆ ತೆಗೆದು ಉಪಯೋಗಿಸುತ್ತೇವೋ, ಅದನ್ನು ಕೇಳಿದಾಗ, ಈ ದೇಶೀಯರು ನಮಗಿಂತಲೂ ದೊಡ್ಡ ಅವಿವೇಕ ಶಿಖಾಮಣಿಗಳು ಯಾರೂ ಇರುವುದಿಲ್ಲವೆಂದು ಪರಿಹಾಸ ಮಾಡಿದರು. ವಜ್ರವೇ ಮೊದಲಾದ ರತ್ನಗಳಿಂದಲೂ, ಚಿನ್ನವೇ ಮೊದಲಾದ ಲೋಹಗಳಿಂದಲೂ ಪ್ರಯೋಜನವೇನು ಎಂಬದಾಗಿಯೂ, ಇವುಗಳಿಂದ ಹಸಿವೂ. ದಾಹವೂ ಅಡಗುವುದೇ ಎಂಬದಾಗಿಯೂ,

ಸೇವಿಸುವುದಕ್ಕೆ ಇವುಗಳಲ್ಲಿ ಯಾವುದಾದರೂ ಪ್ರಯೋಜನಕಾರಿಗಳೇ ಎಂಬದಾಗಿಯೂ ಇವರು ಕೇಳಿದರು. ಅವಕ್ಕೆ ನಾವು ಕೊಟ್ಟ ಉತ್ತರಗಳನ್ನು ಕೇಳಿ, ನಮ್ಮ ಅಜ್ಞಾನಕ್ಕೋಸ್ಕರ ವ್ಯಸನಪಟ್ಟರು.

ಈ ಮಾತನ್ನು ಕೇಳಿ, ಟೆಲಿಮಾಕಸ್ಸನು ತುಂಬಾ ಆಶ್ಚರ್ಯಪಟ್ಟನು. "ಈ ದೇಶದ ಜನಗಳು ವಿಲಕ್ಷಣಪುರುಷರಾಗಿರಬೇಕು. ಹಾಗೆ ಇಲ್ಲದಿದ್ದರೆ, ಪ್ರಪಂಚವನ್ನೆಲ್ಲಾ ಮೋಹಗೊಳಿಸುವ ಧನಕನಕಾದಿ ವಸ್ತುಗಳಲ್ಲಿ ಇವರಿಗೆ ಜುಗುಪ್ಸೆಯು ಹುಟ್ಟುವುದಕ್ಕೆ ಕಾರಣವಿಲ್ಲ. ಇವರ ನಡತೆಯು ನಮಗೆ ವಿಚಿತ್ರವಾಗಿ ಕಾಣಬಂದಾಗ್ಯೂ, ಸರಿ ನಡತೆಯು ಸಾಧುವಾಗಿರುವಂತೆ ತೋರುತ್ತದೆ. ಇಥಾಕಾ ದ್ವೀಪದ ಪ್ರಭುಪದವಿಗೆ ಬಂದ ಮೇಲೆ, ನಾನೂ, ನನ್ನ ಪ್ರಜೆಗಳೆಲ್ಲರೂ ಇವರಂತೆ ಪರಿಣಮಿಸುವ ಹಾಗೆ ಮಾಡಬೇಕು" ಎಂದು ಟೆಲಿಮಾಕಸ್ಸನು ಸಂಕಲ್ಪವನ್ನು ಮಾಡಿಕೊಂಡು, ಅಡೋಮನನ್ನು ಕುರಿತು ಹೇಳಿದ್ದೇನಂದರೆ:—

"ಈ ಬಿಟೋಟಿಕಾ ಸಂಸ್ಥಾನದ ಜನಗಳು ವರ್ತಕರಾಗಿಯೂ ಇರುತ್ತಾರೆಂದು ತಿಳಿಯಬರುತ್ತದೆ ಇದು ನಿಜವೇ?" ಎಂದು ಕೇಳಿದನು. ಅದಕ್ಕೆ ಅಡೋಮನು ಹೇಳಿದ್ದೇನಂದರೆ:—

"ಅನೇಕ ವರ್ತಕರು ವ್ಯಾಪಾರಾರ್ಥವಾಗಿ ಈ ಸಂಸ್ಥಾನಕ್ಕೆ ಬರುವರು. ಅವರಿಗೆ ಬೇಕಾದ ವಸ್ತುಗಳಲ್ಲಿ ಇವರು ಉಪಯೋಗಿಸಿಕೊಂಡು ಮಿಕ್ಕದ್ದನ್ನು ಇವರು ಸರಬರಾಜು ಮಾಡುವರು. ಅದಕ್ಕೆ ಪ್ರತಿಫಲವಾಗಿ ದೇಶಾಂತರದವರು ತಂದ ಭೋಗ್ಯವಸ್ತುಗಳನ್ನು ಮಾತ್ರ ಇವರು [illegible] ಸ್ವೀಕರಿಸುವರು. ಚಿನ್ನ, ಬೆಳ್ಳಿ, ನವರತ್ನಗಳು ಮೊದಲಾದವುಗಳನ್ನು ಅವರು ಕೊಡುವುದಕ್ಕೆ ಬಂದಾಗ್ಯೂ, ಅದನ್ನು ಪ್ರತಿಫಲವಾಗಿ ಇವರು ತೆಗೆದುಕೊಳ್ಳುವುದಿಲ್ಲ. ಇವರಲ್ಲಿ ಬಾಲ್ಯದಿಂದ ಮಕ್ಕಳಿಗೆ ಕೃಷಿ, ಕೈಗಾರಿಕೆ, ವ್ಯಾಪಾರ, ಮೊದಲಾದವುಗಳು ತಿಳಿಯುವಂತೆ ಮಾಡಲ್ಪಡುವುದು. ಸರ್ವರೂ ಬುದ್ಧಿಬಲದಿಂದಲೂ, ಬಾಹುಬಲದಿಂದಲೂ ಭೋಗ್ಯವಸ್ತುಗಳನ್ನು ನಿರ್ಮಾಣ ಮಾಡುವುದರಲ್ಲಿ ನೈಪುಣ್ಯವನ್ನು ಹೊಂದುವಂತೆ ಮಾಡಲ್ಪಡುವರು. ಬಿಸಿಲಿನಲ್ಲಿ ತಿರುಗಿದ ಹೊರತು, ನೆರಳಿನ ಸೌಖ್ಯವು ತಿಳಿಯುವುದಿಲ್ಲ. ಬೆವರು ಬರುವಂತೆ ಕೆಲಸ ಮಾಡಿದ ಹೊರತು, ತಿಂದ ಅನ್ನವು ಜೀರ್ಣವಾಗಿ, ಹಸಿವು ಆಗುವುದಿಲ್ಲ. ದೇಹಕ್ಕೂ ಮನಸ್ಸಿಗೂ ತಕ್ಕಷ್ಟು ಉದ್ಯೋಗವನ್ನು ಕೊಟ್ಟ

ಹೊರತು, ವಿಶ್ರಾಂತಿ ಸುಖವು ಅನುಭವಿಸಲ್ಪಡುವುದಿಲ್ಲ" ಎಂಬುದಾಗಿ ಈ ಸಂಸ್ಥಾ
ನದಲ್ಲಿ ಪ್ರತಿ ಒಬ್ಬರೂ ತಿಳಿದುಕೊಂಡು, ಅದಕ್ಕೆ ಅನುಸಾರವಾಗಿ ನಡೆಯುತ್ತಲಿರು
ವರು. ಹೀಗೆ ಅವರು ನಡೆಯುವುದಕ್ಕೆ ಈ ಸಂಸ್ಥಾನದ ಸರ್ಕಾರದವರೂ, ಅವರ
ಗುರುಹಿರಿಯರೂ ಹಾಕುತ್ತಲಿರುವ ಮೇಲ್ಪಂಕ್ತಿಯೇ ಮುಖ್ಯಕಾರಣವಾಗಿರುವುದು.

## ಒಂಭತ್ತನೆಯ ಅಧ್ಯಾಯವು.

ಈ ರೀತಿ ಮುಲ್ಲಿ ಅಡೋಮನೂ, ಟೆಲಿಮಾಕಸ್ಸನೂ ಬಿಯೂಟಿಕಾ ಮಹಾಜನ
ಗಳ ಗುಣಕಥನಗಳನ್ನು ಮಾಡುತ್ತಾ ಇರುವಾಗ, ಮಧ್ಯರಾತ್ರಿಯಾಯಿತು. ನಾವಿ
ಕರಿಗೆ ಇಥಾಕಾದ ಕಡೆಗೆ ಹಡಗನ್ನು ಬಿಡಬೇಕೆಂದು ಅಡೋಮನು ಆಜ್ಞೆಯನ್ನು
ಮಾಡಿದ್ದನು ಸದರಿ ದ್ವೀಪದ ಕಡೆಗೆ ಹಡಗು ಪ್ರಯಾಣ ಮಾಡುತ್ತಿತ್ತು. ಅಷ್ಟ
ರಲ್ಲಿಯೇ ಅಡೋಮನಿಗೂ ಟೆಲಿಮಾಕಸ್ಸನಿಗೂ ನಿದ್ರೆಯು ಬಂದಿತು. ಹಡಗನ್ನು
ನಡೆಸತಕ್ಕವರಿಗೂ ದೈವಸಂಕಲ್ಪದಿಂದ ಜಾಗರೂಕತೆಯು ಕಡಮೆಯಾಯಿತು.
ಹಡಗು ಇಥಾಕಾ ದ್ವೀಪದ ಕಡೆಗೆ ಹೋಗುವುದಕ್ಕೆ ಬದಲಾಗಿ, ಇಡುಮಿನಾನಿಯ
ಸ್ಸನ ಸಂಸ್ಥಾನದ ಸ್ಯಾಲೆಂಟಿಕ್ ಎಂಬ ರೇವು ಪಟ್ಟಣದ ಕಡೆಗೆ ಹೊರಟಿತು. ಹಡ
ಗನ್ನು ನಡೆಸುತ್ತಿದ್ದ ಅಥಾಮಸ್ ಎಂಬುವನು ಅಡೋಮನ ಆಜ್ಞೆಯನ್ನು ನೆರವೇರಿ
ಸುವ ಸಂಕಲ್ಪವುಳ್ಳವನಾಗಿದ್ದನು. ಆದಾಗ್ಯೂ ಇವನ ಉದ್ದೇಶವು ನಡೆಯಲಿಲ್ಲ.

ಕೆಲಿಪ್ಸಳ ದ್ವೀಪದ ಸಮೀಪದಲ್ಲಿ ಹಡಗು ಮುಳುಗಿ ಹೋದಾಗ್ಯೂ, ಟೆಲಿಮಾ
ಕಸ್ಸನು ಬದುಕಿಕೊಂಡನು. ಮೋಹಪರವಶನಾಗಿ ನಾಶವಾಗುವ ಸ್ಥಿತಿಗೆ ಗುರಿ
ಮಾಡಲ್ಪಟ್ಟಾಗ್ಯೂ, ಮೋಹಪಾಶದಿಂದ ಬಿಡುಗಡೆಯಾದನು. ಇವನು ನಾಶವಾಗ
ಲೆಂದು ನೆಪ್ಚೂನಳು ಕಲ್ಪಿಸಿದ ವಿಪತ್ಪರಂಪರೆಗಳಲ್ಲಿ ಯಾವುದರಿಂದಲೂ ಇವನು ಪರಾ
ಜಿತನಾಗಲಿಲ್ಲ. ಭಗ್ನಮನೋರಥಳಾಗಿ ಈಕೆಯು ಜೂಪಿಟರನ ಸನ್ನಿಧಿಗೆ ಹೋದಳು.
ಮಿನರ್ವಳು ಮೆಂಟರ ರೂಪವನ್ನು ಧರಿಸಿ, ಟೆಲಿಮಾಕಸ್ಸನಿಗೆ ಹೇಗೆ ಸಹಾಯ
ಮಾಡುತ್ತಿರುವಳೋ, ಇವಳ ಅನುಗ್ರಹದಿಂದ ಬಂದ ವಿಪತ್ತುಗಳನ್ನೆಲ್ಲಾ ಟೆಲಿಮಾಕ
ಸ್ಸನು ಹೇಗೆ ತಪ್ಪಿಸಿಕೊಳ್ಳುತ್ತಲಿರುವನೋ, ಆದುದರಿಂದ ತನ್ನ ಶಸ್ತ್ರಾಸ್ತ್ರಗಳೆಲ್ಲಾ ಹೇಗೆ
ಉಡುಗಿ ಹೋಗುವ ಸಂಭವವು ಉಂಟಾಗಿರುವುದೋ, ಅವನನ್ನು ಸಂಹರಿಸಿದ

ಹೊರಟು, ತನಗೆ ಹೇಗೆ ಶಾಂತಿಯು ಉಂಟಾಗುವುದಿಲ್ಲವೋ ಅವನ್ನೆಲ್ಲಾ ನೆಪ್ಚೂನಳು ಜೂಪಿಟರನಲ್ಲಿ ವಿಜ್ಞಾಪನೆಯನ್ನು ಮಾಡಿ, ಟೆಲಿಮಾಕಸ್ಸನನ್ನು ಸಂಹರಿಸುವ ವರವನ್ನು ತನಗೆ ಕೊಡಬೇಕೆಂದು ಕೇಳಿಕೊಂಡಳು. ಜೂಪಿಟರನು ಅವಳು ಹೇಳತಕ್ಕದ್ದನ್ನು ಮಂದಹಾಸಪೂರ್ವಕವಾಗಿ ಕೇಳಿ, ಹೇಳಿದ್ದೇನಂದರೆ :—

"ನಿನಗೆ ಬೇಕಾದ ವರಗಳನ್ನು ನಾನು ಕೊಡುತ್ತೇನೆ. ಯಾವ ವರಗಳು ಫಲಿಸಬೇಕಾದರೂ, ಆ ವರದ ಫಲವನ್ನು ಹೊಂದತಕ್ಕವರ ಉದ್ದೇಶವು ಸಾಧುವಾಗಿರಬೇಕು. ಅವರು ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾಗಿರಬೇಕು. ಹಾಗೆ ಇಲ್ಲದಿದ್ದರೆ, ಆ ವರಗಳು ಫಲಿಸುವುದಿಲ್ಲ. ಈ ಅರ್ಥವನ್ನು ಮಿನರ್ವಳು ತಿಳಿದುಕೊಂಡಿರುವಳು. ಅದು ನಿನ್ನ ಅನುಭವಕ್ಕೆ ಬಂದಿಲ್ಲ. ಟೆಲಿಮಾಕಸ್ಸನು ಎಷ್ಟು ವಿಪತ್ತುಗಳು ಬಂದಾಗ್ಯೂ, ಅವುಗಳಿಂದ ಅವನು ಹತನಾಗುವುದಿಲ್ಲವೆಂದು ನೀನು ಹೇಳುತ್ತೀಯೆ. ಅದಕ್ಕೆ ಅವನ ಸೌಜನ್ಯವೇ ಮುಖ್ಯಕಾರಣ. ಸನ್ಮಾರ್ಗಪ್ರವರ್ತಕರನ್ನು ಮೂಲೋತ್ಪಾಟನ ಮಾಡುವುದು ನನಗೂ ಅಸಾಧ್ಯ. ಇವಕ್ಕಾಗಿ ನೀನು ವ್ಯಸನಪಟ್ಟು ಪ್ರಯೋಜನವಿಲ್ಲ. ಅವನು ಧರ್ಮವನ್ನು ಬಿಟ್ಟು ನಡೆದರೆ, ಅವನನ್ನು ನಿಗ್ರಹಿಸುವುದು ಸುಲಭ. ಹಾಗೆ ಇಲ್ಲದಿದ್ದರೆ, ನೀನು ಅವನಿಗೆ ಯಾವ ಅಪಕಾರವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೂ, ಅದು ಉಪಕಾರವಾಗಿ ಪರಿಣಮಿಸುವುದು. ನಾವೆಲ್ಲರೂ ಕರ್ಮಕ್ಕೆ ಅಧೀನರು. ಅದನ್ನು ಮೀರುವುದಕ್ಕೆ ಯಾರಿಗೂ ಶಕ್ತಿ ಇರುವುದಿಲ್ಲ" ಎಂದು ಜೂಪಿಟರನು ಹೇಳಲು, ಭಗ್ನಮನೋರಥಳಾಗಿ ನೆಪ್ಚೂನಳು ಹೊರಟು ಹೋದಳು.

ಅನಂತರ ಮಿನರ್ವಳು ಜೂಪಿಟರನ ಸನ್ನಿಧಿಗೆ ಬಂದಳು. ಜೂಪಿಟರನು ಆಕೆಯನ್ನು ಸತ್ಕರಿಸಿ, ನೆಪ್ಚೂನಳು ಭಗ್ನಮನೋರಥಳಾಗಿರುವ ವೃತ್ತಾಂತವನ್ನು ತಿಳಿಸಿದನು. ಅದನ್ನು ಕೇಳಿ, ಮಿನರ್ವಳು ಹೇಳಿದ್ದೇನಂದರೆ :—

"ಸಕಲ ಸೃಷ್ಟಿ, ಸ್ಥಿತಿ, ಪ್ರಳಯಗಳಿಗೂ ನೀನು ಕಾರಣಭೂತನಾಗಿರುತ್ತೀಯೆ. ನಿನ್ನ ಸಂಕಲ್ಪದಂತೆ ಸಕಲ ಕಾರ್ಯಗಳೂ ನಡೆಯುವುವು. ನೀನು ನಿರ್ಲಿಪ್ತನಾಗಿರುತ್ತೀಯೆ. ಎಲ್ಲರೂ ಅವರವರ ಕರ್ಮಗಳಿಗನುಸಾರವಾಗಿ ಶುಭಾಶುಭಗಳನ್ನು ಅನುಭವಿಸುವಂತೆ ಮಾಡಿರುತ್ತೀಯೆ. ನಿನಗೆ ನಾನೂ, ನೆಪ್ಚೂನಳೂ ಎಲ್ಲರೂ ಒಂದೇ. ನಿನ್ನ ಧರ್ಮವನ್ನು ತಿಳಿದುಕೊಳ್ಳದೆ, ನಾವು ಅತಿಕ್ರಮಿಸಿ ನಡೆದರೆ, ನಮಗೂ

ನಮ್ಮ ಕರ್ಮಫಲವು ತಪ್ಪುವುದಿಲ್ಲ. ದೇವತಾಂಶಸಂಭೂತಳಾದಾಗ್ಯೂ, ನೆಪ್ಟೂನಳು ಈ ವಿಷಯವನ್ನು ತಿಳಿದುಕೊಳ್ಳದೆ, ಕಾಮಕ್ರೋಧಪರವಶಳಾಗಿ, ಮಾಡಬಾರದ ಸಂಕಲ್ಪಗಳನ್ನು ಮಾಡಿ ಭಗ್ನಮನೋರಥಳಾಗಿರುವಳು. ಯೂಲಿಸಸ್ಸನ ಮಗನಾದ ಟೆಲಿಮಾಕಸ್ಸನು ಸಕಲ ವಿದ್ಯಾವಿಶಾರದನಾಗಿಯೂ, ಜಿತೇಂದ್ರಿಯನಾಗಿಯೂ ಇರುವನು. ತನ್ನ ಕರ್ಮಕ್ಕೆ ಅನುರೂಪವಾದ ಫಲವು ತಪ್ಪುವುದಿಲ್ಲವೆಂದು ತಿಳಿದುಕೊಂಡು, ಎಷ್ಟು ವಿಪತ್ತುಗಳು ಬಂದಾಗ್ಯೂ, ತಗ್ಗದೆ, ಎಷ್ಟು ಸಂಪತ್ತುಗಳು ಬಂದಾಗ್ಯೂ ಹಿಗ್ಗದೆ, ಶಾಂತಚಿತ್ತನಾಗಿ, ಗುರುಹಿರಿಯರು ಮಾಡತಕ್ಕ ಹಿತೋಪದೇಶಗಳನ್ನು ಭಕ್ತಿಯಿಂದ ಕೇಳಿ, ಶ್ರದ್ಧೆಯಿಂದ ಅನುಷ್ಠಿಸುತ್ತಲಿರುವನು. ನೆಪ್ಟೂನಳಲ್ಲಿ ಅವನಿಗೆ ದ್ವೇಷವು ಇರುವುದಿಲ್ಲ. ಆದಾಗ್ಯೂ ಅನೇಕ ವಿಪತ್ತುಗಳು ಅವನಿಗೆ ಬರುವಂತೆ ಈಕೆಯು ಮಾಡಿದಳು. ಅವನ ಹಡಗನ್ನು ಮುಳುಗಿಸಿದಳು. ಅದರಿಂದ ಅವನು ಸಾಯಲಿಲ್ಲ. ಮನ್ಮಥ ವಿಕಾರಗಳಿಗೆ ಅವನನ್ನು ಗುರಿಮಾಡಿದಳು. ಅವನು ಜಿತೇಂದ್ರಿಯನಾದನು. ಪುಷ್ಪಬಾಣಗಳು ಅವನ ಮೇಲೆ ಪ್ರಯೋಗಿಸಲ್ಪಟ್ಟವು. ಅವುಗಳು ನಿರ್ವೀರ್ಯಗಳಾದವು. ಕೆಲಿಪ್ಸಳ ಮತ್ತು ಯೂಕರಿಸ್ಸಳ ಮೋಹಪಾಶಕ್ಕೆ ಬೀಳುವಂತೆ ಅವನು ಮಾಡಲ್ಪಟ್ಟನು. ಈ ಪಾಶಗಳು ದಗ್ಧವಾದವು. ಅವನು ಕಾರಾಗೃಹದಲ್ಲಿ ಹಾಕಲ್ಪಟ್ಟನು ಕಾರಾಗೃಹವೂ ಕೂಡ ಇವನಿಗೆ ಜ್ಞಾನಮಂಟಪವಾಯಿತು. ಕುರುಬರಲ್ಲಿ ಸೇವಾವೃತ್ತಿಯನ್ನು ಮಾಡುವ ಸ್ಥಿತಿಗೆ ತರಲ್ಪಟ್ಟನು. ಅವರಲ್ಲಿಯೂ ಕೂಡ ಇವನು ಸರ್ವರ ಅಕೃತ್ರಿಮವಾದ ಪ್ರೀತಿಗೂ ಪಾತ್ರನಾದನು. ಇವನಿಗೆ ಉಂಟಾದ ವಿಪತ್ಪರಂಪರೆಗಳೆಲ್ಲಾ ಉಷ್ಣವಲಯದ ಸೂರ್ಯನ ಎದುರಿಗೆ ಮಂಜು ಹೇಗೆ ಕರಗಿ ಹೋಗುವುದೋ ಹಾಗೆ ಕರಗಿಹೋದವು. ಇದರಿಂದ ನೆಪ್ಟೂನಳಿಗೆ ಮನಃಕ್ಲೇಶ ಉಂಟಾಗಿರುವುದೇನಾಶ್ಚರ್ಯವಲ್ಲ. ಈ ಕ್ಲೇಶದಿಂದ ಅವಳಿಗೆ ಬಾಧಕವಾಗುವುದೇ ಹೊರತು, ಟೆಲಿಮಾಕಸ್ಸನಿಗೆ ಯಾವ ಬಾಧಕವೂ ಆಗುವುದಿಲ್ಲ. ಈ ವಿಷಯವು ಈಕೆಯ ಅನುಭವಕ್ಕೆ ಬರುವಂತೆ ಮಾಡುವುದು ಉತ್ತಮ. ಹಾಗೆ ಇಲ್ಲದಿದ್ದರೆ ಇವಳ ಕ್ಲೇಶಕ್ಕೆ ಪಾರವೇ ಇರುವುದಿಲ್ಲ" ಈ ರೀತಿಯಲ್ಲಿ ಮಿನರ್ವಳು ಹೇಳಲು, ಅದಕ್ಕೆ ಜೂಪಿಟರನು ಹೇಳಿದ್ದೇನಂದರೆ:—

"ನೀನು ಹೇಳಿರುವುದು ಸಾಧುವಾಗಿರುವುದು. ನೀವೆಲ್ಲರೂ ನನಗೆ ಬೇಕಾದವರು. ನೀವು ಕೇಳಿದ ವರಗಳನ್ನು ಕೊಡುವುದು ನನಗೆ ಕರ್ತವ್ಯವಾದದ್ದು.

ಆದರೆ, ವರವನ್ನು ಕೇಳತಕ್ಕವರು ಧರ್ಮಸೂಕ್ಷ್ಮಗಳನ್ನು ತಿಳಿದುಕೊಂಡು, ವರವನ್ನು ಕೇಳಬೇಕು. ಜಗದೀಶ್ವರನ ಪದವಿಯು ನನಗೆ ಲಭ್ಯವಾಗಿದ್ದಾಗ್ಯೂ, ಈ ಪದವಿಯನ್ನು ದಕ್ಕಿಸಿಕೊಳ್ಳುವುದು ನನಗೂ ಕರ್ತವ್ಯವಾದದ್ದು. ಧರ್ಮಕ್ಕೆ ಬಾಧಕ ಉಂಟಾಗದಂತೆ ಎದುವರೆಗೂ ನಾನು ನಡೆದುಕೊಳ್ಳುವೆನೋ ಅದುವರೆಗೂ ಸರ್ವೇಶ್ವರತ್ವವು ನನಗೆ ಉಳಿಯುವುದು. ಧರ್ಮವನ್ನು ಬಿಟ್ಟು ನಡೆದ ಕೂಡಲೆ, ಸರ್ವೇಶ್ವರತ್ವವು ರೆಕ್ಕೆಗಳನ್ನು ಕಟ್ಟಿಕೊಂಡು ನನ್ನನ್ನು ಬಿಟ್ಟು ಹೊರಟು ಹೋಗುವುದು. ಈ ವಿಷಯವನ್ನು ತಿಳಿದುಕೊಳ್ಳದೆ, ಅಧರ್ಮವಾದ ವರಗಳನ್ನು ಅಪೇಕ್ಷಿಸಿದರೆ, ಅದು ಎಂದಿಗಾದರೂ ಲಭ್ಯವಾಗುವುದೇ? ಅಂಥಾ ವರಗಳನ್ನು ಕೊಡುವುದು ನನಗೆ ಸಾಧ್ಯವೇ? ಅಧರ್ಮವಾದ ವರಗಳನ್ನು ನಾನು ಕೊಟ್ಟ ಪಕ್ಷದಲ್ಲಿ, ಜಗದೀಶ್ವರ ಪದವಿಯು ನನಗೆ ನಿಲ್ಲುವುದೇ? ಎಂದಿಗೂ ನಿಲ್ಲುವುದಿಲ್ಲ. ಈ ವಿಷಯವನ್ನು ನೀನು ತಿಳಿದುಕೊಂಡಿದ್ದೀಯೆ. ಇದರಿಂದ ನೀನು ಹಿಡಿದ ಕೆಲಸಗಳೆಲ್ಲಾ ನಿರ್ವಿಘ್ನವಾಗಿ ನಡೆಯುವುವು. ಎಷ್ಟು ಉಪದೇಶವನ್ನು ಮಾಡಿದಾಗ್ಯೂ, ಈ ಧರ್ಮಸೂಕ್ಷ್ಮವು ನೆಪ್ಚೂನಳ ಮನಸ್ಸಿಗೆ ಇದು ಹತ್ತಿರುವುದಿಲ್ಲ. ಈ ಅಜ್ಞಾನವೇ ಅವಳ ಕ್ಲೇಶಕ್ಕೆ ಮುಖ್ಯಕಾರಣ. ನಾನು ಮೊದಲ್ಗೊಂಡು, ಸಕಲ ದೇವತೆಗಳೂ ಅವರವರ ಕರ್ಮಫಲವನ್ನು ಅನುಭವಿಸಬೇಕು. ಇದು ಯಾರಿಗೂ ತಪ್ಪುವುದಿಲ್ಲ. ದೃಷ್ಟಾಂತ ಪೂರ್ವಕವಾಗಿ ವೇದಶಾಸ್ತ್ರಪುರಾಣೇತಿಹಾಸಗಳು ಈ ವಿಷಯಗಳನ್ನು ಉದ್ಘೋಷಿಸುತ್ತಲಿರುವುವು. ಚರಿತ್ರೆಗಳು ಈ ತತ್ವಾರ್ಥವನ್ನು ಪ್ರಕಾಶಗೊಳಿಸುತ್ತಲಿರುವುವು. ಪ್ರತಿ ನಿಮಿಷದಲ್ಲಿಯೂ ವರ್ತಮಾನ ಪತ್ರಿಕೆಗಳು ಈ ಧರ್ಮಕ್ಕೆ ಅನುಸಾರವಾಗಿ ಸೃಷ್ಟಿಸ್ಥಿತಿಪ್ರಳಯಗಳು ಹೇಗೆ ಆಗುತ್ತಲಿವೆಯೋ ಅದನ್ನು ತೋರಿಸುತ್ತಲಿರುವುವು. ದೇವತೆಗಳೂ ಕೂಡ ಇದನ್ನು ನೋಡದವರಂತೆ ಇರುವರು. ಕೇಳಿಯೂ ಕೇಳದವರಂತೆ ಇರುವರು. ಕಣ್ಣುಗಳಿದ್ದಾಗ್ಯೂ ಇವರು ಅಂಧರಾಗಿರುವರು. ಕಿವಿಗಳಿದ್ದಾಗ್ಯೂ ಇವರು ಬಧಿರರಾಗಿರುವರು. ಮನಸ್ಸು ಇದ್ದಾಗ್ಯೂ ಇವರು ಯಥಾಜಾತರಾಗಿರುವರು. ಇದು ತುಂಬಾ ಶೋಚನೀಯವಾದದ್ದು. ಇದಕ್ಕಾಗಿ ನಾನು ತುಂಬಾ ವಿಷಾದಿಸುತ್ತೇನೆ. ನೀನು ಧನ್ಯಳು. ನಿನ್ನ ಪ್ರಭಾವದಿಂದ ಸಕಲ ವಿಪತ್ತುಗಳನ್ನೂ ಟೆಲಿಮಾಕಸ್ಸನು ಜಯಿಸಿದನು. ಸಕಲ ಶುಭಾಶುಭಗಳೂ ಜನಗಳ ಕರ್ಮಾನುಸಾರವಾಗಿರುವುವೆಂದು ಪ್ರಕಾಶಪಡಿಸುತ್ತಾ ಇದ್ದೀಯೆ. ಇದಕ್ಕಾಗಿ ನಾನು ತುಂಬಾ ಸಂತೋಷಿಸುತ್ತೇನೆ."

ಈ ರೀತಿಯಲ್ಲಿ ಜೂಪಿಟರನು ಅಪ್ಪಣೆ ಕೊಡಿಸಿದನು. ಮಿನರ್ವಳು ಸಂತುಷ್ಟಳಾದಳು. ಈ ಮಧ್ಯೆ ಮೆಂಟರೂ, ಟೆಲಿಮಾಕಸ್ಸೂ, ಅಥಾಮಸ್ ಮೊದಲಾದವರೆಲ್ಲಾ ಗಾಢವಾದ ನಿದ್ರೆಯಿಂದ ಪರವಶರಾಗಿದ್ದರು. ನೆಪ್ಚೂನಳು ಮಿನರ್ವಳ ಮೇಲೂ, ಮೆಂಟರನ ಮೇಲೂ, ಟೆಲಿಮಾಕಸ್ಸನ ಮೇಲೂ ಅಭೂತಪೂರ್ವವಾದ ಆಗ್ರಹದಿಂದ ಪ್ರತಿನಿವಿಷ್ಟಳಾದಳು. ಜೂಪಿಟರನ ಸಂಕಲ್ಪವನ್ನೂ ಕೂಡ ವಿಫಲವಾಗುವಂತೆ ಮಾಡುತ್ತೇನೆಂದು ಸಂಕಲ್ಪವನ್ನು ಮಾಡಿದಳು. ಈ ಹಡಗನ್ನು ನಡೆಸತಕ್ಕವನಿಗೆ ಭ್ರಮೆಯನ್ನು ಉಂಟುಮಾಡಿ, ಸೆಲೆಂಟಮ್ ಎಂಬ ರೇವುಪಟ್ಟಣದ ಕಡೆಗೆ ಹಡಗು ಹೋಗುವಂತೆ ಮಾಡಿದಳು. ಅಥಾಮಸ್ಸನಿಗೆ ಎಚ್ಚರವಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ಅರುಣೋದಯವಾಯಿತು. ಕ್ರಮೇಣ ನಕ್ಷತ್ರಮಂಡಲಗಳೆಲ್ಲಾ ಅದೃಶ್ಯವಾದವು. ನಾವು ಇಥಾಕಾ ದ್ವೀಪಗಳಿಗೆ ಬಂದಿರುವೆವು ಎಂಬದಾಗಿ ಅಥಾಮಸ್ಸನು ಟೆಲಿಮಾಕಸ್ಸನಿಗೆ ಹೇಳಿದನು. ' ಟೆಲಿಮಾಕಸ್ಸನಿಗೆ ಪರಮಾನಂದವಾಯಿತು. ಶೀಘ್ರದಲ್ಲಿಯೇ ತಾಯಿಯನ್ನು ನೋಡುವ ಸಂಭವವು ಒದಗಬಹುದೆಂಬದಾಗಿಯೂ, ಯೂಲಿಸಸ್ಸನನ್ನು ನೋಡುವ ಶುಭವು ತನಗೆ ಲಭ್ಯವಾಗಬಹುದೆಂಬದಾಗಿಯೂ ಸಂತೋಷವು ಟೆಲಿಮಾಕಸ್ಸನಿಗೆ ಉಂಟಾಯಿತು. ಶೀಘ್ರದಲ್ಲಿಯೇ ಎದ್ದು, ಅಥಾಮಸ್ಸನ ಬಳಿಗೆ ಹೋಗಿ, ಅವನನ್ನು ವಂದಿಸಿ, ಸಮುದ್ರ ತೀರದ ಕಡೆಗೆ ನೋಡಿದನು. ಕೂಡಲೆ ಭಗ್ನಮನೋರಥನಾದನು. ಇದು ಇಥಾಕಾ ದ್ವೀಪವಲ್ಲ. ಇದು ನನ್ನ ರಾಜ್ಯವಲ್ಲ. ಈ ದೇ[illegible]ವಲ್ಲ. ಇಲ್ಲಿ ಕಾಣತಕ್ಕ ಪರ್ವತವು ಇಥಾಕಾ ದ್ವೀಪದ ಪರ್ವತವಲ್ಲ. ಈ [illegible] ಮನೆಗಳ [illegible]ಸಮೂಹವಲ್ಲ. ಈ ದುರ್ಗವು ಯೂಲಿಸಸ್ಸನ ದುರ್ಗವಲ್ಲ. [illegible] ಮೋಸಹೋದೆವು. ನಾವು ಯಾವುದೋ ಪ್ರಾಂತ್ಯಕ್ಕೆ ಬಂದಿದ್ದೇವೆ ' ಎಂದು ಹೇಳಿ, ಟೆಲಿಮಾಕಸ್ಸನು ಬಹಳ ವ್ಯಸನಾಕ್ರಾಂತನಾದನು. ಅಥಾಮಸ್ಸನು ದೃಷ್ಟಿಸಿ ನೋಡಿದನು. ಇದು ಇಥಾಕಾ ದ್ವೀಪವಲ್ಲವೆಂದು ಅವನಿಗೂ ಗೊತ್ತಾಯಿತು. ಅದಕ್ಕಾಗಿ ಅವನೂ ವ್ಯಸನಪಟ್ಟನು. ಅವನು ಹೇಳಿದ್ದೇನೆಂದರೆ: —

" ನಾವು ಮೋಸಹೋದೆವು. ಇದು ಇಥಾಕಾ ದ್ವೀಪವಲ್ಲ. ಇದು ಹೆಸ್ಪೀರಿಯಾ ದೇಶ. ನಮ್ಮ ಎದುರಿಗೆ ಇರತಕ್ಕ ರೇವುಪಟ್ಟಣವು ಸೆಲೆಂಟಮ್ ಎಂಬುವುದು. ಕ್ರೀಟ್ ದೇಶದಿಂದ ಇಡುಮಿನಿಯಸ್ ಎಂಬುವನು ಬಂದು, ಈ ದೇಶಕ್ಕೆ

ಪ್ರಭುವಾಗಿ, ಈ ರೇವುಪಟ್ಟಣವನ್ನು ಕಟ್ಟುತ್ತಿರುವನು. ಇದು ಇನ್ನೂ ಪೂರೈಸಲ್ಪಟ್ಟಿಲ್ಲ" ಎಂಬದಾಗಿ ಹೇಳುತ್ತಿರುವಾಗ, ಹಡಗು ಸೆಲೆಂಟಮ್ ರೇವುಪಟ್ಟಣಕ್ಕೆ ಬಂದು ತಲಪಿತು. ಇವರಿಬ್ಬರೂ ವ್ಯಸನಾಕ್ರಾಂತರಾಗಿರುವುದನ್ನು ನೋಡಿ, ಮೆಂಟರು ಟೆಲಿಮಾಕಸ್ಸನನ್ನು ಕುರಿತು ಹೇಳಿದ್ದೇನಂದರೆ:—

"ಇಥಾಕಾ ದ್ವೀಪವನ್ನು ತಲಪಲಿಲ್ಲವೆಂದು ಏತಕ್ಕೆ ವ್ಯಸನಪಡುತ್ತೀಯೆ? ಇನ್ನೂ ನೀನು ಮಾಡತಕ್ಕ ಕೆಲಸವು ಇರಬೇಕು. ಹಾಗೆ ಇಲ್ಲದಿದ್ದರೆ, ಇಲ್ಲಿಗೆ ಬರುವ ಸಂಭವವು ಬರುತ್ತಿರಲಿಲ್ಲ. ದೇವರು ನಮ್ಮ ಕರ್ಮಕ್ಕನುರೂಪವಾದ ಫಲವನ್ನು ಕೊಡುವುದಕ್ಕೆ ಮುಂಚೆ ನಮ್ಮನ್ನು ಪರೀಕ್ಷಿಸುವನು. ಹರ್ಕ್ಯುಲೀಸನು ತನ್ನ ಇಷ್ಟಾರ್ಥಸಿದ್ಧಿಯನ್ನು ಹೊಂದುವುದಕ್ಕೆ ಮುಂಚೆ ಎಷ್ಟು ಸಾಹಸಗಳನ್ನು ಮಾಡಬೇಕಾಯಿತೋ ಅದನ್ನು ಸ್ಮರಿಸಿಕೊ. ನಿನ್ನ ತಂದೆಯು ಇನ್ನೂ ಕಷ್ಟಪಡುತ್ತಲಿರಾನೋ ಅದನ್ನು ಸ್ಮರಿಸಿಕೊ. ಕಷ್ಟಪಡತಕ್ಕದ್ದನ್ನು ಯಾರು ಬಲ್ಲರೋ, ಅವರು ಸುಖಪಡುವುದಕ್ಕೂ ಅರ್ಹರಾಗುವರು. ನಿನ್ನಲ್ಲಿ ನೆಪ್ಚೂನಳು ಪ್ರಸನ್ನಳಾಗಿರುವದಿಲ್ಲ. ಪ್ರತಿಕೂಲಳಾಗಿಯೂ ಇರುವಳು. ನಿನಗೆ ವಿಪತ್ಪರಂಪರೆಗಳು ಸಂಘಟನೆಯಾಗುವಂತೆ ಮಾಡಿರುವಳು. ನೀನು ಧರ್ಮಿಷ್ಟನಾದುದರಿಂದ, ಅವಳ ಅಪಕಾರವೂ ಕೂಡ ನಿನಗೆ ಉಪಕಾರವಾಗಿ ಪರಿಣಮಿಸುವುದು. ವ್ಯಸನಪಡಬೇಡ. ಈ ರೇವುಪಟ್ಟಣಕ್ಕೆ ಹೋಗೋಣ. ಇಲ್ಲಿನ ಜನಗಳು ಬಹಳ ಧರ್ಮಿಷ್ಟರು. ಎಲ್ಲರಲ್ಲಿಯೂ ಸೌಹಾರ್ದವುಳ್ಳವರು. ನಮ್ಮ ಸ್ನೇಹಕ್ಕೆ ಪಾತ್ರರೆಂದು ತೋರುತ್ತದೆ."

ಈ ರೀತಿಯಲ್ಲಿ ಮೆಂಟರನು ಹೇಳಿದ ಕೂಡಲೆ, ಎಲ್ಲರೂ ಸೆಲೆಂಟಮ್ ಪಟ್ಟಣವನ್ನು ಪ್ರವೇಶಿಸಿದರು. ಟೆಲಿಮಾಕಸ್ಸನು ಆ ಪಟ್ಟಣವನ್ನು ನೋಡಿ ಬಹಳ ಆಶ್ಚರ್ಯಪಟ್ಟನು.

ಸೂರ್ಯೋದಯವಾದ ಕೂಡಲೆ, ರಾತ್ರಿಯಲ್ಲಿ ಮುಕುಳಿತವಾಗಿದ್ದ ಕಮಲವು ಸೂರ್ಯಕಿರಣಗಳಿಂದ ಹೇಗೆ ವಿಕಸಿತವಾಗುವುದೋ, ಸೂರ್ಯಕಿರಣಗಳು ತಗುಲಿದ ಕೂಡಲೇ ಗುಲಾಬಿ ಪುಷ್ಪವು ಹೇಗೆ ಮನೋಹರವಾದ ಸುವಾಸನೆಯು ಅದರ ಮೇಲೆ ಬೀಸುವ ವಾಯುವಿಗೆ ಸುಗಂಧವನ್ನು ಕೊಡುವುದೋ, ಸೂರ್ಯೋದಯವಾದ ಕೂಡಲೆ ಸೂರ್ಯಕಾಂತಿ ಹೂವೇ ಮೊದಲಾಗುವುಗಳು ಹೇಗೆ ಸೂರ್ಯನಿಗೆ

ಅಭಿಮುಖವಾಗಿ ವಿಕಾಸವನ್ನು ಹೊಂದುವುವೋ ಹಾಗೆ ಸಮುದ್ರ ತೀರದಲ್ಲಿ ಇಡುಮಿನಿಯುಸ್‌ಗೆ ಸೇರಿದ ಈ ರೇವು ಪಟ್ಟಣವು ಅನಿರ್ವಚನೀಯವಾದ ಸೌಂದರ್ಯದಿಂದ ಶೋಭಮಾನವಾಗಿತ್ತು. ಇದರ ಸೌಂದರ್ಯವು ಪ್ರತಿ ನಿಮಿಷವೂ ಹೆಚ್ಚುವಂತೆ ತೋರುತ್ತಿತ್ತು. ಈ ಪಟ್ಟಣದ ಸೌಧಗಳು ಗಗನಚುಂಬಿಗಳಾಗಿ ಆಕಾಶದಲ್ಲಿ ಅದೃಶ್ಯತೆಯನ್ನು ಹೊಂದುತ್ತಲಿದ್ದವು ತೀರ ದೇಶವು ಕೆಲಸಗಾರರ ಕೋಲಾಹಲ ಧ್ವನಿಗಳಿಂದ ತುಂಬಿ ಇದ್ದವು. ಲಕ್ಷೋಪಲಕ್ಷ ಕಾರ್ಖಾನೆಗಳಲ್ಲಿ ಕೆಲಸಗಳು ನಡೆಯುತ್ತಿದ್ದವು. ಚಮಟಿಗಳ ಪೆಟ್ಟುಗಳು ದ್ವಿಗುಣಿತವಾಗಿ ಕೇಳುತ್ತಿದ್ದವು. ಹೀಗೆ ಕೇಳುವುದಕ್ಕೆ ಪ್ರತಿಧ್ವನಿಗಳೂ ಕೂಡ ಸಹಕಾರಿಗಳಾಗಿದ್ದುವು. ಚಿತ್ರವಿಚಿತ್ರವಾದ ಕೆಲಸಗಳು ಎಲ್ಲೆಲ್ಲಿಯೂ ನಡೆಯುತ್ತಿದ್ದವು. ಕೆಲಸಗಳನ್ನು ಮಾಡತಕ್ಕವರು ಹೇಗೋ ಹಾಗೆ ಕೆಲಸಗಳ ಮೇಲ್ವಿಚಾರಣೆ ಕರ್ತರೂ ಕೂಡ ಅವರವರ ಉದ್ಯೋಗಗಳಲ್ಲಿ ಏಕಾಗ್ರಚಿತ್ತರಾಗಿದ್ದರು. "ಪ್ರಭುಗಳು ಸಾಮಾನ್ಯವಾಗಿ ಸೋಮಾರಿಗಳಾಗಿರುವರು. ಅಲ್ಪಜ್ಞರಾಗಿದ್ದಾಗ್ಯೂ, ತಾವು ಸರ್ವಜ್ಞರೆಂದು ತಿಳಿದುಕೊಂಡಿರುವರು. ಸ್ವಾರ್ಥಪರರಾದ ಸ್ತುತಿಪಾಠಕರ ಕೃತ್ರಿಮವಾದ ಸ್ತುತಿಪಾಠಗಳನ್ನು ಅಕೃತ್ರಿಮವಾದ ಗುಣಕಥನಗಳೆಂದು ತಿಳಿದುಕೊಳ್ಳುವರು. ಉಪಲಕ್ಷ್ಯವಾಗಿ ಕೆಲಸ ಮಾಡುತ್ತಾ, ಅಸಾಧಾರಣವಾದ ಮಹತ್ತು ಮಾಡಿದಂತೆ ಭಾವಿಸಿಕೊಳ್ಳುವರು. ಹೀಗಿದ್ದಾಗ್ಯೂ, ಸನ್ಮಾನ ಪ್ರಶಂಸೆಯನ್ನೂ ಪರಿಗ್ರಹಿಸಿ, ಪ್ರಸನ್ನತೆಯ ಪ್ರಸಾದವನ್ನು ತಮ್ಮ ಅಭಿಮಾನಕ್ಕೆ ಪಾತ್ರರಾದವರಿಗೆ ಅಭಿಮಾನದಿಂದಲೂ, ಇತರರಿಗೆ ಉದಾಸೀನದಿಂದಲೂ ನೀಡುವರು. ಇದು ಪ್ರಭುಗಳಲ್ಲಿ ಸಾಮಾನ್ಯ ಗುಣವಾಗಿದ್ದಾಗ್ಯೂ, ಇಡುಮಿನಿಯುಸ್‌ನಲ್ಲಿ ಈ ಸ್ವಭಾವವು ಲೇಶವೂ ಇರಲಿಲ್ಲ. ಈತನು ಪ್ರಭುವಾದಾಗ್ಯೂ, ತಾನು ಕೂಲಿಯವನಾಗಿಯೂ, ಅಥವಾ ಕೂಲಿ ಮೇಸ್ತ್ರಿಯಾಗಿಯೂ ಇದ್ದರೆ ಹೇಗೋ ಹಾಗೆ ಕೆಲಸವನ್ನು ಮಾಡುತ್ತಲೂ, ಖುದ್ದಾಗಿ ಮೇಲ್ವಿಚಾರಣೆ ಮಾಡುತ್ತಲೂ ಇದ್ದನು. ಹೀಗಿರುವಾಗ್ಯೆ ಈ ರೇವುಪಟ್ಟಣಕ್ಕೆ ಟಿಲಿಮಾಕಸ್, ಮೆಂಟರ್ ಮೊದಲಾದವರಿರತಕ್ಕ ಫಿನೀಷಿಯನ್ ಹಡಗು ತಲಪಿತು. ಆ ದ್ವೀಪದ ಸಿಪಾಯಿಗಳಲ್ಲಿ ಕೆಲವರು ಟಿಲಿಮಾಕಸ್ಸನನ್ನೂ, ಮೆಂಟರನನ್ನೂ ನೋಡಿ, ಪರಮಾನಂದ ಪರವಶರಾಗಿ, ಕ್ಷಿಪ್ರದಲ್ಲಿಯೇ ಇಡುಮಿನಿಯುಸ್ಸನ ಬಳಿಗೆ ಹೋಗಿ, ಯೂಲಿಸಿಸ್ಸನ ಮಗನಾದ ಟಿಲಿಮಾಕಸ್ಸನು ಬಂದಿರುವನೆಂದು ಹೇಳಿದರು. ಇದನ್ನು ಕೇಳಿದ

ಕೂಡಲೆ ಇಡುಮಿಾನಿಯುಸ್ಸನು ಆನಂದಪರವಶನಾದನು. "ನನ್ನ ಪರಮಮಿತ್ರನಾದ ಯೂಲಿಸಸ್ಸನ ಮಗನು ಬಂದಿರುವನೇ ? ಯೂಲಿಸಸ್ಸನು ಹೇಗೆ ಲೋಕೈಕವೀರನೋ ಹಾಗೆಯೇ ಟೆಲಿಮಾಕಸ್ಸನೂ ಕೂಡ ವೀರರಲ್ಲಿ ಅಗ್ರಗಣ್ಯನೆಂದು ಹೆಸರನ್ನು ಪಡೆದಿರುವನು. ಚಿಕ್ಕವನಾಗಿದ್ದಾಗ್ಯೂ, ದಿಗಂತವಿಶ್ರಾಂತವಾದ ಕೀರ್ತಿಯನ್ನು ಸಂಪಾದಿಸಿರುವನು. ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗ್ಯೂ, ಬೃಹಸ್ಪತಿಗೆ ಸಮಾನನಾದವನೆಂದು ಹೆಸರುವಾಸಿಯನ್ನು ಪಡೆದಿರುವನು. ದುಷ್ಟನಿಗ್ರಹಕ್ಕೋಸ್ಕರ ಟ್ರಾಯಿಪಟ್ಟಣವು ನಾಶಮಾಡುವುದಕ್ಕೆ ಯೂಲಿಸಸ್ಸನು ಕಾರಣಭೂತನಾದನು. ಈ ಟೆಲಿಮಾಕಸ್ಸನು ಎಲ್ಲಿಗೆ ಹೋದಾಗ್ಯೂ, ಸೂರ್ಯನೆದುರಿಗೆ ಕತ್ತಲೆಯು ಓಡಿಹೋಗುವಂತೆ ದುರ್ಮಾರ್ಗಪ್ರವರ್ತಕರಿಗೆ ಓಡಿಹೋಗುವ ಸ್ಥಿತಿಯು ಒದಗುವುದು. ಇವನ ತಂದೆಯು ನನಗೆ ಪರಮಮಿತ್ರನು. ತಂದೆಯೇ ಪುತ್ರನಾಗಿ ಜನಿಸುವನೆಂದು ಶಾಸ್ತ್ರಗಳು ಹೇಳುತ್ತವೆ. ಯೂಲಿಸಸ್ಸನಲ್ಲಿರತಕ್ಕ ಪ್ರೀತಿಯನ್ನು ಅವನ ಮಗನಿಗೆ ತೋರಿಸಿ ಸಂತೋಷಪಡುವ ಕಾಲವು ನನಗೆ ಲಭ್ಯವಾಗಿರುವುದು. ಶೀಘ್ರದಲ್ಲೇ ಆತನನ್ನು ಕರೆದುಕೊಂಡು ಬಾ" ಎಂದು ಇಡುಮಿಾನಿಯುಸ್ಸನು ಆಜ್ಞೆಮಾಡಿದನು. ಈ ವಿಷಯವು ಟೆಲಿಮಾಕಸ್ಸನಿಗೆ ತಿಳಿಸಲ್ಪಟ್ಟಿತು. ಆತನು ಇಡುಮಿಾನಿಯುಸ್ಸನ ಬಳಿಗೆ ಮೆಂಟರನ ಜೊತೆಯಲ್ಲಿ ಹೋಗಿ, ಸಾಷ್ಟಾಂಗ ಪ್ರಣಾಮವನ್ನು ಮಾಡಿ "ಯೂಲಿಸಸ್ಸನ ಮಗನು ನಿನ್ನನ್ನು ವಂದಿಸುತ್ತಾನೆ. ದೈವಸಂಕಲ್ಪದಿಂದ ಪಟೂತತ್ತಾಗಿ, ನಾನೂ, ಮೆಂಟರೂ ನಿನ್ನ ಅತಿಥಿಗಳಾಗಿರುವೆವು" ಎಂದು ಹೇಳಿದನು. ಅದಕ್ಕೆ ಇಡುಮಿಾನಿಯುಸ್ಸನು ಹೇಳಿದ್ದೇನಂದರೆ?—

ಈ ದೈವಸಂಕಲ್ಪದಿಂದ ನಾನು ಧನ್ಯನಾದೆನು. ನೀನು ಯೂಲಿಸಸ್ಸನ ಮಗನೆಂದು ನನಗೆ ಯಾರೂ ಹೇಳದೇ ಇದ್ದಾಗ್ಯೂ, ನಿನ್ನ ದರುಶನ ಮಾತ್ರದಿಂದಲೇ ನಿನ್ನನ್ನು ನಾನು ಗುರುತು ಹಿಡಿಯಬಹುದಾಗಿತ್ತು. ತಾನೇ ತನ್ನ ಮಗನೆಂದು ಶಾಸ್ತ್ರಗಳು ಹೇಳುತ್ತವೆ. ಈ ವಾರ್ತೆಯು ನಿಜವೆಂಬುವುದಕ್ಕೆ ನೀನೇ ದೃಷ್ಟಾಂತವಾಗಿರುತ್ತೀಯೆ. ಯೂಲಿಸಸ್ಸನ ಉತ್ಸಾಹವೂ, ಅವನ ಅವಯವ ಸೌಷ್ಟವಗಳೂ, ಅವನ ಧೈರ್ಯಸ್ಥೈರ್ಯಗಳೂ, ಅವನ ಆಕಾರವೂ ನಿನ್ನಲ್ಲಿ ಪ್ರತಿಬಿಂಬಿಸಿ ಇವೆ. ಅವನ ಕೌಮಾರಾವಸ್ಥೆಯು ನಿನ್ನ ಬಾಲ್ಯಾವಸ್ಥೆಯಲ್ಲಿ ಪ್ರಚ್ಛನ್ನವಾಗಿರುವುದು. ಅವನ ಮಂದಹಾಸವು ನಿನ್ನಲ್ಲಿ ಅತ್ಯಂತ ಶೋಭಮಾನನಾಗಿರುವುದು. ಅವನ ವಾಜಾಧು

ಣ್ಯವು ನಿನ್ನಲ್ಲಿ ಅತಿಶಯವಾಗಿರುವಂತೆ ತೋರುತ್ತದೆ. ನಿನ್ನ ದರುಶನ ಲಾಭವು ನನಗೆ ಉಂಟಾದುದಕ್ಕೆ ಏನು ಕಾರಣವೋ ನನಗೆ ತಿಳಿಯದು. ಆ ಕಾರಣವು ಯಾವುದಾದರೂ ಆಗಿರಲಿ. ನಿನ್ನ ದರುಶನದಿಂದ ನಾನು ಬಹಳ ಸಂತುಷ್ಟನಾದೆನು. ನಿನ್ನ ತಂದೆಯನ್ನು ಹುಡುಕಿಕೊಂಡು, ನೀನು ಸಂಚಾರ ಮಾಡುತ್ತಿದ್ದೀ ಯೆಂದು ನಾನು ಕೇಳಿರುವೆನು. ಅವನ ವಿಚಾರವನ್ನು ತಿಳಿದುಕೊಳ್ಳುವುದಕ್ಕೆ ನೀನು ಇಲ್ಲಿ ಬಂದಿರುವ ಪಕ್ಷದಲ್ಲಿ, ಅವನ ಸಮಾಚಾರವನ್ನು ನಿನಗೆ ಹೇಳಿ ಸಂತೋಷ ಪಡಿಸುವ ಭಾಗ್ಯವು ನನಗೆ ದೇವರು ದಯಪಾಲಿಸಿ ಇಲ್ಲ. ಅವನಲ್ಲಿ ಹೇಗೋ ಹಾಗೆ ನನ್ನಲ್ಲಿಯೂ ದೇವರು ಅಪ್ರಸನ್ನನಾಗಿ ಇದಾನೆ. ಅವನು ದೇಶಭ್ರಷ್ಟನಾಗಿ ಅಲೆಯು ತ್ತಿರುವನು. ನಾನು ನನ್ನ ದೇಶದಲ್ಲಿದ್ದಾಗ್ಯೂ, ದೇವರ ಪ್ರೀತಿಗೆ ನಾನು ಪಾತ್ರನಾಗಿರುವುದಿಲ್ಲ.''

ಈ ರೀತಿಯಲ್ಲಿ ಟೆಲಿಮಾಕಸ್ಸನಿಗೆ ಹೇಳುತ್ತಿರುವಾಗಲೇ ಇಡುಮಿನಿಯು ಸ್ಸನ ದೃಷ್ಟಿಯು ಮೆಂಟರನ ಮೇಲೆ ಬಿದ್ದಿತು. ಈತನನ್ನು ಎಲ್ಲೋ ನೋಡಿ ದಂತೆ ಒಂದು ಭಾವನೆಯು ಇವನಿಗೆ ಉಂಟಾಯಿತು. ಇಂತಹ ಕಡೆ ನೋಡಿದೆ ನೆಂದು ಇವನ ಸ್ಮೃತಿಪಥಕ್ಕೆ ಬರಲಿಲ್ಲ. ಯೂಲಿಸಸ್ಸನು ದೇವರ ಪ್ರಸನ್ನತೆಗೆ ಪಾತ್ರನಾಗಲಿಲ್ಲನೆಂದು ಹೇಳಿದ ಕೂಡಲೆ, ಟೆಲಿಮಾಕಸ್ಸನ ಕಣ್ಣುಗಳು ಶೋಕರಸ ದಿಂದ ತುಂಬಿ ತುಳುಕುವುದಕ್ಕೆ ಉಪಕ್ರಮವಾಯಿತು. ಟೆಲಿಮಾಕಸ್ಸನು ಇಡುಮಿ ನಿಯಸ್ಸನನ್ನು ನೋಡಿ, ನಮ್ಮ ತಂದೆಗೂ, ನಿನಗೂ ಜಗದೀಶ್ವರನ ಪ್ರಸನ್ನತೆಯು ಇಲ್ಲ ವೆಂದು ನೀನು ಹೇಳಿದ ಕೂಡಲೇ, ಅನಿರ್ವಚನೀಯವಾದ ಏನೋ ಒಂದು ವಿಧವಾದ ವ್ಯಸನವು ನನ್ನ ಮನಸ್ಸಿನಲ್ಲಿ ಹುಟ್ಟಿತು. ಈ ವ್ಯಸನವು ಕಣ್ಣೀರುಗಳ ರೂಪವಾಗಿ ಉಕ್ಕಿ ಸುರಿಯುವುದಕ್ಕೆ ಉಪಕ್ರಮವಾಗಿದೆ. ಇದನ್ನು ಅಡಗಿಸಿಕೊಳ್ಳುವುದಕ್ಕೆ ನನ್ನಿಂದಾಗಲಿಲ್ಲ. ಇದು ಬಾಲ್ಯಾವಸ್ಥೆಯ ಧರ್ಮ. ಅದು ಹೇಗಾದರೂ ಇರಲಿ.

ನಿನ್ನನ್ನು ನೋಡಿದ ಕೂಡಲೇ ನನ್ನ ತಂದೆಯನ್ನು ನೋಡಿದಂತೆ ಸಂತೋಷ ವಾಯಿತು. ನೀನು ನನ್ನಲ್ಲಿ ತೋರಿಸಿದ ಪ್ರೀತಿಗೆ ನಾನು ಅತ್ಯಂತ ಕೃತಜ್ಞನಾಗಿ ಇದೇನೆ. ಯೂಲಿಸಸ್ಸನ ವಿಯೋಗದಿಂದ ನೀನು ಪಡುತ್ತಲಿರುವ ವ್ಯಸನವು ನನ್ನ ವ್ಯಸನವನ್ನು ಹೆಚ್ಚಿಸಿರುವುದು. ಭೂಮಿಯ ಮೇಲೂ, ಸಮುದ್ರದ ಮೇಲೂ ಅನೇಕ ದೇಶಗಳಲ್ಲಿ ಅವನನ್ನು ಹುಡುಕಿದೆನು. ಅವನ ಗತಿಯೇನಾಗಿರುವುದೋ ಗೊತ್ತಾಗಲಿಲ್ಲ. ಅವನು ಬದುಕಿರುವನೋ ಅಥವಾ ಲೋಕಾಂತರವನ್ನು ಹೊಂದಿ

ರುವನೋ ಅದು ಗೊತ್ತಾಗಲಿಲ್ಲ. ಇಥಾಕಾ ಪಟ್ಟಣದಲ್ಲಿ ನಮ್ಮ ಮಾತೃಶ್ರೀಯು ವರು ಶತ್ರುಗಳ ಮಧ್ಯದಲ್ಲಿ ಸಿಲುಕಿ ಪಾತಿವ್ರತ್ಯಕ್ಕೆ ಭಂಗ ಬರುವುದಾದರೆ ಮೊದಲು ದೇಹತ್ಯಾಗ ಮಾಡುವುದರಲ್ಲಿ ಬದ್ಧಾತುರರಾಗಿರುತ್ತಾರೆ. ಅವರ ಗತಿಯೇನಾಗು ವುದೋ ತಿಳಿಯದು. ಮಾತೃವಿಯೋಗವಾಗುವ ಸಂಭವವು ಬರುವುದೋ ಏನೋ! ಅದೂ ಗೊತ್ತಾಗುವುದಿಲ್ಲ. ಇಥಾಕಾ ದ್ವೀಪಕ್ಕೆ ಹೋಗಬೇಕೆಂದು ನಾನು ಪ್ರಯಾಣ ಮಾಡಿದೆನು. ಹಡಗು ನಡೆಸತಕ್ಕವರೂ ಕೂಡ ಇಥಾಕಾ ದ್ವೀಪಕ್ಕೆ ಹೋಗಬೇಕೆಂದು ಸಂಕಲ್ಪ ಮಾಡಿದರು. ಮನುಷ್ಯರು ಒಂದು ವಿಧವಾಗಿ ಯೋಚಿಸೋ ದರೆ, ದೇವರು ಇನ್ನೊಂದು ವಿಧವಾಗಿ ಯೋಚಿಸುವನೆಂದು ಹೇಳುವುದು ಈಗ ನಿಜ ವಾಯಿತು. ನಮ್ಮ ಪಾಲಿಗೆ ಕ್ರೀಟ್ ದ್ವೀಪವೇ ಇಥಾಕಾ ದ್ವೀಪವಾಯಿತು. ಇಡುಮಿನಿಯುಸ್ಸನೇ ಯೂಲಿಸಸ್ಸನಾಗಿ ಪರಿಣಮಿಸಿದನು. ನೀನು ರಾಜ್ಯಾಧಿಪತ್ಯ ವನ್ನು ಕಳೆದುಕೊಂಡು, ಈ ಹೊಸ ಸಂಸ್ಥಾನವನ್ನು ಪ್ರತಿಷ್ಠಿಸಿ, ಇಲ್ಲಿ ರಾಜ್ಯಭಾರ ಮಾಡುತ್ತಿರುವಿಯೆಂದು ನಾನು ಕೇಳಿ ಇದ್ದೆನು. ನಿನ್ನ ದೇಶಕ್ಕೆ ಬಂದು ನಿನ್ನ ಸಂದ ರುಶನವನ್ನು ಮಾಡಿಕೊಳ್ಳಬೇಕೆಂಬ ಸಂಕಲ್ಪವು ನನಗೆ ಉಂಟಾಗಿ ಇತ್ತು. ಈ ಸಂಕಲ್ಪವು ಪೂರೈಸಲೆಂದು ನಮ್ಮ ಪ್ರಯತ್ನವಿಲ್ಲದೆ, ನಾವು ಇಲ್ಲಿಗೆ ಬರುವಂತೆ ದೇವರು ಅನುಗ್ರಹಿಸಿರುವನು. ಇದಕ್ಕೆ ನಾನು ವ್ಯಸನಪಡುವುದಿಲ್ಲ. ಇಥಾಕಾ ದ್ವೀಪದಲ್ಲಿ ನನಗಿರುವ ಅಭಿಮಾನಕ್ಕಿಂತಲೂ ಹೆಸ್ಪೇರಿಯಾದಲ್ಲಿ ನನಗೆ ಕಡಮೆಯಾದ ಅಭಿಮಾನವು ಇರುವುದಿಲ್ಲ. ಯೂಲಿಸಸ್ಸನಲ್ಲಿರುವ ಭಕ್ತಿಗಿಂತಲೂ, ನನಗೆ ನಿನ್ನಲ್ಲಿ ಕಡೆ ಮೆಯಾದ ಭಕ್ತಿಯು ಇರುವುದಿಲ್ಲ. ಯೂಲಿಸಸ್ಸನ ಸಂದರುಶನ ವಿಷಯದಲ್ಲಿ ನಾನು ಭಗ್ನಮನೋರಥನಾಗುವಂತೆ ಈಶ್ವರನು ಮಾಡಿದಾಗ್ಯೂ, ನಿನ್ನ ಸಂದರುಶ ನವು ಲಭ್ಯವಾಗುವಂತೆ ಆತನು ಮಾಡಿದ್ದಕ್ಕೋಸ್ಕರ ನಾನು ತುಂಬಾ ಕೃತಜ್ಞನಾಗಿ ರುತ್ತೇನೆ.'' ಈ ರೀತಿಯಲ್ಲಿ ಟೆಲಿಮಾಕಸ್ಸನು ಇಡುಮಿನಿಯುಸ್ಸನಿಗೆ ಹೇಳಿದನು. ಆಗ ಇಡುಮಿನಿಯುಸ್ಸನು ಟೆಲಿಮಾಕಸ್ಸನನ್ನು ಕುರಿತು ಹೇಳಿದ್ದೇನಂದರೆ:—

ನನ್ನ ಭಾಗ್ಯಪರಿಪಾಕದಿಂದ ನಿನ್ನ ದರುಶನಲಾಭವು ನನಗೆ ಉಂಟಾಗುವಂತೆ ದೇವರು ಅನುಗ್ರಹಿಸಿದನು. ಇದು ನನಗೆ ಬಹಳ ಸಂತೋಷವನ್ನುಂಟುಮಾಡಿರು ವುದು. ನಿನ್ನ ಜೊತೆಯಲ್ಲಿ ಬಂದಿರತಕ್ಕ ಈ ವೃದ್ಧನು ಯಾರೋ ನನಗೆ ತಿಳಿಯದು. ಈತನನ್ನು ನಾನು ಎಲ್ಲೋ ನೋಡಿದಂತೆ ತೋರುವುದು. ಆದರೆ, ಎಲ್ಲಿ ನೋಡಿದ್ದೆನೋ

ಜ್ಞಾಪಕಕ್ಕೆ ಬರುವುದಿಲ್ಲ. ಇವನನ್ನು ನೋಡಿದರೆ, ನನಗೆ ಏನೋ ಒಂದು ವಿಧವಾದ ಭಕ್ತಿಯು ಹುಟ್ಟುತ್ತದೆ. ಇವನು ದೇವತಾಂಶಸಂಭೂತನೆಂದು ತೋರುತ್ತದೆ ಇವನು ಯಾರು ? ನಿನ್ನ ಕ್ಷೇಮಾರ್ಥವಾಗಿ ಜಗದೀಶ್ವರನಿಂದ ಕಳುಹಿಸಲ್ಪಟ್ಟ ದೇವದೂತನೋ ಅಥವಾ ದೇವರೋ ಆಗಿರಬಹುದೆಂದು ನನಗೆ ತೋರುತ್ತದೆ '' ಎಂದು ಹೇಳಿ, ಮೆಂಟರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಅಷ್ಟರಲ್ಲಿಯೇ ಟೆಲಿಮಾಕಸ್ಸನು ಹೇಳಿದ್ದೇನಂದರೆ:—

'' ಈತನು ನನ್ನ ತಂದೆಯ ಪರಮಮಿತ್ರನಾದ ಮೆಂಟರನು. ಬಾಲ್ಯದಲ್ಲಿಯೇ ನನ್ನ ತಂದೆಯು ನನ್ನನ್ನು ಇವನಿಗೆ ಒಪ್ಪಿಸಿದನು. ಇವನು ನನಗೆ ವಿದ್ಯಾಗುರುವಾಗಿಯೂ, ತಂದೆಯಾಗಿಯೂ, ನನ್ನ ಭಾಗದ ದೇವರಾಗಿಯೂ ಇರುವನು ಹೆಚ್ಚಾಗಿ ಹೇಳುವುದಕ್ಕೆ ನಾನು ಸಮರ್ಥನಲ್ಲ '' ಈ ರೀತಿಯಲ್ಲಿ ಟೆಲಿಮಾಕಸ್ಸನು ಹೇಳಿದ ಕೂಡಲೇ ಇಡುಮಿನಿಯಸ್ಸನಿಗೆ ಪೂರ್ವ ಪರಿಚಯವು ಜ್ಞಾಪಕಕ್ಕೆ ಬಂದಿತು. ಮೆಂಟರನನ್ನು ಕುರಿತು ಇಡುಮಿನಿಯಸ್ಸನು ಹೇಳಿದ್ದೇನಂದರೆ: —

ಬಹುಕಾಲಕ್ಕೆ ಮುಂಚೆ ಕ್ರೀಟ್ ದೇಶದಲ್ಲಿ ನಿನ್ನನ್ನು ನೋಡಿದ್ದದ್ದು ಈಗ ನನ್ನ ಸ್ಮೃತಿಪಥಕ್ಕೆ ಬಂದಿತು. ಅಲ್ಲಿ ನನಗೆ ನೀನು ಅನೇಕ ಹಿತೋಪದೇಶಗಳನ್ನು ಮಾಡಿದೆ. ಅದರ ಪ್ರಯೋಜನವನ್ನು ನಾನು ಹೊಂದಲಿಲ್ಲ. ಆಗ ನಾನು ಉತ್ಕಟವಾದ ಪ್ರಾಯದಲ್ಲಿದ್ದೆನು. ಅಜಿತೇಂದ್ರಿಯನಾಗಿ, ಯುಕ್ತಾಯುಕ್ತವಿಹೀನನಾಗಿದ್ದೆನು. ನಿನ್ನ ಹಿತೋಪದೇಶದಿಂದ ಸನ್ಮಾರ್ಗಪ್ರವರ್ತಕನಾಗುವುದು ನನಗೆ ಅಸಾಧ್ಯವಾಯಿತು. ಕಷ್ಟಪರಂಪರೆಗಳಿಗೆ ಗುರಿಯಾಗಿ, ಬಹಳ ಕ್ಲೇಶಪಟ್ಟು, ಅನಂತರ ಸನ್ಮಾರ್ಗಪ್ರವರ್ತಕನಾಗಬೇಕೆಂದು ದೇವರ ನಿಯಾಮಕವು ಇತ್ತು. ನಿನ್ನನ್ನು ನೋಡಿ ಅನೇಕ ವರ್ಷಗಳಾದಾಗ್ಯೂ, ನೀನು ಒಂದೇ ವಿಧವಾಗಿರುತ್ತೀಯೆ. ನಿನ್ನ ದೇಹಶಕ್ತಿಯೂ, ಬುದ್ಧಿಶಕ್ತಿಯೂ, ಆಕಾರವೂ ಇವುಗಳೆಲ್ಲಾವುದೂ ಕಡಮೆಯಾಗಿರುವಂತೆ ತೋರುವುದಿಲ್ಲ. ಕೆಲವು ಬಿಳಿಯ ಕೂದಲುಗಳು ಮಾತ್ರ ಕಾಣಬರುವುವು. ಇನ್ಯಾವ ವ್ಯತ್ಯಾಸವೂ ನಿನ್ನಲ್ಲಿ ತೋರುವುದಿಲ್ಲ.'' ಈ ರೀತಿಯಲ್ಲಿ ಇಡುಮಿನಿಯಸ್ಸನು ಹೇಳಲು ಮೆಂಟರು ಇವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ:—

ಟ್ರಾಯ್ ದೇಶದ ಅಭಿಷೇಣಕ್ಕೆ ಹೊರಡುವಾಗ್ಯೆ, ನೀನು ಯಾವ ರೀತಿಯಲ್ಲಿದ್ದೆಯೋ ಸ್ವಲ್ಪ ಹೆಚ್ಚು ಕಡಮೆಯಾಗಿ ನೀನೂ ಅದೇ ರೀತಿಯಲ್ಲಿರುತ್ತೀಯೆ. ಈಗ

ನೀನಿರುವ ಸ್ಥಿತಿಗೂ, ಪೂರ್ವದಲ್ಲಿ ನೀನಿದ್ದ ಸ್ಥಿತಿಗೂ ವ್ಯತ್ಯಾಸವು ವಿಶೇಷವಾಗಿರುವುದಿಲ್ಲ. ಆದರೆ, ನಿನ್ನ ಮನೋಭಾವವು ಬಹಳ ವ್ಯತ್ಯಾಸವನ್ನು ಹೊಂದಿರುವುದು. ನೀನು ಬಹಳ ಕಷ್ಟವನ್ನು ಅನುಭವಿಸಿರುವಿ, ಬಹಳ ಕ್ಲೇಶವನ್ನು ಪಟ್ಟಿರುವಿ, ನಿನಗೆ ಜ್ಞಾನೋದಯವಾಗಿರುವುದಕ್ಕೆ ಇವುಗಳೆಲ್ಲಾ ತುಂಬಾ ಸಾಧಕವಾದವು. ದುರ್ಗುಣಗಳನ್ನು ಬೇರುಸಹಿತ ಕಿತ್ತುಹಾಕಿ, ಸುಗುಣಗಳನ್ನು ನೆಟ್ಟು, ಅವುಗಳು ಕಲ್ಪವೃಕ್ಷಗಳಾಗುವಂತೆ ಮಾಡುವುದು ಸುಲಭವಲ್ಲ. ಅದು ಭಗೀರಥ ಪ್ರಯತ್ನವೆಂದು ಹೇಳಬಹುದು. ಕರ್ಮಪರಿಪಾಕದಿಂದ ಕಷ್ಟವು ಬರುವುದು. ಕ್ಲೇಶಗಳುಂಟಾಗುವುವು. ದಾರಿದ್ರ್ಯವು ಬರುವುದು. ಬದುಕುವುದಕ್ಕಿಂತ ಸಾಯುವುದು ಮೇಲೆಂದು ತೋರುವ ಸ್ಥಿತಿಯು ಬರುವುದು. ಇವುಗಳೆಲ್ಲಾ ದುರದೃಷ್ಟದ ಪರಿಣಾಮವೆಂದು ಅಜ್ಞಾನಿಗಳು ತಿಳಿದುಕೊಳ್ಳುವರು. ಸಾವಧಾನವಾಗಿ ಪರಿಶೀಲಿಸಿದರೆ, ಇವುಗಳೆಲ್ಲಾ ಕರ್ಮಪರಿಪಾಕವೆಂದು ಗೊತ್ತಾಗುವುವು. ಸಂಪತ್ತು ಬಂದಾಗ, ನಾವು ದುರ್ವಿಷಯಗಳಲ್ಲಿ ಉದ್ಯುಕ್ತರಾಗುತ್ತೇವೆ. ಮಿತಿಮೀರಿದ ಭೋಗಾದಿಗಳಿಂದ ನಮ್ಮ ದೇಹವು ಕೆಡುವುದು. ನಮ್ಮ ಮನಸ್ಸು ದುರ್ಬಲವಾಗುವುದು. ಆಯುರಾರೋಗ್ಯೈಶ್ವರ್ಯಾದಿಗಳಿಗೆ ಮಿತಿಮೀರಿದ ಸುಖಗಳು ವಿಷಪ್ರಯೋಗವೆಂದು ನಮ್ಮ ಹಿರಿಯರು ಹೇಳುವರು. 'ಇದು ಅನುಭವಸಿದ್ಧವಾದದ್ದು. ರಾಜಯಕ್ಷ್ಮವೇ ಮೊದಲಾದ ರೋಗಗಳಿಗೆ ಕಾರಣವನ್ನು ವಿಚಾರಿಸಿದರೆ, ಸಂಪತ್ತೇ ಕಾರಣವೆಂದು ಗೊತ್ತಾಗುತ್ತದೆ. ಸಂಪತ್ತಿನಲ್ಲಿ ಮುಳುಗಿ ತೇಲತಕ್ಕವರಿಗೆ ಪುತ್ರಸಂತಾನವೂ ಕೂಡ ಆಗುವುದಿಲ್ಲ. ಇದಕ್ಕೆ ಕಾರಣವು ಸಂಪತ್ತಾಗೇ ಇರುವುದು. ಸಂಪತ್ತಿಲ್ಲದವರು ಅನ್ನವಸ್ತ್ರಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ದೇಹಶಕ್ತಿಯನ್ನೂ, ಬುದ್ಧಿಶಕ್ತಿಯನ್ನೂ ಉಪಯೋಗಿಸಿ, ಕೆಲಸ ಮಾಡಬೇಕು. ನಿಷಾದ್ರವ್ಯ ಸೇವನೆಯನ್ನು ಪರಿತ್ಯಾಗ ಮಾಡಬೇಕು. "ಅತಿ ಸರ್ವತ್ರವರ್ಜಯೇತ್" ಎಂಬ ವಿಧಿಯನ್ನನುಸರಿಸಿ ನಡೆಯಬೇಕು. ದುರ್ವಿಷಗಳಲ್ಲಿ ಪರಾಙ್ಮುಖರಾಗಬೇಕು. ಅರಿಷಡ್ವರ್ಗಗಳನ್ನು ಜೈಸಬೇಕು. ಶಾಂತಿಯನ್ನೂ, ದಾಂತಿಯನ್ನೂ ಸಮಗ್ರವಾಗಿ ಹೊಂದಬೇಕು. ಪರಿಣಾಮ ಫಲವನ್ನು ಪರ್ಯಾಲೋಚಿಸಿ, ಕರ್ಮಗಳನ್ನು ಮಾಡಬೇಕು. ಶಕ್ತಿಗನುಸಾರವಾಗಿ ಕೆಲಸವನ್ನು ಮಾಡಬೇಕು. ಬೇಜಾರು ಪರಿಹಾರವಾಗುವಂತಹ ವಿಶ್ರಾಂತಿಯನ್ನು ಹೊಂದಬೇಕು. ಇವುಗಳಲ್ಲಿ ಯಾವುದೂ

ನಿನಗೆ ಉಪದೇಶ ಫಲದಿಂದ ಬರಲಿಲ್ಲ. ತಪ್ಪುಗಳ ಪರಂಪರೆಯಲ್ಲಿ ಸಿಕ್ಕಿಬಿದ್ದು, ಅನರ್ಥಗಳನ್ನನುಭವಿಸಿ, ಈಗ ಶಾಂತಚಿತ್ತನಾಗಿರುತ್ತೀಯೆ. ಈ ಶಾಂತಿಯು ನಿನ್ನ ಮುಖದಲ್ಲಿ ಸ್ಪಷ್ಟವಾಗಿ ತೋರುತ್ತದೆ. ಈ ವ್ಯತ್ಯಾಸ ವಿನಾ ಇತರ ವ್ಯತ್ಯಾಸಗಳ್ಯಾವುವೂ ನಿನ್ನಲ್ಲಿ ಕಾಣುವುದಿಲ್ಲ. ಇಹಪರಗಳನ್ನು ನಾಶವಮಾಡುವ ದುರ್ವಿಷಯಾಸಕ್ತಿಯನ್ನು ಜಯಿಸಿ, ಸಾರಾಸಾರಾವಿಚಾರಜ್ಞನಾಗಿ ಪರಿಣಮಿಸಿರುತ್ತೀಯೆ. ಇಂತಹ ಪರಿಣಾಮ ಫಲವನ್ನು ಸ್ವಶಕ್ತಿಯಿಂದ ಹೊಂದಿರುತ್ತೀಯೆ. ಮನುಷ್ಯನಿಗೆ ಪಂಚೇಂದ್ರಿಯಗಳನ್ನೂ, ಜ್ಞಾನವನ್ನೂ ದೇವರು ಕೊಟ್ಟಿರುವನು. ದುರ್ವಿಷಯಗಳಿಗೆ ಬಿದ್ದು ನಾಶವಾಗುವ ಶಕ್ತಿಯನ್ನೂ, ಜಿತೇಂದ್ರಿಯನಾಗಿ ಅರಿಷಡ್ವರ್ಗಗಳನ್ನು ಗೆದ್ದು ಲೋಕೈಕವೀರನಾಗುವ ಶಕ್ತಿಯನ್ನೂ ದೇವರು ಎಲ್ಲರಿಗೂ ಕೊಟ್ಟಿರುವನು. ಬಹು ಜನಗಳು ಇಂದ್ರಿಯಗ್ರಾಮಗಳಿಗೆ ಅಧೀನರಾಗಿ, ದುರ್ವಿಷಯಗಳಲ್ಲಿ ಆಸಕ್ತರಾಗಿ ಇಹಪರಗಳೆರಡನ್ನೂ ಅನೇಕರು ಕಳೆದುಕೊಳ್ಳುವರು. ಜಿತೇಂದ್ರಿಯರಾದವರು ಕೆಲವರು ಮಾತ್ರ ದುರ್ವಿಷಯಾಸಕ್ತಿಯನ್ನು ಸುಟ್ಟು ಬೂದಿ ಮಾಡಿ, ಸದ್ವಿಷಯಗಳಲ್ಲಿ ಮನಸ್ಸನ್ನು ನಿಲ್ಲಿಸಿ, ಆಸ್ತಿಕರಾಗಿ, ಲೋಕಬಾಂಧವರಾಗಿ, ಆಪ್ರೈತಶಿಖಾಮಣಿಗಳಾಗಿ, ಲೋಕೋಪಕಾರವೇ ಪರಮ ಶ್ರೇಯಸ್ಕರವಾದದ್ದೆಂದು ತಿಳಿದುಕೊಂಡು, ಲೋಕಪೀಡೆಯೇ ಪರಮ ಅಶ್ರೇಯಸ್ಕರವಾದದ್ದೆಂದು ಭಾವಿಸಿಕೊಂಡು, ಈ ಸಿದ್ಧಾಂತಗಳನ್ನೆಲ್ಲಾ ಅನುಷ್ಠಾನಕ್ಕೆ ತಂದುಕೊಂಡು, ಈ ನಶ್ವರವಾದ ಪ್ರಪಂಚವೂ ಕೂಡ ತಮ್ಮ ಭಾಗಕ್ಕೆ ಸ್ವರ್ಗವಾಗುವಂತೆ ಮಾಡಿಕೊಳ್ಳುವರು. ಇಂಥಾ ಸಚ್ಚಾರಿತ್ರಿಯುಳ್ಳವರ ಮೇಲ್ಪಂಕ್ತಿಯನ್ನು ನೀನು ಅನುಸರಿಸುತ್ತಿದ್ದೀಯೆ. ನೀನು ಕೃತಕೃತನು. ನಿನ್ನಲ್ಲಿ ಉಂಟಾಗಿರತಕ್ಕ ವ್ಯತ್ಯಾಸಗಳೆಲ್ಲಾ ಶ್ರೇಯಸ್ಕರವಾಗಿರುವುದಲ್ಲದೆ, ನನಗೆ ತುಂಬಾ ಸಂತೋಷವನ್ನುಂಟುಮಾಡಿರುವುವು.'' ಈ ರೀತಿಯಲ್ಲಿ ಮೆಂಟರನು ಹೇಳಿದ್ದನ್ನು ಕೇಳಿ, ಇಡುಮಿನೇಯಸ್ಸನು ಅತ್ಯಂತ ವಿಸ್ಮಿತನಾಗಿ ಇವನು ಮನುಷ್ಯನೇ, ಅಥವಾ ಮನುಷ್ಯವೇಷಧಾರಿಯಾದ ದೇವರೇ ? ಇವನೆಂದಿಗೂ ಮನುಷ್ಯನಾಗಿರಲಾರನು. ಮನುಷ್ಯ ಮಾತ್ರರಿಗೆ ಇಂಥಾ ಸಾರಾಸಾರ ವಿಚಾರ ಪರಿಪಾಕವು ಎಲ್ಲಿಯದು? ಎಂದು ಯೋಚಿಸುತ್ತಾ, ಅವರಿಬ್ಬರೊಡನೆ ಸೇರಿ, ಲೋಕೇಶ್ವರನಾದ ಜ್ಯೂಪಿಟರ್ ದೇವಸ್ಥಾನಕ್ಕೆ ಹೊರಟರು. ಈ ದೇವಸ್ಥಾನವನ್ನು ಕಟ್ಟಿಸುವುದರಲ್ಲಿ ಇಡುಮಿನೇಯಸ್ಸನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿದ್ದನು. ಜಗದೀಶ್ವರನ ವಾಸಕ್ಕೆ ಯೋಗ್ಯ

ವಾಗಿರಬೇಕಾದರೆ, ಹೇಗೆ ಇರಬೇಕೋ ಆ ರೀತಿಯಲ್ಲಿ ಈ ದೇವಸ್ಥಾನವು ಕಟ್ಟಲ್ಪಟ್ಟಿತ್ತು. ಸ್ಫಟಿಕಶಿಲೆಗಳಿಂದ ಮಾಡಲ್ಪಟ್ಟ ಕಂಭಗಳೂ, ಬೆಳ್ಳಿಯಿಂದ ಮಾಡಲ್ಪಟ್ಟ ಬೋದಿಗೆಗಳೂ ಥಳಥಳಿಸುತ್ತಿದ್ದವು. ಎಲ್ಲಿ ನೋಡಿದಾಗ್ಯೂ ಭಕ್ತಿಗೆ ನಿಧಿಗಳಾದ ಮಹನೀಯರ ವಿಗ್ರಹಗಳು ಇದ್ದವು. ಗರ್ಭಗುಡಿಯಲ್ಲಿ ಜಗದೀಶ್ವರನಾದ ಜೂಪಿಟರನ ವಿಗ್ರಹವೂ, ಜಗನ್ಮಾತೆಯಾದ ಯೂರೋಪಾ ಎಂಬ ಶಕ್ತಿಯ ವಿಗ್ರಹವೂ ಇದ್ದವು. ಇವರ ಮಗನಾದ ಮೈನಾಸ್ ಎಂಬುವನ ಪ್ರತಿಮೆಯು ಇದ್ದಿತು. ಈ ಮೈನಾಸನು ಲೋಕವಿಖ್ಯಾತನು. ಪಾಶ್ಚಾತ್ಯರಲ್ಲಿ ಸಕಲ ರಾಜಧರ್ಮಗಳಿಗೂ ಇವನು ಜನಕನಾಗಿರುವನು. ಇಂಡಿಯಾದಲ್ಲಿ ಮನುವೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ಧರ್ಮಶಾಸ್ತ್ರಜ್ಞನೂ, ಈ ಮೈನಾಸರೂ ಇಬ್ಬರೂ ಬೇರೆ ಹೆಸರಿನಿಂದ ಪ್ರಸಿದ್ಧರಾದ ಒಬ್ಬರಾಗಿರಬಹುದೆಂದು ಅನೇಕರು ಭಾವಿಸುತ್ತಾರೆ. ಈ ಮೂರು ವಿಗ್ರಹಗಳೂ ನಿಶ್ಚಲವಾಗಿದ್ದದ್ದರಿಂದ, ವಿಗ್ರಹಗಳಂತೆ ಕಾಣಬಂದವು. ಅವುಗಳನ್ನು ನೋಡಿದ ಕೂಡಲೆ, ಟೆಲಿಮಾಕಸ್ಸನಿಗೆ ಇವರು ಮಹಾಪುರುಷರೆಂಬ ಜ್ಞಾನವುಂಟಾಯಿತು. ಈ ಮೂರು ವಿಗ್ರಹಗಳನ್ನೂ ನೋಡಿ, ಆಶ್ಚರ್ಯಪಟ್ಟು, ಮುಂದಕ್ಕೆ ಹೊರಟರು. ಟ್ರಾಯ್ ಯುದ್ಧದಲ್ಲಿ ಹೈಮಿಡ್ ಎಂಬ ಮಹಾ ಶೂರನನ್ನು ಕೊಂದ ರೀಸಸ್ ಎಂಬ ಮಹಾ ಪರಾಕ್ರಮಶಾಲಿಯ ರಥದ ಕುದುರೆಗಳನ್ನು ನಿಲ್ಲಿಸುವುದಕ್ಕೆ ಉದ್ಯುಕ್ತನಾಗಿ, ಎಕಲೀಸನ ವಜ್ರಕವಚವನ್ನು ಪಿಜಾಕ್ಸ್ ಎಂಬ ರಾಕ್ಷಸನಿಂದ ಅಪಹರಿಸುವುದರಲ್ಲಿ ಉದ್ಯುಕ್ತನಾಗಿದ್ದ ಒಬ್ಬ ಮಹಾವೀರನ ಪ್ರತಿಮೆಯು ಟೆಲಿಮಾಕಸ್ಸಿನ ದೃಷ್ಟಿಪಥಕ್ಕೆ ಬಿದ್ದಿತು. ಕುದುರೆಯ ಮೇಲಿನಿಂದ ಇಳಿದು, ರಥದ ಕುದುರೆಗಳನ್ನು ನಿಲ್ಲಿಸಿ, ಪಿಜಾಕ್ಸನಿಗೆ ಗರ್ಭನಿರ್ಭೇದವಾಗುವಂತೆ ಮಾಡುತ್ತಲಿರುವಂತೆ ರಚಿಸಲ್ಪಟ್ಟಿದ್ದ ಈ ಮಹಾವೀರನ ಆಕೃತಿಯನ್ನು ನೋಡಿ, ಟೆಲಿಮಾಕಸ್ಸನು ವಿಸ್ಮಿತನಾದನು. ಕೂಡಲೆ ಆ ಮಹಾವೀರನೇ ತನ್ನ ತಂದೆಯೆಂದು ಗೊತ್ತಾಯಿತು. ಯುಲಿಸಸ್ಸನು ಮಾಡಿದ ಅಮಾನುಷ ಕೃತ್ಯಗಳನ್ನು ಮೆಂಟರು ಇವನಿಗೆ ತಿಳಿಸಿದ್ದನು. ಇಂಥಾ ಕೃತ್ಯಗಳನ್ನು ಮಾಡುವ ರೀತಿಯಲ್ಲಿ ರಚಿಸಲ್ಪಟ್ಟಿದ್ದ ಪ್ರತಿಮೆಯನ್ನು ನೋಡಿದ ಕೂಡಲೆ, ಟೆಲಿಮಾಕಸ್ಸಿಗೆ ಮನಸ್ಸಿನಲ್ಲಿ ಕಳವಳ ಉಂಟಾಯಿತು. ಕಣ್ಣುಗಳಲ್ಲಿ ಸಂತೋಷ ವ್ಯಸನ ಗರ್ಭಿತಗಳಾದ ನೀರುಗಳು ತುಂಬಿದವು. ತನ್ನ ತಂದೆಯು ಹೇಗೆ ಲೋಕೈಕವೀರನಾಗಿದ್ದನೋ, ಆ ಭಾವನೆಯುಂಟಾದದ್ದರಿಂದ, ಅವನಿಗೆ ಆನಂದ ಉಂಟಾಯಿತು.

ಅಂಥಾ ತಂದೆಗೆ ಯಾವ ಅವಸ್ಥೆಯು ಬಂದಿರುವುದೋ ಗೊತ್ತಿಲ್ಲದೆ ಹೋದದ್ದರಿಂದ ವ್ಯಸನವು ಉಂಟಾಯಿತು. ಈ ಮಿಶ್ರಭಾವಸೂಚಕಗಳಾದ ಆನಂದಶೋಕಬಾಷ್ಪಗಳು ಉಕ್ಕಿ ಸುರಿಯುವುದಕ್ಕೆ ಪ್ರಾರಂಭವಾಗಲು, ಇಡುಮಿನಿಯಸ್ಸನು ಇವನ ಮನೋಭಾವವನ್ನು ತಿಳಿದುಕೊಂಡನು. ನಿಮ್ಮ ತಂದೆಯ ಮಹಿಮೆಯನ್ನು ನೋಡಿ ಸಂತೋಷವೂ, ಅವನಿಗೆ ಏನು ದುರ್ಗತಿಯು ಉಂಟಾಗಿರುವುದೋ ಎಂಬ ಭಯದಿಂದ ಶೋಕವೂ ನಿನಗೆ ಎಷ್ಟು ಮಟ್ಟಿಗೆ ಉಂಟಾಗಿರುವುದೋ ಅದನ್ನು ನಿನ್ನ ಕಣ್ಣುಗಳು ತೋರಿಸುವುವು. ಶಾಂತಚಿತ್ತನಾಗು. ಮೆಂಟರನ ಶಿಷ್ಯನಾಗಿ, ಸಾಮಾನ್ಯ ಜನರಂತೆ ಸಂಪತ್ತುಗಳಲ್ಲಿ ಹಿಗ್ಗುವುದು, ವಿಪತ್ತುಗಳಲ್ಲಿ ತಗ್ಗುವುದು ಯೋಗ್ಯವಲ್ಲ,'' ಎಂದು ಇಡುಮಿನಿಯಸ್ಸನು ಹೇಳಿದನು

ಈ ಸಂತಾಪವನ್ನು ಮರೆಸುವುದಕ್ಕೋಸ್ಕರ ಮೆಂಟರನು ಟೆಲಿಮಾಕಸ್ಸನ ದೃಷ್ಟಿಯನ್ನು ಆ ದೇವಸ್ಥಾನದಲ್ಲಿದ್ದ ಬೇರೆ ಪ್ರತಿಮೆಗಳ ಕಡೆಗೆ ತಿರುಗಿಸಿ, ಅವುಗಳ ವೃತ್ತಾಂತವನ್ನು ತಿಳಿಸುವುದಕ್ಕೆ ಉಪಕ್ರಮಿಸಿದನು. ಅಲ್ಲಿ ಅನೇಕ ಮಹಾತ್ಮರ ಪ್ರತಿಮೆಗಳಿದ್ದವು. ಅವುಗಳ ಚರಿತ್ರೆಯನ್ನೆಲ್ಲಾ ಕೇಳುತ್ತಾ, ದೇವಸ್ಥಾನದಲ್ಲಿ ಪ್ರದಕ್ಷಿಣವನ್ನು ಮಾಡಿಕೊಂಡು, ಎಲ್ಲಾ ದೇವರುಗಳ ದರ್ಶನವನ್ನೂ ಮಾಡಿಕೊಂಡು, ದೇವಸ್ಥಾನದ ಮಧ್ಯದಲ್ಲಿ ದರ್ಬಾರ ಮಂಟಪಕ್ಕೆ ಬಂದರು. ಅಲ್ಲಿ ಹುಡುಗರು ದೇವತಾಪ್ರಾರ್ಥನೆಯನ್ನು ಮಾಡಿ, ನರ್ತನ ಮಾಡುತ್ತಿದ್ದರು. ಅವರ ಪ್ರಾರ್ಥನೆಯೂ ನರ್ತನವೂ ಪೂರೈಸಿದ ಮೇಲೆ ಕೆಲವು ಜನ ಹೆಣ್ಣುಮಕ್ಕಳು ಗಾನಮಾಡುವುದಕ್ಕೆ ಉಪಕ್ರಮಿಸಿದರು. ಈ ದೇವರ ನಾಮಗಳು ಅತ್ಯಂತ ಮನೋಹರವಾಗಿದ್ದವು. ಇವುಗಳನ್ನು ಕೇಳಿದ ತರುವಾಯ, ಮಹಾದೇವನಾದ ಜೂಪಿಟರನಿಗೆ ಪೂಜೆಯು ಉಪಕ್ರಮವಾಯಿತು. ಪೂಜೆಯು ಪೂರೈಸಿದ ಮೇಲೆ ಅರ್ಚಕನ ಮೇಲೆ ಮಹಾದೇವನಾದ ಜೂಪಿಟರು ಆವಾಹಿತನಾಗಿ ಹೇಳಿದ್ದೇನೆಂದರೆ: —

" ಎಲೈ ಇಡುಮಿನಿಯಸ್ಸನೇ! — ನಿನ್ನ ನೆರೆ ರಾಜರು ನಿನ್ನ ಮೇಲೆ ಯುದ್ಧವನ್ನು ಮಾಡುತ್ತಲಿರುವರು. ಈ ಯುದ್ಧದಲ್ಲಿ ನೀನು ಧರ್ಮವನ್ನು ವಿಶೇಷವಾಗಿ ಬಿಟ್ಟು ಹೋಗಿ ಇಲ್ಲ. ನಿನ್ನ ಧರ್ಮವೇ ನಿನ್ನನ್ನು ರಕ್ಷಿಸುವುದು. ನಿನ್ನಲ್ಲಿ ನಾನು ಪ್ರಸನ್ನನಾಗಿರುವೆನು. ಈ ಪ್ರಸನ್ನತೆಯನ್ನು ತೋರಿಸುವುದಕ್ಕೋಸ್ಕರ ಇಥಾಕಾ ಪಟ್ಟಣಕ್ಕೆ

ಹೊರಟಿದ್ದ ಈ ಮೆಂಟರೂ, ಈ ಟೆಲಿಮಾಕಸ್ಸನೂ ನಿನ್ನ ಸಹಾಯಕ್ಕೆ ಬರುವಂತೆ ಮಾಡಿರುವೆನು. ಈ ದೇಶವೇ ಇಥಾಕಾ ದೇಶವೆಂದು ತಿಳಿದುಕೊಂಡು, ಇವರನ್ನು ಕರೆದುಕೊಂಡು ಬಂದಿರತಕ್ಕ ಹಡಗಿನ ನಾವಿಕರಿಗೆ ಭ್ರಮೆಯುಂಟಾಗುವಂತೆ ಮಾಡಲ್ಪಟ್ಟಿತು. ನೀನು ಕಡೆಯವರೆಗೂ ಧರ್ಮಿಷ್ಠನಾದುದರಿಂದ, ನಿನ್ನ ಸಹಾಯಾರ್ಥವಾಗಿ ಇವರು ಬಂದಿರುವರು. ಇವರ ಸಹಾಯದಿಂದ ದಿಗ್ವಿಜಯವನ್ನು ಹೊಂದಿ, ಯಾವ ಧರ್ಮದ ಪ್ರಭಾವದಿಂದ ವಿಜಯವನ್ನು ಹೊಂದುವಿಯೋ, ಆ ಧರ್ಮದ ಪ್ರಭಾವದಿಂದಲೇ ಚಿರಕಾಲದವರೆಗೂ ಪ್ರಜೆಗಳನ್ನು ಪುತ್ರನಿರ್ವಿಶೇಷವಾಗಿ ಪರಿಪಾಲಿಸಿ, ಸದ್ಗತಿಯನ್ನು ಹೊಂದುವುದಕ್ಕೆ ಪಾತ್ರನಾಗು '' ಎಂದು ಹೇಳಿದನು. ತಕ್ಷಣವಲ್ಲಿಯೇ ಅರ್ಜಕನಿಗೆ ಸ್ಮೃತಿಯು ಬಂದಿತು. ಇಡುಮಿನಾಯಸ್ಸನಿಗೂ, ಮೆಂಟರು ಮತ್ತು ಟೆಲಿಮಾಕಸ್ಸನಿಗೂ ತೀರ್ಥಪ್ರಸಾದಗಳು ಕೊಡಲ್ಪಟ್ಟುವು.

ಈ ಮಾತನ್ನು ಕೇಳಿ ಆಶ್ಚರ್ಯಪಡುತ್ತಾ, ಇವರೆಲ್ಲರೂ ಯೂರೋಪಳ ಗರ್ಭಗುಡಿಗೆ ಹೋದರು. ಇವರನ್ನು ನೋಡಿದ ಕೂಡಲೆ, ಈ ಮಹಾಶಕ್ತಿಯು ಅರ್ಜಕನ ಕಣ್ಣುಗಳು ಪ್ರಜ್ವಲಿಸುವುದಕ್ಕೆ ಉಪಕ್ರಮವಾದವು. ಅವನ ಕೂದಲುಗಳೆಲ್ಲಾ ನೆಟ್ಟಗೆ ನಿಂತವು. ಅವನ ಮುಖವೆಲ್ಲಾ ಕೆಂಪೇರಿ ಉಬ್ಬಿದ್ದಾಯಿತು. ಅವನು ಬಾಹುಗಳನ್ನು ಎತ್ತಿದನು. ಅವುಗಳು ನಿಶ್ಚಲವಾಗಿ ನಿಂತವು. ಅವನ ಸರ್ವಾವಯವಗಳು ಏನೋ ಒಂದು ವಿಧವಾದ ಮಹಾಶಕ್ತಿಯಿಂದ ವ್ಯಾಪ್ತನಾಗಿರುವಂತೆ ತೋರಿತು. ಅವನು ಮಾತನಾಡುವುದಕ್ಕೆ ಉಪಕ್ರಮಿಸಿದನು. ಆ ಮಾತು ಮನುಷ್ಯನ ವಾಕ್ಕಿನಂತೆ ಇರಲಿಲ್ಲ. ಅದು ಅಮಾನುಷವಾಗಿತ್ತು. ಅವನು ಹೇಳಿದ್ದೇನೆಂದರೆ:--

" ಎಲೈ ಇಡುಮಿನಾಯಸ್ಸನೇ, ನಿನ್ನ ಕಷ್ಟವು ನಿಗ್ರಹಿತು. ಭಯಂಕರವಾದ ಸಮುದ್ರಗಳು [illegible] ವೃಗಳೂ [illegible] ವಾಗುವುವು. ನಿನ್ನ ಶತ್ರುಗಳು ಕುಟಿಲ ಸ್ವಭಾವವುಳ್ಳವರು. ನೀನು ರುಜುಮಾರ್ಗಾವಲಂಬಿಯು. ಕೌಟಿಲ್ಯವು ರುಜುತ್ವದಿಂದ ನಿಗ್ರಹಿಸಲ್ಪಟ್ಟಿತು. ಜೂಪಿಟರನ ಮಹಿಮೆಯಿಂದ ಜಯಲಕ್ಷ್ಮಿಯು ನಿನ್ನನ್ನು ಅವಲಂಬಿಸುವಳು. ಹೀಗೆ ಅವಲಂಬಿಸುವಂತೆ ಮಾಡುವುದಕ್ಕೆ ಜಗದೀಶ್ವರನ ಆಜ್ಞೆಯಿಂದ ಈ ಮಹಾನುಭಾವರುಗಳಾದ ಮೆಂಟರೂ ಮತ್ತು ಟೆಲಿಮಾಕಸ್ಸನೂ ಬಂದಿರುವರು. ಈ ಟೆಲಿಮಾಕಸ್ಸನು ಸಾಮಾನ್ಯನಲ್ಲ. ಲೋಕೈಕವೀರನಾದ ಯೂಲಿಸಸ್ಸನ ಮಹಿಮೆಗಿಂತಲೂ ಇವನ ಮಹಿಮೆಯು ಕಡಮೆಯಾಗಿ

ರುವುದಿಲ್ಲ. ಈ ಮೆಂಟರನ ರೂಪದಲ್ಲಿ ಧರ್ಮವೇ ಮೂರ್ತೀಭವಿಸಿದ ದೇವರಾಗಿ ನಿನ್ನ ದೇಶಕ್ಕೆ ಬಂದಿರುವುದು. ಶಕ್ತಿಯಿಂದ ಆಗತಕ್ಕ ಕೆಲಸಗಳೇನೂ ಇರುವುದಿಲ್ಲ. ನಿನ್ನ ಧರ್ಮವು ವಜ್ರಾಯುಧವಾಗಿ ಪರಿಣಮಿಸಿರುವುದು. ನಿನ್ನ ಶತ್ರುಗಳು ಶರಣಾಗತರಾಗುವರು. ದಿಗ್ವಿಜಯವನ್ನು ಹೊಂದು. ಸದರಿ ವಿಜಯವನ್ನು ಧರ್ಮದಿಂದ ಅನುಭವಿಸು.''

ಈ ರೀತಿಯಲ್ಲಿ ಹೇಳಿ ಪೂರೈಸಿದ ಕೂಡಲೆ, ಅರ್ಚಕನು ಸ್ವಸ್ವರೂಪದಿಂದ ದೇವತಾರಾಧನೆಯನ್ನು ಮಾಡಿ, 'ಇಡೂಮಿನಿಯುಸ್', 'ಟಿಲಿಮಾಕಸ್' ಮತ್ತು ಮೆಂಟರಿಗೆ ತೀರ್ಥಪ್ರಸಾದಗಳನ್ನು ಕೊಟ್ಟನು. ಇಡೂಮಿನಿಯುಸ್ಸನೇ ಮೊದಲಾದ ಸರ್ವರಿಗೂ ಇದು ಪರಮಾಶ್ಚರ್ಯವನ್ನುಂಟುಮಾಡಿತು. ಈ ಆಶ್ಚರ್ಯಪರವಶತೆಯಿಂದ ವ್ಯೆನಾಸನ ವಿಗ್ರಹದ ಬಳಿಗೆ ಹೊರಟರು.

ಇವರನ್ನು ನೋಡಿದ ಕೂಡಲೆ, ಅಲ್ಲಿನ ಅರ್ಚಕನಿಗೂ ಆವೇಶ ಬಂದಿತು. ಅಮಾನುಷವಾದ ಆಕಾರವು ಅವನಿಗೆ ಉಂಟಾಯಿತು. ಸರ್ವರಿಗೂ ಮಹದಾಶ್ಚರ್ಯ ಉಂಟಾಗುವಂತೆ ಆ ಅರ್ಚಕನು ಹೇಳಿದ್ದೇನೆಂದರೆ :—

" ಎಲೈ ಇಡೂಮಿನಿಯುಸ್ಸನೇ—ಪ್ರಪಂಚವೆಲ್ಲಾ ಅಜ್ಞಾನದಿಂದ ವ್ಯಾಪ್ತವಾಗಿರುವುದು. ಚಕ್ರವರ್ತಿಗಳು ಮೊದಲುಗೊಂಡು, ಕುಳವಾಡಿಗಳವರೆಗೂ, ಕೋಟೀಶ್ವರರು ಮೊದಲುಗೊಂಡು ಭಿಕ್ಷುಕರವರೆಗೂ ಪ್ರಾಯಕವಾಗಿ ಸರ್ವರೂ ಅಜ್ಞಾನಕ್ಕೆ ಅಧೀನರಾಗಿರುವರು. ಸಾರಾಸಾರವಿಚಾರಜ್ಞಾನವುಳ್ಳವರೇ ಅಪೂರ್ವ. ಪ್ರಾಯಕವಾಗಿ ಎಲ್ಲರೂ ದುರ್ವಿಷಯಾಸಕ್ತಿಯಿಂದ ಆಗತಕ್ಕ ಅನರ್ಥಗಳನ್ನು ಬಲ್ಲರು. ಆದಾಗ್ಯೂ, ಜಿತೇಂದ್ರಿಯರಾಗುವ ಶಕ್ತಿಯಿಲ್ಲದೆ, ದುರ್ವಿಷಯಗಳಿಗೆ ಬಿದ್ದು, ಪ್ರಳಯಾಗ್ನಿಯಲ್ಲಿ ಪತಂಗದ ಹುಳುಗಳ ಅವಸ್ಥೆಯನ್ನು ಹೊಂದುವರು. ಕಾಮ, ಕ್ರೋಧಾದಿ ಅರಿಷಡ್ವರ್ಗಗಳನ್ನು ಗೆಲ್ಲಲಾರದೆ, ತಾವೇ ತಮಗೆ ಶತ್ರುಗಳಾಗುವರು. ತಮ್ಮ ದುರ್ದೆಸೆಗೆ ತಾವೇ ಕಾರಣಭೂತರಾಗುವರು. ಇದು ಸಾಮಾನ್ಯವಾಗಿ ಪ್ರಪಂಚಧರ್ಮವಾಗಿರುತ್ತದೆ. ಎಲೈ ಇಡೂಮಿನಿಯುಸ್ಸನೇ, ನೀನೂ ಇಂದ್ರಿಯಪರವಶನಾಗಿ, ಕಾಮ ಕ್ರೋಧಾದಿಗಳಿಗೆ ಅಧೀನನಾಗಿ, ಅದರ ಫಲವನ್ನು ಅನುಭವಿಸಿದೆ. ದೈವಯೋಗದಿಂದ ನಿನಗೆ ಜ್ಞಾನೋದಯವಾಯಿತು. ನಮ್ಮ ಸಂಪತ್ತುಗಳಿಗೂ, ವಿಪತ್ತುಗಳಿಗೂ ನಾವೇ ಕಾರಣಭೂತರಾಗುತ್ತೇವೆಂದು ನೀನು

ತಿಳಿದುಕೊಂಡೆ. ನಮ್ಮ ಉದ್ಧರಣಕ್ಕೂ, ವರ್ತನಕ್ಕೂ ನಮ್ಮ ಮನೋವಾಕ್ಕರ್ಮಗಳ ಪಾರಿಶುದ್ಧತ್ವನೇ ಕಾರಣವೆಂದು ನಿನಗೆ ಗೊತ್ತಾಯಿತು. ಈ ಧರ್ಮವೇ ನಿನ್ನನ್ನು ಕಾಪಾಡುವುದು ಈ ಧರ್ಮದ ಮಹಿಮೆಯಿಂದಲೇ ಈ ಮಹಾನುಭಾವರುಗಳಾದ ಟೆಲಿಮಾಕಸ್ ಮತ್ತು ಮೆಂಟರುಗಳು ನಿನಗೆ ಸಹಾಯ ಮಾಡುವುದಕ್ಕೋಸ್ಕರ ಈಶ್ವರಾಜ್ಞೆಯಿಂದ ಬಂದಿರುವರು. ನಿನಗೆ ಸನ್ಮಂಗಳಗಳಾಗಲಿ'' ಎಂದು ಹೇಳಿದನು. ಕೂಡಲೇ ಆವೇಶವು ಪರಿಹಾರವಾಯಿತು. ಮೈನಾಸನಿಗೆ ಅರ್ಚನೆಯು ಮಾಡಲ್ಪಟ್ಟಿತು. ಇಡುಮಿನಿಯುಸ್ಸನೇ ಮೊದಲಾದವರಿಗೆ ತೀರ್ಥಪ್ರಸಾದಗಳು ಕೊಡಲ್ಪಟ್ಟವು. ಅವುಗಳನ್ನು ಇವರು ಪರಿಗ್ರಹಿಸಿದರು. ಈ ಅರ್ಚಕನು ಹೇಳಿದ್ದನ್ನು ಕೇಳಿ, ಎಲ್ಲರಿಗೂ ವಿಸ್ಮಯವಾಯಿತು. ಇಡುಮಿನಿಯುಸ್ ಎಂಬುವನ ಕೈಕಾಲುಗಳು ನಡುಗುವುದಕ್ಕೆ ಉಪಕ್ರಮವಾಯಿತು. ಇವನು ಭ್ರಾಂತನಾದನು. ಟೆಲಿಮಾಕಸ್ಸನು ವಿಸ್ಮಿತನಾದನು. 'ಈ ಅರ್ಚಕನು ಹೇಳಿದ್ದೆಲ್ಲಾ ನಿಜವಾಗಿದ್ದೀತೇ? ಇದು ನಂಬಿಕೆಗೆ ಅರ್ಹವಾದದ್ದೇ' ಎಂದು ಯೋಚಿಸುತ್ತಿದ್ದನು. ಮೆಂಟರನು ಸಂಪೂರ್ಣವಾಗಿ ಉದಾಸೀನನಾಗಿದ್ದನು. ಇಡುಮಿನಿಯುಸ್ಸನನ್ನು ಕುರಿತು ಇವನು ಹೇಳಿದ್ದೇನಂದರೆ :—'' ಈ ಅರ್ಚಕನು ಹೇಳಿದ್ದು ಅವನ ಸ್ವಕಪೋಲಕಲ್ಪಿತಗಳಲ್ಲ ಇದು ದೇವರ ಸಂಕಲ್ಪ. ನೀನು ಸದುದ್ದೇಶವುಳ್ಳವನಾಗಿ ಪರಿಣಮಿಸಿರುವಿ. ಸತ್ಸಂಕಲ್ಪದಿಂದ ಹೊರಡತಕ್ಕವರಿಗೆ ದೇವರ ಸಹಾಯವು ಅಪ್ರಾರ್ಥಿತವಾಗಿ ಬರುವುದು. ದೈವ ಸಹಾಯವುಳ್ಳವರಿಗೆ ಪರಾಜಯದ ಶಂಕೆ ಎಲ್ಲಿಯದು? ನಾವು ಇಲ್ಲಿ ಬರಬೇಕೆಂದು ಉದ್ದೇಶಿಸಿರಲಿಲ್ಲ. ನಿನಗೆ ಸಹಾಯ ಮಾಡಬೇಕೆಂಬ ಅಭಿನಿವೇಶವೂ ನಮಗೆ ಇರಲಿಲ್ಲ. ನಿನಗೂ, ನಿನ್ನ ಶತ್ರುಗಳಿಗೂ ಆಗತಕ್ಕ ಯುದ್ಧದಲ್ಲಿ ನಾವು ಭಾಗಿಗಳಾಗುತ್ತೇವೆಂದು ತಿಳಿದುಕೊಂಡು ಇರಲಿಲ್ಲ. ಇವುಗಳೆಲ್ಲಾ ಅಪ್ರಾರ್ಥಿತವಾಗಿಯೇ ಸಂಭವಿಸಿದವು. ನಿನಗೆ ಜಯವಾಗುವುದಕ್ಕೆ ಇವೆಲ್ಲಾ ಶುಭ ಸೂಚನೆಗಳು.''

ಈ ರೀತಿಯಲ್ಲಿ ಮೆಂಟರನು ಹೇಳಲು, ಇಡುಮಿನಿಯುಸ್ಸನು ಉತ್ತರವನ್ನು ಕೊಡಬೇಕೆಂದು ಪ್ರಯತ್ನಮಾಡಿದನು. ಇವನ ಪ್ರಯತ್ನವು ನಿಷ್ಫಲವಾಯಿತು. ಶಬ್ದಗಳು ಬಾಯಿನಿಂದ ಹೊರಡಲಿಲ್ಲ. ಟೆಲಿಮಾಕಸ್ಸನು ಇದನ್ನು ನೋಡಿದನು. ಮೆಂಟರನ ಕಡೆಗೆ ತಿರುಗಿ, ಎಲೈ ಮಹಾನುಭಾವನೇ.—ಈ ಅರ್ಚಕನ ಕೊನೇ ಮಾತುಗಳಿಗೆ ನನಗೆ ಸರಿಯಾದ ಅರ್ಥವಾಗಲಿಲ್ಲ. ನಾನು ಪುನಃ ನೋಡುವೆನೆಂದು ಈತನು

ಹೇಳಿದನು. ನನ್ನ ತಂದೆಯನ್ನು ನೋಡುವೆನೇ ? ಅಥವಾ ನನ್ನ ದೇಶವನ್ನು ನೋಡುವೆನೇ ? ಇವನ ಮಾತು ಏತಕೆ ಸಂದಿಗ್ಧವಾಗಿ ಉಚ್ಚರಿಸಲ್ಪಟ್ಟಿತು ? ನನ್ನ ತಂದೆಯನ್ನು ನೋಡುವ ಪುಣ್ಯವು ನನಗೆ ಲಭ್ಯವಾಗುವುದೇ ? ಅವನು ಬದುಕಿರುವನೇ ? ಆತನ ದರುಶನ ಲಾಭವು ನನಗೆ ದೊರೆಯುವುದೆ ? ನನ್ನ ತಾಯಿಯು ಬದುಕಿರುವಳೇ ? ಅವಳು ವಿಷಸೇವೆಯನ್ನು ಮಾಡಿ, ಪ್ರಾಣವನ್ನು ಕಳೆದುಕೊಂಡಿಲ್ಲವೇ ? ಲೋಕೈಕವೀರನಾದ ಯೂಲಿಸಸ್ಸನನ್ನು ನೋಡುವ ಸುಖವು ಅವನಿಗೆ ದೊರೆಯುವುದೇ ? ಈ ಅರ್ಚಕನ ಮಾತು ನಿಜವೇ ? ಇವನು ದೇವರಿಂದ ಪ್ರೇರಿತನಾಗಿ ಈ ಭವಿಷ್ಯದ್ವಾಕ್ಯವನ್ನು ಹೇಳಿರುವನೇ ? ಇವನು ಹೇಳಿದ್ದು ಕೇವಲ ಶುಭಸೂಚಕಗಳಾಗಿವೆ ನಾನು ಕೇವಲ ದುರದೃಷ್ಟಶಾಲಿಯು. ಇಂಥಾ ಸಂಪತ್ತು ನನಗೆ ಲಭ್ಯವಾಗುವುದು ಕಷ್ಟವೆಂದು ತೋರುತ್ತದೆ. ಬಂದ ಕಷ್ಟಗಳನ್ನೆಲ್ಲಾ ಅನುಭವಿಸುತ್ತಲಿದೇನೆ ಆದರೆ ಈ ಅರ್ಚಕನು ಹೇಳಿದ ಶುಭವು ಉಂಟಾಗುವುದೋ ಇಲ್ಲವೋ ಎಂಬ ಸಂದೇಹವು ನನಗೆ ಉಂಟಾಗಿ ಇದೆ. ಆದರೆ, ಈ ಅರ್ಚಕನು ದೇವರಿಂದ ಪ್ರೇರಿತನಾಗಿ ಈ ರೀತಿಯಲ್ಲಿ ಹೇಳಿರುವನೆಂದು ನೀನು ಇಡುಮಿನಿಯುಸ್ಸನಿಗೆ ಅಪ್ಪಣೆ ಕೊಡಿಸಿದ್ದನ್ನು ಕೇಳಿ, ನನ್ನ ಸಂತೋಷವು ಪಾರಾಕಾಷ್ಠದೆಸೆಯನ್ನು ಹೊಂದುತ್ತಲಿದೆ. ದೇವರ ಸಂಕಲ್ಪವು ನಡೆಯಲೇಬೇಕು. ಅದಕ್ಕೆ ಅನುಸಾರವಾಗಿ ನಡೆಯುವುದು ನಮ್ಮ ಕರ್ತವ್ಯ. ಆ ರೀತಿಯಲ್ಲಿ ನಡೆಯುವುದಕ್ಕೆ ನಾನು ಸಿದ್ಧನಾಗಿದೇನೆ.''

ಈ ರೀತಿಯಲ್ಲಿ ಟೆಲಿಮಾಕಸ್ಸನು ಹೇಳಿದನು. ಅಷ್ಟರಲ್ಲಿ ಇಡುಮಿನಿಯುಸ್ಸನು ಚೇತರಿಸಿಕೊಂಡನು. ಟೆಲಿಮಾಕಸ್ಸನನ್ನೂ, ಮೆಂಟರನನ್ನೂ ತನ್ನ ಸಹಾಯಕ್ಕೋಸ್ಕರ ಕಳುಹಿಸಿದ ಸರ್ವೇಶ್ವರನಿಗೆ ವಂದನೆಯನ್ನು ಮಾಡಿದನು. ಸರ್ವರಿಗೂ ಸಂತರ್ಪಣೆಯು ಮಾಡಲ್ಪಟ್ಟಿತು. ಟೆಲಿಮಾಕಸ್ಸನಿಗೂ, ಮೆಂಟರಿಗೂ ಭೋಜನವಾದ ಮೇಲೆ, ಅವರನ್ನು ಕುರಿತು ಇಡುಮಿನಿಯುಸ್ಸನು ಹೇಳಿದ್ದೇನಂದರೆ:—

"ಟ್ರಾಯ್ ದೇಶದಿಂದ ನಾನು ಕ್ರೀಟ್ ದೇಶಕ್ಕೆ ವಾಪಸು ಬಂದಾಗ, ರಾಜನೀತಿಗಳ ನಿಯಮಗಳನ್ನು ಕೂಡ ತಿಳಿದುಕೊಂಡಿರಲಿಲ್ಲ. ನನಗೆ ರಾಜತಂತ್ರಗಳ ಗಂಧವೇ ಇರಲಿಲ್ಲ. ಪ್ರಜೆಗಳನ್ನು ಸುಖವಾಗಿಟ್ಟುಕೊಳ್ಳುವ ಧರ್ಮಸೂಕ್ಷ್ಮಗಳು ನನಗೆ ತಿಳಿಯದೆ ಇದ್ದದ್ದರಿಂದ ಅನೇಕ ತಪ್ಪುಗಳನ್ನು ಮಾಡಿದೆನು. ಶಾಂತಿಯಿಲ್ಲದೆ, ಅನೇಕ ಸಂದರ್ಭಗಳಲ್ಲಿ ನಿರಂಕುಶವಾಗಿ ನಡೆದೆನು. ಕೋಪತಾಪಗಳಿಗೆ ಅಧೀನನಾಗಿ

ಮಾಡಬಾರದ ಕೆಲಸಗಳನ್ನು ಮಾಡಿದೆನು. ದೊಡ್ಡ ಪದವಿಯು ನನಗೆ ಬಂದಿತು. ಆ ಪದವಿಯ ಜತೆಗೆ ಜವಾಬ್ದಾರಿಯೂ ಬಂದಿತು. ಪದವಿಯಿಂದ ಹಿಗ್ಗುತ್ತಾ, ಜವಾಬ್ದಾರಿಯ ಜ್ಞಾನವನ್ನು ನಾನು ಸಂಪಾದಿಸಿಕೊಳ್ಳಲಿಲ್ಲ. ನಮ್ಮ ಕರ್ಮಕ್ಕೆ ಅನುಸಾರವಾದ ಫಲವು ನಮಗೆ ಬಂದೇ ಬರುವುದು. ಬ್ರಹ್ಮಾದಿಗಳಿಗೂ ಇದು ತಪ್ಪುವುದಿಲ್ಲ. ಮನುಷ್ಯಮಾತ್ರರಾದ ನಮ್ಮಂಥವರ ಪಾಡೇನು? ದೇವರು ನಿರ್ಘೃಣನು. ಇವನು ಜನಗಳಲ್ಲಿ ಕೃಪೆಯನ್ನು ಮಾಡುವನೆಂದು ಹೇಳುತ್ತಾರೆ. ಇದು ಶುದ್ಧ ಸುಳ್ಳು. ಅವರವರ ಕರ್ಮಗಳಿಗನುಸಾರವಾದ ಫಲವು ಅವರಿಗೆ ಲಭ್ಯವಾಗುವಂತೆ ದೇವರು ಮಾಡಿರುವನು. ಅವುಗಳಲ್ಲಿ ತಾನು ಪ್ರವರ್ತಿಸುವುದಿಲ್ಲ. "ಮಾಡಿದ್ದುಣ್ಣೋ ಮಹರಾಯ" ಎಂಬ ಗಾದೆಯನ್ನು ಹೇಳತಕ್ಕವರೆಲ್ಲರೂ ಅದನ್ನು ಸ್ಪಷ್ಟವಾಗಿ ತಿಳಿದುಕೊಂಡಿರುವರು. ನಾನು ಬಹಳ ತಪ್ಪನ್ನು ಮಾಡಿದೆನು. ಆ ತಪ್ಪುಗಳ ಫಲವನ್ನು ಇದುವರೆಗೂ ಅನುಭವಿಸಿದೆನು. ನನ್ನ ತಪ್ಪುಗಳನ್ನು ಕ್ಷಮಿಸಬೇಕೆಂದು ದೇವರನ್ನು ಪ್ರಾರ್ಥಿಸಿದೆನು. ಈ ಪ್ರಾರ್ಥನೆಗೆ ದೇವರು ಕಿವಿಯನ್ನು ಕೊಡಲಿಲ್ಲ. ನನ್ನ ಅಸಾಧಾರಣವಾದ ಪ್ರೀತಿಗೆ ಪಾತ್ರನಾಗಿದ್ದ ನನ್ನ ಮಗನನ್ನು ನಾನು ಕಳೆದುಕೊಳ್ಳಬೇಕಾಯಿತು. ನನ್ನ ಸರ್ವಸ್ವವನ್ನೂ ಕಳೆದುಕೊಂಡೆನು. ನನ್ನ ರಾಜ್ಯವನ್ನೂ ಕಳೆದುಕೊಂಡೆನು. ದೇಹವನ್ನು ಬಿಡಬೇಕೆಂದು ಪ್ರಯತ್ನ ಮಾಡಿದೆನು. ಇದು ಅಸಾಧ್ಯವಾಯಿತು. ಈ ಅರಣ್ಯ ಪ್ರದೇಶದಲ್ಲಿ ಬಂದು ಈ ಹೊಸ ರಾಜ್ಯವನ್ನು ಕಟ್ಟಿದೆನು. ನನಗೆ ಬಂದ ಕಷ್ಟಪರಂಪರೆಗಳಿಂದ ಜ್ಞಾನೋದಯವಾಯಿತು. ಪ್ರಭುತ್ವವೂ, ಅಧಿಕಾರವೂ, ಸಂಪತ್ತೂ ಇವೆಲ್ಲವೂ ವಿಪತ್ತುಗಳಿ ಕಾರಣವೆಂದು ಗೊತ್ತಾಯಿತು. ಶಮದಮಗಳೇ ನಮ್ಮ ಕ್ಷೇಮಕ್ಕೆ ಕಾರಣಗಳೆಂಬದಾಗಿಯೂ, ಅವುಗಳನ್ನು ಕಳೆದುಕೊಂಡರೆ ದೇಹವನ್ನೇ ಬಿಡುವುದು ಉತ್ತಮವೆಂಬದಾಗಿಯೂ ನನಗೆ ಗೊತ್ತಾಯಿತು. ನನಗೆ ಬಂದ ವಿಪತ್ತುಗಳೆಲ್ಲಾ ನನ್ನ ಕ್ಷೇಮಕ್ಕೆ ತುಂಬಾ ಸಾಧಕಗಳಾದವು. ದೇಶಭ್ರಷ್ಟನಾಗಿ ನಾನು ಹೇಗೆ ಅನ್ನವಸ್ತ್ರಗಳಿಗಿಲ್ಲದೆ ಅಲೆಯಬೇಕಾಯಿತು. ಕಾಡುಗಳಲ್ಲಿ ನಾನು ಹೇಗೆ ದುಷ್ಟ ಮೃಗಗಳಿಗಾದರೂ ಆಹಾರವಾಗಬೇಕೆಂದು ಅಲೆದೆನು. ನನ್ನ ಕರ್ಮಫಲವನ್ನು ನಾನು ಅನುಭವಿಸಲೆಂದು ಅವುಗಳೂ ಕೂಡ ನನ್ನನ್ನು ಕೊಂದು ತಿನ್ನದೆ, ಹೇಗೆ ಉದಾಶೀನ ಮಾಡಿದವೋ, ಪರ್ವತಾಗ್ರಗಳಿಗೆ ಹೋಗಿ, ಅಲ್ಲಿಂದ ಧುಮುಕಿ ಕೆಳಗೆ ಸಾಯಬೇಕೆಂದು ನಾನು ಹೇಗೆ ಪ್ರಯತ್ನ

ಮಾಡಿದೆನೋ, ನದಿಗಳಲ್ಲಿಯೂ, ಸಮುದ್ರಗಳಲ್ಲಿಯೂ ಬಿದ್ದು ಪ್ರಾಣವನ್ನು ಬಿಡಬೇಕೆಂದು ನಾನು ಹೇಗೆ ಪ್ರಯತ್ನ ಮಾಡಿದೆನೋ, ಈ ಪ್ರಯತ್ನಗಳು ಹೇಗೆ ಸಾಗಲಿಲ್ಲವೋ, ಕೊನೆಗೆ ಈ ಅರಣ್ಯದಲ್ಲಿ ಬಂದು ಹೇಗೆ ನಿಲ್ಲಬೇಕಾಯಿತೋ, ಮೈನಾಸನ ಮೊಮ್ಮಗನೆಂಬ ಅಹಂಕಾರವು ನನಗೆ ಎಷ್ಟುಮಟ್ಟಿಗೆ ಇದ್ದಿತೋ, ಮೈನಾಸನಿಗೆ ಇದ್ದ ಗುಣಾತಿಶಯಗಳು ನನ್ನಲ್ಲಿ ಇಲ್ಲದೆ ಹೋದದ್ದರಿಂದ, ಅವನ ಮೊಮ್ಮಗನೆನ್ನಿಸಿಕೊಳ್ಳುವುದಕ್ಕೆ ನಾನು ಅನರ್ಹನೆಂದು ತಿಳಿದುಕೊಳ್ಳುವ ಅವಸ್ಥೆಯು ಹೇಗೆ ನನಗೆ ಬಂದಿತೋ, ಉದರ ಪೋಷಣಕ್ಕೋಸ್ಕರ ಈ ಪಟ್ಟಣದಲ್ಲಿ ನಾನು ಹೇಗೆ ಕೆಲಸ ಮಾಡುವುದಕ್ಕೆ ಉಪಕ್ರಮಿಸಿದೆನೋ, ಈ ನನ್ನ ಭೃತ್ಯರೆಲ್ಲರೂ ಹೇಗೆ ನನ್ನಲ್ಲಿ ಅನುತಾಪವುಳ್ಳವರಾಗಿ, ನನ್ನ ಜತೆಯಲ್ಲಿ ಕೆಲಸಮಾಡುವುದಕ್ಕೆ ಬಂದು ನಿಂತಿರುವರೋ, ಈ ಶೋಚನೀಯವಾದ ಅವಸ್ಥೆಯಲ್ಲಿಯೂ, ಈ ಕಾಡು ಪ್ರದೇಶಗಳಿಂದ ನನ್ನನ್ನು ಓಡಿಸಬೇಕೆಂದು ನನಗೆ ಶತ್ರುಗಳು ಹೇಗೆ ಉಂಟಾಗಿರುವರೋ, ಈ ಅವಸ್ಥೆಗಳನ್ನೆಲ್ಲಾ ನೋಡಿ, ಹಗಲೂ ರಾತ್ರಿ ನಾನು ಹೇಗೆ ಕಣ್ಣೀರು ಹಾಕುತ್ತಲಿರುವೆನೋ, ದೇಹವನ್ನು ಬಿಡಬೇಕೆಂದು ಸಂಕಲ್ಪವನ್ನು ಮಾಡಿದಾಗ್ಯೂ, ದೇವರು ನನಗೆ ಈ ಭಾಗ್ಯವನ್ನು ಕೂಡ ಹೇಗೆ ಕೊಡದೆ ಇರುವನೋ, ಇವುಗಳನ್ನೆಲ್ಲಾ ಹೇಳಿಕೊಳ್ಳುವುದಕ್ಕೆ ಶಕ್ತಿಯಿಲ್ಲ. ನಾನು ಪಟ್ಟಿರುವ ಕಷ್ಟವು ನನಗೆ ಹೇಗೆ ತಿಳಿದಿರುವುದೋ ಹಾಗೆ ಜಗದೀಶ್ವರನು ಒಬ್ಬನು ಮಾತ್ರ ತಿಳಿದುಕೊಂಡಿರಬಹುದು. ಈ ಅರ್ಜುನನು ಹೇಳಿದ್ದರಲ್ಲಿ ಎಷ್ಟು ನಿಜವಿರುವುದೋ ನನಗೆ ತಿಳಿಯದು. ಏನೋ ಘೋರವಾದ ಪಾಪಗಳನ್ನು ಮಾಡಿ, ನಾನು ಇಂಥಾ ಕಷ್ಟದೆಸೆಗೆ ಬಂದಿರುವೆನು. ನನ್ನ ಸಹಾಯಾರ್ಥವಾಗಿ ನೀವು ಬಂದಿರುವಿರೆಂದು ಈ ಅರ್ಜುನನು ಹೇಳಿದನು. ಇದು ಎಷ್ಟು ನಿಜವೋ ನನಗೆ ತಿಳಿಯದು. ಪಾಪಿಷ್ಟನಾದ ನನಗೆ ನೀವು ಸಹಾಯಕ್ಕೆ ಬರುವುದೆಂದರೇನು ? ನನಗೆ ಜಯವಾಗುವುದೆಂದರೇನು ? ಇವೆಲ್ಲಾ ನನಗೆ ಸ್ವಪ್ನಪ್ರಾಯವಾಗಿರುವುದು. ಅದು ಹೇಗಾದರೂ ಇರಲಿ ಈ ಅರ್ಜುನನು ಹೇಳಿದ್ದು ನಿಜವಾದರೂ ಆಗಲಿ. ಸುಳ್ಳಾದರೂ ಆಗಲಿ. ದೈವಸಂಕಲ್ಪದಂತೆ ನಡೆಯುವುದು ನನಗೆ ಮುಖ್ಯ ಕರ್ತವ್ಯ. ಆ ರೀತಿಯಲ್ಲಿ ನಡೆಯಲಿ. ಶತ್ರುಗಳಿಗೆ ಜಯವಾಗಿ, ಈ ಯುದ್ಧದಲ್ಲಿ ದೇಹವನ್ನು ಬಿಡುವ ಸಂಭವವು ಬಂದರೆ, ಅದರಿಂದ ನನ್ನ ಕ್ಲೇಶಕ್ಕೆ ಸಮಾಪ್ತಿಯುಂಟಾಗುವುದು. ಜಯವನ್ನು ಹೊಂದಿ, ಪ್ರಭುತ್ವ ಮಾಡುವ ಸಂಭವವು ಬಂದರೆ, ನಾನು ಇರುವ

ರೆಗೂ ಅನುಭವಿಸಿದ ಕಷ್ಟಪರಂಪರೆಗಳಿಂದ ಉಂಟಾಗಿರುವ ಜ್ಞಾನಕ್ಕೆ ಅನುಸಾರವಾಗಿ ಪ್ರಜೆಗಳ ಸೇವೆಯನ್ನು ಧರ್ಮದಿಂದ ಮಾಡಿ, ಜಗದೀಶ್ವರನ ಪ್ರೀತಿಗೆ ಪಾತ್ರನಾಗುವೆನು. ಟೆಲಿಮಾಕಸ್ಸನ ವಿಷಯದಲ್ಲಿ ಈ ಅರ್ಚಕನು ಹೇಳಿದ್ದು ನಿಜವಾಗಿ ಪರಿಣಮಿಸಿದರೆ, ಅದರಿಂದ ನಾನು ಸಂತುಷ್ಟನಾಗುವೆನು. ಯೂಲಿಸಸ್ಸನು ನನಗೆ ಪರಮ ಮಿತ್ರನು. ಯೂಲಿಸಸ್ಸನ ಮಗನು ನನಗೆ ಪುತ್ರನಿರ್ವಿಶೇಷನಾದವನು. ಅವನಿಂದ ಉಪಕಾರವನ್ನು ಹೊಂದಿ, ಅವನಿಗೆ ಪ್ರತ್ಯುಪಕಾರವನ್ನು ಮಾಡುವ ಶಕ್ತಿಯನ್ನು ದೇವರು ನನಗೆ ಅನುಗ್ರಹಿಸಿದರೆ, ನಾನು ಧನ್ಯನೆಂದು ಭಾವಿಸುವೆನು. ಈ ಪ್ರಪಂಚದಲ್ಲಿ ದೇವರ ಸಂಕಲ್ಪಕ್ಕೆ ವಿರೋಧವಾಗಿ ತೃಣವೂ ಚಲಿಸುವುದಿಲ್ಲ. ದೇವರ ಇಷ್ಟದಂತೆ ಸರ್ವವೂ ನಡೆಯುವುವು. ಅವನ ಸಂಕಲ್ಪದಂತೆ ನಾವು ನಡೆದುಕೊಂಡರೆ ನಮಗೂ ಮಂಗಳವಾಗುವುದು."

ಈ ರೀತಿಯಲ್ಲಿ ಇಡೊಮೆನಿಯಸ್ಸನು ಹೇಳಲು, ಟೆಲಿಮಾಕಸ್ಸನು ಅವನನ್ನು ಕುರಿತು ಹೇಳತೊಡಗಿದನು — "ನಿನ್ನ ಸಂಕಲ್ಪವು ಸಾಧುವಾದದ್ದು. ಜಗದೀಶ್ವರನ ಧರ್ಮಕ್ಕೆ ಅನುಸಾರವಾಗಿ ಫಲಾಭಿಸಂಧಿಯಿಲ್ಲದೆ ಕೆಲಸ ಮಾಡುವುದು ನಮ್ಮ ಕರ್ತವ್ಯ. ಫಲವು ದೇವರ ಇಷ್ಟದಂತೆ ಪರಿಣಮಿಸಲಿ. ನಮ್ಮನ್ನು ಕರೆದುಕೊಂಡುಬಂದ ಫಿನೀಷಿಯದ ಹಡಗು ವಾಪಸು ಹೊರಟುಹೋಗಲಿ. ನಿನ್ನ ಶತ್ರುಗಳೇ ನನ್ನ ಶತ್ರುಗಳು. ಯುದ್ಧಕ್ಕೆ ಉಪಕ್ರಮವು ಮಾಡಲ್ಪಡಲಿ. ಅಸೆಸ್ಟೀಸನು ಟ್ರಾಯ್ ದೇಶದವನು. ಅವನು ಗ್ರೀಸ್ ದೇಶಕ್ಕೆ ಪ್ರತಿಕಕ್ಷಿಯಾದವನು. ಅವನು ಧರ್ಮಿಷ್ಠನಾದದ್ದರಿಂದ ಅವನ ಪಕ್ಷವಾಗಿ ನಾವು ಯುದ್ಧಮಾಡಿದೆವು. ನಮಗೆ ಜಯವಾಯಿತು. ಗ್ರೀಸ್ ದೇಶದ ಶತ್ರುಗಳಿಗೆ ಸಹಾಯಮಾಡಿದವರು ಧರ್ಮಸಂಸ್ಥಾಪನೆಗೋಸ್ಕರ ಸ್ವದೇಶೀಯರಾದ ನಿನಗೂ, ಈ ಕ್ರೀಟ್ ದ್ವೀಪ ನಿವಾಸಿಗಳಿಗೂ ಸಹಾಯ ಮಾಡುವುದು ನಮಗೆ ಮುಖ್ಯ ಕರ್ತವ್ಯ. ಗ್ರೀಸ್ ದೇಶದ ಶತ್ರುಗಳು ನಿನಗೆ ಮಾತ್ರ ಶತ್ರುಗಳಲ್ಲ. ಅವರು ನಮಗೂ ಶತ್ರುಗಳು. ಕ್ರೀಟ್ ದ್ವೀಪವು ಹೇಗೋ ಹಾಗೆ ಇಥಾಕಾ ದ್ವೀಪವೂ ಕೂಡ ಗ್ರೀಸ್ ದೇಶಕ್ಕೆ ಸೇರಿದ್ದು. ಆದುದರಿಂದ ನಿನ್ನ ಶತ್ರುಗಳು ನಮ್ಮ ಶತ್ರುಗಳೆಂದು ಭಾವಿಸಿರುವೆನು. ಈಗ ಅರ್ಚಕನಿಂದ ಹೇಳಲ್ಪಟ್ಟ ಮಾತು ಎಂದಿಗೂ ಅಸಂಭವವಾದದ್ದಲ್ಲ. ನಮ್ಮಿಬ್ಬರಿಗೂ ದೇವರ ಪ್ರಸನ್ನತೆಯು ಉಂಟಾಗುವುದು. ನಮಗೆ ಜಯವಾಗುವುದು. ಯುದ್ಧಕ್ಕೆ ಉಪಕ್ರಮಮಾಡು."

# ೧೧ ನೆಯ ಅಧ್ಯಾಯ.

ಮೆಂಟರು ಟೆಲಿಮಾಕಸ್ಸನ ಮಾತುಗಳನ್ನು ಕೇಳಿದನು. ಅವನು ಮಾತನಾಡುವಾಗ, ಅವನ ಮನಸ್ಸು ಹೇಗೆ ಉತ್ಸಾಹಭರಿತವಾಗಿತ್ತೋ ಅದನ್ನು ನೋಡಿದನು. ಅವನನ್ನು ಕುರಿತು ಮೆಂಟರನು ಹೇಳಿದ್ದೇನಂದರೆ:—

"ಎಲೈ ಟೆಲಿಮಾಕಸ್ಸನೇ, ನಿನ್ನ ಮನೋಭಾವವನ್ನು ನಿನ್ನ ಕಣ್ಣುಗಳು ತೋರಿಸುತ್ತವೆ. ಈಗ ನಿಶ್ಚಿತವಾಗಿರತಕ್ಕ ಯುದ್ಧದಲ್ಲಿ ಶತ್ರುಗಳನ್ನು ನಿಗ್ರಹಿಸಿ, ಯಶಸ್ಸನ್ನು ಹೊಂದಬೇಕೆಂಬ ಅಭಿಲಾಷೆಯು ನಿನಗೆ ಉಂಟಾಗಿರುವುದು. ಇದು ಶ್ಲಾಘ್ಯವಾದವು. ಟ್ರಾಯ್ ದೇಶದ ಮುತ್ತಿಗೆಯಲ್ಲಿ ನಿನ್ನ ತಂದೆಯು ಬರೀ ಪರಾಕ್ರಮದಿಂದ ಜಯಿಸಿದನೆಂದು ತಿಳಿದುಕೊಳ್ಳಬೇಡ. ಬರೀ ಬಾಹುಬಲದಿಂದ ಎಂದಿಗೂ ಜಯವಾಗುವುದಿಲ್ಲ. ಬಾಹುಬಲಕ್ಕೆ ಅಸಾಧಾರಣವಾದ ಪೂರ್ವಾಪರ ಜ್ಞಾನವು ಆವಶ್ಯಕ. ಪರಿಣಾಮಫಲವನ್ನು ಚನ್ನಾಗಿ ಪರ್ಯಾಲೋಚಿಸಿ, ಕೆಲಸವನ್ನು ಮಾಡಬೇಕು. ಎಕಿಲೀಸ್ ಎಂಬುವನು ಅಸಹಾಯಶೂರನಾಗಿದ್ದನು, ಅಜೇಯನಾಗಿಯೂ ಇದ್ದನು. ಇವನನ್ನು ನೋಡಿದ ಮಾತ್ರದಿಂದಲೇ ಶತ್ರುಗಳು ಭಯಭ್ರಾಂತರಾಗುತ್ತಿದ್ದರು. ಇವನ ಬಾಹುಬಲವು ಅದ್ಭುತವಾಗಿತ್ತು. ಇವನು ಯುದ್ಧಕ್ಕೆ ಹೋದಕೂಡಲೆ ಅನೇಕ ತಲೆಗಳು ಬೀಳುತ್ತಿದ್ದುವು. ಆದರೂ, ಸಾವಧಾನವಾಗಿ ಪರಿಣಾಮಫಲವನ್ನು ಪರ್ಯಾಲೋಚಿಸದೆ ದುಡುಕಿ ಕೆಲಸಮಾಡುವುದು ಇವನ ಸ್ವಭಾವವಾಗಿತ್ತು. ಹೆಕ್ಟರನನ್ನು ಗೆದ್ದಾಗ್ಯೂ, ಟ್ರಾಯ್ ಕೋಟೆಯ ಬಳಿಯಲ್ಲಿ ಇವನ ದೇಹವನ್ನು ಬಿಡುವ ಸಂಭವವು ಉಂಟಾಯಿತು. ಸದರಿ ಕೋಟೆಯನ್ನು ತೆಗೆದುಕೊಳ್ಳುವುದಕ್ಕೆ ಇವನು ಸಮರ್ಥನಾಗಲಿಲ್ಲ. ನಿನ್ನ ತಂದೆಯಲ್ಲಿ ಬುದ್ಧಿಬಲವು, ಭುಜಬಲಕ್ಕಿಂತ ಹೆಚ್ಚಾಗಿತ್ತು. ಈ ಕೋಟೆಯನ್ನು ಆತನು ತೆಗೆದುಕೊಂಡನು. ಪ್ರತಿಭಟಿಸಿದ ಅನೇಕರನ್ನು ಸಂಹರಿಸಿದನು. ಹತ್ತು ವರ್ಷಗಳವರೆಗೂ, ಈ ಪಟ್ಟಣಕ್ಕೆ ಮುತ್ತಿಗೆಯು ಹಾಕಲ್ಪಟ್ಟಿತು. ಗ್ರೀಸ್ ದೇಶದ ಸೇನಾನಾಯಕರಲ್ಲಿ ಯಾರೂ ಇದನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ನಿನ್ನ ತಂದೆಯ ಬುದ್ಧಿಬಲದಿಂದ, ನಿಮಿಷಾರ್ಧದಲ್ಲಿ ಈ ಕೋಟೆಯು ತೆಗೆದುಕೊಳ್ಳಲ್ಪ

ಟ್ಟಿತು. ಉತ್ಸಾಹದಿಂದ ಪ್ರತಿನಿವಿಷ್ಟನಾಗಿ, ದುಡುಕಬೇಡ. ಸಾವಧಾನವಾಗಿ ನಮ್ಮ ಬಲವನ್ನೂ, ಶತ್ರುಗಳ ಬಲವನ್ನೂ ಪರಿಶೀಲಿಸು. ಆತುರಪಡಬೇಡ. ಈ ಯುದ್ಧಕ್ಕೆ ಕಾರಣಗಳೇನೋ ಅದನ್ನು ವಿಚಾರಿಸೋಣ. ಧರ್ಮವು ನಮ್ಮ ಪಕ್ಷವಾಗಿರುವುದೇ ಅಥವಾ ಶತ್ರುಗಳ ಪಕ್ಷವಾಗಿರುವುದೇ, ಅದನ್ನು ತಿಳಿದುಕೊಳ್ಳೋಣ. ಧರ್ಮವು ನಮ್ಮ ಪಕ್ಷವಾಗಿದ್ದರೆ, ಈ ಯುದ್ಧವು ಉಪಕ್ರಮಿಸಲ್ಪಡಲಿ. ನಮಗೆ ಜಯವುಂಟಾಗುವುದರಲ್ಲಿ ಸಂದೇಹವಿಲ್ಲ. ಹಾಗಿಲ್ಲದಿದ್ದರೆ ಯುದ್ಧವನ್ನು ಮಾಡುವುದು ಎಂದಿಗೂ ಧರ್ಮವಲ್ಲ. ಅಧರ್ಮಯುದ್ಧಕ್ಕೆ ಉಪಕ್ರಮಿಸಿದರೆ ಪರಾಜಯವಾಗುವುದು ಸಿದ್ಧ. ಈ ಯುದ್ಧದ ಕಾರಣಗಳನ್ನು ಇಡುಮಿನಿಯುಸ್ಸನು ಮೊದಲು ತಿಳಿಸಲಿ. ಇವನಿಂದ ಈ ಯುದ್ಧದ ಪೂರ್ವಾಪರಗಳು ತಿಳಿದುಕೊಳ್ಳಲ್ಪಡಬೇಕು. ನಮ್ಮ ಬಲಾಬಲಗಳೂ, ಶತ್ರುಗಳ ಬಲಾಬಲಗಳೂ ಪರಿಶೀಲಿಸಲ್ಪಡಬೇಕು. ಈ ವಿಷಯಗಳನ್ನೆಲ್ಲಾ ಪರ್ಯಾಲೋಚಿಸದೆ, ಯುದ್ಧಕ್ಕೆ ಉಪಕ್ರಮ ಮಾಡುವುದು ಶ್ರೇಯಸ್ಕರವಾದದ್ದಲ್ಲ. 'ತಾಳಿದವರು ಬಾಳ್ಯಾರು' ಎಂಬ ಗಾಥೆಯನ್ನು ಸ್ಮರಿಸಿಕೊ. ಆತುರಪಡಬೇಡ.'' ಈ ರೀತಿಯಲ್ಲಿ ಮೆಂಟರು ಹೇಳಿದನು.

ಟೆಲಿಮಾಕಸ್ಸನಿಗೆ ಇದು ಸಾಧುವಾದ ಮಾತೆಂದು ಗೊತ್ತಾಯಿತು. ತಾನು ದುಡುಕಿ ಮಾತನಾಡಿದ್ದು ತಪ್ಪೆಂದು ತಿಳಿದುಕೊಂಡನು. ದುಡುಕಿ ನಡೆಯುವುದೇ ಪರಾಜಯಗಳಿಗೆ ಕಾರಣವೆಂದು ಸ್ಪಷ್ಟವಾಯಿತು. ಈ ಭಾಗದಲ್ಲಿ ಮೆಂಟರನ ಉಪದೇಶಗಳು ಕೇಳಿದ್ದಾಗ್ಯೂ, ಸಮಯಕ್ಕೆ ಸದರಿ ಹಿತೋಪದೇಶಗಳು ತನಗೆ ತೋರದೆ ಹೋಯಿತಲ್ಲಾ ಎಂದು ವ್ಯಸನ ಉಂಟಾಯಿತು. ನಾಚಿಕೆಯಿಂದ ನೆಲವನ್ನು ನೋಡುತ್ತ ಮೌನವನ್ನವಲಂಬಿಸಿದನು. ಆಗ ಇಡುಮಿನಿಯುಸ್ಸನು ಮೆಂಟರನನ್ನು ಕುರಿತು ಹೇಳಿದ್ದೇನಂದರೆ:—

"ಎಲೈ ಮಹಾತ್ಮನೇ ನೀನು ಹೇಳಿದ ಮಾತು ಯುಕ್ತಿಯುಕ್ತವಾಗಿರುವುದು. ದುಡುಕುವುದರಿಂದ ಕೆಲಸಗಳು ಕೆಡುವುವು. ಅಧರ್ಮ ಯುದ್ಧದಿಂದ ನ್ಯೈಪರಾಜಯವು ತಪ್ಪುವುದು. ಯಾರಿಗೆ ನ್ಯಾಯಬಲವಿಲ್ಲವೋ ಅವರು ಎಷ್ಟು ಬಲಿಷ್ಠರಾದರೂ ದುರ್ಬಲರೆನ್ನುವುದರಲ್ಲಿ ಸಂದೇಹವಿಲ್ಲ. ಈ ವಿಷಯದಲ್ಲಿ ನೀನು ಅಪ್ಪಣೆ ಕೊಡಿಸಿದ್ದು ಸಾಧುವಾದದ್ದು. ಸಕಲ ವಿದ್ಯಮಾನಗಳನ್ನೂ ನಿನಗೆ ವಿಜ್ಞಾಪಿಸುತ್ತೇನೆ. ಅವನ್ನೆಲ್ಲಾ ಕೇಳಿ, ಪರ್ಯಾಲೋಚಿಸಿ, ನೀನು ಮಾಡುವ ಆಜ್ಞೆಗೆ ಅನು

ಸಾರವಾಗಿ ನಡೆದುಕೊಳ್ಳುವುದಕ್ಕೆ ಸಿದ್ಧನಾಗಿರುತ್ತೇನೆ. ನಾವು ಈ ಪ್ರಾಂತ್ಯಕ್ಕೆ ಬಂದಾಗ ಈ ಭೂಮಿಯು ಕಾಡುಜನಗಳಿಂದ ವಾಸಮಾಡಲ್ಪಟ್ಟಿತ್ತು. ಅವರು ಶಿಕಾರಿ ಮಾಡಿ ಕಾಡುಮೃಗಗಳನ್ನು ಕೊಂದು ಅವುಗಳನ್ನೂ, ಹಣ್ಣು, ಗೆಡ್ಡೆ, ಗೆಣಸು ಮೊದಲಾದವುಗಳನ್ನೂ ತಿಂದು ಜೀವಿಸುತ್ತಿದ್ದರು. ನಮ್ಮ ಹಡಗುಗಳನ್ನು ನೋಡಿದ ಕೂಡಲೇ ಇವರು ಆ ಪ್ರಾಂತ್ಯವನ್ನು ಬಿಟ್ಟು, ಬೆಟ್ಟಗಳಿಗೂ ಗುಡ್ಡಗಳಿಗೂ ಹೋದರು. ನಾವು ಅವರನ್ನು ಅನುಸರಿಸಿ ಹೋದೆವು. ಅವರ ಮುಖಂಡರಲ್ಲಿ ಒಬ್ಬನು ನಮ್ಮನ್ನು ಕುರಿತು ಹೇಳಿದ್ದೇನೆಂದರೆ:—"ಸಮುದ್ರ ತೀರದ ಪ್ರಾಂತ್ಯಗಳನ್ನೆಲ್ಲಾ ನಾವು ನಿಮಗೋಸ್ಕರ ಬಿಟ್ಟಿರುತ್ತೇವೆ. ಅವುಗಳನ್ನು ನೀವು ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲಿರಬಹುದು. ಈ ಬೆಟ್ಟಗಳು ನಮಗೆ ಸಾಕು. ನೀವು ಮೈದಾನಗಳಲ್ಲಿರಿ. ನಾವು ಈ ಬೆಟ್ಟದ ಪ್ರಾಂತ್ಯದಲ್ಲಿರುತ್ತೇವೆ. ನೀವು ಪರದೇಶೀಯರು. ಈ ಪ್ರಾಂತ್ಯಗಳನ್ನು ನಿಮಗೆ ಕೊಡುತ್ತೇವೆ. ಅವುಗಳನ್ನು ತೆಗೆದುಕೊಂಡು, ಇಲ್ಲಿ ನೆಲೆಯಾಗಿ ನಿಲ್ಲಿ. ಸಮಾಧಾನದಿಂದ ಇರಿ. ನಾವೆಲ್ಲರೂ ಸಹೋದರಭಾವದಿಂದ ಇರೋಣ. ನಾವು ಕಾಡುಜನಗಳಾದಾಗ್ಯೂ, ಕಾಡುಜನಗಳೂ, ಊರುಜನಗಳೂ ಎಲ್ಲರೂ ಬದುಕಬೇಕೆಂಬುವುದೇ ನಮ್ಮ ಮುಖ್ಯ ಉದ್ದೇಶ. ನಾವು ಭಯದಿಂದ ಈ ತೀರ ದೇಶವನ್ನು ಬಿಟ್ಟು ಬೆಟ್ಟಗಳ ಕಡೆಗೆ ಹೋಗುತ್ತೇವೆಂದು ತಿಳಿದುಕೊಳ್ಳಬೇಡಿ. ನೀವು ನಿರ್ಭಯವಾಗಿ ಈ ತೀರದೇಶದಲ್ಲಿರಿ ಎಂದೂ, ನಾವೆಲ್ಲರೂ ಪರಸ್ಪರ ಪ್ರೀತಿಯಿಂದ ಬದುಕುವ ಸಂಭವವು ಉಂಟಾಗಲೆಂದೂ ನಾವು ಈ ಪ್ರಾಂತ್ಯಕ್ಕೆ ಹೋಗುತ್ತಲಿದ್ದೇವೆ." ಎಂದು ಹೇಳಿದನು.

ಕಾಡುಜನಗಳಾದಾಗ್ಯೂ, ಇವರು ಅಸಾಧಾರಣವಾದ ಶಾಂತಿಯನ್ನು ತೋರಿಸಿದರು. ಇದು ನನಗೆ ತುಂಬಾ ಸಂತುಷ್ಟಿಯನ್ನುಂಟುಮಾಡಿತು. ನನ್ನ ಅಧಿಕಾರಿಗಳಿಗೆ ಇದು ತೋರಲಿಲ್ಲ. ತಾವು ಈ ದೇಶಕ್ಕೆ ಪ್ರಭುಗಳಾಗಿದ್ದರೆ ಹೇಗೋ ಹಾಗೆ ಈ ಕಾಡುಜನಗಳು ತಿಳಿದುಕೊಂಡಿರುವರೆಂಬದಾಗಿಯೂ, ಇವರನ್ನು ಜಯಿಸಿ, ಈ ದೇಶವನ್ನು ತೆಗೆದುಕೊಳ್ಳುವುದು ಕರ್ತವ್ಯವೆಂಬದಾಗಿಯೂ, ಹಾಗೆ ಜಯಿಸುವುದು ಬಹಳ ಸುಲಭವೆಂಬದಾಗಿಯೂ, ಅವರ ಉಪಕಾರಕ್ಕೆ ನಾವು ಬದ್ಧರೆಂಬ ಪ್ರತ್ಯಯಕ್ಕೆ ಅವಕಾಶ ಕೊಡುವುದು ತಪ್ಪೆಂಬದಾಗಿಯೂ, ಈ ದೇಶವನ್ನು ನಾವು ಅವರಿಂದ ಗೆದ್ದು, ಇಲ್ಲಿ ಪ್ರಭುತ್ವವನ್ನು ಮಾಡುತ್ತೇವೆಂಬ ಅಭಿಪ್ರಾಯವನ್ನುಂಟುಮಾಡಬೇಕೆಂಬದಾ

ನೆಲೆಗೊಂಡಿದ್ದವು. ಇವರ ಮುಖಗಳಲ್ಲಿ ಕೌಟಿಲ್ಯದ ಚಿಹ್ನೆಯು ಸ್ವಲ್ಪವೂ ಕಾಣುತ್ತಿರಲಿಲ್ಲ. ಇವರು ಬಹಳ ಸೂಕ್ಷ್ಮವಾದ ತುಬಟದ ನಿಲುವಂಗಿಯನ್ನು ಹಾಕಿಕೊಂಡಿದ್ದರು. ಇವರ ಖಂಡಗಳೂ, ಸಂಧಿಬಂಧಗಳೂ ಬಹಳ ಬಲವಾಗಿದ್ದುವು ವೃದ್ಧರಾದಾಗ್ಯೂ ಜಟ್ಟಿಗಳಂತೆ ಕಾಣುತ್ತಿದ್ದರು. ನೀವು ಹೇಳುವುದು ನಿರಾಕ್ಷೇಪಣೀಯವಾದದ್ದೆಂಬದಾಗಿಯೂ, ನಿಮ್ಮೊಡನೆ ಸಮಾಧಾನಮಾಡಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆಂಬದಾಗಿಯೂ ನಾನು ಹೇಳಿದೆನು. ಕೌಲಿನ ಒಡಂಬಡಿಕೆಗಳು ಗೊತ್ತುಮಾಡಲ್ಪಟ್ಟವು. ಅದಕ್ಕೆ ನಾನೂ ರುಜು ಹಾಕಿದೆನು. ಅವರೂ ರುಜು ಹಾಕಿದರು. ಅವರಿಗೆ ಇನಾಮುಗಳನ್ನು ಕೊಟ್ಟು ಕಳುಹಿಸಿಬಿಟ್ಟೆನು. 'ಮನುಷ್ಯನ ಸಂಕಲ್ಪಗಳೆಲ್ಲಾ ನೆರವೇರುವುದು ಕಷ್ಟ. ನಾವು ಒಂದು ವಿಧವಾಗಿ ಯೋಚನೆ ಮಾಡಿದರೆ, ದೇವರು ಇನ್ನೊಂದು ವಿಧವಾಗಿ ಯೋಚನೆ ಮಾಡುವುದುಂಟು. ನಾವು ಮಾಡತಕ್ಕ ಸಂಕಲ್ಪಗಳಿಗೆ ವಿರೋಧವಾಗಿ ನಮ್ಮ ಪುತ್ರ, ಮಿತ್ರ, ಕಳತ್ರಾದಿಗಳು ನಡೆಯುವುದೂ ಉಂಟು. ದೊಡ್ಡ ಅಧಿಕಾರಿಗಳು ಒಂದು ವಿಧವಾಗಿ ಹುಕುಂ ಮಾಡಿದರೆ, ಅವರ ನೌಕರರು ಅದನ್ನು ಜಾರಿಗೆ ತರದೆ, ಪ್ರತಿಕೂಲವಾಗಿ ಕೆಲಸ ಮಾಡುವುದೂ ಉಂಟು. ಈ ಜನಗಳೊಡನೆ ನಾನು ಕೌಲನ್ನು ಮಾಡಿಕೊಂಡು, ಅದರಂತೆ ನಡೆಯಬೇಕೆಂದು ಆಜ್ಞೆಯನ್ನು ಮಾಡುವುದರೊಳಗಾಗಿಯೇ, ನನ್ನ ಸೈನ್ಯದ ಅಧಿಕಾರಿಗಳು ಸೈನ್ಯವನ್ನು ತೆಗೆದುಕೊಂಡು, ಈ ಕಾಡುಜನಗಳಿದ್ದ ಸ್ಥಳಕ್ಕೆ ನುಗ್ಗಿ, ಯುದ್ಧವನ್ನು ಮಾಡಿ, ಅವರನ್ನು ಘಾಸಿಪಡಿಸಿ, ನಾನು ರುಜು ಹಾಕಿದ ಕೌಲಿನಂತೆ, ನಾನು ನಡೆಯತಕ್ಕವನಲ್ಲವೆಂದು ಪ್ರತ್ಯಯವನ್ನುಂಟುಮಾಡಿದರು. ಈ ಜನಗಳಿಗೆ ನನ್ನಲ್ಲಿ ನಂಬಿಕೆಯು ತಪ್ಪಿತು. ಅವರಿಗೆ ಕೋಪವು ಬಂದಿತು. ಲೋಕ್ರಿಯನ್ನರು, ಅಪ್ಪೂಲಿಯನ್ನರು, ಲ್ಯೂಕೇನಿಯನ್ನರು, ಬ್ರೂಟಿಯನ್ನರು, ಕ್ರೋಟೋನರು, ನಿರಿಟೆರು, ಬ್ರುಂಡೂಸಿಯನ್ನರು, ಈ ಜನಾಂಗಗಳನ್ನೆಲ್ಲಾ ಸೇರಿಸಿ, ನಾನು ದ್ರೋಹಿ ಎಂದೂ, ಕೌಲನ್ನು ಉಲ್ಲಂಘಿಸಿ ನಡೆದಿರುವನೆಂದೂ ಶ್ರುತಪಡಿಸಿದರು. ಅವರಿಗೆ ಸಹಾಯ ಮಾಡುವುದಕ್ಕೆ ಈ ಜನಾಂಗಗಳೆಲ್ಲಾ ಒಪ್ಪಿಕೊಂಡರು. ಈ ಜನಾಂಗಗಳೆಲ್ಲಾ ಆಯುಧಪಾಣಿಗಳಾಗಿ, ನಾನಾವಿಧವಾದ ಅಸ್ತ್ರಶಸ್ತ್ರಗಳೊಡನೆ ಯುದ್ಧಕ್ಕೆ ಸನ್ನದ್ಧರಾಗಿ ಬಂದಿರುತ್ತಾರೆ. ಇವರ ಸೈನ್ಯಗಳಲ್ಲಿ ಬಹಳ ಬಲಿಷ್ಠರಾಗಿರತಕ್ಕವರಿರುತ್ತಾರೆ. ಅತ್ಯಂತ ಭಯಂಕರರಾದ ಯೋಧರೂ ಇರುತ್ತಾರೆ. ಗ್ರೀಸ್ ದೇಶದ

ಮಿಲಿಟರಿ ಶಿಕ್ಷಣವನ್ನು ಹೊಂದಿದವರೂ ಇರುತ್ತಾರೆ. ರಾಹುತರೂ, ಪದಾತಿಗಳೂ ಇರುತ್ತಾರೆ. ಕತ್ತಿಯೇ ಮೊದಲಾದ ಆಯುಧಗಳನ್ನು ಪ್ರಯೋಗಿಸತಕ್ಕವರಿರುತ್ತಾರೆ. ನಾನಾ ವಿಧವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವರಿರುತ್ತಾರೆ. ಕವಣೆಗಳಲ್ಲಿ ಕಲ್ಲುಗಳನ್ನು ತುಂಬಿ, ಕಲ್ಲುಗಳ ವೃಷ್ಟಿಯನ್ನು ಮಾಡುವುದರಲ್ಲಿ ಕುಶಲರಾದವರಿರುತ್ತಾರೆ. ಈ ಕಾಡುಜನಗಳ ಜೊತೆಗೆ ನಾಗರಿಕರಾದ ಗ್ರೀಸ್ ಜನಗಳು ಸೇರಿರುವರು. ಈ ಪ್ರಾಂತ್ಯದಲ್ಲಿರತಕ್ಕ ಜನಗಳು ಇವರ ಪಕ್ಷವಾಗಿ ಸೇರಿರುವರು. ಈ ಯುದ್ಧಕ್ಕೆ ಇದೇ ಕಾರಣ ಎಂಬದಾಗಿ ಇಡುಮಿನಿಯಸ್ಸನು ತಿಳಿಸಿದನು. " ನೀನು ಕೌಲಿಗೆ ಒಪ್ಪಿದ್ದು, ತಿಳಿಯುವುದಕ್ಕೆ ಮುಂಚೆಯೇ ನಿನ್ನ ಸೈನ್ಯದವರು ಈ ರೀತಿಯಲ್ಲಿ ಮಾಡಿರುವರೆಂದು, ನೀನು ಈ ಕಾಡುಜನಗಳಿಗೂ, ಇವರೊಡನೆ ಯುದ್ಧಕ್ಕೆ ಬಂದಿರತಕ್ಕವರಿಗೂ ತಿಳಿಸಿರುವೆಯಾ ?" ಎಂದು ಮೆಂಟರನು ಕೇಳಿದನು. ಹಾಗೆ ತಿಳಿಸುವುದಕ್ಕೆ ಪ್ರಯತ್ನ ಮಾಡುವುದರೊಳಗಾಗಿ ಅವರು ಯುದ್ಧಕ್ಕೆ ಬಂದಿರುವರೆಂಬದಾಗಿ ಇಡುಮಿನಿಯಸ್ಸನು ಹೇಳಿದನು. ಧರ್ಮವನ್ನು ಯಾರು ಬಿಡುವರೋ ಅವರನ್ನು ಪುತ್ರ, ಮಿತ್ರ, ಕಳತ್ರಾದಿಗಳೇ ಮೊದಲಾದ ಸರ್ವರೂ ಬಿಡುವರು. ನಿನ್ನ ಸ್ವಜನಗಳಾದ ಗ್ರೀಸ್ ದೇಶೀಯರೂ ಕೂಡ ನಿನಗೆ ಸಹಾಯ ಮಾಡುವುದನ್ನು ಬಿಟ್ಟು, ಈ ಕಾಡು ಜನಗಳಿಗೆ ಸಹಾಯ ಮಾಡಿರುವುದಕ್ಕೆ ತೊಡಗಿರುವುದೇ ಇದಕ್ಕೆ ದೃಷ್ಟಾಂತವಾಗಿರುವುದು. ಇದು ಲೋಕಧರ್ಮ. ನೀನು ಕೌಲಿಗೆ ವಿರೋಧವಾಗಿ ನಡೆದಿರುವೆ ಎಂದು ಪ್ರತ್ಯಯ ಹುಟ್ಟುವುದಕ್ಕೆ ಅವಕಾಶವನ್ನು ಕೊಟ್ಟೆ. ಅದರ ಫಲವನ್ನು ಅನುಭವಿಸಬೇಕಾಯಿತು. ಆದಾಗ್ಯೂ ದ್ರೋಹಬುದ್ಧಿಯು ನಿನಗಿರಲಿಲ್ಲ. ಈ ಅಪರಾಧವೆಲ್ಲಾ ನಿನ್ನ ನೌಕರರದು. ಆದರೂ ನೌಕರರ ಅಪರಾಧಕ್ಕೆ ನೀನೂ ಭಾಗಿಯಾಗಬೇಕು. ದೈವಯೋಗದಿಂದ ನಿನಗೆ ಮಂಗಳವಾಗಬಹುದು. ಮನೋವಾಕ್ಕರ್ಮಗಳಲ್ಲಿ ನೀನು ಕೆಟ್ಟದ್ದನ್ನು ಬಯಸಿಲ್ಲ. ಈ ಧರ್ಮವು ನಿನ್ನನ್ನು ರಕ್ಷಿಸುವುದು. ಆತ್ಮರಕ್ಷಣೆಯ ಉಪಾಯವು ಮಾಡಲ್ಪಡಲಿ. ಸೈನ್ಯಗಳೆಲ್ಲಾ ಸಿದ್ಧವಾಗಲಿ. ಸಂಧಿಪ್ರಯತ್ನವನ್ನು ಮಾಡೋಣ. ವಾಸ್ತವಾಂಶವು ಶತ್ರುಗಳಿಗೆ ಗೊತ್ತಾದರೆ ಸಂಧಿ ಕಾರ್ಯವು ನಡೆಯಬಹುದು. ಅನ್ಯಾಯವನ್ನು ಮಾಡಬೇಕೆಂದು ನಿನಗೆ ಉದ್ದೇಶವಿರಲಿಲ್ಲ. ಈ ಯುದ್ಧವಾಗುವುದಕ್ಕೆ ನೀನು ಕಾರಣಭೂತನಲ್ಲ. ನಿನ್ನ ಆಜ್ಞೆಯು ಜಾರಿಗೆ ಬರುವುದಕ್ಕೆ ಮುಂಚೆಯೇ ನಿನ್ನ ನೌಕರರು ದುಡುಕಿದರು. ಅವರು ಮಾತ್ರವೂ

ವರ್ತಕವಾಗಿ ದುಡುಕಿದನೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಆದರೆ ನಿನ್ನಪ್ಪಣೆಯನ್ನು ತೆಗೆದುಕೊಳ್ಳದೆ, ಈ ಜನಗಳಿಗೂ, ನಿನಗೂ ಮನಸ್ತಾಪವನ್ನು ನಿನ್ನ ಭೃತ್ಯರು ಉಂಟುಮಾಡಿದರು. ಇದು ತಪ್ಪು. ಮುಂದೆ ಆ ರೀತಿಯಲ್ಲಿ ಅವರು ಮಾಡದಂತೆ ಅವರಿಗೆ ಎಚ್ಚರಿಕೆಯನ್ನು ಕೊಡಬೇಕು. ಈ ಕಾಡುಜನರು ತಪ್ಪಿತಸ್ಥರಲ್ಲ. ನೀನು ಹೇಳುವುದರಿಂದಲೇ ಅವರು ಪ್ರಾಮಾಣಿಕರೆಂಬುದಾಗಿಯೂ, ಸತ್ಯಸಂಧರೆಂಬುದಾಗಿಯೂ ಗೊತ್ತಾಗುತ್ತದೆ. ಕಾಡುಜನಗಳಾದಾಗ್ಯೂ ಗ್ರೀಕ್ ದೇಶಿಯರೂ ಕೂಡ ಅವರ ಪಕ್ಷವಾಗಿ ಸೇರಿ ನಿನ್ನ ಮೇಲೆ ಯುದ್ಧಕ್ಕೆ ಬಂದಿರುವುದನ್ನು ನೋಡಿದರೆ, ತಾವು ಧರ್ಮಿಷ್ಠರೆಂದು ಇವರು ಅವರ ಮಿತ್ರಮಂಡಲಿಗೆ ಹೇಗೆ ಪ್ರತ್ಯಕ್ಷವನ್ನುಂಟುಮಾಡಿರುವರೋ ಅದು ಗೊತ್ತಾಗುತ್ತದೆ. ಈ ಕಾಡುಜನಗಳು ಸಮಾಧಾನಕ್ಕೋಸ್ಕರ ನಿನ್ನ ಬಳಿಗೆ ಬಂದಾಗ, ಯುದ್ಧಮಾಡುವುದರಲ್ಲಿ ಅವರಿಗೆ ಆಸೆ ಇರಲಿಲ್ಲವೆಂದು ಚೆನ್ನಾಗಿ ಗೊತ್ತಾಗುತ್ತದೆ. ನಿನ್ನ ಸೈನ್ಯದವರು ಅವರ ದೇಶವನ್ನು ಅವರನ್ನು ನೋಯಿಸಿದ ಮೇಲೆ ಗ್ರೀಕ್ ದೇಶದವರನ್ನು ಅವರು ಸೇರಿಸಿಕೊಂಡಿರಬಹುದು. ಅದು ಸಹಜ.

"ನೀನು ಹೇಳಿದ ಸಂಗತಿಗಳಲ್ಲಿ ನೀನು ಯಾವುದನ್ನೂ ಮರೆಮಾಚಿ ಇಲ್ಲ ನಡೆದದ್ದನ್ನು ನಡೆದ ಹಾಗೆ ಹೇಳಿರುವೆ. ನಿನ್ನ ಜನಗಳ ತಪ್ಪುಗಳನ್ನು ತಿದ್ದುವ ಶಕ್ತಿಯು ನಿನಗೆ ಸಂಪೂರ್ಣವಾಗಿರುವುದಿಲ್ಲ. ಅವರು ಮನಸ್ಸು ಬಂದಂತೆ ನಡೆಯುವರು. ಈ ಕಾಡುಜನಗಳು ನಿಮಗಿಂತಲೂ ಉತ್ತಮರೆಂದು ತೋರುತ್ತದೆ. ನೀವು ಬಂದ ಕೂಡಲೆ ನಿಮಗೆ ಅವಕಾಶವನ್ನು ಕೊಟ್ಟು, ನೀವೂ ಬದುಕುವುದಕ್ಕೆ ಅವಕಾಶವನ್ನು ಹೊಂದಿ ಎಂದು ಹೇಳಿದರು. ನಿಮ್ಮೊಡನೆ ಸಮಾಧಾನ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು. ಅದನ್ನು ನೋಡಿ ಅವರು ದುರ್ಬಲರೆಂಬುದಾಗಿಯೂ, ಯುದ್ಧ ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲವೆಂಬುದಾಗಿಯೂ, ನಿಮ್ಮನ್ನು ನೋಡಿ ಭಯಪಟ್ಟಿರುವರೆಂಬುದಾಗಿಯೂ ನೀವು ತಿಳಿದುಕೊಂಡಿರಿ. ಅವರ ಉಪಕಾರ ಮಾಡುವುದಕ್ಕೆ ಬಂದವರನ್ನು ಹೇಡಿಗಳೆಂದು ನೀವು ತಿಳಿದುಕೊಂಡಿರಿ. ಈಗ ಅವರೇ ಯುದ್ಧಕ್ಕೆ ಸನ್ನದ್ಧರಾಗಿ ಬಂದು ಇರುತ್ತಾರೆ. ಹೇಡಿಗಳಾಗಿದ್ದರೆ ಈ ರೀತಿಯಲ್ಲಿ ಮಾಡುತ್ತಿದ್ದರೇ ! ಕಾಡುಜನಗಳಾದಾಗ್ಯೂ, ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಗ್ರೀಕ್ ದೇಶದವರೂ ಕೂಡ ಬಂದಿರುವರು. ಅವರು ಪ್ರಾಮಾಣಿಕರಲ್ಲದೆ ಇದ್ದಿದ್ದರೆ

ಗ್ರೀಸ್ ಜನಗಳ ಸಹಾಯವು ಅವರಿಗೆ ದೊರೆಯುತ್ತಿತ್ತೇ? ಗ್ರೀಕ್ ದೇಶದವರು ಮಾತ್ರವೇ ಅಲ್ಲದೆ, ಇತರರನೇಕರು ಅವರ ಕಡೆ ಸೇರಿರುವರೆಂದು ನೀನು ಹೇಳುತ್ತೀಯೆ. ಇದು ಅವರ ಸೌಜನ್ಯವನ್ನು ತೋರಿಸುತ್ತದೆ. ಅವರ ಮೇಲ್ಪಂಕ್ತಿಯನ್ನು ನೀವೂ ಅನುಸರಿಸಿದ್ದರೆ ಚೆನ್ನಾಗಿತ್ತು. ದ್ವೇಷಿಗಳನ್ನು ಪ್ರೀತಿಸಿದರೆ ಅವರೂ ಕೂಡ ಮಿತ್ರರಾಗುವರು. ಇದು ನಿಮಗೆ ಗೊತ್ತಾಗಲಿಲ್ಲ. ಚಿಂತೆಯಿಲ್ಲ. ಮಿತ್ರರನ್ನು ಪ್ರೀತಿಸುವುದು ಕರ್ತವ್ಯವಲ್ಲವೇ? ನೀವು ಬಂದ ಕೂಡಲೆ ತಮ್ಮ ದೇಶದಲ್ಲಿ ಉತ್ಕೃಷ್ಟವಾದ ಭಾಗವನ್ನು ನಿಮಗೆ ಬಿಟ್ಟು, ಕಾಡು-ಮೇಡು ಪ್ರದೇಶಗಳನ್ನು ಅವರು ವಹಿಸುವುದಾಗಿ ಹೇಳಿದರು. ಅದಕ್ಕೆ ಒಪ್ಪದೆ, ಅವರನ್ನು ಅಲ್ಲಿಂದಲೂ ಓಡಿಸಬೇಕೆಂದು ನೀವು ಪ್ರಯತ್ನ ಮಾಡಿದಿರಿ. ನಾಗರಿಕರಾದ ನಿಮಗಿಂತಲೂ ಈ ಕಾಡುಜನಗಳು ಉತ್ತಮರೆಂದು ನಿಮ್ಮ ನಡತೆಯಿಂದಲೇ ಗೊತ್ತಾಯಿತು. ನ್ಯಾಯವಾಗಿ ಅವರು ನಾಗರಿಕರು, ನೀವು ಕಾಡುಜನಗಳು. ಅವರು ವಿನೀತರು, ನೀವು ಧೂರ್ತರು. ಅವರು ಸಭ್ಯರು, ನೀವು ದುರ್ಮಾರ್ಗಪ್ರವರ್ತಕರು. ನಮ್ಮ ಕರ್ಮಗಳ ಫಲವನ್ನು ನಾವೇ ಅನುಭವಿಸಬೇಕು. ಇಷ್ಟು ಜನಗಳು ವಿರೋಧಿಗಳಾಗುವುದಕ್ಕೆ ನೀವೇ ಕಾರಣಭೂತರಲ್ಲವೇ? ಬಲವಾದ ದುರ್ಗಗಳನ್ನೂ, ಗಗನಚುಂಬಿಗಳಾದ ಪ್ರಾಸಾದಗಳನ್ನೂ ಕಟ್ಟಿಸುತ್ತಲಿದ್ದೀಯೆ. ನಿನ್ನ ನೆರೆಹೊರೆಯವರನ್ನೆಲ್ಲಾ ಮೂಲೋತ್ಪಾಟನ ಮಾಡಬೇಕೆಂದು ಪ್ರಯತ್ನಮಾಡುತ್ತಲಿದ್ದೀಯೆ. ಈ ದುರ್ಗಗಳು ನಿನ್ನನ್ನು ರಕ್ಷಿಸಬಲ್ಲವೇ? ನಿನ್ನ ಪರಾಜಯಕ್ಕೆ ಇವುಗಳು ಕಾರಣವಲ್ಲವೇ? ಯಾವ ರಾಜ್ಯಕ್ಕೆ ನ್ಯಾಯವೂ, ಪ್ರಾಮಾಣಿಕತೆಯೂ, ಸತ್ಯವೂ, ಧರ್ಮವೂ, ಸಮಸ್ತರೂ ಸುಖವಾಗಿರಲಿ ಎಂಬ ಅಭಿನಿವೇಶವೂ, ಎಲ್ಲರೂ ಬದುಕಲಿ, ನಾವೂ ಬದುಕೋಣವೆಂಬ ಸಂಕಲ್ಪವೂ ಅಸ್ತಿಭಾರಗಳಾಗಿರುವುವೋ ಆ ದೇಶವನ್ನು ಅಲ್ಲಾಡಿಸುವುದಕ್ಕೆ ಯಾರೂ ಸಮರ್ಥರಾಗುವುದಿಲ್ಲ. ಅತ್ಯಂತ ಬಲವುಳ್ಳ ಕೋಟೆಗಳು ನೆಲಸಮ ಮಾಡಲ್ಪಡಬಹುದು. ಮಹಾ ಪರಾಕ್ರಮಶಾಲಿಗಳುಳ್ಳ ಸೈನ್ಯಗಳು ಸೋಲಿಸಲ್ಪಡಬಹುದು. ಅತ್ಯಂತ ಬಲಿಷ್ಠರಾದವರೂ ಕೂಡ ದೈವಬಲವನ್ನು ತಪ್ಪಿಸಿಕೊಂಡರೆ ದುರ್ಬಲರಾಗುವರು. ಅಸಹಾಯಶೂರನಾದ ಶ್ರೀರಾಮನಿಂದ ಅಪ್ರತಿಹತವಾದ ಸಂಪತ್ತುಗಳನ್ನು ಹೊಂದಿದ್ದ ರಾವಣನು ಕೊಲ್ಲಲ್ಪಡಲಿಲ್ಲವೇ? ಪ್ರಪಂಚದ

ಚರಿತ್ರೆಯಲ್ಲಿ ಇಂತಹ ದೃಷ್ಟಾಂತಗಳು ಎಷ್ಟಿರುವುದಿಲ್ಲ? ವ್ಯಾಸನ ಮೊಮ್ಮಗನಾಗಿ, ನಿನಗೆ ಈ ವಿಷಯಗಳು ತಿಳಿಯದೆ ಹೋದದ್ದಕ್ಕೋಸ್ಕರ ನಾನು ತುಂಬಾ ವಿಷಾದಿಸುತ್ತೇನೆ. ಈ ದುರ್ಗಗಳಿಂದ ಪ್ರಯೋಜನವಿಲ್ಲ. ನಿನ್ನ ನೆರೆಹೊರೆಯ ಮಹಾಜನಗಳ ಪ್ರೀತಿಯು ಈ ದುರ್ಗಗಳಿಗಿಂತಲೂ ಬಲವಾದವುಗಳು. ಅವರ ನಂಬಿಕೆಯು ನಿನಗೆ ವಜ್ರಕವಚಕ್ಕೆ ಸಮಾನವಾದದ್ದು. ಇಂಥಾ ವಿಶ್ವಾಸವನ್ನೂ, ನಂಬಿಕೆಯನ್ನೂ ಪಡೆಯುವುದಕ್ಕೆ ನೀನು ಪ್ರಯತ್ನಮಾಡಲಿಲ್ಲ. ಪ್ರಭುಗಳು ಅಧಿಕಾರಮದದಿಂದ ಉನ್ಮತ್ತರಾಗಿ ನಡೆದುಕೊಂಡರೆ ಮಂತ್ರಿಗಳೇ ಮೊದಲಾದವರು ಈ ನ್ಯೂನತೆಯನ್ನು ಪರಿಹಾರ ಮಾಡಬೇಕು. ದೂರದೃಷ್ಟಿಯುಳ್ಳ ಮಂತ್ರಿಗಳೂ ಕೂಡ ನಿನಗೆ ದೊರೆಯಲಿಲ್ಲವೆಂದು ಗೊತ್ತಾಗುತ್ತದೆ. ಧರ್ಮದಿಂದ ನಡೆಯುತಕ್ಕವರಿಗೆ ಲೋಕವೆಲ್ಲಾ ಸಹಾಯ ಮಾಡುವರು. ಅಧರ್ಮದಿಂದ ನಡೆಯುತಕ್ಕವರನ್ನು ಪುತ್ರ, ಮಿತ್ರ, ಕಳತ್ರಾದಿಗಳೆಲ್ಲರೂ ಬಿಡುವರು. ಈ ವಿಷಯದಲ್ಲಿ ನಿಮ್ಮ ತಾತನು ಹೇಳಿರತಕ್ಕ ಧರ್ಮಗಳು ನಿನ್ನ ಪರ್ಯಾಲೋಚನೆಗೆ ಬಂದಂತೆ ತೋರುವುದಿಲ್ಲ. ನಿನ್ನ ನೆರೆಯವರು ನಿನ್ನಲ್ಲಿ ಅನುರಕ್ತರಾಗುವಂತೆ ಮಾಡಿಕೊಳ್ಳುವುದು ನಿನಗೆ ಪ್ರಥಮ ಕರ್ತವ್ಯವಾಗಿತ್ತು. ಈ ದೇಶವನ್ನು ಕಟ್ಟುವುದಕ್ಕೆ ನೀನು ಮಾಡಿದ ಖರ್ಚನ್ನೂ, ಮಹತ್ತನ್ನೂ ನಿನ್ನ ನೆರೆಹೊರೆಯವರ ಪ್ರೀತಿಯನ್ನು ಸಂಪಾದಿಸುವುದಕ್ಕೆ ನೀನು ವಿನಿಯೋಗಿಸಿದ್ದರೆ, ನಿನ್ನನ್ನು ಮೂಲೋತ್ಪಾಟನ ಮಾಡಬೇಕೆಂದು ಇಷ್ಟು ಜನಾಂಗಗಳು ಒಗ್ಗಟ್ಟಾಗಿ ಬರುತ್ತಿದ್ದರೇ ? ನೀನು ದೊಡ್ಡ ತಪ್ಪನ್ನು ಮಾಡಿದೆ. ಅದರ ಫಲವನ್ನು ತಪ್ಪಿಸಿಕೊಳ್ಳಲು ಬಹಳ ಕಷ್ಟವಾಗಿ ಇದೆ. ಕಷ್ಟಸಾಧ್ಯ ಮಾತ್ರದಲ್ಲಿಯೇ ಅಸಾಧ್ಯವೆಂದು ತಿಳಿದುಕೊಳ್ಳಬಾರದು. ಈಗ ಯುದ್ಧವು ಸನ್ನಿಹಿತವಾಗಿರುವುದು. ನಿನ್ನನ್ನು ಮೂಲೋತ್ಪಾಟನ ಮಾಡಬೇಕೆಂದು ಅನೇಕ ಜನಾಂಗದವರು ಸೇರಿಕೊಂಡು ಬಂದಿರುವರು. ನಿನ್ನ ಸೈನ್ಯವು ಕಡಮೆಯಾಗಿರುವುದು. ನಿನ್ನ ಪ್ರತಿಕಕ್ಷಿಗಳ ಸೈನ್ಯವು ಹೆಚ್ಚಾಗಿರುವುದು. ಇದು ವಿಶೇಷ ಗಣನೀಯವಾದದ್ದಲ್ಲ. ಧರ್ಮವನ್ನು ನೀನು ಪರಿತ್ಯಾಗ ಮಾಡಿರುವಿ. ದೇವರ ಸಹಾಯವು ನಿನಗಿರುವುದಿಲ್ಲ. ತಪ್ಪನ್ನು ಮಾಡಿದೆನೆಂಬ ಭಾವನೆಯು ನಿನಗೂ, ನಿನ್ನ ಜನಗಳಿಗೂ ಇರುವುದು. ನಿನ್ನ ಶತ್ರುಗಳು ತಾವು ಧರ್ಮಿಷ್ಟರೆಂಬದಾಗಿಯೂ, ನೀನು ಅಧರ್ಮಿಷ್ಟನೆಂಬದಾಗಿಯೂ ತಿಳಿದುಕೊಂಡಿರುವರು. ತಮಗೆ ದೈವಬಲ ಇರುವುದೆಂಬದಾಗಿಯೂ, ನಿನಗೆ ಆ ಬಲವಿಲ್ಲವೆಂಬದಾಗಿಯೂ ತಿಳಿದುಕೊಂಡಿರುವರು.

ಇದಲ್ಲದೆ ತಾವು ಪ್ರಾಮಾಣಿಕರಾಗಿರುವುವೆಂಬದಾಗಿಯೂ, ನಿನಗೆ ಉಪಕಾರ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ್ಯೂ, ನೀನು ಪ್ರತ್ಯಪಕಾರ ಮಾಡಿರುವಿ ಎಂಬದಾಗಿಯೂ ತಿಳಿದುಕೊಂಡಿರುವರು. ಈ ಭಾವನೆಯಿಂದ ಇವರಿಗೆ ಅಪ್ರತಿಹತವಾದ ಶಕ್ತಿಯು ಉಂಟಾಗಿರುವುದು. ಈ ಸಂದರ್ಭದಲ್ಲಿ ನಿನಗೆ ಜಯವಾಗುವುದೇ ? ಯುದ್ಧಮಾಡುವುದು ಧರ್ಮವೇ ? ''

ಈ ರೀತಿಯಲ್ಲಿ ಮೆಂಟರನು ಹೇಳಲು, ಇಡುಮಿನಿಯುಸ್ಸನಿಗೆ ತನ್ನ ಅಧರ್ಮ ಪ್ರವರ್ತನವೂ, ತನ್ನ ಭೃತ್ಯರ ದೌರಾತ್ಮ್ಯವೂ ಸ್ಪಷ್ಟವಾಗಿ ಗೊತ್ತಾಯಿತು. ಮೆಂಟರನನ್ನು ಕುರಿತು ಇವನು ಹೇಳಿದ್ದೇನಂದರೆ :—'' ಎಲೈ ಮೆಂಟರೇ, ನೀನು ಹೇಳಿದ್ದೆಲ್ಲಾ ನಿಜ. ಈ ಕಾಡುಜನಗಳು ಕೇವಲ ಧರ್ಮಿಷ್ಟರು. ಅವರು ಮಾಡಿದ ಉಪಕಾರಕ್ಕೆ ನಾವು ಪ್ರತ್ಯಪಕಾರವನ್ನು ಮಾಡಿರುವೆವು. ಇದಕ್ಕೆ ನಾನು ಹೇಗೋ ಹಾಗೆ ನನ್ನ ಭೃತ್ಯರೂ ಕಾರಣಭೂತರಾಗಿರುತ್ತಾರೆ. ಈ ಕಾಡುಜನಗಳ ಜೊತೆಗೆ ಗ್ರೀಸ್ ದೇಶೀಯರೇ ಮೊದಲಾದ ಅನೇಕರು ಸೇರುವುದಕ್ಕೂ ನಮ್ಮ ದೌರಾತ್ಮ್ಯವೇ ಮುಖ್ಯ ಕಾರಣ. ಈ ವಿಷಮಾವಸ್ಥೆಯುಂಟಾಗುವಂತೆ ನಾವೇ ಮಾಡಿಕೊಂಡೆವು. ಇದಕ್ಕೆ ನಮ್ಮ ಅಧಿಕಾರಮದವೂ, ನಮ್ಮ ಐಶ್ವರ್ಯಮದವೂ, ಇವುಗಳಿಂದುಂಟಾದ ಅಜ್ಞಾನವೂ ಮುಖ್ಯಕಾರಣಗಳು. ಜ್ಞಾನವಿಲ್ಲದವರಿಗೆ ಮೋಕ್ಷವಿಲ್ಲವೆಂದು ಹಿರಿಯರು ಹೇಳಿರುವರು. ಅದಕ್ಕೆ ಇದು ಒಂದು ದೃಷ್ಟಾಂತವಾಯಿತು. ನಾನು ಬಹಳ ದುರದೃಷ್ಟವಂತನು. ನನ್ನ ತಪ್ಪುಗಳನ್ನು ತೋರಿಸಿ, ದುರ್ಮಾರ್ಗಪ್ರವರ್ತಕನಾಗದಂತೆ ಮಾಡತಕ್ಕವರು ನನಗೆ ಯಾರೂ ದೊರೆಯಲಿಲ್ಲ. ಪ್ರಭುಗಳು ಪ್ರಾಯಿಕವಾಗಿ ಸ್ತೋತ್ರಪ್ರಿಯರಾಗಿರುತ್ತಾರೆ. ನಾನೂ ಹಾಗೆಯೇ ಇದ್ದೆನು. ಅದರಿಂದಲೇ ಅಪ್ರಿಯವಾದಾಗ್ಯೂ, ಪಥ್ಯವಾಗಿ ಇರತಕ್ಕ ಹಿತೋಪದೇಶಗಳನ್ನು ಮಾಡತಕ್ಕವರು ನನಗೆ ದೊರೆಯಲಿಲ್ಲ. ಈ ದುರವಸ್ಥೆಗೆ ನಾನೇ ಕಾರಣಭೂತನು. ಈಗ ಯುದ್ಧಮಾಡುವುದು ಧರ್ಮವಲ್ಲವೆಂದು ನನಗೆ ತೋರುತ್ತದೆ. ಆದಾಗ್ಯೂ ಯುದ್ಧಮಾಡದೆ ಇರುವುದು ಅಸಾಧ್ಯ. ಸಮಾಧಾನವನ್ನಪೇಕ್ಷಿಸಿ ಈ ಕಾಡುಜನಗಳು ನನ್ನಲ್ಲಿ ಬಂದರು. ನಾನೂ ಅದಕ್ಕೆ ಒಪ್ಪಿಕೊಂಡಿದ್ದೆನು. ಪ್ರಮಾದದಿಂದ ಅವರಿಗೆ ನನ್ನಲ್ಲಿ ನಂಬಿಕೆ ತಪ್ಪುವಂತಾಯಿತು. ಸಾವಕಾಶ ಮಾಡದೆ ನಂಬಿಕೆಯನ್ನು ಪುನಃ ಉಂಟುಮಾಡಿಕೊಳ್ಳುವ ಪ್ರಯತ್ನವು ಮಾಡಬೇಕಾಗಿತ್ತು. ಆ ರೀತಿಯಲ್ಲಿ ನಾನು ಮಾಡಲಿಲ್ಲ. ಈಗ

ಸಮಾಧಾನವನ್ನು ಮಾಡಿಕೊಳ್ಳುವುದು ಸಾಧ್ಯವಲ್ಲ. ನಂಬಿಕೆಗೆ ನಾನು ಅರ್ಹನಲ್ಲವೆಂದು ಅವರು ತಿಳಿದುಕೊಂಡು ಇದ್ದಾರೆ. ಈ ಸನ್ನಿವೇಶದಲ್ಲಿ ಮಾಡತಕ್ಕದ್ದೇನು ಇದೆ? ನಾನು ಯುದ್ಧಮಾಡದಿದ್ದರೆ ಮೋಸಗಾರತನದ ಜೊತೆಗೆ ಹೇಡಿತನವನ್ನೂ ಕೂಡ ಆರೋಪಿಸುವರು. ಈ ಸಂದರ್ಭದಲ್ಲಿ ಹೇಗೆ ನಡೆಯಬೇಕೋ ಅದು ನನಗೆ ತೋರುವುದಿಲ್ಲ. ದೈವಯೋಗದಿಂದ ನೀನು ಇಲ್ಲಿಗೆ ಬಂದಿರುತ್ತೀಯೆ. ಇದನ್ನು ನೋಡಿದರೆ ನಾನು ಯೋಗ್ಯನಾಗುವುದಕ್ಕೆ ಇನ್ನೊಂದು ಅವಕಾಶವನ್ನು ಕೊಡಬೇಕೆಂದು ದೇವರಿಗೆ ಸಂಕಲ್ಪವಿರಬಹುದೆಂದು ನನಗೆ ತೋರುತ್ತದೆ. ಮೈನಾಸನ ಮೊಮ್ಮಗನು ದುರಾತ್ಮನೆಂದು ದಿಗಂತವಿಶ್ರಾಂತವಾಗಬಾರದೆಂಬ ಭಾವನೆಯು ದೇವರಿಗೆ ಇರಬಹುದೆಂದು ತೋರುತ್ತದೆ. ನಮ್ಮ ಭಾಗದ ದೇವರಾಗಿ ನೀನು ಬಂದಿರುತ್ತೀಯೆ. ಈ ಸಂದರ್ಭದಲ್ಲಿ ಹೇಗೆ ನಡೆಯಬೇಕೋ ಅದನ್ನು ನಿಶ್ಚಯಿಸು. ನಿನ್ನಾಜ್ಞೆಯೋ ಜಗದೀಶ್ವರನ ಆಜ್ಞೆಯಾಗಿದ್ದರೆ ಹೇಗೋ ಹಾಗೆ ನಾನು ನಡೆಯುತ್ತೇನೆ.''

ಅದಕ್ಕೆ ಮೆಂಟರು ಹೇಳಿದ್ದೇನಂದರೆ :—'' ಈ ಹೆಸ್ಪೇರಿಯಾ ದೇಶದಲ್ಲಿ ಗ್ರೀಸ್ ದೇಶದವರು ಅನೇಕರು ವಸತಿಗಳನ್ನು ಮಾಡಿಕೊಂಡಿದ್ದಾರೆ ಅವರೆಲ್ಲರೂ ನಿನ್ನನ್ನು ಬಲ್ಲರು. ನಿಮ್ಮ ತಾತನಾದ ಮೈನಾಸನು ಈ ದೇಶಕ್ಕೆ ಮಾಡಿರತಕ್ಕ ಉಪಕಾರವನ್ನು ಇವರು ಮರೆತು ಇಲ್ಲ. ಟ್ರಾಯ್ ದೇಶದ ಮುತ್ತಿಗೆಯಲ್ಲಿ ನೀನು ಮಾಡಿದ ಸಾಹಸಕಾರ್ಯಗಳನ್ನು ಅವರು ಮರೆತು ಇಲ್ಲ. ಗ್ರೀಸ್ ದೇಶಕ್ಕೆ ನೀನು ಬಹಳ ಸಹಾಯ ಮಾಡಿರುವಿ. ಹೀಗಿದ್ದಾಗ್ಯೂ, ಅವರ ಸಹಾಯವನ್ನು ನೀನು ಪಡೆಯದೇ ಇರುವುದಕ್ಕೆ ಕಾರಣವೇನು? ಇವರಲ್ಲನೇಕರು ನಿನಗೆ ವಿರೋಧವಾಗಿ ಸೇರುವುದಕ್ಕೆ ಕಾರಣವೇನು? ನಿನ್ನ ಪ್ರತಿಪಕ್ಷಿಗಳಾದ ಕಾಡುಜನಗಳು ಧರ್ಮಿಷ್ಟರೆಂಬದಾಗಿಯೂ, ನೀನು ನಿರಂಕುಶಪ್ರವರ್ತಕನಾಗಿಯೂ, ಅಧರ್ಮಿಷ್ಟನಾಗಿಯೂ ಇರುವಿ ಎಂದು ಅವರು ತಿಳಿದುಕೊಂಡಿರುವುದೇ ಇದಕ್ಕೆ ಮುಖ್ಯಕಾರಣವಲ್ಲವೇ? ಅಂಥಾ ಸಂಶಯವನ್ನು ಹೋಗಲಾಡಿಸುವುದು ನಿನಗೆ ಕರ್ತವ್ಯವಲ್ಲವೇ? ನೀನು ಸತ್ಯಸಂಧನೆಂದು ಗೊತ್ತಾದಕೂಡಲೇ, ಈ ಕಾಡುಜನಗಳೂ, ಇವರ ಸಹಾಯಾರ್ಥವಾಗಿ ನಿನಗೆ ಪ್ರತಿಪಕ್ಷಿಗಳಾಗಿ ಬಂದಿರತಕ್ಕ ಗ್ರೀಕರೇ ಮೊದಲಾದವರೂ ನಿನ್ನಲ್ಲಿ ಸುಪ್ರೀತರಾಗುವುದು ಅಸಂಭವವೇ? ಈ ವಿಷಯವನ್ನು ಪರ್ಯಾಲೋಚಿಸು'' ಎಂದು ಮೆಂಟರನು ಹೇಳಲು, ಇಡುಮಿನಿಯಸ್ಸನು ಕೃತಪಡಿಸಿದ್ದೇನಂದರೆ:—

" ಎಲೈ ಮೆಂಟರೇ, — ಈ ಹೆಸ್ಪೀರಿಯಾ ದೇಶದ ವಸತಿಗಳಿಗೆ ಸಂಬಂಧಪಟ್ಟವರೆಲ್ಲರೂ ಈ ಯುದ್ಧದಲ್ಲಿ ಉದಾಸೀನರಾಗಿರಬೇಕೆಂದು ನಿಷ್ಕರ್ಷೆ ಮಾಡಿರುವಂತೆ ತೋರುತ್ತದೆ. ನನಗೆ ಸಹಾಯ ಮಾಡಬೇಕೆಂಬ ಮನೋಭಾವವು ಅವರಿಗಿರುವುದು. ಆದರೆ, ನಾನು ಕಟ್ಟಿರತಕ್ಕ ಕೋಟೆಗಳು, ಕೊತ್ತಲಗಳು, ನಾನಾವಿಧವಾದ ದುರ್ಗಗಳು, ಅರಮನೆ ಮೊದಲಾದ ಪ್ರಾಸಾದಗಳು ಇವುಗಳೆಲ್ಲಾ ಈ ಜನಗಳಿಗೆ ಸಂದೇಹವನ್ನುಂಟುಮಾಡಿರುವುವು. ಕ್ರಮಕ್ರಮವಾಗಿ ಅವರ ಸ್ವಾತಂತ್ರ್ಯಕ್ಕೆ ನನ್ನಿಂದ ಬಾಧಕ ಉಂಟಾಗಬಹುದೆಂಬ ಮನೋಭಾವವು ಅವರಿಗೆ ಹುಟ್ಟಿರಬಹುದು. ಈ ಕಾಡುಜನಗಳನ್ನು ಜಯಿಸಿದ ತರುವಾಯ, ಅವರ ವಸತಿಗಳನ್ನು ನಾನು ಆಕ್ರಮಿಸಬಹುದೆಂದು ಇವರು ಭಾವಿಸಿರಬಹುದು. ತಟಸ್ಥರಾದವರೂ ಕೂಡ ಈ ಯುದ್ಧದಲ್ಲಿ ನನಗೆ ಪರಾಜಯವಾಗಲೆಂದು ಕೋರುತ್ತಲಿರುವಂತೆ ತೋರುತ್ತದೆ. ಹೀಗೆ ತೋರುವುದಕ್ಕೆ ನನ್ನ ಶ್ರೇಯಸ್ಸಿನ ವಿಷಯದಲ್ಲಿ ಇವರಿಗೆ ಹುಟ್ಟಿರುವ ಮನೋಭಾವವು ಕಾರಣವಾಗಿರಬಹುದು. ಅಥವಾ ನನ್ನಿಂದ ಬಾಧಕವಾಗಬಹುದೆಂಬ ಭಯವೂ ಕಾರಣವಾಗಿರಬಹುದು. ಅದು ಹೇಗಾದರೂ ಇರಲಿ. ಇರತಕ್ಕ ಸಂದರ್ಭಗಳನ್ನು ತಿಳಿಸಿರುತ್ತೇನೆ. ಮುಂದೆ ಮಾಡಬೇಕಾದ ಕೆಲಸವು ಪರ್ಯಾಲೋಚಿಸಲ್ಪಡಲಿ. ಈ ಸಂದರ್ಭದಲ್ಲಿ ಹೇಗೆ ನಡೆಯಲ್ಪಡಬೇಕೋ ಹಾಗೆ ನಡೆಯಲ್ಪಡಲಿ. " ಈ ರೀತಿಯಲ್ಲಿ ಇಡುಮೀನಿಯಸ್ಸನು ಹೇಳಲು, ಮೆಂಟರನು ಅವನಿಗೆ ಹೇಳಿದ್ದೇನೆಂದರೆ : —

" ನೀನು ಬಹಳ ವಿಷಮಾವಸ್ಥೆಯಲ್ಲಿದ್ದೀಯೆ. ನಿನ್ನ ಅಧಿಕಾರವು ಅಪ್ರತಿಹತವಾದದ್ದೆಂದು ತೋರಿಸಿಕೊಳ್ಳಬೇಕೆಂಬದಾಗಿ ನೀನು ಮಾಡಿದ ಪ್ರಯತ್ನವು ನಿನಗೆ ಪ್ರತಿಕೂಲವಾಗಿ ಪರಿಣಮಿಸಿರುವುದು. ದೂರದೃಷ್ಟಿ ಇಲ್ಲದೆ ಹೋದದ್ದರಿಂದ ಉದಾಸೀನರೂ, ಮಿತ್ರರೂ ಕೂಡ ನಿನಗೆ ಶತ್ರುಗಳಾಗಿ ಪರಿಣಮಿಸಿರುವರು. ಇದು ಬಹಳ ಶೋಚನೀಯವಾದದ್ದು. ಒಂದಾವರ್ತಿ ತಪ್ಪನ್ನು ಮಾಡಿ, ಒಂದು ರಾಜ್ಯವನ್ನು ಕಳೆದುಕೊಂಡೆ ಪುನಃ ಅದೇ ವಿಧವಾದ ತಪ್ಪನ್ನು ಮಾಡಿ, ಬಹು ಶ್ರಮದಿಂದ ಸಂಪಾದಿಸಿದ ಈ ರಾಜ್ಯವನ್ನು ಕಳೆದುಕೊಳ್ಳುವ ಸ್ಥಿತಿಗೂ ಬಂದಿರುತ್ತೀಯೆ. ಇದು ಹಾಗಿರಲಿ. ಈ ಪ್ರಾಂತ್ಯದಲ್ಲಿ ಗ್ರೀಸ್ ದೇಶದಿಂದ ಬಂದು, ಯಾರು ಯಾರು ವಸತಿಗಳನ್ನು ಮಾಡಿಕೊಂಡು ಇದ್ದಾರೆ? ಅವರ ಪೂರ್ವಾಪರಗಳೇನು?

ಈ ರೀತಿಯಲ್ಲಿ ಮೆಂಟರನು ಕೇಳಲು, ಇಡುಮೀನಿಯಸ್ಸನು ಹೇಳಿದ್ದೇನೆಂದರೆ:-

"ಇಲ್ಲಿನ ವಸತಿಗಳಲ್ಲಿ ಟ್ಯಾರಂಟಂ ಎಂಬುವುದು ಮುಖ್ಯವಾದದ್ದು. ಇದು 3 ವರ್ಷಗಳಿಗೆ ಮುಂಚೆ ಫ್ಯಾಲಂಥಸ್ಸನಿಂದ ಕಟ್ಟಲ್ಪಟ್ಟಿತು. ಟ್ರಾಯ್ ಯುದ್ಧಕ್ಕೆ ಬಹು ಜನ ಗ್ರೀಕರು ಹೋಗಿ ಇದ್ದರು. ಅವರ ಹೆಂಡಿರು ಲ್ಯಾಕೋನಿಯಾ ಪಟ್ಟಣದಲ್ಲಿ ಬಹು ಜನ ಗಂಡುಮಕ್ಕಳನ್ನು ಹೆತ್ತರು. ಅವರ ಗಂಡಂದಿರು ವಾಪಸು ಬಂದಕೂಡಲೇ ಆ ಮಕ್ಕಳನ್ನು ಅಲ್ಲಿಯೇ ಬಿಟ್ಟು, ಅವರು ಗಂಡಂದಿರ ಬಳಿಗೆ ಹೊರಟುಹೋದರು. ಈ ಮಕ್ಕಳು ಅತಿಕ್ಲಿಷ್ಟತರಾಗಿ ದುರ್ವ್ಯಾಪಾರಗಳಿಗೆ ಬಿದ್ದರು. ಫ್ಯಾಲಂಥಸ್ಸನು ಇವರನ್ನು ಸೇರಿಸಿಕೊಂಡು ಈ ಟ್ಯಾರಂಟಂ ಪಟ್ಟಣವನ್ನು ಕಟ್ಟಿ, ಇಲ್ಲಿ ರಾಜ್ಯಭಾರ ಮಾಡುತ್ತಲಿದ್ದಾನೆ. ಈ ಪಟ್ಟಣವು ಲ್ಯಾಸಿಡೀಮನ್ ಎಂಬ ಗ್ರೀಕ್ ಪಟ್ಟಣವನ್ನು ಕೂಡ ಮೀರಿಸಿರುವುದು. ಟ್ರಾಯ್ ಯುದ್ಧದಲ್ಲಿ ಅಸಾಧಾರಣವಾದ ಕೀರ್ತಿಯನ್ನು ಸಂಪಾದಿಸಿದ ಫೈಲೋಕ್ಟೀಟಸ್ಸನು ಇಲ್ಲಿಗೆ ಬಂದು, ಪೆಟಿಲಿಯಾ ಎಂಬ ದುರ್ಗವನ್ನು ಕಟ್ಟಿ, ಬಹಳ ವಿವೇಕದಿಂದ ರಾಜ್ಯಭಾರ ಮಾಡುತ್ತಲಿರುವನು. ಇದು ಎರಡನೇ ರಾಜ್ಯವಾಗಿರುವುದು. ಟ್ರಾಯ್ ದೇಶದ ಯುದ್ಧದಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ ನೆಸ್ಟರನ ಆಜ್ಞೆಯಲ್ಲಿ ಪೈಲಿಯನ್ನರು ಮೆಟೋಪಾಂಟಂ ಎಂಬ ವಸತಿಯನ್ನು ಮಾಡಿಕೊಂಡಿರುವರು. ಇದು ಮೂರನೇ ಗ್ರೀಕ ರಾಜ್ಯವಾಗಿರುವುದು."

ಈ ರೀತಿಯಲ್ಲಿ ಇಡುಮಿನಿಯಸ್ಸನು ಹೇಳಲು, ಮೆಂಟರನಿಗೆ ತುಂಬಾ ಆಶ್ಚರ್ಯವಾಯಿತು. ನೆಸ್ಟರನು ಟ್ರಾಯ್ ಯುದ್ಧದಲ್ಲಿ ಗ್ರೀಕರಿಗೆ ಜಯವಾಗುವುದಕ್ಕೆ ಮುಖ್ಯಕಾರಣನಾಗಿದ್ದನು. ಇಡುಮಿನಿಯಸ್ಸನಲ್ಲಿ ಭ್ರಾತೃನಿರ್ವಿಶೇಷವಾದ ಪ್ರೀತಿಯುಳ್ಳವನಾಗಿದ್ದನು. ಅಂಥಾವನೂ ಕೂಡ ತನ್ನ ಪ್ರತಿಕಕ್ಷಿಗಳ ಜೊತೆಗೆ ಸೇರಿರುವನೆಂದು ಇಡುಮಿನಿಯಸ್ಸನು ಹೇಳಲು, ವಿವೇಕವಿಲ್ಲದವರಿಗೆ ವಿಪತ್ಪರಂಪರೆಗಳು ಹೇಗೆ ಬರುವುವೋ ಅದು ಗೊತ್ತಾಯಿತು. ಮೆಂಟರನು ಇಡುಮಿನಿಯಸ್ಸನನ್ನು ಕುರಿತು ಹೇಳಿದ್ದೇನಂದರೆ:—"ರಾಜತಂತ್ರವಿಶಾರದರಲ್ಲಿ ನೆಸ್ಟರನು ಅಗ್ರಗಣ್ಯನಾದವನು. ಅವನೂ ಕೂಡ ನಿನ್ನ ಶತ್ರುಗಳ ಜೊತೆಯಲ್ಲಿ ಸೇರಿರುವನೆಂದು ನೀನು ಹೇಳುತ್ತೀಯೆ. ನಿನಗೆ ಪರಮಾಪ್ತನಾಗಿದ್ದವನು ನಿನ್ನ ಪ್ರತಿಕಕ್ಷಿಗಳ ಜೊತೆಗೆ ಸೇರಬೇಕಾದರೆ, ಅದಕ್ಕೆ ನಿನ್ನ ತಪ್ಪೇ ಕಾರಣವೆಂದು ಚೆನ್ನಾಗಿ ಗೊತ್ತಾಗುತ್ತದೆ. ಈ ನೆಸ್ಟರನು ನಿನಗೆ ಮಾತ್ರ ಆಪ್ತನಲ್ಲ. ಯುಲಿಸಸ್ಸನಿಗೆ ಇವನು ಪರಮಮಿತ್ರನು. ಈ ಟೆಲಿಮಾಕಸ್ಸನಲ್ಲಿ ಅತ್ಯಂತ ಸುಪ್ರೀತನಾಗಿರುತ್ತಾನೆ. ನಾವು ಪ್ರಯತ್ನ ಮಾಡಿದರೆ, ಇವನು ಪುನಃ ನಿನ್ನಲ್ಲಿ ಅನು

ರಕ್ತನಾಗುವಂತೆ ಮಾಡಬಹುದೆಂದು ತೋರುತ್ತದೆ. ಈ ವಿಷಯದಲ್ಲಿ ಸರ್ವಸ್ವಾತಂತ್ರ್ಯವನ್ನು ನೀನು ನನಗೆ ವಹಿಸಿರುವುದರಿಂದ, ನನ್ನ ಕೈಲಾದ ಪ್ರಯತ್ನವನ್ನು ಮಾಡುತ್ತೇನೆ.'' ಈ ರೀತಿಯಲ್ಲಿ ಮೆಂಟೆರನು ಹೇಳಲು, ಇಡುಮಿನಿಯಸ್ಸನು ವಿಜ್ಞಾಪಿಸಿದ್ದೇನಂದರೆ—''ದೈವಯೋಗದಿಂದ ನೀನು ನನ್ನನ್ನು ರಕ್ಷಿಸುವುದಕ್ಕೆ ಬಂದಿರುವೆ. ಈ ಅನರ್ಥಗಳಿಗೆಲ್ಲಾ ನನ್ನ ಅಜ್ಞಾನವೇ ಕಾರಣ. ಅದನ್ನು ನೀನು ಸ್ಪಷ್ಟವಾಗಿ ತೋರಿಸಿರುವೆ. ತಪ್ಪುಗಳನ್ನು ತೋರಿಸಿದರೆ, ಅದನ್ನು ಪ್ರಭುಗಳು ಒಪ್ಪುವುದು ಅಪೂರ್ವ. ನನ್ನ ತಪ್ಪನ್ನು ನಾನು ಒಪ್ಪಿಕೊಳ್ಳುವಂತೆ ನೀನು ಮಾಡಿರುವೆ. ನಿನ್ನ ಅಸಾಧಾರಣವಾದ ಮಹಿಮೆಯು ಇದರಿಂದ ಚೆನ್ನಾಗಿ ಗೊತ್ತಾಗುತ್ತದೆ. 'ಇವರೊಡನೆ ಯುದ್ಧಮಾಡಿ ಗೆಲ್ಲಬೇಕು, ಅಥವಾ ಸಾಯಬೇಕು' ಎಂದು ನಾನು ಗೊತ್ತುಮಾಡಿದ್ದೆನು. ಇದು ತಪ್ಪೆಂದು ನೀನು ತೋರಿಸಿರುವೆ. ತಪ್ಪನ್ನು ತಿದ್ದಿಕೊಂಡು, ಶತ್ರುಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವುದು ಉತ್ತಮವೆಂದು ನೀನು ಹೇಳುತ್ತೀಯೆ. ಗೌರವಕ್ಕೆ ಹಾನಿಬರದಂತೆ ಇದು ಸಾಧ್ಯವಾದರೆ, ಇದು ಉಪಾದೇಯವಾದದ್ದೇ ಸರಿ. ನಿನ್ನ ಸಂಭಾಷಣೆಯಿಂದ ನನ್ನ ತಪ್ಪುಗಳೆಲ್ಲಾ ನನಗೆ ಗೊತ್ತಾಯಿತು. ದೇವರು ನಿನಗೆ ಪರಿಪೂರ್ಣವಾದ ಶಾಂತಿಯನ್ನು ಕೊಟ್ಟಿರುವನು. ನನಗೆ ಈ ಶಾಂತಿಯು ಇರುವುದಿಲ್ಲ. ನನ್ನ ದುರದೃಷ್ಟಕ್ಕೆ ಇದೇ ಮುಖ್ಯ ಕಾರಣ. ನಿನ್ನ ಹಿತೋಪದೇಶದಿಂದ ಸನ್ನಿಹಿತವಾಗಿರುವ ಈ ಯುದ್ಧವನ್ನು ನಿಲ್ಲಿಸುವುದಕ್ಕೆ ನೀನು ಸಮರ್ಥನಾಗಿರುತ್ತೀಯೆ. ಈ ವಿಷಯದಲ್ಲಿ ಸರ್ವಾಧಿಕಾರವನ್ನೂ ನೀನು ವಹಿಸಬಹುದು. ನಿನ್ನ ಆಜ್ಞೆಯನ್ನು ನಾನು ವೇದವಾಕ್ಯದಂತೆ ನಡೆಸುತ್ತೇನೆ. ಈ ಯುದ್ಧದಿಂದ ಉಭಯ ಪಂಗಡದವರಿಗೂ ಆಗತಕ್ಕ ಅನರ್ಥಗಳನ್ನು ತಪ್ಪಿಸಿ, ಪುಣ್ಯಕ್ಕೂ, ಕೀರ್ತಿಗೂ ಪಾತ್ರನಾಗು.''

ಈ ರೀತಿಯಲ್ಲಿ ಇಡುಮಿನಿಯಸ್ಸನು ಹೇಳಿದನು. ತಕ್ಷಣದಲ್ಲಿಯೇ ಶತ್ರುಗಳು ಜಯಭೇರಿಗಳನ್ನು ಹೊಡೆದುಕೊಂಡು, ಯುದ್ಧಕ್ಕೆ ಸನ್ನದ್ಧರಾಗಿ ಇಡುಮಿನಿಯಸ್ಸನ ದುರ್ಗದ ಕಡೆಗೆ ಹೊರಟರು. ರಥಗಳು, ರಾಹುತರು, ಪದಾತಿಗಳು ರಣಭೇರಿಗಳೊಡನೆ ಬರುತ್ತಿದ್ದರು. ಇಡುಮಿನಿಯಸ್ಸನ ಸೈನ್ಯಗಳು ಯಾವ ಮಾರ್ಗಗಳಲ್ಲಿ ಇಡಲ್ಪಟ್ಟಿದ್ದವೋ ಅವುಗಳನ್ನು ಬಿಟ್ಟು, ಬೇರೆ ಮಾರ್ಗದಿಂದ ಸ್ಯಾಲೆಂಟಂ ಪಟ್ಟಣಕ್ಕೆ ಬಂದು, ಅದಕ್ಕೆ ಮುತ್ತಿಗೆಯನ್ನು ಹಾಕಿದರು. ಈ ಪುರನಿವಾಸಿಗಳೆಲ್ಲರೂ ಭಯ

ಭ್ರಾಂತರಾಗಿದ್ದರು. ಟ್ರಾಯ್ ದೇಶವನ್ನು ಹೇಗೆ ಸುಟ್ಟು ಬೂದಿಮಾಡಿದರೋ ಹಾಗೆ ಈ ಪಟ್ಟಣವನ್ನು ನೆಲಸಮ ಮಾಡಬೇಕೆಂದು ಸಂಕಲ್ಪ ಮಾಡಿಕೊಂಡು, ರೋಷಾವೇಶದಿಂದ ಈ ಪಟ್ಟಣವನ್ನು ಸುತ್ತಿಕೊಂಡರು. ಕೋಟೆಗಳ ಮೇಲ್ಭಾಗ ದಿಂದ ಮೆಂಟರನು ಇವರ ಸೈನ್ಯಗಳನ್ನು ನೋಡಿದನು. ದಿಗಂತಗಳ ವರೆಗೂ ಶತ್ರುಗಳ ಸೈನ್ಯಗಳು ಕಾಣುತ್ತಿದ್ದವು. ಬಿಸಿಲು ಬಿದ್ದು, ಅವರ ಉಡಿಗೆ-ತೊಡಿಗೆಗಳೆಲ್ಲಾ ಪ್ರಜ್ವಲಿಸುತ್ತಿದ್ದವು. ನಾನಾವಿಧವಾದ ಆಯುಧಗಳು ಅವರ ಕೈಗಳಲ್ಲಿ ಪ್ರಜ್ವಲಿಸುತ್ತಿದ್ದುವು. ಕೋಟೆಯ ಮೇಲಿದ್ದ ಒಂದು ಗೋಪುರಾಗ್ರಕ್ಕೆ ಹೋಗಿ, ಮೆಂಟರನು ಈ ಶತ್ರುಯೋಧರ ಪ್ರಮಾಣವನ್ನು ಪರಿಶೀಲಿಸಿದನು. ಇಡುಮೀನಿಯಸ್ಸನೂ, ಟೆಲಿಮಾಕಸ್ಸನೂ ಅವನ ಜೊತೆಯಲ್ಲಿ ಹೋದರು. ಫೈಲೋಕ್ಟೀಟಿಸ್ಸನು ಒಂದು ಭಾಗದಲ್ಲಿಯೂ, ನೆಸ್ಟರನು ಮತ್ತೊಂದು ಭಾಗದಲ್ಲಿಯೂ, ಅವನ ಮಗನಾದ ಪಿಸಿಸ್ಟ್ರೇಟಸ್ಸನು ಮತ್ತೊಂದು ಭಾಗದಲ್ಲಿಯೂ ಸಾಲೆಂಟಂ ಕೋಟೆಯನ್ನು ಹೇಗೆ ತೆಗೆದುಕೊಳ್ಳಬೇಕೋ ಅದಕ್ಕೆ ಆಜ್ಞೆಮಾಡುತ್ತಿದ್ದರು. ಪ್ಯಾಲಂಥಸ್ಸನ ಕೈಕೆಳಗೆ ಲ್ಯಾಸಿಡಿಮೋನಿಯನ್ನರ ಸೈನ್ಯವು ಬಂದು ಇತ್ತು. ಇದನ್ನೆಲ್ಲಾ ನೋಡಿ ನಿನಗೆ ಮಿತ್ರರಾಗಿಯೂ, ತಟಸ್ಥರಾಗಿಯೂ ಇರತಕ್ಕವರೂ ಕೂಡ ಶತ್ರುಗಳಾಗಿ ಪರಿಣಮಿಸಿರುತ್ತಾರೆ. ಇವರ ದ್ವೇಷಕ್ಕೆ ಪಾತ್ರನಾಗಬೇಕೆಂದು ನೀನು ಉದ್ದೇಶವನ್ನು ಹೊಂದಿರಲಿಲ್ಲ. ಆದಾಗ್ಯೂ ಇವರು ನಿನ್ನ ದೇಶದ ಮೇಲೆ ದಂಡೆತ್ತಿ ಬಂದಿರುವರು. ಯುದ್ಧವನ್ನು ಉಪಕ್ರಮ ಮಾಡಿ ಇದ್ದಾರೆ. ಕೋಟೆಯನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಲಿದ್ದಾರೆ. ಆಲಸ್ಯಕ್ಕೆ ಇದು ಕಾಲವಲ್ಲ. ದೇವರು ಮಂಗಳವನ್ನು ಮಾಡಲಿ ಎಂದು ಹೇಳಿ, ಗೋಪುರದಿಂದಲೂ, ಕೋಟೆಯಿಂದಲೂ ಕೆಳಕ್ಕೆ ಇಳಿದು, ಕೋಟೆಯ ಬಾಗಲಿಗೆ ಹೋಗಿ ಹಾಕಿದ್ದ ಬಾಗಿಲನ್ನು ತೆಗೆದುಹಾಕೆಂದು ಪಹರೆಯವರಿಗೆ ಆಜ್ಞೆಯನ್ನು ಮಾಡಿದನು. ಇಡುಮೀನಿಯಸ್ಸನು ಇವನ ಆಜ್ಞೆಯು ನೆರವೇರಿಸಲ್ಪಡಲೆಂದು ಹೇಳಿದನು. ಯಾರೂ ತನ್ನ ಹಿಂದೆ ಬರಕೂಡದೆಂದು ಆಜ್ಞೆಮಾಡಿ, ಬಾಗಿಲನ್ನು ಹಾಕಿಕೊಂಡು, ಆತ್ಮರಕ್ಷಣೆಯ ಉಪಾಯವನ್ನು ಮಾಡಿಕೊಳ್ಳಿ. ದೇವರು ಮಂಗಳವನ್ನು ಮಾಡುವನು ಎಂದು ಹೇಳಿ ಸಮಾಧಾನಸೂಚಕವಾದ ಬಾವಟವನ್ನು ಹಿಡಿದುಕೊಂಡು ಶತ್ರುಗಳ ಮಧ್ಯಕ್ಕೆ ಹೋಗಿ, ಈ ಸೈನ್ಯಗಳಲ್ಲಿ ಮುಖಂಡರಾದವರಿಗೆ ಸ್ಪಷ್ಟವಾಗಿ ತಿಳಿಯುವಂತೆ ಒಂದು ಉಪನ್ಯಾಸವನ್ನು ಮಾಡಿದನು. ಅವನು ಹೇಳಿದ್ದೇನಂದರೆ:—

"ಈ ದೇಶವು ಬಹಳ ಫಲವತ್ತಾದದ್ದು. ಈ ಯುದ್ಧಕ್ಕೆ ತೊಡಗಿರುವ ಉಭಯ ಕಕ್ಷಿಯವರೂ ಸುಖವಾಗಿರುವುದಕ್ಕೆ ಬೇಕಾದ ಸಂಪತ್ತುಗಳನ್ನೆಲ್ಲಾ ದೇವರು ನಿಮಗೆ ದಯಪಾಲಿಸಿರುತ್ತಾನೆ. ಈ ಸಂಪತ್ತನ್ನು ಅನುಭವಿಸುವ ಮಾರ್ಗ ಮಾತ್ರ ನಿಮಗೆ ಸಂಪೂರ್ಣವಾಗಿ ಗೊತ್ತಾಗಿರುವಂತೆ ತೋರುವುದಿಲ್ಲ. ಇದಕ್ಕಾಗಿ ನಾನು ತುಂಬಾ ವ್ಯಸನಪಡುತ್ತೇನೆ. ನಿಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಗೋಸ್ಕರ ಯುದ್ಧಮಾಡು ವುದಕ್ಕೆ ನೀವು ಬಂದಿರುತ್ತೀರಿ. ಇದು ನಿಮ್ಮ ಕರ್ತವ್ಯವೇ ಸರಿ. ಧರ್ಮಕ್ಕೆ ಲೋಪ ಬಂದರೆ ಶಾಂತಿಯು ಪರಿತ್ಯಾಗ ಮಾಡಲ್ಪಡಬೇಕು. ಅಧರ್ಮಪ್ರವರ್ತಕರು ತಿದ್ದಲ್ಪಡಬೇಕು. ಹಾಗೆ ತಿದ್ದುವುದು ಅಸಾಧ್ಯವಾದರೆ ಅವರನ್ನು ಮೂಲೋತ್ಪಾ ಟನ ಮಾಡಬೇಕು. ಹಾಗೆ ಮಾಡುವುದು ಅಸಾಧ್ಯವಾದರೆ ಧರ್ಮಸಂಸ್ಥಾಪನೆ ಗೋಸ್ಕರ ದೇಹವನ್ನಾದರೂ ಬಿಡಬೇಕು. ಇದೇ ನಿಮ್ಮ ಮುಖ್ಯ ಉದ್ದೇಶವೆಂದು ತೋರುತ್ತದೆ. ನಿಮ್ಮ ಮನೋಭಾವವು ಧರ್ಮವಾದದ್ದು. ನೀವು ಧರ್ಮಸಂ ಸ್ಥಾಪನೆಗೋಸ್ಕರ ದಂಡೆತ್ತಿ ಬಂದಿರುತ್ತೀರಿ. ನಿಮ್ಮ ಪ್ರಯತ್ನವನ್ನು ದೇವರು ಮೆಚ್ಚಿರುವನು. ನಾನೂ ಮೆಚ್ಚಿರುತ್ತೇನೆ. ಇಂಥಾ ಕೆಲಸಗಳನ್ನು ಮಾಡುವುದು ಅವಶ್ಯಕ. ಆದರೆ ಹೀಗೆ ಮಾಡುವುದರಲ್ಲಿ ಯುದ್ಧಮಾಡದೆ, ಅರ್ಥಹಾನಿ, ಪ್ರಾಣ ಹಾನಿ, ಮಾನಹಾನಿಗಳಾಗದಂತೆ ಮಾಡುವುದು ಸಾಧ್ಯವಾದರೆ ಯುದ್ಧವನ್ನು ಮಾಡಬಾರದು. ನಿಮ್ಮಲ್ಲಿ ಮಹಾಮಹಿಮೆಯುಳ್ಳವರು ಅನೇಕರಿರುತ್ತೀರಿ. ನೆಸ್ಟ ರನು ಇಲ್ಲಿರುವನು. ಎಲೈ ನೆಸ್ಟರೇ, ಮುಂದಕ್ಕೆ ಬಾ. ಇವರಲ್ಲೆಲ್ಲಾ ವಯ ಸ್ಸಿನಲ್ಲಿಯೂ, ಜ್ಞಾನದಲ್ಲಿಯೂ ನೀನು ವೃದ್ಧನು. ಯುದ್ಧದಿಂದಾಗತಕ್ಕ ಅನರ್ಥಗಳನ್ನೆಲ್ಲಾ ನೀನು ಬಲ್ಲೆ. ಯುದ್ಧವು ಎಲ್ಲಾ ಕೇಡುಗಳಲ್ಲಿಯೂ ಅತ್ಯಂತ ಅನರ್ಥಕಾರಿಯಾದ ಕೇಡಾಗಿರುತ್ತದೆ. ವಿಧಿಯಿಲ್ಲದೆ ಇದ್ದರೆ ಯುದ್ಧಮಾ ಡಬೇಕು. ಯುದ್ಧಮಾಡದೆ ಉಭಯ ಪಂಗಡದವರೂ ಧರ್ಮದಿಂದ ನಡೆ ಯುವುದು ಸಾಧ್ಯವಾದರೆ ಯುದ್ಧಕ್ಕೆ ಅವಕಾಶವನ್ನು ಕೊಡಬಾರದು. ಟ್ರಾಯ್ ಸಮೀಪದಲ್ಲಿ ಹತ್ತು ವರ್ಷಗಳು ಯುದ್ಧವು ನಡೆಯಿತು. ಕೋಟ್ಯಂತರ ಜನಗಳು ಸತ್ತರು. ಕೋಟ್ಯಂತರ ಸ್ತ್ರೀಯರು ವಿತಂತುಗಳಾದರು. ಅನೇಕ ಕೋಟಿ ಮಕ್ಕಳು ಅನಾಥರಾದರು. ವೀರಾವೇಶದಿಂದ ಯುದ್ಧಮಾಡಿ, ಯೋಧರು ಪೆಟ್ಟುಗಳನ್ನು ತಿಂದು, ಪ್ರಾಣಹೋಗುವುದಕ್ಕೆ ಮುಂಚೆ ಎಷ್ಟು ಯಾತನೆಯನ್ನು

ಅನುಭವಿಸಿದರೋ ಅದನ್ನು ನೀನು ಸಾಕ್ಷಾತ್ತಾಗಿ ನೋಡಿರುವಿ. ಮಹಾಪರಾಕ್ರಮ ಶಾಲಿಯಾದ ಹೆಕ್ಟರನು ಪ್ಲೇಗ್ ಮೊದಲಾದ ಭಯಂಕರವಾದ ರೋಗಗಳಂತೆ ಗ್ರೀಸ್ ದೇಶೀಯರನ್ನು ಹೇಗೆ ಸಂಹರಿಸಿದನೋ ಅದು ನಿನಗೆ ವೇದ್ಯವೇ ಇರುತ್ತದೆ. ಯುದ್ಧಕ್ಕೆ ತೊಡಗಬೇಡಿ. ಈ ವಿಷಯದಲ್ಲಿ ದುಡುಕಬೇಡಿ. ಯುದ್ಧದಲ್ಲಿ ಗೆದ್ದಾಗ್ಯೂ ಸೋತಂತಾಗುವುದು. ಸೋತರೆ ಸತ್ತಂತಾಗುವುದು. ಇಡುಮಿನಿಯುಸ್ಸನು ಸಾಮಾನ್ಯನಲ್ಲ. ಟ್ರಾಯ್ ಯುದ್ಧದಲ್ಲಿ ಅವನು ತೋರಿಸಿರತಕ್ಕ ಧೈರ್ಯವನ್ನೂ, ಅವನು ಮಾಡಿರತಕ್ಕ ಸಾಹಸ ಕೃತ್ಯಗಳನ್ನೂ ನೀನು ಪ್ರತ್ಯಕ್ಷವಾಗಿ ನೋಡಿರುವಿ. ಸಹೋದರಭಾವದಿಂದಲೂ ನಡೆದುಕೊಳ್ಳುವುದು ಉಭಯ ಪಂಗಡದವರಿಗೂ ಶ್ರೇಯಸ್ಕರವಾದದ್ದು. ದುಡುಕಿದರೆ ಉಭಯ ಪಂಗಡಕ್ಕೂ ಅಶ್ರೇಯಸ್ಸುಂಟಾಗುವುದು. ಇಡುಮಿನಿಯುಸ್ಸನು ಪ್ರಾಮಾಣಿಕನು. ಇವನು ವಂಚಕನಲ್ಲ. ಇವನು ದ್ರೋಹಿಯೆಂದು ನೀವು ತಿಳಿದುಕೊಂಡಿರುವಿರಿ. ಕಾಡುಜನಗಳೊಡನೆ ಮಾಡಲ್ಪಟ್ಟ ಕೌಲನ್ನು ಇವನು ಉಲ್ಲಂಘಿಸಿದನೆಂದು ನೀವು ತಿಳಿದುಕೊಂಡಿರುವಿರಿ. ಇದು ನಿಜವಲ್ಲ. ಇವನು ಮಾಡಿಕೊಂಡ ಕೌಲು ಪ್ರಚಾರ ಮಾಡಲ್ಪಡುವುದಕ್ಕೆ ಮುಂಚೆಯೇ ಇವನ ಸೇನಾನಾಯಕರು ಈ ಕಾಡುಜನಗಳ ಮೇಲೆ ಬಿದ್ದು ಯುದ್ಧವನ್ನು ಮಾಡಿದರು. ಅವರಿಗೆ ಈ ಕೌಲಿನ ವಿಷಯವು ತಿಳಿದಿರಲಿಲ್ಲ. ಅದಕ್ಕಾಗಿ ಇಡುಮಿನಿಯುಸ್ಸನು ವ್ಯಸನವುಳ್ಳವನಾಗಿರುತ್ತಾನೆ. ಈ ಕಾಡುಜನಗಳು ಕೇವಲ ಪ್ರಾಮಾಣಿಕರೆಂಬದಾಗಿಯೂ, ತನ್ನ ಹಡಗು ಇಲ್ಲಿಗೆ ಬಂದ ಕೂಡಲೇ, ಫಲವತ್ತಾದ ದೇಶಗಳನ್ನೆಲ್ಲಾ ತನಗೆ ಬಿಟ್ಟು, ಕಾಡುಗಳಲ್ಲಿಯೂ, ಮೇಡುಗಳಲ್ಲಿಯೂ ವಾಸಮಾಡುವುದಕ್ಕೆ ಹೋಗುವುದಕ್ಕೂ ಅವರು ಸಿದ್ಧರಾದರೆಂಬದಾಗಿಯೂ, ತಾನೂ, ತನ್ನವರೂ ಈ ದೇಶದಲ್ಲಿರುವುದಕ್ಕೆ ಅವಕಾಶ ಕೊಟ್ಟರೆಂಬದಾಗಿಯೂ, ಇವನು ತಿಳಿದುಕೊಂಡಿರುವನು. ಉಪಕಾರಕ್ಕೆ ಅಪಕಾರ ಮಾಡಿದರೆಂಬ ಅಪಯಶಸ್ಸಿಗೆ ಭಯಪಡುವನೇ ಹೊರತು, ಯುದ್ಧಮಾಡುವುದಕ್ಕೆ ಭಯಪಡುವುದಿಲ್ಲವೆಂಬದಾಗಿಯೂ ಇಡುಮಿನಿಯುಸ್ಸನು ಹೇಳುತ್ತಾನೆ. ಇದು ನಿಜವಾದ ಮಾತು. ಅವನ ಮಾತನ್ನು ನಾನು ನಂಬುತ್ತೇನೆ. ಪ್ರಮಾದದಿಂದ ಸನ್ನಿಹಿತವಾಗಿರುವ ಈ ಯುದ್ಧದಿಂದ ಪರಾಂಗ್ಮುಖರಾಗಿ ಉಭಯ ಕಕ್ಷಿಯವರಿಗೂ ಧರ್ಮವಾಗಿ ತೋರುವ ಕೌಲು ಮಾಡಲ್ಪಡಲಿ. ಈ ಯುದ್ಧವೆಂಬ ಮಹಾಜಾಡ್ಯದ ಹಾವಳಿಯು ನಿಲ್ಲಿಸಲ್ಪಡಲಿ. ಉಭಯ ಕಕ್ಷಿಯವರೂ ಈ ಯುದ್ಧದಿಂದ ಉಂಟಾ

ಗತಕ್ಕೆ ಅನರ್ಥಗಳನ್ನು ತಪ್ಪಿಸಿಕೊಂಡು, ಶಾಂತಿಯಿಂದ ಬದುಕುವುದಕ್ಕೆ ಅವಕಾಶವು ಮಾಡಲ್ಪಡಲಿ.''

ಈ ರೀತಿಯಲ್ಲಿ ಮೆಂಟರನು ಹೇಳಿದನು. ಇವನು ಯಾರಾಗಿರಬಹುದೆಂದು ಸೇನಾನಾಯಕರೆಲ್ಲರೂ ಇವನನ್ನು ದುರುಗುಟ್ಟಿಕೊಂಡು ನೋಡಿದರು. ಸ್ವಲ್ಪ ಹೊತ್ತಿನಲ್ಲಿ ನೆಸ್ಟರಿಗೆ ಇವನೇ ಮೆಂಟರೆಂದು ಗೊತ್ತಾಯಿತು. ಅವನ ಬಳಿಗೆ ಬಂದು, ಅತ್ಯಂತ ಸಂತೋಷದಿಂದ ಅವನಿಗೆ ನಮಸ್ಕಾರವನ್ನು ಮಾಡಿದನು. ಅನಂತರ ಅವನಿಗೆ ಹೇಳಿದ್ದೇನಂದರೆ—''ಎಲೈ ಮೆಂಟರನೇ, ಇಲ್ಲಿ ನಿನ್ನನ್ನು ನೋಡುವ ಭಾಗ್ಯವು ನನಗೆ ಲಭ್ಯವಾಗುವುದೆಂದು ನಾನು ಭಾವಿಸಿರಲಿಲ್ಲ. ನಿನ್ನನ್ನು ನೋಡಿ ಅನೇಕ ವರ್ಷಗಳಾದವು. ನೀನು ಆಗ ಹುಡುಗನಾಗಿದ್ದೆ. ಈಚೆಗೆ ದಿಗಂತವಿಶ್ರಾಂತವಾದ ನಿನ್ನ ಮಹಿಮೆಯನ್ನು ಕೇಳಿರುವೆನು. ನೀನಿಲ್ಲಿಗೆ ಬರುವುದಕ್ಕೆ ಕಾರಣವೇನು? ಈ ಯುದ್ಧವನ್ನು ನಿಲ್ಲಿಸುವ ಸಂಭವವು ನಿನಗೆ ಹೇಗೆ ಉಂಟಾಯಿತು? ಇಡುಮಿನಿಯಸ್ಸನ ಮೇಲೆ ನಮಗೆ ದ್ವೇಷವಿಲ್ಲ. ನಾವು ದಂಡೆತ್ತಿ ಬರುವುದಕ್ಕೆ ಅವನ ದೌರಾತ್ಮ್ಯವೇ ಮುಖ್ಯಕಾರಣ. ನಾವು ಸಮಾಧಾನವನ್ನು ಕೇಳಿದೆವು. ಅದಕ್ಕಿಂತಲೂ ಹೆಚ್ಚಾಗಿ ನಮಗೆ ಬೇಕಾದದ್ದೇನೂ ಇಲ್ಲ. ಇವನು ಸಮಾಧಾನಕ್ಕೆ ಒಪ್ಪಲಿಲ್ಲ. ಇವನನ್ನು ನಾಶಮಾಡಿದ ಹೊರತು ಸಮಾಧಾನವಾಗುವುದಿಲ್ಲ. ಇವನು ಕೌಲುಗಳನ್ನೆಲ್ಲಾ ಉಲ್ಲಂಘಿಸಿರುವನು. ಇವನಿಗೆ ಶಿಕ್ಷೆಮಾಡುವುದಕ್ಕೋಸ್ಕರ ನಾವೆಲ್ಲರೂ ಒಗ್ಗಟ್ಟಾಗಬೇಕಾಯಿತು. ಇವನು ದುರಾಶೆ ಎಂಬ ಪಿಶಾಚದಿಂದ ಹಿಡಿಯಲ್ಪಟ್ಟಿರುವನು. ಇವನಿಗೆ ಬೇಕಾದಹಾಗೆ ಸಂಪತ್ತಿರುವುದು. ವಿಶಾಲವಾದ ರಾಜ್ಯವಿರುವುದು. ಇದನ್ನೆಲ್ಲಾ ಅನುಭವಿಸಿಕೊಂಡು ಸುಖವಾಗಿರಬಹುದು. ಅಂಥಾ ಸುಖವು ಇವನಿಗಿರುವುದಿಲ್ಲ. ನೆರೆಹೊರೆಯವರೆಲ್ಲರೂ ದಾಸರಾಗಿರಬೇಕೆಂಬ ಅಭಿನಿವೇಶವು ಇವನಿಗಿರುವುದು. ಅವರು ದಾಸರಾದ ಹೊರತು ತನಗೆ ಸುಖವಿಲ್ಲವೆಂದು ಇವನು ತಿಳಿದುಕೊಂಡಿರುವನು. ಇವನನ್ನು ನಂಬುವುದು ಕಷ್ಟ. ನಂಬಿಸಿ ವಂಚಿಸುತ್ತಾನೆ. ಹೀಗೆ ನಾವು ತಿಳಿದುಕೊಂಡು ಇದ್ದೇವೆ. ಇದು ನಮ್ಮ ಅಭಿಪ್ರಾಯ. ಇದಕ್ಕೆ ಭಿನ್ನವಾದ ಅಭಿಪ್ರಾಯವು ನಿನಗಿರುವ ಪಕ್ಷದಲ್ಲಿ, ನಿನ್ನಾಜ್ಞೆಯಂತೆ ನಡೆಯುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಧರ್ಮಿಷ್ಠರಲ್ಲಿ ನೀನು ಅಗ್ರಗಣ್ಯನು. ನಿನ್ನ ಸತ್ಯಸಂಧತೆಯನ್ನು ನೋಡಿ ದೇವತೆಗಳೂ ಕೂಡ ಮೆಚ್ಚುತ್ತಾರೆ. ನಿನ್ನ ಶಾಂತಿ, ದಾಂತಿ ಲೋಕ

ವ್ಯವಹಾರಜ್ಞಾನ ಮೊದಲಾದವುಗಳನ್ನು ತಿಳಿದುಕೊಂಡು, ಲೋಕವೆಲ್ಲಾ ಕೊಂಡಾಡುತ್ತಲಿದೆ. ಇಂಥಾ ಮಹಾನುಭಾವನಾದ ನೀನು ಇಡುಮಿನಿಯುಸ್ನನ ಪುಣ್ಯಪರಿಪಾಕದಿಂದ ಬಂದಿರುವಿ ಎಂದು ತೋರುತ್ತದೆ. ನಿನ್ನ ಇಷ್ಟದಂತೆ ನಡೆಯುವುದಕ್ಕೆ ನಾವು ಸಿದ್ಧರಾಗಿರುತ್ತೇವೆ. ನಿನ್ನ ವೃತ್ತಾಂತವನ್ನು ತಿಳಿದುಕೊಳ್ಳಬೇಕೆಂದು ನಾನು ಅತ್ಯಂತ ಕುತೂಹಲವುಳ್ಳವನಾಗಿರುತ್ತೇನೆ. ನಮ್ಮ ಸೇನಾನಾಯಕರೂ ಮತ್ತು ಸೈನಿಕರೂ ಕೂಡ ಈ ವೃತ್ತಾಂತವನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯುಳ್ಳವರಾಗಿರುವರು. ದಯವಿಟ್ಟು ನೀವು ಇಲ್ಲಿಗೆ ಬರುವುದಕ್ಕೆ ಕಾರಣವೇನೋ ಅದನ್ನು ತಿಳಿಸು.'' ಈ ರೀತಿಯಲ್ಲಿ ನೆಸ್ಟರನು ಕೇಳಲು, ಮೆಂಟರು ಪ್ರತ್ಯುತ್ತರವನ್ನು ಕೊಟ್ಟದ್ದೇನಂದರೆ:—

"ಎಲೈ ನೆಸ್ಟರನೇ, ಯೂಲಿಸಸ್ಸನು ಅವನ ಮಗನ ಯೋಗಕ್ಷೇಮವನ್ನು ನನಗೆ ಒಪ್ಪಿಸಿದನು. ಈತನು ತಾನು ತಂದೆಯನ್ನು ಹುಡುಕಿಕೊಂಡು, ಪೈಲಾಸ್ ಪಟ್ಟಣಕ್ಕೆ ಬಂದಾಗ, ಅವನಿಗೆ ನಿನ್ನ ಸಂದರ್ಶನವು ಆಯಿತು. ಅವನನ್ನು ನೀನು ವಿಶೇಷವಾಗಿ ಆದರಿಸಿದೆ. ಅವನ ಜೊತೆಯಲ್ಲಿ ಮಾರ್ಗದರ್ಶನವನ್ನು ಮಾಡುವುದಕ್ಕೋಸ್ಕರ ನಿನ್ನ ಮಗನನ್ನು ಕಳುಹಿಸಿಕೊಟ್ಟೆ. ಅಲ್ಲಿಂದ ಈ ಟೆಲಿಮಾಕಸ್ಸನು ಅವನ ತಂದೆಯನ್ನ ಹುಡುಕಿಕೊಂಡು, ಸಿಸಿಲಿ, ಈಜಿಪ್ಟ್, ಸೈಪ್ರೆಸ್, ಕ್ರೀಟ್ ಮೊದಲಾದ ದೇಶಗಳಿಗೆ ಪ್ರಯಾಣ ಮಾಡಿದನು. ಇಥಾಕಾ ಪಟ್ಟಣಕ್ಕೆ ವಾಪಸು ಹೋಗಬೇಕೆಂದು ನಾವು ಉದ್ದೇಶ ಮಾಡಿದ್ದೆವು. ದೈವಯೋಗದಿಂದ ಇಥಾಕಾ ಪಟ್ಟಣಕ್ಕೆ ಹೋಗುವುದಕ್ಕೆ ಬದಲಾಗಿ, ನಾವು ಇಲ್ಲಿಗೆ ಬರಬೇಕಾಯಿತು. ಈಗ ಸನ್ನಿಹಿತವಾಗಿರತಕ್ಕ ಯುದ್ಧದ ಅನರ್ಥವನ್ನು ತಪ್ಪಿಸುವುದಕ್ಕೋಸ್ಕರ ನಾವಿಲ್ಲಿಗೆ ಬಂದಂತಾಯಿತೆಂದು ತೋರುತ್ತದೆ. ಇಡುಮಿನಿಯುಸ್‌ನಲ್ಲಿ ನಿಮಗೆ ನಂಬಿಕೆಯು ಹೋಗಿರುವುದು. ಆದರೆ, ಯುಲಿಸಸ್ಸನ ಮಗನಲ್ಲಿಯೂ, ನನ್ನಲ್ಲಿಯೂ ನಿಮಗೆ ನಂಬಿಕೆಯು ಇರಬಹುದು. ನಾವು ಜಾಮೀನುದಾರರಾದರೆ, ಅದರ ಮೇಲೆ ಮಾಡಲ್ಪಟ್ಟ ಕೌಲು ನಡೆಯಬಹುದೆಂದು ನಿಮಗೆ ನಂಬಿಕೆಯು ಇರಬಹುದು. ಹಾಗಿದ್ದ ಪಕ್ಷದಲ್ಲಿ, ಇಡುಮಿನಿಯುಸ್ಸನು ಈ ಕೌಲಿನ ಒಡಂಬಡಿಕೆಗೆ ಅನುಸಾರವಾಗಿ ನಡೆಯುವಂತೆ ಮಾಡುವುದಕ್ಕೆ ನಾವು ಸಿದ್ಧರಾಗಿರುತ್ತೇವೆ. ಇದಕ್ಕೆ ನಾವು ಜಾಮೀನುದಾರರಾಗುತ್ತೇವೆ. ಈ ವಿಷಯವು ಸಾವಧಾನವಾಗಿ ಪರ್ಯಾಲೋಚಿಸಲ್ಪಡಲಿ.''

ಈ ರೀತಿಯಲ್ಲಿ ಮೆಂಟರನು ಹೇಳಿದನು. ಇವರು ಮಾತನಾಡುತ್ತಿರುವಾಗ,

ಇಡುಮೀನಿಯಸ್ಸನೂ, ಟೆಲಿಮೂಕಸ್ಸನೂ ಕೋಟೆಯ ಮೇಲಿನಿಂದ ನೋಡುತ್ತಿದ್ದರು. ಮೆಂಟರನ ಸಂದೇಶವು ಹೇಗೆ ಕಾಣಲ್ಪಡುವುದೋ ಎಂದು ವಿಚಾರಪರರಾಗಿದ್ದರು. ಅವನ ಜೊತೆಯಲ್ಲಿ ತಾವೂ ಇದ್ದಿದ್ದರೆ ಚನ್ನಾಗಿತ್ತೆಂದು ಅವರು ಭಾವಿಸಿದರು. ಮೆಂಟರು ಹೇಳಿದ ಮಾತುಗಳು ನೆಸ್ಟರನ ಬಳಿಯಲ್ಲಿದ್ದವರಿಗೆ ಸ್ಪಷ್ಟವಾಗಿ ಗೊತ್ತಾದಾಗ್ಯೂ, ದೂರದಲ್ಲಿದ್ದ ಯೋಧರಿಗೆ ಸ್ಪಷ್ಟವಾಗಿ ಗೊತ್ತಾಗಲಿಲ್ಲ. ಈ ವಿದ್ಯಮಾನಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ಅವರಿಗೂ ಉಂಟಾಯಿತು. ಉಭಯ ಸೈನ್ಯದವರೂ ಯುದ್ಧಕ್ಕೆ ಸಿದ್ಧರಾಗಿದ್ದರು. ಎಲ್ಲರ ದೃಷ್ಟಿಗಳೂ ನೆಸ್ಟರು ಮತ್ತು ಮೆಂಟರುಗಳ ಮೇಲೆ ಬಿದ್ದಿದ್ದವು. ಮೆಂಟರನಲ್ಲಿ ನೆಸ್ಟರು ವಿಶೇಷ ಗೌರವವನ್ನು ತೋರಿಸಿದನು. ಅವನನ್ನು ನೋಡಿ ಸಮಾಧಾನವಾಗಬಹುದೆಂಬ ಕೋರಿಕೆ ಉಭಯ ಕಕ್ಷಿಯವರಿಗೂ ಉಂಟಾಯಿತು. ನೆಸ್ಟರು ವಯೋವೃದ್ಧನಾಗಿಯೂ, ಜ್ಞಾನವೃದ್ಧನಾಗಿಯೂ ಇದ್ದನು. ಗ್ರೀಸ್ ದೇಶದ ಪ್ರಭುಗಳೆಲ್ಲರೂ ಅವನಲ್ಲಿ ಅಸಾಧಾರಣವಾದ ಭಕ್ತಿಯುಳ್ಳವರಾಗಿದ್ದರು. ಅವನು ಸರ್ವತೋಮುಖವಾದ ಪ್ರಜ್ಞೆಯುಳ್ಳವನಾಗಿಯೂ, ವಾಗ್ಮಿಗಳಲ್ಲಿ ಅಗ್ರಗಣ್ಯನಾಗಿಯೂ ಇದ್ದನು. ಟ್ರಾಯ್ ಯುದ್ಧದಲ್ಲಿ ಎಕಿಲೀಸನ ಕೋಪಾಟೋಪವನ್ನು ನಿಲ್ಲಿಸಿದವನೇ ಇವನು. ಅಗಮೆಮ್ನನ ಅಖರ್ವವಾದ ಗರ್ವವನ್ನು ನಿಲ್ಲಿಸಿದವನಿವನು. ಏಜಾಕ್ಸಿನ ರೌದ್ರವನ್ನು ಅಡಗಿಸಿದವನಿವನು. ಡಯೋಮಿಡೀಸಿನ ದುಡುಕನ್ನು ಅಡಗಿಸಿದವನಿವನು. ಮನೋಹರವಾಗಿ ಮಾತನಾಡತಕ್ಕವರಲ್ಲಿ ಇವನು ಅಗ್ರಗಣ್ಯನಾಗಿದ್ದನು. ಇವನ ಮುಖದಿಂದ ಮಾತುಗಳು ಜೇನುತುಪ್ಪದಂತೆ ಸುರಿಯುತ್ತಿದ್ದವು. ಪ್ರತಿಕಕ್ಷಿಗಳೂ ಕೂಡ ಇವನು ಹೇಳಿದ್ದಕ್ಕೆ ವಿರೋಧವಾಗಿ ನಡೆಯುತ್ತಿರಲಿಲ್ಲ. ಇವನು ಮಾತನಾಡುವುದಕ್ಕೆ ಉಪಕ್ರಮಿಸಿದರೆ ಎಲ್ಲರೂ ಮೌನವನ್ನವಲಂಬಿಸುತ್ತಿದ್ದರು. ಇವನು ಅಭಿಪ್ರಾಯವನ್ನು ಕೊಟ್ಟ ಕೂಡಲೇ ವಾಗ್ವಾದಗಳು ನಿಂತುಹೋಗುತ್ತಿದ್ದವು. ತಪ್ಪು ಅಭಿಪ್ರಾಯಗಳ ದೋಷವನ್ನು ಯಾರಿಗೂ ಅಸಮಾಧಾನವಾಗದಂತೆ ತೋರಿಸುವುದರಲ್ಲಿ ಇವನು ನಿಸ್ಸೀಮನಾಗಿದ್ದನು. ಗುಣೈಕಪಕ್ಷಪಾತಿಯಾದದ್ದರಿಂದ ಎಲ್ಲಾ ಕಕ್ಷಿಯವರೂ ಇವನಲ್ಲಿ ಅನುರಕ್ತರಾಗಿರುತ್ತಿದ್ದರು. ಸೂರ್ಯನಿಗೆ ಅಭಿಮುಖವಾದ ಚಂದ್ರಬಿಂಬವು ಹೇಗೆ ಸ್ವಕೀಯವಾದ ತೇಜಸ್ಸನ್ನು ಕಳೆದುಕೊಳ್ಳುವುದೋ ಹಾಗೆ ಮೆಂಟರನ ಅಭಿಮುಖನಾದ ನೆಸ್ಟರನ ತೇಜಸ್ಸು ಈ ರೀತಿಯಲ್ಲಿ ಪರಿಣಮಿಸಿತು. ಗ್ರೀಸ್ ದೇಶದ ಮುಖಂ

ಡರೂ, ಕಾಡುಜನಗಳ ಮುಖಂಡರೂ ಈ ಉಭಯ ಕಕ್ಷಿಯವರೂ ಕೂಡ ಮೆಂಟರನ ಮಾತುಗಳನ್ನು ಕೇಳಿ ವಿಸ್ಮಿತರಾದರು. ಸಕಲ ಧರ್ಮಗಳಿಗೂ ನಿಧಿಯಾದ ನೆಸ್ಟರನೂ ಕೂಡ ವಿಸ್ಮಿತನಾದನು. ಉಭಯ ಪಕ್ಷದವರಿಗೂ ಕ್ಷೇಮಕರವಾದ ಹಿತೋಕ್ತಿಗಳು ಸಮಾಗಂದ ಪ್ರವಾಹದಂತೆ ಮೆಂಟರನಿಂದ ಹೊರಡಲು ಎಲ್ಲರೂ ತಲೆದೂಗಿದರು. ಗ್ರೀಸ್ ಜನಗಳು ಹೇಗೋ ಹಾಗೆ ಕಾಡುಜನಗಳೂ ಕೂಡ ಇಡುಮಿಾನಿಯಸ್ಸನು ನಂಬಿಕೆಗೆ ಅನರ್ಹನೆಂಬದಾಗಿಯೂ, ಅವನನ್ನು ಮೂಲೋತ್ಪಾಟನ ಮಾಡಬೇಕು ಅಥವಾ ಆ ಪ್ರಯತ್ನದಲ್ಲಿ ದೇಹವನ್ನಾದರೂ ಬಿಡಬೇಕು ಎಂದು ನಿಷ್ಕರ್ಷೆ ಮಾಡಿಕೊಂಡಿದ್ದರು. ಮೈನಾಸನ ಗುಣಗಳು ಇಡುಮಿಾನಿಯಸ್ಸಿನಲ್ಲಿ ಇರುವುವೆಂಬದಾಗಿಯೂ, ಪರಿವಾರದೇವತೆಗಳ ವಂಚಕಬುದ್ಧಿಯಿಂದ ಅವನಿಗೆ ಅಪಕೀರ್ತಿಯು ಒಂದಿರುವುದೆಂಬದಾಗಿಯೂ, ಅವನು ಧರ್ಮದಿಂದ ನಡೆದುಕೊಳ್ಳುವುದಕ್ಕೆ ತಾನೂ, ಟೆಲಿಮಾಕಸ್ಸನೂ ಜಾಮಿಾನುದಾರರಾಗಿ ಆಗುವುದಾಗಿಯೂ ಮೆಂಟರು ಹೇಳಿದ ಕೂಡಲೇ, ನೆಸ್ಟರು ಮೊದಲಾದ ಪ್ರತಿಕಕ್ಷಿ ಸಂಗಡದವರೆಲ್ಲರೂ ಇಡುಮಿಾನಿಯಸ್ಸನಿಗೆ ಮಂಗಳವಾಗಲಿ. ಅವನಲ್ಲಿ ಅಪನಂಬಿಕೆಯನ್ನು ನಾವು ಬಿಟ್ಟೆವು. ನಿಮ್ಮ ಆಜ್ಞಾನುಸಾರವಾಗಿ ನಡೆಯುವುದಕ್ಕೆ ನಾವು ಸಿದ್ಧವಾಗಿರುತ್ತೇವೆ" ಎಂದು ಹೇಳಿದರು.

---

## ಹನ್ನೊಂದನೆಯ ಅಧ್ಯಾಯ

---

ಟೆಲಿಮಾಕಸ್ಸನು ಮೆಂಟರು ಮತ್ತು ನೆಸ್ಟರನನ್ನು ನೋಡುತ್ತಾ ಸ್ವಲ್ಪ ಹೊತ್ತು ಕಳೆದನು. ಅವರ ಸಂಭಾಷಣದ ಫಲಿತಾಂಶವು ಗೊತ್ತಾಗಲಿಲ್ಲ. ಅವರ ಬಳಿಗೆ ಹೋಗಬೇಕೆಂದು ಸಂಕಲ್ಪ ಮಾಡಿದನು. ಕೋಟೆಯ ಬಾಗಿಲನ್ನು ತೆಗೆಸಿದನು. ಸಮಾಧಾನದ ಬಾವುಟವನ್ನು ಪರಿಗ್ರಹಿಸಿ, ನೆಸ್ಟರನ ಬಳಿಗೆ ಹೋಗಿ, ಅವನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಇವನನ್ನು ನೋಡಿದ ಕೂಡಲೆ ನೆಸ್ಟರು ಪರಮಾನಂದ ಭರಿತನಾಗಿ, ಅವನ ಬಳಿಗೆ ಹೋಗಿ, ಅವನನ್ನು ಆಲಿಂಗನ ಮಾಡಿಕೊಂಡನು. ಸ್ವಲ್ಪ ಹೊತ್ತು ಮಾತನಾಡುವುದಕ್ಕೆ ಅಸಮರ್ಥರಾಗಿ ಇಬ್ಬರೂ ಇದ್ದರು. ಅನಂತರ ಟೆಲಿಮಾಕಸ್ಸನು ನೆಸ್ಟರನನ್ನು ಕುರಿತು ಹೇಳಿದ್ದೇನಂದರೆ :—

"ಎಲೈ ಪಿತೃನಿರ್ವಿಶೇಷನಾದ ನೆಸ್ಟರೇ, ದೈವಯೋಗದಿಂದ ನಿನ್ನ ಆಲಿಂಗನ ಸುಖವನ್ನು ನಾನು ಪುನಃ ಹೊಂದಿರುವೆನು. ಏನೋ ಒಂದು ವಿಧವಾದ ಪಾಪಶೇಷ ದಿಂದ ಯೂಲಿಸಸ್ಸನ ಆಲಿಂಗನವು ನನಗೆ ಲಭ್ಯವಾಗಲಿಲ್ಲ. ನಿನ್ನ ಆಲಿಂಗನವು ಅದಕ್ಕೆ ಸಮಾನವಾದದ್ದು. ದೇವರು ಇದು ಲಭ್ಯವಾಗುವಂತೆ ಮಾಡಿದ್ದಕ್ಕೋಸ್ಕರ ನಾನು ತುಂಬಾ ಕೃತಜ್ಞನಾಗಿರುತ್ತೇನೆ. ನಿನ್ನ ವಿವೇಕವೂ, ನಿನ್ನ ಗುಣಾತಿಶಯ ಗಳೂ, ನಿನ್ನ ಪ್ರೀತಿಯೂ, ನೀನೇ ನನ್ನ ಭಾಗಕ್ಕೆ ಯೂಲಿಸಸ್ಸನಾಗಿರುವಂತೆ ಮಾಡಿ ರುವುವು. ನಿನ್ನ ಸಮಾಗಮವುಂಟಾದದ್ದಕ್ಕೋಸ್ಕರ ನಾನು ಬಹಳ ಸಂತೋಷವು ಳ್ಳವನಾಗಿ ಇದ್ದೇನೆ. ಇಲ್ಲಿ ನಿನ್ನ ದರ್ಶನವಾಗುತ್ತದೆಂದು ನಾನು ಭಾವಿಸಿ ಇರ ಲಿಲ್ಲ. ನಿರೀಕ್ಷಣೆಯಿಲ್ಲದೆ ಪ್ರಾಪ್ತವಾದ ಈ ಸುಖಕ್ಕಾಗಿ ಜಗದೀಶ್ವರನಿಗೆ ನಾನು ತುಂಬಾ ಕೃತಜ್ಞನಾಗಿರುವೆನು."

ಈ ರೀತಿಯಲ್ಲಿ ಟೆಲಿಮಾಕಸ್ಸನು ಹೇಳಲು, ನೆಸ್ಟರನ ಕಣ್ಣುಗಳಿಂದ ಆನಂದ ಬಾಷ್ಪವು ಸುರಿಯುವುದಕ್ಕುಪಕ್ರಮವಾಯಿತು. ಟೆಲಿಮಾಕಸ್ಸನ ಮಾತುಗಳು ಅವನ ಆಕಾರಕ್ಕೆ ಸದೃಶವಾಗಿತ್ತು. ಉಭಯ ಸೈನ್ಯದವರೂ ಇವರ ಪರಸ್ಪರ ಪ್ರೀತಿಯನ್ನು ನೋಡಿದರು. ಇದು ಉಭಯ ಪಂಗಡದವರಿಗೂ ಆಶ್ಚರ್ಯವನ್ನುಂಟುಮಾಡಿತು. ಇವನು ನೆಸ್ಟರನ ಮಗನೆಂದು ಅನೇಕರು ತಿಳಿದುಕೊಂಡರು. ಸಮಸ್ತ ಜನಗಳ ದೃಷ್ಟಿಯೂ ಇವರ ಮೇಲೆ ಬಿದ್ದಿತು. ಸಮೀಪದಲ್ಲಿದ್ದವರೆಲ್ಲರೂ ಅತ್ಯಂತ ಆದರ ದಿಂದ ಇವರ ಮಾತುಗಳನ್ನು ಕೇಳುವುದಕ್ಕುಪಕ್ರಮಿಸಿದರು.

ಟೆಲಿಮಾಕಸ್ಸನ ವಿಷಯದಲ್ಲಿ ಅಸಾಧಾರಣವಾದ ಪ್ರೀತಿಯನ್ನು ನೆಸ್ಟರು ತೋರಿಸಿದನು. ತನ್ನ ಉದ್ದೇಶವನ್ನು ನೆರವೇರಿಸುವುದಕ್ಕೆ ಇದು ಸುಸಮಯವೆಂದು ಮೆಂಟರನಿಗೆ ತೋರಿತು. ನೆಸ್ಟರನನ್ನೂ, ಪ್ರತಿಕಕ್ಷಿ ಸೈನ್ಯವನ್ನೂ ನೋಡಿ, ಮೆಂಟರು ಹೇಳಿದ್ದೇನಂದರೆ:—"ಎಲೈ ನೆಸ್ಟರೇ, ನಿನ್ನ ಪ್ರೀತಿಗೂ, ಗ್ರೀಕ್ ದೇಶೀಯರ ಪ್ರೀತಿಗೂ ಈ ಟೆಲಿಮಾಕಸ್ಸನು ಪಾತ್ರನಾಗಿರುತ್ತಾನೆ. ಕೌಲಿನ ಒಡಂಬಡಿಕೆಗಳು ನಿಷ್ಕರ್ಷಿಸ ಲ್ಪಡಲಿ. ಇಡುಮಿನಿಯಸ್ಸನು ಅದಕ್ಕೆ ಒಪ್ಪುವನು. ಅವನ ಮಾತಿನಂತೆ ಅವನು ನಡೆಯುವುದಕ್ಕೆ ಈ ಟೆಲಿಮಾಕಸ್ಸನು ಉತ್ತರವಾದಿಯಾಗುವನು. ಇವನನ್ನು ಜಾ ಮೀನಾಗಿ ನಾನು ಕೊಡುತ್ತೇನೆ. ಇದನ್ನು ಪರಿಗ್ರಹಿಸಬೇಕು. ಯೂಲಿಸಸ್ಸನು ಎಲ್ಲಿರುವನೋ ಗೊತ್ತಿಲ್ಲ. "ಗಂಡನೂ, ಮಗನೂ ನಿನ್ನನ್ನು ಬಿಟ್ಟು ಹೋಗಿರುವರು.

ದುರಾತ್ಮರಾದವರು ದೇಶವನ್ನು ಆಕ್ರಮಿಸಿರುವರು. ಅರ್ಥಹಾನಿ, ಮಾನಹಾನಿಗಳು ಸನ್ನಿಹಿತವಾಗಿರುವುವು. ಆದುದರಿಂದ ಪ್ರಾಣವನ್ನು ಬಿಡುವುದು ಮೇಲು'' ಎಂದು ಈತನ ತಾಯಿಯಾದ ಪೆನಿಲೋಪಳು ದೇಹತ್ಯಾಗಮಾಡುವುದರಲ್ಲಿ ಸಿದ್ಧಳಾಗಿರುವಳು. ಇಂಥಾ ಅವಸ್ಥೆಯಲ್ಲಿಯೂ ಕೂಡ ಈ ಮಹಾತ್ಮಳ ಪುತ್ರನಾದ ಈ ಟೆಲಿಮಾಕಸ್ಸನು ಈ ಯುದ್ಧವನ್ನು ನಿಲ್ಲಿಸುವುದಕ್ಕೋಸ್ಕರ ತಾನು ಜಾಮೀನಾಗುವುದಕ್ಕೆ ಒಪ್ಪಿ ಇರುವನು. ಅವನನ್ನು ಜಾಮೀನಾಗಿ ಕೊಡುವುದಕ್ಕೂ, ನಾನು ಜಾಮೀನಾಗಿರುವುದಕ್ಕೂ ಒಪ್ಪಿರುವೆನು. ಇಡುಮಿನಿಯುಸ್ಸನೊಡನೆ ಶಾಶ್ವತವಾದ ಕೌಲನ್ನು ಮಾಡಿಕೊಂಡು, ಉಭಯ ಕಕ್ಷಿಯವರೂ ಸುಖವಾಗಿ ಬದುಕಿ. ಸಹೋದರಭಾವದಿಂದಲೂ, ಮಿತ್ರಭಾವದಿಂದಲೂ ಬಾಳಿ. ಒಬ್ಬರಲೊಬ್ಬರು ದ್ವೇಷವನ್ನು ಮಾಡಿ, ಉಭಯತ್ರರೂ ಅರ್ಥಹಾನಿ, ಮಾನಹಾನಿ, ಪ್ರಾಣಹಾನಿಗಳಿಗೆ ಗುರಿಯಾಗಬೇಡಿ.'' ಈ ರೀತಿಯಲ್ಲಿ ಮೆಂಟರನು ಹೇಳಿದನು.

ಸಮಾಧಾನದ ಸಲಹೆಯು ಮಾಡಲ್ಪಟ್ಟಿರುವುದೆಂದು ಸಮಾಚಾರವು ಒಬ್ಬರಿಂದೊಬ್ಬರಿಗೆ ಗೊತ್ತಾಯಿತು. ಪ್ಯಾಂಡೂರಿಯುಸ್ಸರಿಗೆ ಇದು ರುಚಿಸಲಿಲ್ಲ. ಯುದ್ಧವನ್ನು ಮಾಡಬೇಕೆಂಬುವುದೇ ಅವರ ಸಂಕಲ್ಪವಾಗಿತ್ತು. ಇಡುಮಿನಿಯುಸ್ಸನನ್ನು ಜಯಿಸಿ, ಅವನ ದೇಶವನ್ನು ಹಂಚಿಕೊಳ್ಳಬೇಕೆಂಬ ಆಶೆಯು ಇವರಿಗೆ ಇತ್ತು. ಈ ಸಮಾಧಾನದ ಪ್ರಸ್ತಾಪವನ್ನು ಕೇಳಿದ ಕೂಡಲೆ, ಇವರಿಗೆ ಅಸಮಾಧಾನ ಉಂಟಾಯಿತು. ಇವರು ಗ್ರೀಸ್ ದೇಶೀಯರಲ್ಲಿ ಅಪನಂಬಿಕೆಯುಳ್ಳವರಾದರು. ಮೆಂಟರು ಮತ್ತು ಟೆಲಿಮಾಕಸ್ಸರ ಪಕ್ಷವನ್ನು ನೆಸ್ಟರು ಮೊದಲಾದ ಗ್ರೀಕ್ ಜನಗಳು ವಹಿಸುವರೆಂದು ಗೊತ್ತಾಯಿತು. ಗ್ರೀಸ್ ದೇಶದವರು ಇಡುಮಿನಿಯುಸ್ಸನ ಜೊತೆಗೆ ಸೇರಿದ್ದಾಗ್ಯೂ, ಈ ಉಭಯ ಪಂಗಡದವರನ್ನು ಸೋಲಿಸಬಹುದೆಂಬ ಅಭಿಪ್ರಾಯವು ಪ್ಯಾಂಡೂರಿಯುಸ್ಸರಿಗೆ ಉಂಟಾಯಿತು. ಈ ಸನ್ನಿವೇಶವನ್ನೆಲ್ಲಾ ಮೆಂಟರನು ನೋಡಿದನು. ಅವರನ್ನು ಕುರಿತು ಮೆಂಟರು ಹೇಳಿದ್ದೇನೆಂದರೆ :---

'' ಇಡುಮಿನಿಯುಸ್ಸನಲ್ಲಿ ನಿಮಗೆ ನಂಬಿಕೆಯು ಇಲ್ಲ. ಇದಕ್ಕೆ ಕಾರಣವುಂಟು. ಈತನು ನಿಮ್ಮ ನಂಬಿಕೆಯನ್ನು ಕಳೆದುಕೊಂಡಿರುವನು. ಗ್ರೀಸ್ ದೇಶದವರ ವಿಷಯದಲ್ಲಿ ನೀವು ಸಂದೇಹ ಪಡುವುದು ಅಧರ್ಮ. ನೀವೂ ಗ್ರೀಕರೂ ಐಕಮತ್ಯವುಳ್ಳವರಾಗಿರಬೇಕು. ಈ ದೇಶದಲ್ಲಿ ಅವರೂ ಅನೇಕ ವಸತಿಗಳನ್ನು ಮಾಡಿಕೊಂಡು

ಪ್ರಭುತ್ವ ಮಾಡುತ್ತಲಿಧಾರೆ. ಅವರಲ್ಲಿ ಸಂದೇಹಪಡುವುದು ತಪ್ಪು. ಇಡುಮಿಾನಿಯಸ್ಸನು ಅಪರಾಧವನ್ನು ಮಾಡಿರುವನು. ನಿಮ್ಮ ಸಂದೇಹಕ್ಕೆ ಗುರಿಯಾಗಿರುವನು. ಆದರೆ ಇವನು ವಂಚಕನಲ್ಲ. ನಾವು ಮಾಡತಕ್ಕ ಕೌಲಿನಂತೆ ಅವನು ನಡೆಯುವನು. ಅದಕ್ಕೆ ನಾನೂ ಟೆಲಿಮಾಕಸ್ಸೂ ಇಬ್ಬರೂ ಜಾಮಿಾನ್ದಾರರಾಗುತ್ತೇವೆ. ನಿಮ್ಮ ಕರಾರಿನಂತೆ ನಡೆಯುವವರೆಗೂ ನಾವೂ ನಿಮ್ಮ ಅಧೀನದಲ್ಲಿರುತ್ತೇವೆ. ಈ ಕ್ರೀಟಿನ ಜನಗಳು ನಿಮಗೆ ವಂಚನೆಯನ್ನು ಮಾಡಿ ಈ ಪರ್ವತದ ಘಾಟಿಗಳನ್ನು ಅಪಹರಿಸಿರುವರು. ನಿಮ್ಮ ದೇಶದ ದಾರಿಗಳನ್ನೆಲ್ಲಾ ತಮ್ಮ ಸ್ವಾಧೀನಪಡಿಸಿಕೊಂಡಿರುವರು. ಅಲ್ಲೆಲ್ಲಾ ದುರ್ಗಗಳನ್ನು ಕಟ್ಟಿಕೊಂಡಿರುವರು. ಈ ಯುದ್ಧಕ್ಕೆ ಇದು ಒಂದು ಕಾರಣವೆಂದು ಗೊತ್ತಾಗುತ್ತದೆ. ಈ ಕಾರಣವು ನಿವಾರಣೀಯವಾದದ್ದು. ಇನ್ನೇನಾದರೂ ಕಾರಣವಿದ್ದರೆ ಹೇಳಿ. ಅವುಗಳೆಲ್ಲಾ ನಿವಾರಣೆ ಮಾಡಲ್ಪಡುವುವು. ಯುದ್ಧದಿಂದ ಲಾಭವೆಂದು ತಿಳಿದುಕೊಳ್ಳಬೇಡಿ. ಯುದ್ಧದಲ್ಲಿ ಜಯಪರಾಜಯಗಳು ಧರ್ಮವನ್ನನುಸರಿಸುವುವು. ಇದುವರೆಗೂ ಇಡುಮಿಾನಿಯಸ್ಸನ ಭೃತ್ಯರು ಅಧರ್ಮವನ್ನು ಮಾಡಿದರು. ಹಾಗೆಯೇ ಯುದ್ಧವು ಉಪಕ್ರಮವಾಗಿದ್ದರೆ ಅವರಿಗೆ ಅಪಜಯವಾಗುತ್ತಿತ್ತು. ಈಗ ಧರ್ಮವಾಗಿ ನಡೆಯುವುದಕ್ಕೆ ಇಡುಮಿಾನಿಯಸ್ಸನು ಸಿದ್ಧನಾಗಿರುತ್ತಾನೆ. ಅದಕ್ಕೆ ನಾನೂ ಟೆಲಿಮಾಕಸ್ಸನೂ ಜಾಮಿಾನಾಗಿರುತ್ತೇವೆ. ನೆಸ್ಟರು ಮೊದಲಾದ ಗ್ರೀಕ್ ಮಹನೀಯರು ಇದಕ್ಕೆ ಒಪ್ಪುತ್ತಾರೆ. ನಿಮ್ಮ ಮಿತ್ರರನ್ನು ಶತ್ರುಗಳೆಂದು ತಿಳಿದುಕೊಂಡು ಯುದ್ಧಕ್ಕೆ ಉಪಕ್ರಮಿಸಿದರೆ ನಿಮ್ಮ ನಡತೆಯನ್ನು ದೇವರು ಮೆಚ್ಚುವುದಿಲ್ಲ. ಗ್ರೀಸ್ ದೇಶೀಯರು ಇಡುಮಿಾನಿಯಸ್ಸಿನ ಜೊತೆಯಲ್ಲಿ ಸೇರುವ ಸಂಭವವು ಬರುವುದು. ನಿಮಗೆ ಪರಾಜಯವಾಗುವ ಸಂಭವವು ಬರುವುದು. ಸಾವಧಾನವಾಗಿ ಪರ್ಯಾಲೋಚಿಸಿ ನಡೆಯುವುದು ನಿಮಗೆ ಕರ್ತವ್ಯ.

ಈ ರೀತಿಯಲ್ಲಿ ಮೆಂಟರನು ಹೇಳಲು ಮಾಂಡೂರಿಯರ ಮುಖಂಡರಲ್ಲಿ ಒಬ್ಬನು ಮೆಂಟರನ ಬಳಿಗೆ ಬಂದು ಹೇಳಿದ್ದೇನೆಂದರೆ:—ಈ ಯುದ್ಧಕ್ಕೆ ಅವಕಾಶವಿಲ್ಲದಂತೆ ಮಾಡುವುದಕ್ಕೆ ಮಾಡಬೇಕಾದ ಕೆಲಸಗಳನ್ನೆಲ್ಲಾ ನಾವು ಮಾಡಿದೆವು. ಅವುಗಳು ಫಲಕಾರಿಗಳಾಗಲಿಲ್ಲ. ಈ ಕ್ರೀಟನರು ದುರಾಶೆಯುಳ್ಳವರು. ಅವರನ್ನು ನಂಬುವುದಕ್ಕೆ ಆಗುವುದಿಲ್ಲ ಅವರು ಪ್ರಮಾಣ ಮಾಡಿ ಹೇಳುವ ಮಾತುಗ

ಳಲ್ಲಿಯೂ ನಂಬಿಕೆಯನ್ನಿಡಲಾಗುವುದಿಲ್ಲ. ಈ ಪರ್ವತದ ಘಾಟಿಗಳನ್ನು ಕೂಡ ಇವರು ಆಕ್ರಮಿಸಿದರು. ಮುಂದೆ ಒಂದಾಗ ನಮ್ಮ ದೇಶಕ್ಕೆ ನುಗ್ಗುವುದಕ್ಕೆ ಏರ್ಪಾಡು ಮಾಡಿಕೊಂಡಿರುವರು. ಸಮುದ್ರತೀರದಲ್ಲಿರತಕ್ಕ ಫಲವತ್ತಾದ ದೇಶಗಳನ್ನು ಇವರಿಗೆ ಬಿಟ್ಟಿದ್ದಾಗ್ಯೂ ನಮ್ಮ ಕಾಡು ಮೇಡುಗಳನ್ನಾಕ್ರಮಿಸಬೇಕೆಂಬ ದುರಾಶೆಯೂ ಕೂಡ ಇವರಿಗಿರುವುದು. ಇವರನ್ನು ಮೂಲೋತ್ಪಾಟನ ಮಾಡದಿದ್ದರೆ ಇವರು ನಮ್ಮನ್ನು ಮೂಲೋತ್ಪಾಟನ ಮಾಡುವರು. ಈ ಘಾಟಿಗಳು ಇವರ ಸ್ವಾಧೀನದಲ್ಲಿರುವವರೆಗೂ ನಮಗೆ ವಿಪತ್ತುಗಳು ತಪ್ಪುವುದಿಲ್ಲ. ಭ್ರಾತೃಭಾವದಿಂದಲೂ, ಮಿತ್ರಭಾವದಿಂದಲೂ ಇರಬೇಕೆಂಬ ಕುತೂಹಲವು ಇವರಿಗಿರುವ ಪಕ್ಷದಲ್ಲಿ ನಮ್ಮ ಘಾಟಿಗಳನ್ನು ನಮ್ಮ ವಶಕ್ಕೆ ಬಿಡಲಿ. ಇವರ ದೇಶಕ್ಕೆ ನುಗ್ಗುವುದಕ್ಕೆ ಯಾವಯಾವ ಹಾದಿಗಳಿರುವುವೋ ಅವುಗಳನ್ನು ಇವರು ಪಡೆದುಕೊಂಡು ಬೇಕಾದ ಬಂದೋಬಸ್ತನ್ನು ಮಾಡಿಕೊಳ್ಳಲಿ. ನೀನು ಮಹಾತ್ಮನಾಗಿ ಕಾಣುತ್ತೀಯೆ. ಜಗದೀಶ್ವರನ ಅನುಗ್ರಹವು ನಿನ್ನಲ್ಲಿರುವಂತೆ ಕಾಣುತ್ತದೆ. ಈ ಉಭಯ ಕಕ್ಷಿಗಳಿಗೆ ಸೇರಿದ ನಾವು ಕೋಪತಾಪಗಳಿಂದ ಯುದ್ಧ ಮಾಡಿ ನಾಶವಾಗದೇ ಇರಲೆಂದು ನಿನಗೆ ಸಂಕಲ್ಪವಿರುವುದು. ನಮಗೆ ಕೋಪತಾಪಗಳಿರುವುದಿಲ್ಲ. ಅನ್ಯಾಯವಾದ ಯುದ್ಧ ಮಾಡುವ ಸಂಕಲ್ಪವೂ ನಮಗಿರುವುದಿಲ್ಲ. ನ್ಯಾಯವನ್ನು ಹೊಂದುವುದು ಅಸಾಧ್ಯವಾದದ್ದರಿಂದ ಯುದ್ಧಕ್ಕೆ ಸನ್ನದ್ಧರಾಗಿ ನಾವು ಬಂದಿರುತ್ತೇವೆ. ದೈವಯೋಗದಿಂದ ಈ ಯುದ್ಧವನ್ನು ನಿಲ್ಲಿಸುವುದಕ್ಕೆ ನೀವು ಬಂದಿರುವಿರಿ. ಈ ಕ್ರೀಟರು ಕೃತಘ್ನರು, ಮೋಸಗಾರರು, ದಯಾಹೀನರು. ನಮಗೆ ಅಸಿವಾರಹನೀಯವಾದ ಕಷ್ಟಗಳನ್ನು ಇವರು ಉಂಟು ಮಾಡಿರುವರು. ನಾವು ಸತ್ಯವನ್ನು ಬಿಟ್ಟಿಲ್ಲ. ಇವರು ಸತ್ಯವನ್ನುಲ್ಲಂಘಿಸಿರುವರು. ಇದಕ್ಕೆ ದೇವರು ಇವರಿಗೆ ಶಿಕ್ಷೆಯನ್ನು ಮಾಡಿಯೇ ಮಾಡುವನು. ಈ ಮಧ್ಯೆ ರಾಜಿ ಮಾಡುವುದಕ್ಕೆ ಬಂದಿರುವುದನ್ನು ನೋಡಿದರೆ ಇಡುವಿನಾಸಿಯಸ್ಸನಿಗೆ ಇನ್ನೂ ಪುಣ್ಯಶೇಷವೇನೋ ಇರುವುದೆಂದು ತೋರುತ್ತದೆ.

ಈ ರೀತಿಯಲ್ಲಿ ಈ ಮಾಂಪೂರಿಯನರ ಮುಖಂಡನು ಹೇಳಿದನು. ಅವನ ಕಡೆಯವರೆಲ್ಲರೂ ಆತನ ಮಾತನ್ನನುಮೋದಿಸಿದರು. ಆಗ ಮೆಂಟರು ಹೇಳಿದ್ದೇನೆಂದರೆ:—

ನಿಮಗೆ ಧರ್ಮವಾದ ಕೆಲಸವನ್ನು ಮಾಡುವುದೇ ನನ್ನ ಮುಖ್ಯೋದ್ದೇಶವಾಗಿ

ರುವುದು. ಕ್ರೀಟರಲ್ಲಿ ನನಗೆ ಎಷ್ಟು ವಿಶ್ವಾಸವಿರುವುದೋ ನಿಮ್ಮಲ್ಲಿಯೂ ಅಷ್ಟು ವಿಶ್ವಾಸವಿರುವುದು. ನಿಮ್ಮ ವಿಶ್ವಾಸಕ್ಕೆ ಅವರು ಪಾತ್ರರಾಗದೆ ಹೋದದ್ದಕ್ಕೋಸ್ಕರ ನನಗೆ ತುಂಬಾ ವ್ಯಸನವಿರುವುದು. ಅವರ ಅವಜ್ಞತೆಯಿಂದ ನಿಮಗುಂಟಾಗಿರ ತಕ್ಕ ನಷ್ಟವು ಕೂಡ ಕಟ್ಟಿಕೊಡಲ್ಪಡುವುದೇ ನನ್ನ ಮುಖ್ಯ ಉದ್ದೇಶ. ಈ ವಿಷಯದಲ್ಲಿ ನೀವು ಸಂದೇಹವನ್ನು ಹೊಂದಬೇಡಿ. ಈ ಯೂಲಿಸಿಸ್ಸನ ಮಗನಾದ ಟೆಲಿಮಾಕಸ್ಸನೂ ನಾನೂ ಇಬ್ಬರೂ ಇದಕ್ಕೆ ಜಾಮೀನಾಗುತ್ತೇನೆ. ನಾವಿಬ್ಬರು ಸಾಲದೆಂದು ನಿಮಗೆ ತೋರಿದರೆ ಈ ಕ್ರೀಟರಲ್ಲಿ ಅತ್ಯಂತ ಘನತೆಯನ್ನು ಹೊಂದಿದ ಪರಾಕ್ರಮಶಾಲಿಗಳಲ್ಲಿ ಅಗ್ರಗಣ್ಯರಾದ ಹನ್ನೆರಡು ಜನಗಳನ್ನು ಜಾಮೀನುದಾರರನ್ನಾಗಿ ನೀವು ಪರಿಗ್ರಹಿಸಬಹುದು. ಈ ಕೌಲು ಜಾರಿಗೆ ಬಂದಿತೆಂದು ನಿಮಗೆ ತೋರುವವರೆಗೂ ನಾವು ನಿಮ್ಮ ಅಧೀನದಲ್ಲಿರುತ್ತೇವೆ. ಈ ಕ್ರೀಟರು ಕೌಲಿನಂತೆ ನಡೆಯುವುದಿಲ್ಲವೆಂದು ನಿಮಗೆ ತೋರಿದರೆ ನಮಗೆ ಬೇಕಾದ ಶಿಕ್ಷೆಯನ್ನು ಮಾಡಬಹುದು. ಇಡುಮಿನಿಯಸ್ಸನು ವಂಚಕನೆಂದು ನೀವು ತಿಳಿದುಕೊಂಡು ಇದೀರಿ. ಹಾಗೆ ತಿಳಿದುಕೊಳ್ಳುವುದಕ್ಕೆ ಕಾರಣಗಳುಂಟು. ಕಾಲಕ್ರಮದಲ್ಲಿ ಮೈನಾಸನ ಮೊಮ್ಮಗನಾದ ಇಡುಮಿನಿಯಸ್ಸನು ಅಧರ್ಮಿಷ್ಟನಲ್ಲವೆಂದು ನಿಮಗೆ ಗೊತ್ತಾಗುವುದು. ಅದು ಹಾಗಿರಲಿ. ಇವನು ಯುದ್ಧ ಮಾಡುವುದಕ್ಕೆ ಹಿಂತೆಗೆಯುವವನಲ್ಲ. ಅಧರ್ಮಯುದ್ಧವನ್ನು ಮಾಡಬಾರದೆಂಬುದೇ ಇವನ ಮುಖ್ಯ ಉದ್ದೇಶ. ಆದ ರಿಂದಲೇ ನಿಮ್ಮೊಡನೆ ಧರ್ಮವಾದ ಕೌಲನ್ನು ಮಾಡಿಕೊಳ್ಳುವುದಕ್ಕೆ ಅವನು ಸಿದ್ಧನಾಗಿರುತ್ತಾನೆ. ನಿಮ್ಮ ಸೈನ್ಯಗಳನ್ನು ನೋಡಿ ಭಯಪಟ್ಟು ಸಮಾಧಾನ ಮಾಡಿಕೊಳ್ಳುತ್ತಾನೆಂದು ನೀವು ತಿಳಿದುಕೊಂಡರೆ ಅದು ತಪ್ಪು. ಅವನು ಮಹಾಪರಾಕ್ರಮಶಾಲಿ. ಅಧರ್ಮವನ್ನು ಮಾಡಕೂಡದೆಂಬ ಭಯವು ಅವನಿಗಿರುವುದೇ ಹೊರ್ತು ಧರ್ಮವಾದ ಯುದ್ಧ ಮಾಡುವುದಕ್ಕೆ ಅವನಿಗೆ ಲೇಶವೂ ಭಯವಿರುವುದಿಲ್ಲ. ನಿಮಗೆ ಅನ್ಯಾಯವು ಮಾಡಲ್ಪಟ್ಟಿತೆಂದು ಅವನು ತಿಳಿದುಕೊಂಡಿರುವನು. "ನಾನು ಅನ್ಯಾಯಮಾಡಿರುತ್ತೇನೆ. ನ್ಯಾಯವನ್ನು ಮಾಡಿ ಕ್ಷಮಾಪಣೆಯನ್ನು ಕೇಳಿಕೊಳ್ಳುವುದಕ್ಕೆ ಸಿದ್ಧನಾಗಿರುತ್ತೇನೆ. ಯಾವುದು ಧರ್ಮವೆಂದು ಉಭಯ ಕಕ್ಷಿಗಳಲ್ಲಿಯೂ ನಿಸ್ಪೃಹರಾದ ಹತ್ತು ಜನಗಳು ಹೇಳುವರೋ ಅದಕ್ಕೆ ನಾನು ಒಪ್ಪುತ್ತೇನೆ. ಧರ್ಮವಾದ ಕೌಲು ಮಾಡಲ್ಪಡಲಿ. ಕೋಪತಾಪಗಳು ಪರಿಹಾರವಾಗಲಿ. ಶಾಂ

ತಿಯು ಉಂಟಾಗಲಿ. ಪರಸ್ಪರ ಪ್ರೀತಿಯೂ, ಸೌಹಾರ್ದವೂ ಉಂಟಾಗಲಿ. ಉಭಯ ಕಕ್ಷಿಯವರೂ ನಿರ್ಭಯವಾಗಿ ಪರಸ್ಪರ ಪ್ರೀತಿಯಿಂದ ಬದುಕಲಿ'' ಎಂದು ಮನೋವಾಕ್ಕರ್ಮಗಳಲ್ಲಿಯೂ ಒಂದೇ ವಿಧವಾಗಿ ಲೇಶವೂ ಕೃತ್ರಿಮವಿಲ್ಲದೆ ಹೇಳು ತ್ತಾನೆ. ಆತನ ಪಕ್ಷವಾಗಿ ಸಮಾಧಾನದ ಒಡಂಬಡಿಕೆಗಳನ್ನು ಅವನ ಸಮ್ಮತಿ ಯಿಂದ ನಾನು ನಿಮಗೆ ತಿಳಿಸುತ್ತೇನೆ. ನಿಮ್ಮ ದೇಶಕ್ಕೆ ಕ್ರೀಟರು ನುಗ್ಗಿರುವುದು ಹೇಗೆ ಅನ್ಯಾಯವೋ ಅವರ ದೇಶಕ್ಕೆ ಮಾಂಡೂರಿಯನ್ನರು ನುಗ್ಗುವುದು ಅನ್ಯಾಯ. ಸರಹದ್ದುಗಳಲ್ಲಿರತಕ್ಕ ದುರ್ಗಗಳಲ್ಲಿ ತಾಟಸ್ಥ್ಯವನ್ನು ವಹಿಸತಕ್ಕವರ ಸೈನ್ಯಗಳಿರಲಿ. ನೆಸ್ಟರು, ಫೈಲೋಕ್ಟೀಟಸ್ ಮೊದಲಾದ ಗ್ರೀಸ್ ದೇಶೀಯರು ಮಾಂಡೂರಿಯನ್ನ ರಲ್ಲ. ಇವರು ಕ್ರೀಟರೂ ಅಲ್ಲ. ಇವರು ತಟಸ್ಥರು. ಆದರೂ ಇವರು ನಿಮ್ಮ ಕಡೆಯವರು. ಇಡುಮಿಾನಿಯಸ್ಸನ ಮೇಲೆ ಯುದ್ಧ ಮಾಡುವುದಕ್ಕೆ ನಿಮ್ಮ ಜೊತೆ ಯಲ್ಲಿ ಸೇರಿರುವರು. ಈ ಘಾಟಿಗಳ ದ್ವಾರದಲ್ಲಿರತಕ್ಕ ದುರ್ಗಗಳೆಲ್ಲಾ ಇವರ ವಶಕ್ಕೆ ಬಿಡಲ್ಪಡುವುವು. ಅವರು ಈ ದುರ್ಗಗಳಲ್ಲಿ ತಮ್ಮ ಸೈನ್ಯಗಳನ್ನಿಟ್ಟುಕೊಂಡು ಇರಲಿ. ಇದರಿಂದ ಕ್ರೀಟರು ನಿಮ್ಮ ದೇಶಕ್ಕೆ ಬರುವುದು ಹೇಗೆ ಅಸಾಧ್ಯವಾಗು ವುದೋ ಅವರ ದೇಶದ ಮೇಲೆ ಬೀಳುವುದು ನಿಮಗೂ ಅಸಾಧ್ಯವಾಗುವುದು. ನ್ಯಾ ಯದ ತಕ್ಕಡಿಯು ತಟಸ್ಥರಾದ ಈ ಗ್ರೀಸ್ ದೇಶೀಯರಿಂದ ಹಿಡಿದುಕೊಳ್ಳಲ್ಪಡಲಿ. ಈ ಒಡಂಬಡಿಕೆಗಳು ಜಾರಿಗೆ ಬರುವುದಿಲ್ಲವೆಂದು ನೀವು ತಿಳಿದುಕೊಂಡಿರಬಹುದು. ಇದು ಶುದ್ಧ ತಪ್ಪು. ಇಡುಮಿಾನಿಯಸ್ಸನು ಇದಕ್ಕೆ ಪುನಃಪೂರ್ತಿಯಾಗಿ ಒಪ್ಪಿರು ವನು. ಈ ಕೌಲಿನಂತೆ ನಡೆಯುವುದಕ್ಕೆ ಇಡುಮಿಾನಿಯಸ್ಸನು ಒಪ್ಪಿ ಹೇಗೆ 12 ಜನ ಕ್ರೀಟರನ್ನೂ ನಮ್ಮನ್ನೂ ಜಾಮಿಾನಾಗಿ ಕೊಡುವನೋ ಹಾಗೆ ಮಾಂಡೂರಿಯ ನ್ನರೂ ಕೂಡ ಈ ಕೌಲಿಗೆ ಒಪ್ಪುವುದಾದರೆ ಅದೇ ರೀತಿಯಲ್ಲಿ ಜಾಮಿಾನನ್ನು ಕೊಡ ಬೇಕು. ಈ ರೀತಿಯಲ್ಲಿ ನ್ಯಾಯವಾದ ಕೌಲು ಮಾಡಲ್ಪಟ್ಟು ಜಾಮಿಾನುಗಳು ಕೊಡಲ್ಪಟ್ಟರೆ ಅನಂತರ ಭಯಪಡತಕ್ಕದ್ದೇನಿರುತ್ತದೆ? ನಿಮಗೆ ಇಡುಮಿಾನಿಯಸ್ಸಿ ನಲ್ಲಿ ನಂಬಿಕೆ ಇರುವುದಿಲ್ಲ. ಅವನು ಪ್ರಾಮಾಣಿಕನು. ಅವನಿಗೆ ನಿಮ್ಮಲ್ಲಿ ನಂಬಿಕೆ ಇರುವುದು. ಧರ್ಮವಾದ ಒಡಂಬಡಿಕೆಗಳಲ್ಲಿ ನೀವ್ಯಾವುದನ್ನು ಹೇಳಿದಾಗ್ಯೂ ಅದಕ್ಕೆ ಒಪ್ಪುವುದಕ್ಕೆ ಅವನು ಸಿದ್ಧನಾಗಿರುತ್ತಾನೆ. ಆದರೆ ಒಂದು ವಿಷಯ ವನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅವನು ಭಯದಿಂದ ರಾಜಿಗೆ ಬಂದಿ

ರುವನೆಂದು ನೀವು ತಿಳಿದುಕೊಂಡು ಇರತಕ್ಕ ಪಕ್ಷದಲ್ಲಿ ಈ ಕೌಲಿಗೆ ಅವನು ಒಪ್ಪುವುದಿಲ್ಲ. ಅವನ ಕಡೆಯುವರೂ ಒಪ್ಪುವುದಿಲ್ಲ. ನಾನೂ ಒಪ್ಪುವುದಿಲ್ಲ. ಟೆಲಿಮಾಕಸ್ಸನೂ ಒಪ್ಪುವುದಿಲ್ಲ. ನಮ್ಮ ಕೋಪ ತಾಪಗಳಿಂದ ಅರ್ಥಹಾನಿ, ಮಾನಹಾನಿ, ಪ್ರಾಣಹಾನಿಗಳು ಆಗಬಾರದೆಂಬುದಾಗಿಯೂ, ಉಭಯ ಕಕ್ಷಿಯು ವರೂ ಸುಖವಾಗಿರಬೇಕೆಂಬುದಾಗಿಯೂ ಈ ಸಲಹೆಯು ಮಾಡಲ್ಪಟ್ಟಿರುವುದು. ಇಡುಮಿಾನಿಯುಸ್ಸನು ಆದಿಭಾಗದಲ್ಲಿ ಪ್ರಮಾದವಶದಿಂದ ಕೆಲವು ತಪ್ಪುಗಳನ್ನು ಮಾಡಿದನು. ಅದನ್ನು ಒಪ್ಪಿಕೊಂಡು ನಿಮ್ಮ ನಷ್ಟವನ್ನು ಕಟ್ಟಿಕೊಟ್ಟು ಧರ್ಮ ವಾದ ಕೌಲನ್ನು ಮಾಡಿಕೊಳ್ಳಬೇಕೆಂದು ಅವನು ಸಂಕಲ್ಪ ಮಾಡಿ ಇದ್ದಾನೆ. ತಾನು ಮಾಡಿದ ತಪ್ಪನ್ನು ಅವನು ಆಚ್ಛಾದಿಸಿಕೊಂಡಿಲ್ಲ. ದುರಹಂಕಾರದಿಂದ ತಾನು ಮಾಡಿದ ತಪ್ಪನ್ನು ನೆಪ್ಪೆಂದು ಅವನು ಸಾಧಿಸುತ್ತಲಿಲ್ಲ. ತನ್ನ ಲಾಭವೇ ದೊಡ್ಡ ದೆಂದು ಅವನು ಹಟವನ್ನು ಹಿಡಿದು ಇಲ್ಲ. ಮಾಡಿದ ತಪ್ಪುಗಳನ್ನು ಒಪ್ಪಿಕೊಂಡು ಅದಕ್ಕೆ ಪ್ರತಿಫಲವನ್ನು ಕೊಡುವುದಕ್ಕೆ ಸಿದ್ಧನಾಗಿರುತ್ತಾನೆ. ಇದಕ್ಕೆ ಪ್ರಾಮಾಣಿ ಕತೆಯು ಕಾರಣವೇ ಹೊರತು ಭಯವು ಕಾರಣವಲ್ಲ. ಭಯವೇ ಕಾರಣವೆಂದು ನೀವು ತಿಳಿದುಕೊಳ್ಳತಕ್ಕ ಪಕ್ಷದಲ್ಲಿ ಯುದ್ಧವು ಮಾಡಲ್ಪಡಲಿ ಅವನ ಅಪರಾಧ ದಿಂದ ಅವನು ವಿಮುಕ್ತನಾಗಿರುವನು. ಧರ್ಮವಾದ ಸಮಾಧಾನವನ್ನು ನೀವು ತಿರ ಸ್ಕರಿಸಿದರೆ ಈ ಯುದ್ಧದಿಂದ ಆಗತಕ್ಕ ಅನರ್ಥಗಳಿಗೆ ನೀವೇ ಜವಾಬ್ದಾರರಾಗಬೇಕು. ಧರ್ಮವಾದ ಕೌಲಿಗೆ ಇಡುಮಿಾನಿಯುಸ್ಸನು ಸಿದ್ಧನಾಗಿರುವನು. ಹೀಗೆ ಸಿದ್ಧನಾ ಗಿರುವನೆಂದು ಅವನ ಪಕ್ಷವಾಗಿ ನಿಮಗೆ ನಾನು ವಿಜ್ಞಾಪಿಸಿರುವೆನು. ಈ ವಿಜ್ಞಾ ಪನೆಯಿಂದ ಅವನ ಅಪರಾಧಗಳಿಗೆ ಪ್ರಾಯಶ್ಚಿತ್ತವು ಮಾಡಲ್ಪಟ್ಟಂತಾಯಿತು. ಅದಕ್ಕೆ ನೀವು ಒಪ್ಪದಿದ್ದರೆ ಮುಂದಾಗತಕ್ಕ ಪಾಪಕೃತ್ಯಗಳಿಗೆ ಜವಾಬ್ದಾರಿಯನ್ನು ನೀವು ವಹಿಸಿದಂತಾಯಿತು. ಯುದ್ಧವನ್ನು ಮಾಡುವುದೇ ಸರಿ ಎಂದು ನೀವು ನಿಶ್ಚಯಿಸಿ ದರೆ ಯುದ್ಧವು ಆಗಲಿ. ನಾನೂ, ಟೆಲಿಮಾಕಸ್ಸನೂ ಇಡುಮಿಾನಿಯುಸ್ಸನ ಪಕ್ಷ ವನ್ನು ಈ ಯುದ್ಧದಲ್ಲಿ ವಹಿಸುವೆವು. ನ್ಯಾಯವಾದ ಕೌಲಿಗೆ ನಾವು ಒಪ್ಪುವೆವು. ಅದಕ್ಕೆ ನೀವು ಮಾತ್ರವೇ ಸಾಕ್ಷಿಯಲ್ಲ. ಸರ್ವಾಂತರ್ಯಾಮಿಯಾದ ಜಗದೀಶ್ವರನು ಸಾಕ್ಷಿಯಾಗಿರುವನು.

ಈ ರೀತಿಯಲ್ಲಿ ಹೇಳಿ ಮೆಂಟರನು ಸಮಾಧಾನದ ಬಾವುಟವನ್ನು ಎತ್ತಿ

ಮೇಲಕ್ಕೆ ಹಿಡಿದು 'ನಿಮ್ಮ ಸಂಕಲ್ಪವು ತಿಳಿಸಲ್ಪಡಲಿ' ಎಂದು ಹೇಳಿದನು. ಇವನ ಉಪನ್ಯಾಸವು ಘಂಟಾಘೋಷವಾಗಿ ಹೇಳಲ್ಪಟ್ಟಿತು. ಸದರಿ ಶಿಬಿರದಲ್ಲಿದ್ದ ಪ್ರತಿಯೊಬ್ಬನೂ ಇದನ್ನು ಕೇಳಿದನು. ಎಲ್ಲರೂ ಆಶ್ಚರ್ಯಪರವಶರಾದರು. ಎಲ್ಲರ ದೃಷ್ಟಿಯೂ ಈತನ ಮೇಲೆ ಬಿದ್ದಿತು. ಈತನ ತೇಜಸ್ಸನ್ನು ಎಲ್ಲರೂ ನೋಡಿದರು. ಉಪನ್ಯಾಸ ಮಾಡಿದಾಗ್ಗೆ ಇವನ ಕಣ್ಣುಗಳ ಕಾಂತಿಯು ಮಿಂಚಿನ ಕಾಂತಿಯಂತೆ ದಶದಿಕ್ಕುಗಳಿಗೂ ವ್ಯಾಪಿಸುತ್ತಿತ್ತು. ಇವನ ಮಾತುಗಳಲ್ಲಿ ಧರ್ಮವು ಮೂರ್ತಿವತ್ತಾದಂತೆ ತೋರುತ್ತಿತ್ತು. ಇದನ್ನು ಕೇಳಿದ ಕೂಡಲೆ ಮಾಂಡೂರಿಯನ್ನರ ಕೋಪತಾಪಗಳು ಶಾಂತಿಯಾದವು. ಅವರ ಮನಸ್ಸುಗಳು ಫೆಸಿಫಿಕ್ ಸಾಗರದಂತೆ ಆದರ್ಶನ ಸ್ಥಿತಿಯನ್ನು ಹೊಂದಿದವು ಮಂತ್ರವಾದಿಗಳ ಸುತ್ತಲೂ ನಿಸರ್ಗವಾದ ಕಾರ್ಯವನ್ನು ಬಿಟ್ಟು ಹುಲಿ, ಕರಡಿ, ಕಿರುಬ, ಸಿಂಹ ಮೊದಲಾದವುಗಳು ಹೇಗೆ ಸುಪ್ರೀತವಾದ ನಾಯಿಗಳಂತೆ ನಡೆದುಕೊಳ್ಳುವುವೋ ಆ ರೀತಿಯಲ್ಲಿ ಯುದ್ಧಾಸಕ್ತಿಯಿಂದ ಪರವಶರಾಗಿದ್ದ ಮಾಂಡೂರಿಯನ್ನರು ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ ಈ ಅದ್ಭುತ ವ್ಯಕ್ತಿಯು ಮನುಷ್ಯನೇ ಅಥವಾ ದೇವರೇ ಎಂಬದಾಗಿ ಅನ್ನುವುದಕ್ಕುಪಕ್ರಮಿಸಿದರು. ಹಿಂದಿದ್ದವರೆಲ್ಲಾ ಒಬ್ಬರಮೇಲೊಬ್ಬರು ಬಿದ್ದು ಮುಂದಕ್ಕೆ ಬಂದು ಇವನ ದರ್ಶನಲಾಭವನ್ನು ಪಡೆಯುವುದರಲ್ಲಾಸಕ್ತರಾದರು. ಇವನ ಮುಖದಿಂದ ಹೊರಡತಕ್ಕ ಅಮೃತ ಪ್ರವಾಹವು ತಮಗೆ ಎಲ್ಲಿ ಕೇಳದೆ ಹೋಗುವುದೋ ಎಂದು ಎಲ್ಲರೂ ಲೇಶವೂ ಗಲಾಟೆಯನ್ನು ಮಾಡದೆ ಇದ್ದರು. ಹೇಳತಕ್ಕದ್ದನ್ನೆಲ್ಲಾ ಹೇಳಿ ಪೂರೈಸಿದ್ದಾಗ್ಯೂ ಇನ್ನೂ ಅವನಿಂದ ಅಮೃತಪ್ರಾಯವಾದ ಹಿತೋಪದೇಶವನ್ನು ಕೇಳಬೇಕೆಂಬ ಅಭಿಲಾಷೆಯು ಎಲ್ಲರಿಗೂ ಉಂಟಾಯಿತು. ಸರ್ವರಿಗೂ ಅವನಲ್ಲಿ ನಂಬಿಕೆಯು ಹೇಗೋ ಹಾಗೆ ಪ್ರೀತಿಯೂ ಕೂಡ ಹುಟ್ಟಿತು. ಉಸಿರು ಬಿಡುವುದರಲ್ಲಿಯೂ ಅನಾದರದಿಂದ ಅವನು ಹೇಳುವದನ್ನು ಕೇಳುತ್ತಿದ್ದರು. ಅವನ ಮಾತುಗಳಲ್ಲಿ ಯಾವದಾದರೂ ಒಂದು ಶಬ್ದ ಕೇಳದೇ ಹೋದೀತೆಂಬ ಭಯದಿಂದ ಲೇಶವೂ ಗಲಾಟೆಯಾಗದಂತೆ ನಡೆದುಕೊಂಡರು. ಎಲ್ಲರೂ ರೆಪ್ಪೆಯನ್ನು ಕೂಡ ಹೊಡೆಯದೆ ಅವನನ್ನು ನೋಡುತ್ತಿದ್ದರು. ಇವನ ಸಂಭಾಷಣವನ್ನು ಕೇಳಿದ ಮಾಂಡೂರಿಯನ್ನರ ಕೈಗಳಿಂದ ಅವರು ಹಿಡಿದಿದ್ದ ಶಸ್ತ್ರಾಸ್ತ್ರಗಳೆಲ್ಲಾ ಜಾರಿ ಕೆಳಗೆ ಬಿದ್ದವು. ಕ್ರೌರ್ಯಕ್ಕೆ ಯಾರು ಮಾತೃಸ್ಥಾನರಾಗಿದ್ದರೋ ಅಂಥಾ ಪಲಾಂಥಸ್ಸನೂ, ಲ್ಯಾಸಿಡಿಮೊನಿಯ

ನರೂ ಕೂಡ ಅಸಾಧಾರಣವಾದ ಪ್ರಸನ್ನತೆಯಿಂದ ಮೆಂಟರನಲ್ಲಿ ಅದ್ಭುತವಾದ ಪ್ರೀತಿಯನ್ನು ತೋರಿಸಿದರು. ಅಲ್ಲಿ ಸೇರಿದ್ದ ಸೈನಿಕರೆಲ್ಲರೂ ಕಣ್ಣೀರುಗಳನ್ನು ಸುರಿಸುತ್ತಾ ಮೆಂಟರು ಹೇಳಿದ್ದು ಸಾಧುವಾದದ್ದು ಎಂದು ಹೇಳಿದರು. ನೆಸ್ಟರು ಮೆಂಟರನ ಸಂಭಾಷಣೆಯನ್ನು ಕೇಳಿ ಸಂತೋಷಪರವಶನಾದನು. ಪ್ರತ್ಯುತ್ತರವನ್ನು ಕೊಡುವುದಕ್ಕೆ ಅವನಿಗೆ ಶಕ್ತಿಯು ಉಂಟಾಗಲಿಲ್ಲ ಅವನನ್ನು ಆಲಿಂಗಿಸಿಕೊಂಡು ತನ್ಮೂಲಕ ತನ್ನ ಸಂತೋಷಾತಿಶಯವನ್ನು ತೋರಿಸಿದನು. 'ಎಲೈ ಪರದೇಶಿಯೇ, ನಿನ್ನ ವಿವೇಕದಿಂದ ನೀನು ನಮ್ಮನ್ನು ಜಯಿಸಿರುವೆ ನಮ್ಮಲ್ಲಿ ಪರಿಪೂರ್ಣವಾದ ಶಾಂತಿಯನ್ನುಂಟುಮಾಡಿರುವೆ. ನಮ್ಮ ಭಾಗ್ಯವೇ ನಿನ್ನ ರೂಪದಲ್ಲಿ ನಮ್ಮ ಕ್ಷೇಮಾರ್ಥವಾಗಿ ಬಂದಿರಬೇಕು. ನಮ್ಮ ಕ್ಷೇಮಚಿಂತೆಯು ನಮಗಿರುವುದಕ್ಕಿಂತಲೂ ನಿನಗೆ ಹೆಚ್ಚಾಗಿರುವುದು. ನಿನ್ನ ವಾಕ್ಯೇ ವೇದವಾಕ್ಯ. ನಾವ್ಯಾರೂ ನಿನ್ನ ಹಿತೋಪದೇಶದ ಮೇರೆಗಳನ್ನು ಮೀರಿ ನಡೆಯುವುದಿಲ್ಲ. ನೀನು ನಿಸ್ಪೃಹಶಿಖಾಮಣಿ. ಸರ್ವಸಮದೃಷ್ಟಿಯುಳ್ಳವರಲ್ಲಿ ನೀನು ಅಗ್ರಗಣ್ಯನು. ನೀನು ದೇವರಿಗೆ ಸಮಾನನಾದವನು. ನಿನ್ನ ವಿಧಿಗೆ ಅನುಸಾರವಾಗಿ ನಡೆಯುವುದಕ್ಕೆ ನಾವು ಸಿದ್ಧರಾಗಿರುತ್ತೇವೆ. ಈ ಕೌಲಿನ ಒಡಂಬಡಿಕೆಗಳು ನಡೆಯುವುದಕ್ಕೆ ಜಾಮೀನುದಾರನಾಗಿ ನೀನು ಒಪ್ಪಿದ್ದಾಗ್ಯೂ ನಿನ್ನನ್ನು ನಮ್ಮ ಮನೆದೇವರಂತೆ ಪೂಜಿಸಿ ಕೃತಾರ್ಥರಾಗುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ' ಎಂದು ಸೈನ್ಯಗಳ ಮುಖಂಡರೇ ಮೊದಲಾದವರು ಹೇಳಿದರು. ಅನಂತರ ನೆಸ್ಟರು ಮಾತನಾಡುವುದಕ್ಕೆ ಪ್ರಯತ್ನ ಮಾಡಿದನು. ಮೆಂಟರು ಅಪ್ಪಣೆ ಕೊಡಿಸಿದ್ದಕ್ಕೆ ಪ್ರತಿಯಾಗಿ ಇವನೇನಾದರೂ ಹೇಳುವನೆಂಬ ಭಯದಿಂದ ಸೈನ್ಯದ ಮುಖಂಡರು ಹೇಳಿದ್ದೇನಂದರೆ—"ಮೆಂಟರು ಹೇಳಿದ್ದನ್ನು ಅನುಮೋದಿಸುವುದಾದರೆ ನೀನು ಮಾತನಾಡಬಹುದು, ಹಾಗಿಲ್ಲದಿದ್ದರೆ ಮಾತನಾಡಕೂಡದು. ಮೆಂಟರನ ಉಪದೇಶವೇ ಅಖೈರು ಸಂಭಾಷಣೆಯಾಗಿ ಇರಬೇಕು. ಅದನ್ನು ಅನುಮೋದಿಸುವುದಾದರೆ ಮಾತನಾಡಬಹುದು" ಎಂದು ಹೇಳಿದರು. ಇವರ ಮನೋಭಾವವನ್ನು ನೋಡಿ ಆಶ್ಚರ್ಯಪಟ್ಟು ನೆಸ್ಟರನು ಮೆಂಟರನ್ನು ಕುರಿತು ಹೇಳಿದ್ದೇನಂದರೆ:—ಎಲೈ ಮೆಂಟರೆ, ನಿನ್ನ ಮಹಿಮೆಯು ನನಗೆ ಪರಮಾಶ್ಚರ್ಯವನ್ನುಂಟುಮಾಡಿರುವುದು. ಈ ಜನಗಳೆಲ್ಲರೂ ಇಡೆ ಮೀನಿಯುಸ್ಸಿನಲ್ಲಿ ಬಹಳ ಕೋಪವುಳ್ಳವರಾಗಿದ್ದರು. ನಿನ್ನಲ್ಲಿಯೂ ಅನುರಕ್ತರಾಗಿರಲಿಲ್ಲ. ನೀನು ಮಾತನಾಡುವುದಕ್ಕೆ ಉಪಕ್ರಮ ಮಾಡಿ

ದಾಗ ಗೊಣಗುಟ್ಟುತ್ತಿದ್ದರು. ನಿನ್ನ ಸಂಭಾಷಣದಿಂದ ಇವರೆಲ್ಲರನ್ನೂ ನಿನ್ನಲ್ಲಿ ಅನುರಕ್ತರಾಗುವಂತೆ ಮಾಡಿಕೊಂಡಿರುವೆ. ನಿನ್ನ ಮಾತಿಗೆ ವಿರೋಧವಾಗಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದು ಇವರು ಏಕಮತ್ಯದಿಂದ ಹೇಳುತ್ತಲಿದ್ದಾರೆ. ಇದು ಬಹಳ ಆಶ್ಚರ್ಯ. ಸಜ್ಜನರ ಮಾತುಗಳಿಗೆ ಪ್ರತಿಕಕ್ಷಿಗಳು ಕೂಡ ಹೇಗೆ ಅಧೀನರಾಗುವರೋ ಅದು ಈಗ ಗೊತ್ತಾಯಿತು. ಧರ್ಮಿಷ್ಟರ ಹಿತೋಪದೇಶದಿಂದ ಕೋಪ ತಾಪಗಳು ಶಾಂತಿಯಾಗಿ ದ್ವೇಷವು ಸ್ನೇಹವಾಗಿ ಪರಿಣಮಿಸುವುದು. ಕೋಪವು ಶಾಂತಿಯಾಗಿ ಪರಿಣಮಿಸುವುದು. ನೀನು ಏರ್ಪಡಿಸುವ ಸಮಾಧಾನಕ್ಕೆ ನಾವೂ ಒಪ್ಪುತ್ತೇವೆ. ಈ ರೀತಿಯಲ್ಲಿ ನೆಸ್ಟರನು ಹೇಳಿದ ಕೂಡಲೇ ಸರ್ವರೂ ನಾವೂ ಒಪ್ಪುತ್ತೇವೆಂದು ಕೈ ಎತ್ತಿದರು.

ಕೂಡಲೇ ಮೆಂಟರನು ಸ್ಕ್ಯಾಲೆಂಟಿಮ್ ಕೋಟೆಯ ಬಾಗಿಲುಗಳನ್ನು ತೆಗೆಯಿಸಿದನು. ನೆಸ್ಟರನು ಟೆಲಿಮಾಕಸ್ಸನ ಬಳಿಗೆ ಹೋಗಿ ಅವನನ್ನು ಆಲಿಂಗನೆ ಮಾಡಿಕೊಂಡು ಹೇಳಿದ್ದೇನೆಂದರೆ, "ಎಲೈ ಮಗುವೇ! ನಿನ್ನ ತಂದೆಯು ಗ್ರೀಸ್ ದೇಶದ ಪ್ರಭುಗಳಲ್ಲಿ ಅತ್ಯಂತ ವಿವೇಕಶಾಲಿಯಾಗಿದ್ದನು. ದೇವರು ಅವನಿಗೆ ಅನುಗ್ರಹಿಸಿದ ವಿವೇಕವನ್ನು ನಿನಗೂ ಕೊಡಲಿ. ನಿನ್ನನ್ನು ನೋಡಿದರೆ ಯೂಲಿಸಿಸ್ಸನನ್ನು ನೋಡಿದಂತೆಯೇ ಆಗುವುದು. ಇಡುಮಿನಾಸಿಯುಸ್ಸನ ವಿಷಯದಲ್ಲಿ ನಮಗಿದ್ದ ಅಸಮಾಧಾನವು ಪರಿಹರಿಸಲ್ಪಡುವುದಕ್ಕೆ ನೀನೂ ಮೆಂಟರೂ ಕಾರಣಭೂತರಾದಿರಿ. ಫಿಲಾಂತಸ್ಸನು ಭಯಂಕರವಾದ ಸ್ವಭಾವವುಳ್ಳವನು. ನಿನ್ನನ್ನು ನೋಡಿ ಅವನು ಅತ್ಯಂತ ವಿಸ್ಮಿತನಾಗಿರುವನು. ಯೂಲಿಸಿಸ್ಸನ ಮಹಿಮೆಯನ್ನು ಕೇಳಿ ಆತನಲ್ಲಿ ಇವನು ಬಹಳ ಗೌರವವನ್ನಿಟ್ಟುಕೊಂಡಿರುವನು. ಆ ಗೌರವಕ್ಕೆ ನೀನು ಈಗ ಪಾತ್ರನಾಗಿರುವಿ. ಈ ಸೈನಿಕರೆಲ್ಲರೂ ನಿನ್ನ ಚರಿತ್ರೆಯನ್ನು ತಿಳಿದುಕೊಳ್ಳಬೇಕೆಂದು ಕುತೂಹಲವುಳ್ಳವರಾಗಿರುತ್ತಾರೆ." ಈ ರೀತಿಯಲ್ಲಿ ಹೇಳುತ್ತಿರುವಾಗ ಮೆಂಟರನು ಇಡುಮಿನಾಸಿಯಸ್‌ನನ್ನೂ, ಕ್ರೀಟ್ ದ್ವೀಪದ ಯುವಕನನ್ನೂ ತನ್ನ ಜೊತೆಯಲ್ಲಿ ಕರೆದುಕೊಂಡು ಬಂದನು.

ಇಡುಮಿನಾಸಿಯುಸ್ಸನನ್ನು ನೋಡಿದ ಕೂಡಲೆ ಅಲ್ಲಿ ನೆರೆದಿದ್ದ ಸೈನಿಕರಿಗೆ ಕೋಪವು ಸ್ವಲ್ಪಮಟ್ಟಿಗೆ ಅಂಕುರಿಸಿತು. ಕೂಡಲೇ ಮೆಂಟರು ಹೇಳಿದ್ದೇನೆಂದರೆ:—ಧರ್ಮವಾಗಿಯೂ, ಪರಮ ಪವಿತ್ರನಾಗಿಯೂ ಇರುವ ಕಾವಿಗೆ ಇಡುಮಿನಾಸಿಯುಸ್ಸನು ಒಪ್ಪಿರು

ವನು. ಇದಕ್ಕೆ ಸೂರ್ಯಚಂದ್ರರೇ ಮೊದಲಾದ ಗ್ರಹಗಳು ಹೇಗೋ ಹಾಗೆ ಪಂಚಭೂತಗಳೂ ಸಾಕ್ಷಿಯಾಗಿರುವುವು. ಅವಾಂಗ್ಮಾನಸಗೋಚರನಾದ ಜಗದೀಶ್ವರನು ಸಾಕ್ಷಿಯಾಗಿರುವನು. ಈ ಕೌಲಿನ ವಿಧಿಗಳನ್ನು ಯಾರು ಉಲ್ಲಂಘಿಸುವರೋ ಅವರು ಜಗದೀಶ್ವರನ ಶಿಕ್ಷೆಗೆ ಪಾತ್ರರಾಗುವರು. ಈ ಕೌಲಿನ ಒಡಂಬಡಿಕೆಗಳನ್ನು ಉಲ್ಲಂಘಿಸತಕ್ಕವರು ಪರಮ ನೀಚರು. ದೇವತೆಗಳ ನಿಗ್ರಹಕ್ಕೆ ಹೇಗೋ ಹಾಗೆ ಸತ್ಪುರುಷರ ನಿಗ್ರಹಕ್ಕೂ ಅವರು ಪಾತ್ರರಾಗುವರು. ಅವರ ಪಾಪಫಲವನ್ನು ಅವರು ಅನುಭವಿಸಬೇಕಾಗುವುದು. ಅವರಿಗೆ ಇಹಪರಗಳೆರಡೂ ತಪ್ಪುವುವು. ಬದುಕಿರುವಾಗ್ಯೆ ಅವರು ತಿರಸ್ಕಾರಕ್ಕೆ ಗುರಿಯಾಗುವರು. ಸತ್ತಮೇಲೆ ಅವರು ಮನುಷ್ಯರಿಂದಲೂ, ದೇವತೆಗಳಿಂದಲೂ ತಿರಸ್ಕರಿಸಲ್ಪಡುವರು. ಅವರಿಗೆ ಧರ್ಮವಾದ ಉತ್ತರಕ್ರಿಯೆಗಳು ಮಾಡಲ್ಪಡುವುದಿಲ್ಲ. ಅವರ ಶವಗಳು ನಾಯಿನರಿಗಳೇ ಮೊದಲಾದ ದುಷ್ಟಮೃಗಗಳಿಗೂ, ಹದ್ದುಗಳೇ ಮೊದಲಾದ ದುಷ್ಟಪಕ್ಷಿಗಳಿಗೂ ಆಹಾರವಾಗುವುವು. ಅವರ ಆತ್ಮವು ನಿರಂತರವಾಗಿ ನರಕಯಾತನೆಯನ್ನನುಭವಿಸುವುದು. ಯುದ್ಧವು ಪರಮ ನೀಚವಾದ ಕೆಲಸ ದುರಾತ್ಮರ ಪರಸ್ಪರ ದ್ವೇಷಕ್ಕೆ ನಿರಪರಾಧಿಗಳು ಬಲಿಯಾಗಬೇಕಾಗುತ್ತದೆ ವೃದ್ಧರಾದ ಅನೇಕರಿಗೆ ಇದರಿಂದ ಪುತ್ರಶೋಕ ಉಂಟಾಗುವುದು. ಸಾಧ್ವೀಗಳಾದ ಅನೇಕರಿಗೆ ಪತಿವಿಯೋಗವುಂಟಾಗುವುದು. ನಿರಪರಾಧಿಗಳಾದ ಅನೇಕ ಮಕ್ಕಳು ಅನಾಥರಾಗುವರು. ಕೃಷಿ, ಕೈಗಾರಿಕೆ, ವ್ಯಾಪಾರ ಮೊದಲಾದವುಗಳು ಹೀನಸ್ಥಿತಿಗೆ ಬರುವುವು. ಭೋಗ್ಯವಸ್ತುಗಳನ್ನು ನಿರ್ಮಾಣ ಮಾಡತಕ್ಕವರು ವಿರಳರಾಗುವರು. ಅವುಗಳ ಬೆಲೆಯು ಹೆಚ್ಚುವುವು. ಬಡವರು ಜೀವನಕ್ಕಿಲ್ಲದೆ ಕಷ್ಟಪಡುವ ಸ್ಥಿತಿಯು ಬರುವುದು. ನಿವಾರಣೀಯವಾದ ರೋಗಗಳಿಗೆ ಬಹು ಜನಗಳು ಗುರಿಯಾಗುವರು. ಅಕಾಲಮರಣಕ್ಕೆ ಬಹುಜನಗಳು ಗುರಿಯಾಗುವರು. ಧರ್ಮಕ್ಕೆ ಲೋಪವು ಬರುವುದು. ಅಧರ್ಮವು ಪ್ರಬಲವಾಗುವುದು. ಸಜ್ಜನರು ಕಷ್ಟಕ್ಕೆ ಗುರಿಯಾಗುವರು. ದುರ್ಜನರು ಹೆಚ್ಚುವರು. ಅನೇಕ ಮುಖ್ಯವಾದ ಅನರ್ಥಗಳಿಗೆ ಯುದ್ಧವು ಕಾರಣವಾಗುವುದು. ಇಂಥಾ ಅನರ್ಥಗಳನ್ನು ತಪ್ಪಿಸಬೇಕೆಂದು ನಾವು ಧರ್ಮವಾದ ಕೆಲಸವನ್ನು ಏರ್ಪಡಿಸಿರುತ್ತೇವೆ. ಈ ಕೌಲಿನಂತೆ ನಡೆದರೆ ದೇವರೂ, ಸಜ್ಜನರೂ ಸುಪ್ರೀತರಾಗುತ್ತಾರೆ. ಸರ್ವರೂ ಕೋಪತಾಪಗಳನ್ನು ಬಿಟ್ಟು ಶಾಂತಚಿತ್ತರಾಗಿ ಈ ಕೌಲಿನ ವಿಧಿಗಳಿಗೆ ಒಪ್ಪಿಕೊಂಡು, ಎಲ್ಲರೂ ಪರ

ಸ್ಪರ ಪ್ರೀತಿಯಿಂದ ಬದುಕಬೇಕು. ಎಲೈ ಇಹುಮಾನಿಯಸ್ಸನೇ, ನಿನ್ನ ಪ್ರತಿಕಕ್ಷಿಗಳಲ್ಲಿ ಅನೇಕರು ನಿನ್ನಲ್ಲಿ ನಂಬಿಕೆಯುಳ್ಳವರಾಗಿರುತ್ತಾರೆ. ನಿನ್ನ ಅಭಿಪ್ರಾಯವನ್ನು ತಿಳಿಸು.

ಮೆಂಟರು ಹೇಳಿದ್ದನ್ನು ಕೇಳಿ ಇಹುಮಾನಿಯಸ್ಸನು ಹೇಳಿದ್ದೇನೆಂದರೆ,-"ಎಲೈ ನೆಸ್ಟರೇ, ಎಲೈ ಮೊಂಡರೂಬಿಯನ್ನರೇ, ಎಲೈ ಲಾಸಿಡಿಮೋನಿಯನ್ನರೇ, ಎಲೈ ಧರ್ಮಿಷ್ಠರಾದ ಕಾಡುಜನರೇ, ಎಲೈ ನನ್ನ ಪ್ರತಿಕಕ್ಷಿಲೋಕಕ್ಕೆ ಸೇರಿದ ಮಹಾಜನಗಳೇ- ನನ್ನ ವಿಜ್ಞಾಪನೆಗಳನ್ನು ಲಾಲಿಸಿ. ಲೋಕದಲ್ಲಿ ಸಕಲ ಜನಗಳಿಗಿಂತಲೂ ಪೂರ್ಣ ಪರಜ್ಞಾನವಿಲ್ಲದ ಪ್ರಭುಗಳು ಬಹಳ ದುರದೃಷ್ಟವಂತರು. ಅವರು ನಿರಪರಾಧಿಗಳಾಗಿದ್ದಾಗ್ಯೂ, ಅವರ ಪರಿವಾರ ದೇವತೆಗಳ ಅಪರಾಧಗಳಿಗೆಲ್ಲಾ ಅವರು ಜವಾಬ್ದಾರರಾಗಬೇಕಾಗುತ್ತದೆ. ನನ್ನ ಗತಿಯು ಹೀಗಾಯಿತು. ನಿಮಗೆ ದ್ರೋಹವನ್ನು ಮಾಡಬೇಕೆಂದು ನಾನು ಯೋಚನೆಯನ್ನೂ ಕೂಡ ಮಾಡಲಿಲ್ಲ. ಆದಾಗ್ಯೂ ನಾನು ದ್ರೋಹಿ ಎಂಬದಾಗಿಯೂ, ವಂಚಕನೆಂಬದಾಗಿಯೂ, ಮೋಸಗಾರನೆಂಬದಾಗಿಯೂ, ನಂಬಿಕೆಗೆ ಅನರ್ಹನೆಂಬದಾಗಿಯೂ ನೀವು ತಿಳಿದುಕೊಳ್ಳುವಂತೆ ಆಯಿತು. ಇದೇ ದುರದೃಷ್ಟವೆಂಬುವುದು. ನಾವು ಮಾಡಬೇಕಾದುದನ್ನು ಮಾಡದೇ ಬಿಟ್ಟರೂ, ಮಾಡಬಾರದ್ದನ್ನು ಮಾಡಿದರೂ, ಅದಕ್ಕೆ ಅನುರೂಪವಾದ ಫಲವು ತಪ್ಪುವುದಿಲ್ಲ. ನಾನು ಮೈನಾಸನ ಸಂತತಿಯವನು. ಅವನ ಧರ್ಮಗಳಂತೆ ನಡೆಯಬೇಕೆಂದು ಸಂಕಲ್ಪಮಾಡಿರುವೆನು. ಈ ಸಂಕಲ್ಪಕ್ಕೆ ಪ್ರತಿಬಂಧಕಗಳು ಅನೇಕವಾಗಿ ಉಂಟಾದವು. ಹೀಗಾಗುವುದಕ್ಕೆ ನಾನೇ ಕಾರಣ. ಆಲಸ್ಯದಿಂದ ಅಮೃತವು ವಿಷವಾಗುವುದೆಂದು ಹಿರಿಯರು ಹೇಳುತ್ತಾರೆ. ನಿಮಗೆ ನಾನು ಮಾಡಿದ ವಾಗ್ದಾನವನ್ನು ಕೂಡಲೇ ಪರಿವಾರದವರಿಗೂ, ಸೈನಿಕರಿಗೂ ನಾನು ತಿಳಿಸಲಿಲ್ಲ. ಇದರಿಂದ ನನ್ನ ಕಡೆಯವರು ನಾನು ನಿಮಗೆ ಪ್ರತಿಕಕ್ಷಿಯೆಂದು ತಿಳಿದುಕೊಂಡು, ನನ್ನ ಸಂಕಲ್ಪಕ್ಕೆ ವಿರೋಧವಾಗಿ ನಡೆದರು. ಇದರಿಂದ ನಾನು ವಂಚಕನೆಂಬದಾಗಿಯೂ, ದ್ರೋಹಿಯೆಂಬದಾಗಿಯೂ, ಮೈನಾಸನ ವಂಶಕ್ಕೆ ಅನರ್ಹನೆಂಬದಾಗಿಯೂ ನೀವು ತಿಳಿದುಕೊಳ್ಳುವುದಕ್ಕೆ ಅವಕಾಶವಾಯಿತು. ಪ್ರಭುತ್ವ ಮಾಡತಕ್ಕವರು ಆಲಸ್ಯವನ್ನು ಮಾಡಬಾರದು. ಹಾಗೆ ಮಾಡಿದರೆ ಅದರ ಫಲವನ್ನು ಅನುಭವಿಸಬೇಕು. ಈ ಫಲವನ್ನು ಅನುಭವಿಸುವ ಸ್ಥಿತಿಯು ಬಂದಿತ್ತು. ದೇವರಿಗೆ ನನ್ನಲ್ಲಿ ಪ್ರೀತಿಯು ಇರುವುದು. ಹಾಗಿ

ಲ್ಲದಿದ್ದರೆ ನನ್ನ ರಕ್ಷಣೆಗೋಸ್ಕರ ಈ ಮೆಂಟರರೂ, ಟೆಲಿಮಾಕಸ್ಸೂ ಎಂದಿಗೂ ಬರುತ್ತಿರಲಿಲ್ಲ. ನಾನೂ, ನನ್ನ ಜನಗಳೂ ಮಾತ್ರವೇ ಅಲ್ಲದೆ ನೀವು ಕೂಡ ಜಗದೀಶ್ವರನ ಅನುಗ್ರಹಕ್ಕೆ ಪಾತ್ರರೆಂದು ನನಗೆ ತೋರುತ್ತದೆ. ಹಾಗಿಲ್ಲದಿದ್ದರೆ ಮೆಂಟರನ ಮತ್ತು ಟೆಲಿಮಾಕಸ್ಸನ ಸಹಾಯವು ನಿಮಗೂ ದೊರೆಯುತ್ತಲಿರಲಿಲ್ಲ. ನಮ್ಮಿಬ್ಬರಿಗೂ ಯುದ್ಧವಾಗುತ್ತಿತ್ತು. ಈ ಯುದ್ಧದಲ್ಲಿ ಅನೇಕರು ಮಡಿಯುತ್ತಿದ್ದರು. ಮೆಂಟರನ ಅನುಗ್ರಹದಿಂದ ಈ ಅನರ್ಥಗಳೆಲ್ಲ ತಪ್ಪಿದವು. ನಾನು ಧರ್ಮದಿಂದ ನಡೆಯುವುದಕ್ಕೋಸ್ಕರ ಮೆಂಟರರೂ, ಟೆಲಿಮಾಕಸ್ಸೂ ಜಾಮೀನ್ದಾರರಾಗಿರುವರು. ಅವರ ಜಾಮೀನನ್ನು ಬಿಡುಗಡೆ ಮಾಡಿ, ಅವರ ಸ್ಥಾನದಲ್ಲಿ ನನ್ನನ್ನು ಪರಿಗ್ರಹಿಸಿ, ಈ ಕೌಲಿನ ಒಡಂಬಡಿಕೆಗಳು ಉಲ್ಲಂಘಿಸಲ್ಪಡುವುದಿಲ್ಲವೆಂದು ನಿಮಗೆ ಸಂಪೂರ್ಣವಾದ ನಂಬಿಕೆಯು ಉಂಟಾಗುವವರೆಗೂ ನನ್ನನ್ನು ನಿಮಗೆ ಯುಕ್ತವಾಗಿ ತೋರುವ ರೀತಿಯಲ್ಲಿ ನೀವು ಜಾಮೀನ್ದಾರನನ್ನಾಗಿ ಇಟ್ಟುಕೊಂಡಿರಬಹುದು. ಇದಕ್ಕೆ ನಾನು ಒಪ್ಪುತ್ತೇನೆ. ನನ್ನ ಜನಗಳೆಲ್ಲರೂ ಒಪ್ಪಿ ಇರುತ್ತಾರೆ.

ಈ ರೀತಿಯಲ್ಲಿ ಇಡುಮಿನಿಯುಸ್ಸನು ಹೇಳಿದ ಕೂಡಲೇ ಅವನ ಬಂಧುಮಿತ್ರ ವರ್ಗದವರೂ ಅವನ ಸೈನ್ಯದ ಮುಖಂಡರೂ ಇಡುಮಿನಿಯುಸ್ಸನು ಹೇಳಿದುದಕ್ಕೆ ನಾವು ಒಪ್ಪಿ ಇರುತ್ತೇವೆಂದು ಹೇಳಿದರು. ಕೂಡಲೇ ಪ್ರತಿಕಕ್ಷಿಯವರೆಲ್ಲರೂ "ನಮಗೆ ಮೆಂಟರು, ಟೆಲಿಮಾಕಸ್ಸನು ಜಾಮೀನಾಗುವುದು ಅವಶ್ಯಕವಿಲ್ಲ. ಇಡುಮಿನಿಯುಸ್ಸನೂ ಕೂಡ ಜಾಮೀನಾಗುವುದು ಅವಶ್ಯಕವಿಲ್ಲ. ಪ್ರಮಾದವಶದಿಂದ ಮನಸ್ತಾಪವು ಉಂಟಾಗಿತ್ತು. ಈಗ ಮನಸ್ತಾಪವು ಪರಿಹಾರವಾಯಿತು. ಸೌಹಾರ್ದವೂ, ಪರಸ್ಪರ ಪ್ರೀತಿಯೂ ಉಂಟಾಯಿತು. ಸಮಾಧಾನದ ಒಡಂಬಡಿಕೆಗಳಿಗೆ ಉಭಯ ಕಕ್ಷಿಯ ಪ್ರತಿನಿಧಿಗಳಿಂದಲೂ ರುಜು ಮಾಡಲ್ಪಡಲಿ. ಮೆಂಟರು ಒಪ್ಪಿದ ಒಡಂಬಡಿಕೆಗಳು ವೇದವಾಕ್ಯಗಳಾಗಿದ್ದರೆ ಹೇಗೋ ಹಾಗೆ ನಾವೂ ಒಪ್ಪುತ್ತೇವೆ" ಎಂದು ಹೇಳಿದರು.

ಇದಕ್ಕೆ ಉಭಯ ಕಕ್ಷಿಯವರೂ ಸಂತೋಷಪಟ್ಟರು. ಈ ಕೌಲಿಗೆ ಉಭಯ ಪಂಗಡದಿಂದಲೂ 13 ಜನಗಳಂತೆ ಜಾಮೀನುದಾರರು ಕೊಡಲ್ಪಟ್ಟರೆ ಸಾಕೆಂಬದಾಗಿಯೂ, ಇಡುಮಿನಿಯುಸ್ಸನಿಗೆ ಹಿತೋಪದೇಶವನ್ನು ಮಾಡುವುದಕ್ಕೆ ಮೆಂಟರು

ಅವನ ಬಳಿಯಲ್ಲಿರಲೆಂಬದಾಗಿಯೂ, ಪ್ರತಿಕಕ್ಷಿಯವರಿಗೆ ಹಿತೋಪದೇಶವನ್ನು ಮಾಡುವುದಕ್ಕೆ ಕೆಲವು ದಿವಸಗಳವರೆಗೂ ಟೆಲಿಮಾಕಸ್ಸನ ಸಹಾಯವು ಕೊಡಲ್ಪಡಲೆಂಬದಾಗಿಯೂ, ದೇಶವು ತಹಬಂದಿಗೆ ಬಂದ ಕೂಡಲೇ ಎಲ್ಲಾ ಸಂಗಡದವರೂ ಸೇರಿ ಮೆಂಟರು ಮತ್ತು ಟೆಲಿಮಾಕಸ್ಸರಿಗೆ ಸತ್ಕಾರವನ್ನು ಮಾಡಿ, ಬೇಕಾದ ಸಹಾಯಗಳನ್ನು ಕೊಟ್ಟು, ಇಥಾಕಾ ದ್ವೀಪಕ್ಕೆ ಕಳುಹಿಸಬಹುದೆಂಬದಾಗಿಯೂ ನಿಷ್ಕರ್ಷೆ ಮಾಡಲ್ಪಟ್ಟಿತು. ಈ ಕೌಲಿನಿಂದ ಉಭಯ ಸಂಗಡದವರಿಗೂ ಅತ್ಯಂತ ಸಂತೋಷ ಉಂಟಾಯಿತು. ಇಡುಮಿನಿಯಸ್ಸನು ಗ್ರೀಕರೇ ಮೊದಲಾದವರನ್ನು ತನ್ನ ಪಟ್ಟಣಕ್ಕೆ ಕರೆದು ಔತಣವನ್ನು ಮಾಡಿದನು. ಅಸಾಧಾರಣವಾದ ಸಂತರ್ಪಣೆಯು ಮಾಡಲ್ಪಟ್ಟಿತು. ಮಾಂಡೂರಿಯನ್ನರು, ಗ್ರೀಕರು ಇವರೇ ಮೊದಲಾದ ಪ್ರತಿಕಕ್ಷಿ ಸಂಗಡದವರಿಗೆಲ್ಲಾ ರಾಜಯೋಗ್ಯವಾದ ಸಂತರ್ಪಣೆಯು ಮಾಡಲ್ಪಟ್ಟಿತು. ಉಡುಗೆ-ತೊಡಿಗೆಗಳೂ, ಖಿಲ್ಲತ್ತುಗಳೂ ಪ್ರತಿಯೊಬ್ಬರಿಗೂ ಕೊಡಲ್ಪಟ್ಟವು. ಸಂಗೀತ ಸಾಹಿತ್ಯವೇ ಮೊದಲಾದವುಗಳಿಂದ ಎಲ್ಲರೂ ಸಂತೋಷಪಡಿಸಲ್ಪಟ್ಟರು. ಪ್ರತಿಕಕ್ಷಿ ಸಂಗಡದವರೆಲ್ಲರೂ ಇಡುಮಿನಿಯಸ್, ಮೆಂಟರು, ಟೆಲಿಮಾಕಸ್ ಮೊದಲಾದವರನ್ನೂ, ಇಡುಮಿನಿಯಸ್ಸನ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳನ್ನೂ, ಯೋಧರನ್ನೂ ತಮ್ಮ ದೇಶಕ್ಕೆ ಬರುವಂತೆ ಮಾಡಿಕೊಂಡು ಸಂತರ್ಪಣೆಗಳಿಂದಲೂ, ಉಡುಗೆರೆ ಖಿಲ್ಲತ್ತು ಮೊದಲಾದ ಮುಯ್ಯಿಗಳಿಂದಲೂ ಸಂತೋಷಪಡಿಸಿದರು. ಕೆಲವು ವರ್ಷಗಳಾದ ಮೇಲೆ ಕೌಲಿನ ಒಡಂಬಡಿಕೆಗಳು ಪರಸ್ಪರ ಪ್ರೀತಿಯಿಂದ ಜಾರಿಗೆ ಬರುವಂತೆ ಆದದ್ದನ್ನು ನೋಡಿ ಉಭಯ ಕಕ್ಷಿಯವರೂ ಮೆಂಟರು ಮತ್ತು ಟೆಲಿಮಾಕಸ್ಸರಿಗೆ ಸತ್ಕಾರ ಮಾಡಿ ಕಳುಹಿಸಿ ಕೊಡಬೇಕೆಂಬ ಸಂಕಲ್ಪವು ಉಂಟಾಯಿತು. ಇಡುಮಿನಿಯಸ್ ಮೊದಲಾದವರು ಅನೇಕ ಹಡಗುಗಳನ್ನೂ, ಟೆಲಿಮಾಕಸ್ಸನ ಶತ್ರುಗಳನ್ನು ನಿಗ್ರಹಿಸುವುದಕ್ಕೆ ಬೇಕಾದ ಸೈನ್ಯಗಳನ್ನೂ ಅಣಿಮಾಡಿದರು. ಇವರನ್ನು ಕರೆದುಕೊಂಡು ಹೋಗುವುದಕ್ಕೆ ಸಾವಿರಾರು ಹಡಗುಗಳು ಸಿದ್ಧಮಾಡಲ್ಪಟ್ಟವು. ಇವರಿಗೆ ಔತಣವು ಮಾಡಲ್ಪಟ್ಟಿತು. ಅಮೂಲ್ಯವಾದ ಉಡುಗೆರೆಗಳೂ, ಖಿಲ್ಲತ್ತುಗಳೂ ಕೊಡಲ್ಪಟ್ಟವು. ಈ ಸತ್ಕಾರಗಳನ್ನೆಲ್ಲಾ ಪರಿಗ್ರಹಿಸಿ, ಮೆಂಟರು ಮತ್ತು ಟೆಲಿಮಾಕಸ್ಸನು ಸಂತುಷ್ಟರಾದದ್ದನ್ನು ನೋಡಿ ನೆಸ್ಟರು ಅವರನ್ನು ಕುರಿತು ಹೇಳಿದ್ದೇನೆಂದರೆ :-" ಅನೇಕ ಸಂದರ್ಭಗಳಲ್ಲಿ ನಾವು

ಒಂದು ವಿಧವಾಗಿ ಯೋಚಿಸಿದೆವು, ದೇವರು ಮತ್ತೊಂದು ವಿಧವಾಗಿ ಯೋಚಿಸಿದನು. ಇದಕ್ಕೆ ನಮ್ಮ ವಿದ್ಯಮಾನಗಳೇ ಸಾಕ್ಷಿಯಾಗಿರುವವು. ಇಡುಮಿನಾನಿಯಸ್ಸನು ನಂಬಿಕೆಗೆ ಅಪಾತ್ರನಾದವನನ್ನಾಗಿಯೂ, ಮೈನಾಸನ ಮೊಮ್ಮಗನಾಗುವುದಕ್ಕೆ ಅನರ್ಹನಾಗಿಯೂ ನಾವು ತಿಳಿದುಕೊಂಡೆವು. ವಾಸ್ತವಾಂಶವು ನಮಗೆ ಗೊತ್ತಾಗದೆ ಹೋದದ್ದು ಈ ತಪ್ಪು ತಿಳುವಳಿಕೆಗೆ ಕಾರಣವಾಗಿತ್ತು, ಜಗದೀಶ್ವರನಿಗೆ ಈ ವಿಷಯವು ಗೊತ್ತಾಗಿತ್ತು. ನಮಗೆ ನಿಶ್ಚಿತವಾದ ಯುದ್ಧವನ್ನು ತಪ್ಪಿಸುವುದಕ್ಕೆ ಸರ್ವೇಶ್ವರನೇ ನಿಮ್ಮನ್ನು ಕಳುಹಿಸಿರುವನೆಂದು ನನಗೆ ತೋರುತ್ತದೆ. ನಮ್ಮಲ್ಲಿ ದೇವರ ಕೃಪೆಯು ಹುಟ್ಟದೆ ಇದ್ದಿದ್ದರೆ ಪರಸ್ಪರ ದ್ವೇಷದಿಂದ ನಾವು ಯುದ್ಧಮಾಡುತ್ತಿದ್ದೆವು. ಈ ಯುದ್ಧದಲ್ಲಿ ಅನೇಕರು ಮಡಿಯುತ್ತಿದ್ದರು. ಅನೇಕ ಕುಟುಂಬಗಳು ಹೀನಸ್ಥಿತಿಗೆ ಬರುತ್ತಿದ್ದವು. ಈ ಅನರ್ಥಗಳನ್ನು ತಪ್ಪಿಸಿದ್ದಕ್ಕೆ ಲೋಕೇಶ್ವರನಿಗೆ ನಾವು ತುಂಬಾ ಕೃತಜ್ಞರಾಗಿ ಇರುತ್ತೇವೆ. ಜಗದೀಶ್ವರನ ಲೀಲೆಯು ಅವಾಙ್ಮನಸಗೋಚರವಾದದ್ದು. ಈ ಅನರ್ಥವನ್ನು ತಪ್ಪಿಸುವುದಕ್ಕೆ ದೇವರು ಪರೋಕ್ಷಕಾರಣನಾಗಿರುವನು. ನೀವು ಪ್ರತ್ಯಕ್ಷಕಾರಣರು. ನಿಮಗೂ ನಾವು ಕೃತಜ್ಞರಾಗಿರುತ್ತೇವೆ. ದೇವರು ನಿಮಗೆ ಮಂಗಳಗಳನ್ನು ಮಾಡಲಿ'' ಎಂದು ನಾವು ಕೋರುತ್ತೇವೆ. ಇಥಾಕಾ ಪಟ್ಟಣಕ್ಕೆ ಹೋಗುವುದರೊಳಗಾಗಿ ಯೂಲಿಸಸ್ಸನನ್ನು ನೋಡುವ ಸಂತೋಷವು ನಿಮಗೆ ಉಂಟಾಗಲಿ. ನಿಶೋಷಳ ಶೋಕವು ನಿವಾರಣೆಯಾಗಲಿ. ನಿಮ್ಮ ಶತ್ರುಗಳು ನಿಮ್ಮಲ್ಲೇ ಅನುರಕ್ತರಾಗಲಿ. ಹಾಗಾಗದೆ ಹೋದಪಕ್ಷದಲ್ಲಿ ಅವರನ್ನು ನಿಗ್ರಹಿಸುವುದಕ್ಕೆ ನಮ್ಮ ಸೈನ್ಯಗಳು ಸಿದ್ಧವಾಗಿರುತ್ತವೆ. ಆವಶ್ಯವಾದರೆ ನಾವೂ ನಿಮ್ಮ ಸಹಾಯಕ್ಕೋಸ್ಕರ ಬರುತ್ತೇವೆ. ಈ ರೀತಿಯಲ್ಲಿ ನೆಸ್ಟರನು ಹೇಳಿದನು. ಎಲ್ಲರೂ ಇದನ್ನು ಅನುಮೋದಿಸಿದರು. ಇದನ್ನು ಕೇಳಿ ಇಡುಮಿನಿಯಸ್ಸನು ಹೇಳಿದ್ದೇನೆಂದರೆ: —

" ಎಲೈ ಮೆಂಟರೆ, ಎಲೈ ಟೆಲಿಮಾಕಸ್ಸನೆ, ಈಗ ನೆಸ್ಟರು ಹೇಳಿದ್ದನ್ನು ನಾನು ಮನಃಪೂರ್ವಕವಾಗಿ ಅನುಮೋದಿಸುತ್ತೇನೆ. ಈ ಮುದುಕನು ಹೇಳಿದ್ದು ಸತ್ಯವಾದದ್ದು. ನಾನು ಈಗ ನಿಶ್ಚಿತವಾದ ಯುದ್ಧಕ್ಕೆ ಮುಖ್ಯಕಾರಣನಾಗಿದ್ದೆನು. ನನ್ನಲ್ಲಿ ಈ ಪ್ರತಿಪಕ್ಷಿಗಳ ನಂಬಿಕೆಯು ತಪ್ಪುವುದಕ್ಕೆ ನಾನೇ ಕಾರಣ

ಭೂತನು. ತಪ್ಪಾಯಿತೆಂದು ತಿಳಿದ ಮೇಲೂ ಕೂಡ ಅದನ್ನು ತಿದ್ದುಕೊಳ್ಳುವುದಕ್ಕೆ ನಾನು ಪ್ರಯತ್ನಮಾಡಲಿಲ್ಲ. ನಂಬಿಕೆಗೆ ಪಾತ್ರನಲ್ಲವೆಂದು ಇವರೆಲ್ಲರೂ ಬಾಧಿಸುವುದಕ್ಕೆ ನಾನೇ ಅವಕಾಶವನ್ನು ಕೊಟ್ಟೆನು. ಈ ಕರ್ಮಕ್ಕೆ ಅನುರೂಪವಾದ ಶಿಕ್ಷೆಗೆ ನಾನು ಪಾತ್ರನಾಗಿದ್ದೆನು. ನನ್ನ ಹಿರಿಯರು ಮಾಡಿದ ಪುಣ್ಯವೂ, ನನ್ನ ನಿರಪರಾಧಿತ್ವವೂ ನನ್ನನ್ನು ರಕ್ಷಿಸಿರಬಹುದೆಂದು ನನಗೆ ತೋರುತ್ತದೆ. ಅದು ಹೇಗಾದರೂ ಇರಲಿ. ದೈವಯೋಗದಿಂದ ನೀವಿಬ್ಬರೂ ಅಪ್ರಾರ್ಥಿತರಾಗಿ ಬಂದು ನಮ್ಮ ಪರಸ್ಪರ ದ್ವೇಷದಿಂದ ಆಗತಕ್ಕ ಅನರ್ಥವನ್ನು ತಪ್ಪಿಸಿ ಇರುತ್ತೀರಿ. ನೆಸ್ಟರನೇ ಮೊದಲಾದವರ ಜೊತೆಯಲ್ಲಿ ನಾನು ನಿಮಗೆ ಬಹಳ ಕೃತಜ್ಞನಾಗಿ ಇರುತ್ತೇನೆ. ನನ್ನ ಸೈನ್ಯ, ನನ್ನ ಸಂಪತ್ತು ಸರ್ವವನ್ನೂ ನಿಮಗೆ ಒಪ್ಪಿಸಿ ಇರುತ್ತೇನೆ. ನಾನು ನಿಮ್ಮ ಸೇವಕನಾಗಿ ಬರುತ್ತೇನೆ. ಒಂದು ವೇಳೆ ಯೂಲಿಸಸ್ಸನು ಬರದೆ ಇದ್ದಾಗ್ಯೂ ಪೆನಿಲೋಪಳ ಮಾನಭಂಗಕ್ಕೋಸ್ಕರ ಇಥಾಕಾ ದ್ವೀಪವನ್ನು ಆವರಿಸಿಕೊಂಡು ಇರತಕ್ಕ ಪ್ರಭುಗಳು ಎಷ್ಟು ಬಲವಾಗಿ ಇದ್ದಾಗ್ಯೂ, ಅವರನ್ನು ನಿಗ್ರಹಿಸುವುದಕ್ಕೆ ನಾನು ಯುದ್ಧಾಗಿ ಬರುತ್ತೇನೆ. ಸತ್ಯವೂ ಧರ್ಮವೂ ನಮ್ಮ ಪಕ್ಷವಾಗಿರುವುದು. ಸದರಿ ಪ್ರಭುಗಳು ದುರಾತ್ಮರಾಗಿಯೂ, ಅಸತ್ಯವಂತರಾಗಿಯೂ, ಪಾಪಿಗಳಾಗಿಯೂ ಇರುವರು. ಅವರ ಪಾಪವು ಅವರನ್ನು ಕೊಲ್ಲುವುದು. ನಮ್ಮ ಪುಣ್ಯವು ನಮ್ಮನ್ನು ರಕ್ಷಿಸುವುದು. ಇಥಾಕಾ ಪಟ್ಟಣಕ್ಕೆ ಹೊರಡುವುದಕ್ಕೆ ಸಿದ್ಧರಾಗಿ. ನಿಮ್ಮ ಜೊತೆಯಲ್ಲಿ ನಮ್ಮ ಸೈನ್ಯಗಳೆಲ್ಲಾ ಹೊರಡುವವು.'' ಈರೀತಿಯಲ್ಲಿ ಇಡುಮಿನಾನಿಯಸ್ಸನು ಹೇಳಿದ ಕೂಡಲೆ ಇವರೆಲ್ಲರನ್ನೂ ಕುರಿತು ಮೆಂಟರು ಅಪ್ಪಣೆ ಕೊಡಿಸಿದ್ದೇನಂದರೆ—''ಎಲೈ, ಪ್ರಭುಗಳೇ, ಎಲೈ ಮುಖಂಡರಾದ ಅಧಿಕಾರಿಗಳೇ, ಎಲೈ ಮಹಾಜನಗಳೇ ನೀವು ಅನೇಕ ಜನಾಂಗಗಳಿಗೆ ಸೇರಿರುತ್ತೀರಿ. ಅನೇಕ ಸೇನಾನಾಯಕರ ಅಧೀನದಲ್ಲಿ ಇರುತ್ತೀರಿ. ಆದಾಗ್ಯೂ ದೈವಯೋಗದಿಂದ ನೀವೆಲ್ಲರೂ ಒಗ್ಗಟ್ಟಾಗಿ ನಡೆದುಕೊಳ್ಳುವ ಸಂಭವವು ಬಂದಿರುವುದು. ಇದಕ್ಕಾಗಿ ನಾನು ಸಂತೋಷಿಸುತ್ತೇನೆ. ಸಕಲ ಸೃಷ್ಟಿಸ್ಥಿತಿಪ್ರಳಯಗಳಿಗೂ ಕಾರಣಭೂತನಾದ ಜಗದೀಶ್ವರನು ಈ ಪ್ರಪಂಚದಲ್ಲಿ ಇರತಕ್ಕ ಸಕಲ ಪ್ರಾಣಿವರ್ಗಕ್ಕೆ ಯಜಮಾನನಾಗಿರುವನು. ನಾವು ಎಲ್ಲರೂ ಅವನ ಕುಟುಂಬಕ್ಕೆ ಸೇರಿದವರು. ಅವನು ತಂದೆ. ನಾವು ಮಕ್ಕಳು. ನಾವೆಲ್ಲರೂ ಸಹೋದರರು. ನಾವು ಪರಸ್ಪರ

ಸೌಹಾರ್ದದಿಂದಲೂ, ಪ್ರೀತಿಯಿಂದಲೂ ಬದುಕಬೇಕೆಂಬುವುದೇ ಅವನ ಉದ್ದೇಶ. ಈ ಉದ್ದೇಶಕ್ಕೆ ವಿರೋಧವಾಗಿ ನಾವು ನಡೆದರೆ ನಾವು ಕೃತಘ್ನರಾಗುವೆವು. ಅದು ದೊಡ್ಡ ಪಾಪ. ಆ ಪಾಪಕ್ಕೆ ತಕ್ಕ ಶಿಕ್ಷೆಯು ತಪ್ಪುವುದಿಲ್ಲ. ಈ ಪಾಪಕ್ಕೆಲ್ಲಾ ಮುಖ್ಯಕಾರಣವು ಸ್ವಾರ್ಥಪರತೆಯಾಗಿರುವುದು. ಯಾರಿಗೂ ಬಾಧಕವಾಗದಂತೆ ನಾವು ಸ್ವಾರ್ಥಪರರಾಗಬಹುದು. ಎಲ್ಲರಿಗೂ ಉಪಕಾರವಾಗುವಂತೆ ಕೆಲಸ ಮಾಡಿ, ಅದರಿಂದ ಉಂಟಾಗುವ ಫಲದಲ್ಲಿ ನಾವು ಭಾಗಿಗಳಾಗಬಹುದು. ಹೀಗೆ ಮಾಡುವುದರಿಂದ ದೇವರು ನಮ್ಮ ಪ್ರಯತ್ನವನ್ನು ಮೆಚ್ಚುವನು. ಮನುಷ್ಯನು ನಮ್ಮ ಪ್ರಯತ್ನವನ್ನು ಮೆಚ್ಚುವನು. ನಮ್ಮ ಮನಸ್ಸಾಕ್ಷಿಯು ನಮ್ಮ ಪ್ರಯತ್ನವನ್ನು ಮೆಚ್ಚುವುದು. ಸರ್ವಸಮ್ಮತವಾಗಿ ನಮಗೆ ಬರತಕ್ಕ ಲಾಭಕ್ಕೆ ಯಾವ ಭಯವೂ ಇರುವುದಿಲ್ಲ. ಸರ್ವರ ಅಸಮ್ಮತಿಯಿಂದ ಬರತಕ್ಕ ಲಾಭಕ್ಕೆ ಭಯವುಂಟು. ಈ ವಿಷಯವನ್ನು ಪ್ರಭುಗಳೂ ಮಂತ್ರಿಗಳೂ ಜವಾಬ್ದಾರಿಯುಳ್ಳ ಅಧಿಕಾರಿಗಳೂ ಚನ್ನಾಗಿ ಪರ್ಯಾಲೋಚಿಸಬೇಕು. ಧರ್ಮವನ್ನು ಬಿಟ್ಟು ನಡೆಯಬಾರದು. ಪ್ರಭುಗಳಿಗೆ ಸತ್ಯವೇ ವಜ್ರಕವಚವು. ಸಹನವೂ, ಭೂತದಯೆಯೂ ವಜ್ರಾಯುಧಗಳು. ಮೃಷಾಸ್ತುತಿಯೇ ವಿಷ. ಸ್ತುತಿಪಾಠಕರ ಮಾತಿಗೆ ಬೆರಗಾಗುವುದರಿಂದ ಅಧಿಕಾರಿಗಳು ಕೆಟ್ಟುಹೋಗುವರು. ಕೋಪತಾಪಗಳು ಅನರ್ಥಕ್ಕೆ ಹೇತುವಾದವುಗಳು. ಅರ್ಥಹಾನಿ, ಪ್ರಾಣಹಾನಿಗಳಿಗೆ ಇವು ಮುಖ್ಯಕಾರಣ. ದುರಾತ್ಮರಾದ ಪರಿವಾರದೇವತೆಗಳ ಮಾತುಗಳನ್ನು ಕೇಳಿ ಯುದ್ಧಕ್ಕೆ ಉಪಕ್ರಮ ಮಾಡಬಾರದು. ಜನಗಳ ಪ್ರಾಣವನ್ನು ತೆಗೆಯುವುದು ಸುಲಭ. ಅವರನ್ನು ಬದುಕಿಸುವುದು ಕಷ್ಟ. ಕೋಪದಿಂದ ಉಂಟಾದ ಅನೇಕ ಅನರ್ಥಗಳನ್ನು ಶಾಂತಿಯಿಂದ ತಿದ್ದುವುದು ಅಸಾಧ್ಯ. ಈ ವಿಷಯವನ್ನು ನೀವೆಲ್ಲರೂ ಪರ್ಯಾಲೋಚಿಸಬೇಕು. ಪರಿಣಾಮಫಲವನ್ನು ಪರ್ಯಾಲೋಚಿಸದೆ ಕೆಲಸ ಮಾಡಬಾರದು. ಇಡುವಿಣಾನಿಯಸ್ಸನು ಈ ಭಾಗದಲ್ಲಿ ಸ್ವಲ್ಪ ಅಜಾಗರೂಕನಾದದ್ದರಿಂದ ಅನೇಕ ಅನರ್ಥಗಳು ಸಂಭವಿಸುವ ಸ್ಥಿತಿಯು ಬಂದಿತ್ತು. ದೇವರ ಅನುಗ್ರಹದಿಂದಲೂ, ನಿಮ್ಮ ಸಾಧುಸ್ವಭಾವದಿಂದಲೂ ಇದು ತಪ್ಪಿತು. ಇದಕ್ಕಾಗಿ ನಾನು ತುಂಬಾ ಸಂತೋಷಿಸುತ್ತೇನೆ. ನಿಮ್ಮಗಳಿಗೆಲ್ಲರಿಗೂ ಮಂಗಳವಾಗಲೆಂದು ನಾನು ಕೋರುತ್ತೇನೆ. ಮುಂದೆ ಏನು ಮನಸ್ತಾಪಗಳು ಬಂದಾಗ್ಯೂ ಜವಾಬ್ದಾರರಾದ ನೀವೆಲ್ಲರೂ ಸೇರಿ

ಪರ್ಯಾಲೋಚಿಸಿಕೊಂಡು ಮನಸ್ತಾಪಗಳನ್ನು ಪರಿಹರಿಸಿಕೊಳ್ಳುವ ಶಕ್ತಿಯನ್ನು ದೇವರು ನಿಮಗೆ ಕೊಡಲೆಂದು ನಾನು ಪ್ರಾರ್ಥಿಸುತ್ತೇನೆ. ಪ್ರಯಾಣ ಮಾಡುವುದಕ್ಕೆ ನನಗೆ ಅಪ್ಪಣೆಯನ್ನು ಕೊಡಿ''.

ಈ ರೀತಿಯಲ್ಲಿ ಮೆಂಟರನು ಹೇಳಲು, ಅವನ ಹಿತೋಪದೇಶಕ್ಕಾಗಿ ಎಲ್ಲರೂ ಏಕವಾಕ್ಯತೆಯಿಂದ ಅವನನ್ನು ವಂದಿಸಿದರು. ಆಗ ನೆಸ್ಟರು ಹೇಳಿದ್ದೇನೆಂದರೆ,— ಎಲೈ ಮೆಂಟರೆ, ನಿನ್ನ ಉಪದೇಶದಂತೆ ನಡೆಯುವುದಕ್ಕೆ ನಾವು ಸಿದ್ಧರಾಗಿರುತ್ತೇವೆ. ನಾವು ಸ್ವಾರ್ಥಪರರಲ್ಲ. ದೇಶಕೋಶಗಳನ್ನು ಸಂಪಾದಿಸಬೇಕೆಂದು ನಾವು ಯುದ್ಧಕ್ಕೆ ಬರಲಿಲ್ಲ. ಆತ್ಮರಕ್ಷಣೆಗೋಸ್ಕರ ಈ ಯುದ್ಧವನ್ನು ಉಪಕ್ರಮಿಸಿದೆವು. ನೀನು ಹೇಳಿದಂತೆ ಇಡುಮಿನಿಯಸ್ಸನ ಮನೋಭಾವವು ನಮಗೆ ಗೊತ್ತಾಗಲಿಲ್ಲ. ನಮ್ಮ ಮನೋಭಾವವು ಅವನಿಗೆ ಗೊತ್ತಾಗಲಿಲ್ಲ. ಈ ಯುದ್ಧದ ಉಪಕ್ರಮಕ್ಕೆ ಇದೇ ಮುಖ್ಯಕಾರಣ. ಕಂಡವರ ಮಾತುಗಳನ್ನು ಕೇಳದೆ ನಾವು ಒಬ್ಬರೊಡನೆ ಒಬ್ಬರು ಕಲೆತು ಮಾತನಾಡಿಕೊಂಡು ಇದ್ದರೆ ಮನಸ್ತಾಪಕ್ಕೆ ಅವಕಾಶವಾಗುತ್ತಿರಲಿಲ್ಲ. ಇಂಥಾ ಮನಸ್ತಾಪವು ಮುಂದೆ ಬರದಂತೆ ಮಾಡಿಕೊಳ್ಳುವುದರಲ್ಲಿ ನೀನು ಮಾಡಿರುವ ಹಿತೋಪದೇಶವು ನಮಗೆ ತುಂಬಾ ಸಾಧಕವಾಗುವುದು. ಸತ್ಯವಂತರಲ್ಲಿ ಉಂಟಾಗತಕ್ಕ ಮನಸ್ತಾಪಗಳು ಒಬ್ಬರಲ್ಲಿ ಒಬ್ಬರು ಕಲೆತು ಮಾತನಾಡಿದ ಕೂಡಲೇ ವ್ಯವಸ್ಥೆಯಾಗುವುದು. ಅಸತ್ಯವಂತರಲ್ಲಿ ಹೀಗೆ ಆಗುವುದಿಲ್ಲ. ಈಗ ನಮಗೂ, ಡಾನಿಯನ್ ಪ್ರಭುವಾದ ಅಡ್ರಾಸ್ಟಸ್‌ನಿಗೂ ಮನಸ್ತಾಪವುಂಟಾಗಿರುವುದು. ಇವನು ನಾಸ್ತಿಕಶಿಖಾಮಣಿಯಾಗಿರುವನು. ಇವನಿಗೆ ದೇವರಲ್ಲಿ ನಂಬಿಕೆ ಇಲ್ಲ. ಪರಲೋಕದಲ್ಲಿ ನಂಬಿಕೆ ಇಲ್ಲ. ಧರ್ಮದಲ್ಲಿ ನಂಬಿಕೆ ಇಲ್ಲ. ಲೋಕವೆಲ್ಲಾ ತನ್ನ ಸೇವೆ ಮಾಡಬೇಕೆಂಬದಾಗಿಯೂ, ತನ್ನ ಸೇವೆಯನ್ನು ಹೊಂದುವುದೇ ಅವರ ಕರ್ತವ್ಯವೆಂಬದಾಗಿಯೂ ಇವನು ತಿಳಿದುಕೊಂಡು ಇರುವನು. ತನ್ನ ಸಂಪತ್ತಿಗೆ ತನ್ನ ಪ್ರಜೆಗಳೇ ಕಾರಣವೆಂದು ಇವನು ತಿಳಿದುಕೊಂಡು ಇರುವುದಿಲ್ಲ. ಅವರು ಕಂದಾಯವನ್ನು ಕೊಟ್ಟು
ರಕ್ಷಿಸದಿದ್ದರೆ ತನ್ನ ಗತಿಯೇನು ಎಂಬದಾಗಿ ಅವನು ಯೋಚಿಸುವುದಿಲ್ಲ
ಳೆಲ್ಲರೂ ಪುತ್ರನಿರ್ವಿಶೇಷವಾಗಿ ರಕ್ಷಿಸಲ್ಪಡುವುದು ತನ್ನ ಕರ್ತವ್ಯವೆಂದು ಇ